ಬುಧವಾರ, ಆಗಸ್ಟ್ 30, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 2022ನೇ ಸಾಲಿನ ಮಿಸ್ ವರ್ಲ್ಡ್ ಇಂಡಿಯಾ ಸಿನಿ ಶೆಟ್ಟಿ ಪಾಲ್ಗೊಂಡಿದ್ದರು

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

ಸಹೋದರಿಯರ ರಕ್ಷಣೆಯ ಸಂಕಲ್ಪ ದಿನ

ರಕ್ಷಾ ಬಂಧನ ವಿಶೇಷ

• ಎಸ್. ಸೂರ್ಯಪ್ರಕಾಶ ಪಂಡಿತ್

ಶ್ರಾವಣಮಾಸದಲ್ಲಿ ಹಬ್ಬಗಳ ಸಾಲು ಆರಂಭವಾಗುತ್ತದೆ. ಹೀಗೆ ಬರುವ ಸಾಲು ಸಾಲು ಹಬ್ಬಗಳಲ್ಲಿ ಒಂದು ರಕ್ಷಾಬಂಧನ; ಶ್ರಾವಣಮಾಸದ ಹುಣ್ಣಿಮೆಯಂದು ಆಚರಿಸಲಾಗುತ್ತದೆ.

ರಕ್ಷಾಬಂಧನ. ಈ ಹೆಸರಿನಲ್ಲಿಯೇ ಈ ದಿನದ ಮಹತ್ವವನ್ನು ಕಾಣಬಹುದು. ನಮಗೆ ಹುಟ್ಟಿನಿಂದ ಸಾಯುವವರೆಗೂ ಹಲವು ವಿಧದ ಬಂಧನಗಳು ಕೂಡಿಕೊಳ್ಳುತ್ತವೆ. ಇಲ್ಲಿ 'ಬಂಧನ' ಎಂದರೆ ಬಾಂಧವ್ಯ; ಅದು ನಮಗೂ ಇನ್ನೊಬ್ಬರಿಗೂ ಒದಗುವ ನಂಟು. ಬಾಂಧವ್ಯಗಳು ರಕ್ತಸಂಬಂಧದ ರೂಪದಲ್ಲೂ ಇರಬಹುದು; ನೈಮಿತ್ತಿಕವಾಗಿಯೂ ಏರ್ಪಡಬಹುದು; ಹೊಸದಾಗಿ ಏರ್ಪಡುವ ನಂಟಸ್ತಿಕೆಯ ಸ್ವರೂಪದಲ್ಲೂ ಸಿದ್ಧವಾಗಬಹುದು; ಯಾವುದಾದರೊಂದು ಹೊಣೆಗಾರಿಕೆಯ ಕಾರಣದಿಂದಲೂ ಮೂಡಬಹುದು. ರಕ್ಷಾಬಂಧನ ಈ ಎಲ್ಲ ರೂಪದ ಬಾಂಧವ್ಯಗಳ ನೆಲೆಯಿಂದಲೂ ಅರ್ಥೈಸಬಹುದಾದ ವಿಶಿಷ್ಟ ದಿನವಾಗಿದೆ.

'ನಿನ್ನನ್ನು ಅಪಾಯಗಳಿಂದ ರಕ್ಷಿಸುವೆ' – ಹೀಗೆಂದು ಸಹೋದರನು ಸಹೋದರಿಯಲ್ಲಿ ಶಪಥ ಮಾಡುತ್ತಾನೆ. ಆಗ 'ನಿನ್ನ ಈ ಶಪಥ ನಿನ್ನಿಂದ ಮರೆಯಾಗದಿರಲಿ; ಅದರ ಜ್ಞಾಪಕವಾಗಿ ಈ ಪವಿತ್ರ ನೂಲನ್ನು ನಿನಗೆ ಕಟ್ಟುತ್ತಿರುವೆ' ಎಂದು ಸಹೋದರಿಯು ಸಹೋದರನಿಗೆ 'ರಕ್ಷಾಬಂಧನ'ವನ್ನು ಅಥವಾ 'ರಕ್ಷೆ'ಯನ್ನು ಕಟ್ಟುತ್ತಾಳೆ. ಇದೇ ರಕ್ಷಾಬಂಧನ ಪರ್ವದ ಸಾರಾಂಶ. ಇಲ್ಲಿ ನಾವು ಗಮನಿಸಬೇಕಾದ್ದು, ಈ ಸಹೋದರ–ಸಹೋದರಿಯರು ರಕ್ತಸಂಬಂಧದ ಒಡಹುಟ್ಟಿದವರೂ ಆಗಬಹುದು; ಭಾವಬಂಧನದ ಸಹೋದರ–ಸಹೋದರಿಯರೂ ಆಗಬಹುದು.

ರಕ್ಷಾಬಂಧನದ ತಾತ್ಪರ್ಯ: ಹೆಣ್ಣನ್ನು ರಕ್ಷಿಸುವ ಹೊಣೆಗಾರಿಕೆ ಕುಟುಂಬದ ಮೇಲೆಯೂ ಸಮಾಜದ ಮೇಲೆಯೂ ಇದೆ ಎಂಬುದು. ಇದರ ಅರ್ಥ, ಪರಂಪರೆಯಲ್ಲಿ ಹೆಣ್ಣನ್ನು ಅಬಲೆಯಾಗಿ ಕಂಡಿದ್ದಾರೆ ಎಂದಲ್ಲ; ಪುರುಷಾಹಂಕಾರಕ್ಕೆ ಎಚ್ಚರಿಕೆಯನ್ನು 'ರಕ್ಷಾಬಂಧನ'ದ ಕಲ್ಪನೆಯಲ್ಲಿ ನೋಡಬಹುದು. ದಿಟವಾದ ಪುರುಷನ ಲಕ್ಷಣ ಎಂದರೆ ಹೆಣ್ಣಿನ ಕಷ್ಟವನ್ನು ದೂರ ಮಾಡುವುದು; ಅವಳ ರಕ್ಷಣೆಗೆ ಮುಂದಾಗುವುದು. ಇಂಥ ಕರ್ತವ್ಯಬುದ್ಧಿಗೆ ಸಮಾಜವನ್ನು ತೊಡಗಿಸುವುದೇ ರಕ್ಷಾಬಂಧನದ ಆಚರಣೆಯ ಮೂಲೋದ್ದೇಶ. ಅಂದಿನಿಂದ ಇಂದಿನವರೆಗೂ ಸಮಾಜದಲ್ಲಿ ಹೆಣ್ಣಿನ ಮೇಲೆ ನಿರಂತರವಾಗಿ ದಬ್ಬಾಳಿಕೆ ಬೇರೆ ಬೇರೆ ರೂಪದಲ್ಲಿ ನಡೆಯುತ್ತಲೇ ಬಂದಿದೆ. ನಾವು ಆಧುನಿಕರು, ವಿದ್ಯಾವಂತರು, ನ್ಯಾಯಪರರು – ಹೀಗೆಲ್ಲ ಘೋಷಿಸಿಕೊಳ್ಳುವ ನಮ್ಮ ಈ ಕಾಲದಲ್ಲೂ ಹೆಣ್ಣಿನ ಮೇಲೆ ಕ್ರೌರ್ಯ ನಿಂತಿಲ್ಲ. ಹೀಗಾಗಿ ರಕ್ಷಾಬಂಧನದ ಮೂಲವನ್ನು ನಾವು ಪುರಾಣಗಳಲ್ಲಿ ಕಾಣಬಹುದಾದರೂ, ಅದರ ಪ್ರಸ್ತುತತೆ ಮಾತ್ರ ಇಂದಿಗೂ ಸಲ್ಲುತ್ತದೆಯೆನ್ನಿ. ಹೆಣ್ಣನ್ನು ರಕ್ಷಿಸುವುದು ಕೇವಲ ಅವಳ ಒಡಹುಟ್ಟಿದ ಅಣ್ಣ–ತಮ್ಮಂದಿರ ಕರ್ತವ್ಯ ಮಾತ್ರವೇ ಅಲ್ಲ; ಅವಳನ್ನು ಅಪಾಯದಿಂದ ರಕ್ಷಿಸಲು ಇಡಿಯ ಸಮಾಜವೇ ಕಂಕಣಬದ್ಧವಾಗತಕ್ಕದ್ದು ಎಂಬ ಸಂಕಲ್ಪಶಕ್ತಿಗೆ ರಕ್ಷಾಬಂಧನವು ಪ್ರೇರಣೆಯಾಗಬೇಕಿದೆ.

ಶ್ರಾವಣಹುಣ್ಣಿಮೆಯನ್ನು ಸಂಸ್ಕೃತದಿನವನ್ನಾಗಿಯೂ ಆಚರಿಸುವುದುಂಟು. ಸಂಸ್ಕೃತ ಎಂದರೆ ಭಾರತದ ಪ್ರಾಚೀನ ಪರಂಪರೆಯ ಪ್ರತಿಮೆ. ಭಾರತೀಯ ಸಂಸ್ಕೃತಿಯ ನೆಲೆಗಳನ್ನು ನಾವು ಸಂಸ್ಕೃತದಲ್ಲಿ ಕಾಣಬಹುದು. ಭಾವಕ್ಕೂ ಬುದ್ಧಿಗೂ ಸುಂದರವಾಗಿ ಒಗ್ಗುವ ಭಾಷೆ ಸಂಸ್ಕೃತ. ನಮ್ಮ ಪೂರ್ವಸೂರಿಗಳ ಗೊತ್ತು–ಗುರಿಗಳ ದಿಕ್ಕನ್ನು ಈ ಭಾಷೆಯ ಮೂಲಕ ಕಂಡುಕೊಳ್ಳಬಹುದಾಗಿದೆ. ಹೀಗಾಗಿ ಸಂಸ್ಕೃತದ ರಕ್ಷಣೆ ಎಂದರೆ ಅದು ನಮ್ಮ ಋಷಿಪರಂಪರೆಯ ರಕ್ಷಣೆಯೇ ಹೌದು. ಈ ದೃಷ್ಟಿಯಲ್ಲಿ ಇಂದು ಪರಂಪರೆಯ 'ರಕ್ಷಾಬಂಧನ'ವೂ ಹೌದೆನ್ನಿ!

'ಕೇಂದ್ರಾಡಳಿತ ಸ್ಥಾನ ಶಾಶ್ವತವಲ್ಲ'

ಕೇಂದ್ರ ಸರ್ಕಾರ ಹೇಳಿಕೆ • ಜಮ್ಮು–ಕಾಶ್ಮೀರಕ್ಕೆ ಮತ್ತೆ ರಾಜ್ಯ ಸ್ಥಾನ • ಕಾಲಮಿತಿ ನಿಗದಿಗೆ ಸೂಚನೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶ ಸ್ಥಾನ ಶಾಶ್ವತವಲ್ಲ. ಈ ಕುರಿತು ಆಗಸ್ಟ್ 31ರಂದು ಸಕಾರಾತ್ಮಕವಾದ ಹೇಳಿಕೆ ನೀಡಲಾಗುವುದು ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ.

ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಅಧ್ಯಕ್ಷತೆಯ ಸಾಂವಿಧಾನಿಕ ಪೀಠವು 12ನೇ ದಿನವಾದ ಮಂಗಳವಾರವೂ ನಡೆಸಿತು.

'ನೀವು ಒಂದು ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತಿಸಬಹುದೇ? ಒಂದು ರಾಜ್ಯದಿಂದ ಕೇಂದ್ರಾಡಳಿತ ಪ್ರದೇಶವನ್ನು ರೂಪಿಸಬಹುದೇ ಮತ್ತು ಯಾವಾಗ ಚುನಾವಣೆ ನಡೆಸುತ್ತೀರಿ' ಎಂದು ಕೇಂದ್ರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ನ್ಯಾಯಪೀಠವು ಪ್ರಶ್ನಿಸಿತು.

'ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣಾ ಪ್ರಜಾಪ್ರಭುತ್ವದ ಮರುಸ್ಥಾಪನೆಗೆ ಸಂಬಂಧಿಸಿದಂತೆ ಕಾಲಮಿತಿ ನಿಗದಿಪಡಿಸಬೇಕು' ಎಂದು ಸೂಚಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ತುಷಾರ್ ಮೆಹ್ತಾ, ಅಸ್ಸಾಂ, ತ್ರಿಪುರ ಹಾಗೂ ಅರುಣಾಚಲ ಪ್ರದೇಶದ ಹಿಂದಿನ ಸ್ಥಿತಿಗತಿ ಕುರಿತು ಉಲ್ಲೇಖಿಸಿದರು. 'ಕೆಲ ಸಮಯದವರೆಗೆ ಲಡಾಕ್ ಕೇಂದ್ರಾಡಳಿತ ಪ್ರದೇಶವಾಗಿ ಮುಂದುವರಿಯಲಿದೆ. ಆದರೆ, ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶ ಸ್ಥಾನ ಶಾಶ್ವತವಾಗಿರುವುದಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಜಮ್ಮು ಮತ್ತು ಕಾಶ್ಮೀರದಲ್ಲಿ ಸಹಜ ಸ್ಥಿತಿ ಮರಳಿದ ತಕ್ಷಣವೇ ಅಲ್ಲಿ ಮತ್ತೆ ರಾಜ್ಯದ ಸ್ಥಾನವನ್ನು ಮರುಸ್ಥಾಪಿಸಲಾಗುವುದು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ನೀಡಿರುವ ಹೇಳಿಕೆ ಬಗ್ಗೆ ಗಮನ ಸೆಳೆದರು.

'2020ರಲ್ಲಿ ಸ್ಥಳೀಯ ಚುನಾವಣೆ ಶಾಂತಿಯುತವಾಗಿ ನಡೆದಿದೆ. ಈಗ ಅಲ್ಲಿ ಪ್ರತಿಭಟನೆಗಳು, ಕಲ್ಲು ಎಸೆತ ಪ್ರಕರಣಗಳು ವರದಿಯಾಗಿಲ್ಲ. ಅಲ್ಲಿ ಕರ್ಫ್ಯೂ ಕೂಡ ಜಾರಿಯಲ್ಲಿಲ್ಲ. ಇದು ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವ ಪ್ರಕ್ರಿಯೆಗೆ ಪುರಾವೆಯಾಗಿದೆ' ಎಂದು ಹೇಳಿದರು.

ವಿಶೇಷ ಸ್ಥಾನಮಾನ ರದ್ದತಿ ಹಾಗೂ ಪ್ರಜಾಪ್ರಭುತ್ವ ಮರುಸ್ಥಾಪನೆಗೆ ಸಂಬಂಧಿಸಿದ ಕೇಂದ್ರದ ನಿಲುವನ್ನು ಸಮರ್ಥಿಸಿಕೊಂಡ ಮೆಹ್ತಾ ಅವರ ವಾದ ಆಲಿಸಿದ ನ್ಯಾಯಪೀಠವು, 'ರಾಷ್ಟ್ರೀಯ ಭದ್ರತೆ ದೃಷ್ಟಿಯಲ್ಲಿ ರಾಜ್ಯದ ಸ್ಥಾನ ಮರುಸ್ಥಾಪಿಸುವುದಕ್ಕೆ ಸಂಬಂಧಿಸಿದ ನಿಮ್ಮ ನಿಲುವನ್ನು ಒಪ್ಪುತ್ತೇವೆ. ಆದರೆ, ಅಲ್ಲಿ ಪ್ರಜಾಪ್ರಭುತ್ವ ಸ್ಥಾಪನೆ ಮುಖ್ಯವಾಗಿದೆ. ಅನಿರ್ದಿಷ್ಟಾವಧಿ ವರೆಗೆ ಚುನಾವಣಾ ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲದಿರುವುದನ್ನು ನಾವು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿತು.

'ಇಂತಹ ವ್ಯವಸ್ಥೆಯು ಕೊನೆಯಾಗಬೇಕಿದೆ. ಅಲ್ಲಿ ಜನತಂತ್ರದ ಮರುಸ್ಥಾಪನೆಯಾಗಬೇಕು' ಎಂದು ಹೇಳಿದ ನ್ಯಾಯಪೀಠವು, ಈ ಕುರಿತು ಕೇಂದ್ರದ ಅಭಿಪ್ರಾಯ ಸಲ್ಲಿಸುವಂತೆ ಎಂದು ಮೆಹ್ತಾ ಹಾಗೂ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂಚಿಸಿತು.

ಕೋರ್ಟ್ ಸುದ್ದಿಗಳು

ಡಬ್ಲ್ಯುಎಫ್‌ಐ ಚುನಾವಣೆ: ಮಧ್ಯ ಪ್ರವೇಶಕ್ಕೆ ನಕಾರ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿರುವ ತಡೆಯಾಜ್ಞೆಗೆ ಸಂಬಂಧಿಸಿದಂತೆ ಮಧ್ಯಪ್ರವೇಶಕ್ಕೆ ಸುಪ್ರೀಂ ಕೋರ್ಟ್, ಮಂಗಳವಾರ ನಿರಾಕರಿಸಿದೆ.

ಆಗಸ್ಟ್ 11ರಂದು ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಆಂಧ್ರಪ್ರದೇಶದ ಅಮೆಚೂರ್ ಕುಸ್ತಿ ಅಸೋಸಿಯೇಷನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಹಾಗೂ ಪಂಕಜ್ ಮಿಥಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ನಡೆಸಿತು.

'ನಾವು ಏಕೆ ಇದರಲ್ಲಿ ಮಧ್ಯಪ್ರವೇಶಿಸಬೇಕು?' ಎಂದು ಪ್ರಶ್ನಿಸಿದ ನ್ಯಾಯಪೀಠವು, 'ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸುವಂತೆ ಹೈಕೋರ್ಟ್‌ಗೆ ಮನವಿ ಮಾಡಿ, ಹೈಕೋರ್ಟ್‌ನಲ್ಲಿಯೇ ಅರ್ಜಿ ಸಲ್ಲಿಸಿ ಸಮಸ್ಯೆ ಬಗೆಹರಿಸಿಕೊಳ್ಳಿ' ಎಂದು ಅರ್ಜಿದಾರರಿಗೆ ಸೂಚಿಸಿತು.

ಸಿಖ್ ವಿರೋಧಿ ದಂಗೆ ಸೆ. 6ರಂದು ಟೈಟ್ಲರ್ ವಿರುದ್ಧದ ಪ್ರಕರಣದ ವಿಚಾರಣೆ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆಯ ವೇಳೆ ದೆಹಲಿಯ ಪುಲ್ ಬಂಗಾಶ್ ಪ್ರದೇಶದಲ್ಲಿ ಮೂವರನ್ನು ಹತ್ಯೆ ಮಾಡಿ, ಗುರುದ್ವಾರಕ್ಕೆ ಬೆಂಕಿ ಹಚ್ಚಿದ್ದ ಪ್ರಕರಣದ ವಿಚಾರಣೆಯನ್ನು ಇಲ್ಲಿನ ನ್ಯಾಯಾಲಯ ಸೆಪ್ಟೆಂಬರ್ 6 ರಂದು ನಡೆಸಲಿದೆ.

ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿಧಿ ಗುಪ್ತಾ ಆನಂದ್ ಅವರು, ಈ ಪ್ರಕರಣದಲ್ಲಿ ಆರೋಪಿಯಾಗಿರುವ ಕಾಂಗ್ರೆಸ್ ಮುಖಂಡ ಜಗದೀಶ್ ಟೈಟ್ಲರ್ ಅವರಿಗೆ ವಾದಿಸಲು ಸಮಯಾವಕಾಶ ನೀಡಿದ್ದಾರೆ. ಸಿಬಿಐ ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಅವರು ಸಮಯಾವಕಾಶ ನೀಡಿದ್ದಾರೆ. ಈ ಪ್ರಕಣದಲ್ಲಿ ಸೆಷನ್ಸ್ ನ್ಯಾಯಾಲಯವು ಟೈಟ್ಲರ್ ಅವರಿಗೆ ಈ ಹಿಂದೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು.

ಕೈದಿಗಳಿಗೂ ಸಾಂವಿಧಾನಿಕ ಹಕ್ಕುಗಳಿವೆ: ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಸೆರೆವಾಸ ಅನುಭವಿಸುತ್ತಿರುವ ಕೈದಿಗಳು ಕೂಡ ಸಾಂವಿಧಾನಿಕ ಹಕ್ಕುಗಳನ್ನು ಹೊಂದಿದ್ದಾರೆ. ಜೈಲಿನಲ್ಲಿರುವ ವ್ಯಕ್ತಿಯ ಜೀವಿಸುವ ಹಕ್ಕನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ದಕ್ಷಿಣ ಏಷ್ಯಾದಲ್ಲಿಯೇ ದೊಡ್ಡ ಬಂದಿಖಾನೆ ಎನಿಸಿರುವ ತಿಹಾರ್ ಜೈಲಿನಲ್ಲಿ ಮೂಲಸೌಕರ್ಯಗಳ ಕೊರತೆ ಇದೆ ಎಂಬ ಆರೋಪಗಳಿಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ ಹೈಕೋರ್ಟ್ ಈ ಮಾತು ಹೇಳಿದೆ.

ತಿಹಾರ್ ಜೈಲಿನಲ್ಲಿರುವ ಕುಡಿಯುವ ನೀರು, ನೈರ್ಮಲ್ಯ, ಶೌಚಾಲಯಗಳ ನಿರ್ವಹಣೆ ಸೇರಿದಂತೆ ಮೂಲಸೌಕರ್ಯಗಳ ಕುರಿತು ಕೂಲಂಕಷ ಪರಿಶೀಲನೆ ನಡೆಸಲು ನಾಲ್ವರು ವಕೀಲರನ್ನು ಒಳಗೊಂಡ ಸಮಿತಿಯನ್ನು ಹೈಕೋರ್ಟ್ ರಚಿಸಿದೆ.

ಡಾ.ಅಮಿತ್ ಜಾರ್ಜ್, ಸಂತೋಷಕುಮಾರ್ ತ್ರಿಪಾಠಿ, ನಂದಿತಾ ರಾವ್ ಹಾಗೂ ತುಷಾರ್ ಸನ್ನು ಅವರು ಈ ಸಮಿತಿಯಲ್ಲಿದ್ದಾರೆ. ಮುಂದಿನ ವಿಚಾರಣೆಯನ್ನು ಅಕ್ಟೋಬರ್ 18ಕ್ಕೆ ಮುಂದೂಡಿರುವ ಹೈಕೋರ್ಟ್, ಅಷ್ಟರೊಳಗಾಗಿ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಿದೆ.

ಮುಖ್ಯನ್ಯಾಯಮೂರ್ತಿ ಸತೀಶ ಚಂದ್ರ ಶರ್ಮಾ ಹಾಗೂ ನ್ಯಾಯಮೂರ್ತಿ ಸಂಜೀವ್ ನರುಲಾ ಅವರಿದ್ದ ನ್ಯಾಯಪೀಠ ಆಗಸ್ಟ್ 23ರಂದು ಈ ಸಂಬಂಧ ಆದೇಶ ಹೊರಡಿಸಿದೆ. ದೆಹಲಿ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ (ಡಿಎಚ್‌ಸಿಎಲ್‌ಎಸ್‌ಸಿ) ಈ ಪಿಐಎಲ್ ಸಲ್ಲಿಸಿತ್ತು.

ನಾಲ್ವರು ಸದಸ್ಯರ ಸಮಿತಿಗೆ ಎಲ್ಲ ಮಾಹಿತಿ ಹಾಗೂ ನೆರವು ಒದಗಿಸುವಂತೆ ಮಹಾ ನಿರ್ದೇಶಕರಿಗೆ (ಜೈಲುಗಳು) ನ್ಯಾಯಾಲಯ ಸೂಚಿಸಿದೆ.

ಇಸ್ರೊ ಸಾಧನೆ ಪ್ರಶಂಸೆಗೆ ನಿರ್ಣಯ

ನವದೆಹಲಿ(ಪಿಟಿಐ): ಮಹತ್ವಾಕಾಂಕ್ಷೆಯ 'ಚಂದ್ರಯಾನ–3'ರ ನೌಕೆಯ ಲ್ಯಾಂಡರ್ ಮತ್ತು ರೋವರ್ ಅನ್ನು ಚಂದ್ರನ ದಕ್ಷಿಣ ಧ್ರುವದ ಅಂಗಳದಲ್ಲಿ ಇಸ್ರೊ ಯಶಸ್ವಿಯಾಗಿ ಇಳಿಸಿದ್ದನ್ನು (ಸಾಫ್ಟ್ ಲ್ಯಾಂಡಿಂಗ್) ಶ್ಲಾಘಿಸುವ ನಿರ್ಣಯವನ್ನು ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಮಂಗಳವಾರ ಅಂಗೀಕರಿಸಲಾಗಿದೆ.

'ಈ ಬಾಹ್ಯಾಕಾಶ ಕಾರ್ಯಕ್ರಮವು ಇಸ್ರೊದ ಯಶಸ್ಸು ಮಾತ್ರವಲ್ಲ, ಭಾರತದ ಪ್ರಗತಿ ಹಾಗೂ ಜಾಗತಿಕ ವೇದಿಕೆಯಲ್ಲಿ ದೇಶದ ಸ್ಥಾನ ಉನ್ನತ ಮಟ್ಟಕ್ಕೆ ಏರಿರುವುದರ ಸಂಕೇತವೂ ಆಗಿದೆ' ಎಂದು ಸಂಪುಟ ಸಭೆಯು ಹರ್ಷ ವ್ಯಕ್ತಪಡಿಸಿದೆ.

'ಆಗಸ್ಟ್ 23 ಅನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನ ಎಂಬುದಾಗಿ ಆಚರಿಸುವ ನಿರ್ಧಾರವನ್ನು ಸಹ ಸಭೆ ಸ್ವಾಗತಿಸಿತು' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಸಭೆ ಬಳಿಕೆ ಸುದ್ದಿಗಾರರಿಗೆ ತಿಳಿಸಿದರು.

ಇಸ್ರೊ ವಿಜ್ಞಾನಿ ಎಂದು ಸುಳ್ಳು ಹೇಳುತ್ತಿದ್ದ ವ್ಯಕ್ತಿ ಬಂಧನ

ಅಹಮದಾಬಾದ್: 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ವಿಜ್ಞಾನಿಯಾಗಿದ್ದು, ಚಂದ್ರಯಾನ–3ರ ಲ್ಯಾಂಡರ್ ವಿನ್ಯಾಸ ಮಾಡಿದ್ದು ನಾನೇ' ಎಂದು ಸುಳ್ಳು ಹೇಳುತ್ತಾ, ಮಾಧ್ಯಮಗಳಿಗೆ ಸಂದರ್ಶನ ನೀಡುತ್ತಿದ್ದ 40 ವರ್ಷದ ವ್ಯಕ್ತಿಯನ್ನು ಸೂರತ್ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಈ ಆರೋಪಕ್ಕೆ ಸಂಬಂಧಿಸಿದಂತೆ ಮೆಹುಲ್ ತ್ರಿವೇದಿ ಎಂಬವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇಸ್ರೊದ ಪುರಾತನ ವಿಜ್ಞಾನ ಅಪ್ಲಿಕೇಶನ್ ಇಲಾಖೆಯಲ್ಲಿ ಸಹಾಯಕ ಮುಖ್ಯಸ್ಥರಾಗಿರುವುದಾಗಿ ನಕಲಿ ನೇಮಕಾತಿ ಪತ್ರವನ್ನೂ ಇವರು ಹೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಪದವಿ ಪಡೆದಿರುವ ತ್ರಿವೇದಿ ಜೀವನೋಪಾಯಕ್ಕಾಗಿ ಟ್ಯೂಷನ್ ತರಗತಿ ನಡೆಸುತ್ತಿದ್ದಾರೆ. ಈ ಮಧ್ಯೆ ಚಂದ್ರಯಾನ–3ರ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿ ಚಂದ್ರನ ದಕ್ಷಿಣ ಧ್ರುವ ತಲುಪಿದ ಬೆನ್ನಲ್ಲೇ ಲ್ಯಾಂಡರ್ ವಿನ್ಯಾಸ ಮಾಡಿದ್ದು ತಾನೇ ಎಂದು ಹೇಳಿಕೊಂಡು ಹಲವು ಮಾಧ್ಯಮಗಳಿಗೆ ಸಂದರ್ಶನ ನೀಡಿದ್ದರು. ಭಾರತೀಯ ಗೋರಕ್ಷಾ ಮಂಚ್ ಕಾರ್ಯಕರ್ತ ಧರ್ಮೇಂದ್ರ ಗಾಮಿ ಅವರು ತ್ರಿವೇದಿ ಬಗ್ಗೆ ಸಂಶಯ ವ್ಯಕ್ತಪಡಿಸಿ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದರು. ಪೊಲೀಸರು ತನಿಖೆ ನಡೆಸಿದ ಬಳಿಕ ತ್ರಿವೇದಿ 'ನಕಲಿ ವಿಜ್ಞಾನಿ' ಎಂಬ ವಿಷಯ ಬಹಿರಂಗವಾಗಿದೆ.

ಅಸ್ಸಾಂ ಪ್ರವಾಹ ಅಸ್ಸಾಂನ ಪ್ರವಾಹ ಪೀಡಿತ ಮೊರಿಗಾಂವ್ ಜಿಲ್ಲೆಯಲ್ಲಿ ಮಹಿಳೆಯೊಬ್ಬರು ಬಾವಿಯಲ್ಲಿ ಕುಡಿಯುವ ನೀರು ಸಂಗ್ರಹಿಸಿದರು –ಪಿಟಿಐ ಚಿತ್ರ

'ಮೈತ್ರಿ ಇಲ್ಲದಿದ್ದರೆ ಬಿಜೆಪಿಗೆ 500 ಮತವೂ ಸಿಗಲ್ಲ'

ಗ್ಯಾಂಗ್ಟಕ್ (ಪಿಟಿಐ): ಮುಂದಿನ ವರ್ಷ ಸಿಕ್ಕಿಂ ವಿಧಾನಸಭೆ ಚುನಾವಣೆ ನಡೆಯಲಿದ್ದು, ಆಡಳಿತಾರೂಢ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಜೊತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವ ಇಂಗಿತವನ್ನು ಗ್ಯಾಂಗ್ಟಕ್‌ನ ಬಿಜೆಪಿ ಶಾಸಕ ವೈ.ಟಿ. ಲೆಪ್ಚಾ ಅವರು ವ್ಯಕ್ತಪಡಿಸಿದ್ದಾರೆ. ಚುನಾವಣೆಯಲ್ಲಿ ಬಿಜೆಪಿ ಏಕಾಂಗಿಯಾಗಿ ಸ್ಪರ್ಧಿಸಿದರೆ 500 ಮತಗಳನ್ನೂ ಪಡೆಯುವುದಿಲ್ಲ ಎಂದು ಹೇಳಿದ್ದಾರೆ.

ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ಅವರ ನೇತೃತ್ವದ ಎಸ್‌ಕೆಎಂ ಜೊತೆಗಿನ ಮೈತ್ರಿ ಕುರಿತು ಅತೃಪ್ತಿ ವ್ಯಕ್ತಪಡಿಸಿದ್ದ ಬಿಜೆಪಿಯು, ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವ ಕುರಿತು ಚಿಂತನೆ ನಡೆಸುತ್ತಿರುವುದಾಗಿ ಈ ಹಿಂದೆ ಹೇಳಿತ್ತು. ಬಿಜೆಪಿ ನಿರ್ಧಾರದ ಕುರಿತು ತಮಗೆ ಒಪ್ಪಿಗೆ ಇಲ್ಲವೆಂದು ಸೂಚ್ಯವಾಗಿ ಸುದ್ದಿಗಾರರೊಂದಿಗೆ ಹೇಳಿದ ಲೆಪ್ಚಾ, 'ಎಸ್‌ಕೆಎಂ ಜೊತೆ ಮೈತ್ರಿ ಮಾಡಿಕೊಳ್ಳದಿದ್ದರೆ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ಸಾಧ್ಯತೆ ಬಹಳ ಕಡಿಮೆ ಇದೆ. ರಾಜ್ಯದಲ್ಲಿ ಬಿಜೆಪಿಯು ಸ್ವಂತ ಬಲದಲ್ಲಿ ಒಂದೇ ಒಂದು ಪಂಚಾಯತಿ ಸ್ಥಾನವನ್ನೂ ಗೆದ್ದಿಲ್ಲ. ಎಸ್‌ಕೆಎಂ ಜೊತೆ ಮೈತ್ರಿ ಮಾಡಿಕೊಂಡು ನಾವು ಉಪಚುನಾವಣೆಯಲ್ಲಿ ಎರಡು ಸ್ಥಾನಗಳನ್ನು ಗೆದ್ದಿದ್ದೇವೆ' ಎಂದಿದ್ದಾರೆ.

'2024ರ ವಿಧಾನಸಭೆ ಚುನಾವಣೆಗೂ ಎಸ್‌ಕೆಎಂ, ಬಿಜೆಪಿ ಮೈತ್ರಿಯು ಮುಂದುವರಿಯಬೇಕು ಎಂಬುದು ನನ್ನ ಅಭಿಪ್ರಾಯ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೇರಳದಲ್ಲಿ ಓಣಂ ಸಂಭ್ರಮ

ತಿರುವನಂತಪುರ (ಪಿಟಿಐ): ಸಾಂಪ್ರದಾಯಿಕ ದಿರಿಸು ತೊಟ್ಟು, ಮನೆಯಂಗಳದಲ್ಲಿ ಪೂಕ್ಕಳಂ (ಹೂವಿನ ರಂಗೋಲಿ) ಹಾಕಿ, ಬಗೆ ಬಗೆಯ ವಿಶೇಷ ಖಾದ್ಯಗಳ ಭೋಜನ (ಸದ್ಯ) ಸವಿದು ಕೇರಳಿಗರು ಸಂಭ್ರಮದಿಂದ ಓಣಂ ಹಬ್ಬ ಆಚರಿಸಿದರು.

ಹತ್ತು ದಿನಗಳ ಹಬ್ಬದಲ್ಲಿ 'ತಿರು ಓಣಂ' ಪ್ರಮುಖವಾಗಿದ್ದು, 'ತಿರು ಓಣಂ' ದಿನವಾದ ಮಂಗಳವಾರ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳಿಗೆ ಭೇಟಿ ನೀಡಿದ್ದಾರೆ.

ಮಕ್ಕಳು ಮತ್ತು ಯುವಕ, ಯುವತಿಯರು ತಮ್ಮ ಮನೆಗಳನ್ನು ಅಲಂಕರಿಸಿ ವಿವಿಧ ಬಣ್ಣಗಳ ಹೂವುಗಳಿಂದ ವಿವಿಧ ವಿನ್ಯಾಸದ 'ಪೂಕ್ಕಳಂ' ಹಾಕಿ ಹಬ್ಬದ ಸಡಗರವನ್ನು ಹೆಚ್ಚಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬದ ಅಂಗವಾಗಿ ಮನೆಗಳ ಆವರಣಗಳಲ್ಲಿ ಮಹಿಳೆಯರು ಉಯ್ಯಾಲೆಯಾಡಿ ಸಂಭ್ರಮಿಸಿದರು.

ಪ್ರಧಾನಿ ವಿದ್ಯಾರ್ಹತೆ: ಅರ್ಜಿ ವರ್ಗಾವಣೆಗೆ ಸೂಚನೆ

ಅಹಮದಾಬಾದ್ (ಪಿಟಿಐ): ಪ್ರಧಾನಿ ಅವರ ವಿದ್ಯಾರ್ಹತೆ ಕುರಿತ ಹೇಳಿಕೆಗೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆ ಕುರಿತು ವಿಚಾರಣಾ ನ್ಯಾಯಾಲಯದ ಸಮನ್ಸ್ ಅನ್ನು ಪ್ರಶ್ನಿಸಿ ಎಎಪಿ ನಾಯಕರಾದ ಅರವಿಂದ ಕೇಜ್ರಿವಾಲ್ ಹಾಗೂ ಸಂಜಯ್ ಸಿಂಗ್ ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಮೀರ್ ದವೆ ಅವರು ಎಎಪಿ ಮುಖಂಡರ ಅರ್ಜಿಯನ್ನು ಮತ್ತೊಬ್ಬ ನ್ಯಾಯಾಧೀಶರಿಗೆ ವರ್ಗಾಯಿಸುವಂತೆ ಮಂಗಳವಾರ ಸೆಷನ್ಸ್ ಕೋರ್ಟ್‌ಗೆ ನಿರ್ದೇಶನ ನೀಡಿದ್ದಾರೆ.

ಮತ್ತೊಬ್ಬ ನ್ಯಾಯಾಧೀಶರು ಈ ವಿಷಯ ಕುರಿತಂತೆ ಇನ್ನು 10 ದಿನಗಳಲ್ಲಿ ನಿರ್ಧಾರ ಪ್ರಕಟಿಸಲಿದ್ದಾರೆ ಎಂದೂ ಅವರು ಹೇಳಿದ್ದಾರೆ

ಇದೇ 31ರಂದು ಮೆಟ್ರೊಪಾಲಿಟನ್ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯಬೇಕಿದೆ. ಆದರೆ, ವಿಚಾರಣೆ ನಡೆಸುತ್ತಿರುವ ಉಸ್ತುವಾರಿ ನ್ಯಾಯಾಧೀಶರು ರಜೆಯಲ್ಲಿದ್ದು, ಸೆಪ್ಟೆಂಬರ್ 16ಕ್ಕೆ ಪ್ರಕರಣವನ್ನು ಕಾಯ್ದಿರಿಸಿದ್ದರು. ಹಾಗಾಗಿ, ಎಎಪಿಯ ಇಬ್ಬರು ನಾಯಕರು ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮುಂದಿನ ತಿಂಗಳು ಯುರೋಪ್‌ಗೆ ರಾಹುಲ್ ಭೇಟಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಸೆಪ್ಟೆಂಬರ್‌ನಲ್ಲಿ ಯುರೋಪ್‌ಗೆ ಭೇಟಿ ನೀಡುವ ಸಾಧ್ಯತೆ ಇದ್ದು, ಪ್ರವಾಸದ ಸಂದರ್ಭದಲ್ಲಿ ಅವರು ಪ್ಯಾರಿಸ್‌ನ ವಿಶ್ವವಿದ್ಯಾಲಯವೊಂದರಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಅಲ್ಲದೇ, ಬೆಲ್ಜಿಯಂನಲ್ಲಿರುವ ಯುರೋಪಿಯನ್ ಕಮಿಷನ್, ಶಾಸಕರನ್ನೂ ಭೇಟಿ ಮಾಡುವ ಸಾಧ್ಯತೆ ಇದೆ. ಒಟ್ಟು ಐದು ದಿನಗಳ ಕಾಲ ರಾಹುಲ್ ಕುಟುಂಬದವರು ಯುರೋಪ್ ಪ್ರವಾಸ ಕೈಗೊಂಡಿದ್ದು, ಸೆ. 7ರಂದು ಬ್ರಸೆಲ್ಸ್‌ನಲ್ಲಿ ರಾಹುಲ್ ಅವರು ಐರೋಪ್ಯ ಒಕ್ಕೂಟದ ಸದಸ್ಯರನ್ನು ಭೇಟಿ ಮಾಡಲಿದ್ದಾರೆ. ಸೆ. 8ರಂದು ಪ್ಯಾರಿಸ್‌ನ ವಿಶ್ವವಿದ್ಯಾಲಯವೊಂದರಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಉಪನ್ಯಾಸ ನೀಡುವರು. 9ರಂದು ಪ್ಯಾರಿಸ್‌ನಲ್ಲಿ ಫ್ರಾನ್ಸ್‌ನ ಕಾರ್ಮಿಕ ಒಕ್ಕೂಟದೊಂದಿಗೆ ಸಭೆಯೊಂದರಲ್ಲಿ ಪಾಲ್ಗೊಳ್ಳುವರು ಎಂದೂ ಮೂಲಗಳು ತಿಳಿಸಿವೆ.

ಸ್ಥಳೀಯ ಸಂಸ್ಥೆ: ಒಬಿಸಿಗೆ ಶೇ 27 ಮೀಸಲು

ಗಾಂಧಿನಗರ (ಪಿಟಿಐ): ಗುಜರಾತ್ ಸರ್ಕಾರವು ಮಂಗಳವಾರ ರಾಜ್ಯದಲ್ಲಿ ಪಂಚಾಯಿತಿ, ಪುರಸಭೆ ಮತ್ತು ನಗರಸಭೆ ಒಳಗೊಂಡಂತೆ ನಗರ ಮತ್ತು ಪಟ್ಟಣ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 27ರಷ್ಟು ಮೀಸಲಾತಿಯನ್ನು ಘೋಷಿಸಿದೆ.

ಆದರೆ, ಈ ತೀರ್ಮಾನವು ಪಂಚಾಯತ್ (ಷೆಡ್ಯೂಲ್ ವಲಯದ ವಿಸ್ತರಣೆ) ಕಾಯ್ದೆಯ ಅಧಿಸೂಚನೆಗೆ ಒಳಪಟ್ಟಿರುವ ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ. ಅಲ್ಲಿ, ಒಬಿಸಿ ವರ್ಗಕ್ಕೆ ಈಗಿರುವಂತೆಯೇ ಶೇ 10ರ ಮೀಸಲಾತಿಯೇ ಮುಂದುವರಿಯಲಿದೆ.

ಚರ್ಚಿಸದೇ ಕಲಾಪ ಮುಂದೂಡಿಕೆ

ಮಣಿಪುರ: ಸಂವಿಧಾನದ ಆಧಾರದಲ್ಲಿ ಶಾಂತಿ ಮರಳಿಸುವ ನಿರ್ಣಯ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದ ಸದ್ಯ ನಡೆಯುತ್ತಿರುವ ಹಿಂಸಾಚಾರವನ್ನು ಕೊನೆಗಾಣಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಚರ್ಚೆ ನಡೆಸಲು ಕರೆಯಲಾಗಿದ್ದ ರಾಜ್ಯ ವಿಧಾನಸಭೆಯ ಏಕದಿನದ ಅಧಿವೇಶನವನ್ನು ಮಂಗಳ ವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ರಾಜ್ಯದ ಸಂಘರ್ಷಮಯ ಪರಿಸ್ಥಿತಿ ಕುರಿತು ಯಾವುದೇ ಚರ್ಚೆಯೂ ಅಧಿವೇಶನದಲ್ಲಿ ನಡೆಯಲಿಲ್ಲ.

ಬೆಳಿಗ್ಗೆ 11 ಗಂಟೆಗೆ ಅಧಿವೇಶನ ಆರಂಭವಾಗುತ್ತಿದ್ದಂತೆ, ರಾಜ್ಯದ ಪರಿಸ್ಥಿತಿ ಕುರಿತು ಕೂಲಂಕಷವಾಗಿ ಚರ್ಚೆ ನಡೆಸುವ ದಿಸೆಯಲ್ಲಿ ಅಧಿವೇಶನವನ್ನು ಇನ್ನೂ ಐದು ದಿನಗಳಿಗೆ ವಿಸ್ತರಿಸುವಂತೆ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಯು ಶಾಸಕರು ಆಗ್ರಹಿಸಿದರು.

ಈ ಹಿನ್ನೆಲೆಯಲ್ಲಿ ಗದ್ದಲ ಉಂಟಾಯಿತು. ಜೊತೆಗೆ, ರಾಜ್ಯದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ವಿರುದ್ಧ ಅವರು ಘೋಷಣೆಯನ್ನೂ ಕೂಗಿದರು. ಈ ಕಾರಣಕ್ಕೆ ವಿಧಾನಸಭೆ ಸ್ಪೀಕರ್ ಥೋಕ್‌ಚೋಮ್ ಸತ್ಯವ್ರತ ಅವರು ಕಲಾಪವನ್ನು ಅರ್ಧಗಂಟೆಗೆ ಮುಂದೂಡಿದರು. ಆದರೂ ಶಾಸಕರು ಘೋಷಣೆ ಕೂಗುವುದನ್ನು ಮುಂದುವರೆಸಿದ ಕಾರಣ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ನಾಲ್ಕು ತಿಂಗಳಿಂದ ನಡೆಯುತ್ತಿರುವ ಹಿಂಸಾಚಾರದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸುವ ನಿರ್ಣಯವನ್ನು ರಾಜ್ಯ ಸರ್ಕಾರ ಗದ್ದಲದ ನಡುವೆಯೇ ಅಂಗೀಕರಿಸಿತು.

ರಾಜ್ಯದ ಜನತೆಯಲ್ಲಿ ಏಕತೆ ಮತ್ತು ಸಾಮರಸ್ಯ ಮೂಡಿಸುವ ನಿಟ್ಟಿನಲ್ಲಿ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿತು. ಜೊತೆಗೆ, ಮಾತುಕತೆ ಮತ್ತು ಸಂವಿಧಾನದ ಆಧಾರದಲ್ಲಿ ರಾಜ್ಯಕ್ಕೆ ಶಾಂತಿ ಮರಳಿಸುವ ನಿಟ್ಟಿನಲ್ಲೂ ನಿರ್ಣಯವನ್ನು ಅಂಗೀಕರಿಸಿತು. ಅಧಿವೇಶನವನ್ನು ಮುಂದೂಡುತ್ತಿದ್ದಂತೆ ಕಾಂಗ್ರೆಸ್ ನಾಯಕರು ರಾಜಭವನದ ಎದುರು ಕಪ್ಪು ಭಾವುಟ ಪ್ರದರ್ಶಿಸಿದರು. ಮಣಿಪುರದ ಸಂಸದೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಇದು ಕಪ್ಪು ದಿವಸ ಎಂದು ರಾಜ್ಯದ ಮಾಜಿ ಮುಖ್ಯಮಂತ್ರಿ ಒಕ್ರಾಮ್ ಇಬೋಬಿ ಸಿಂಗ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧಿವೇಶನವೊಂದು 'ಪ್ರಹಸನ': ಕಾಂಗ್ರೆಸ್

ಏಕದಿನದ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿರುವ ಕುರಿತು ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಈ ಅಧಿವೇಶನವನ್ನು 'ಪ್ರಹಸನ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಂವಹನ ಜೈರಾಮ್ ರಮೇಶ್ ಅವರು ಕರೆದಿದ್ದಾರೆ.

'ಈ ವರ್ಷ ಮಾರ್ಚ್ 3ರ ಬಳಿಕ ಮಣಿಪುರ ಇದೇ ಮೊದಲ ಬಾರಿಗೆ ಮಣಿಪುರ ಅಧಿವೇಶನವನ್ನು ಕರೆಯಲಾಗಿತ್ತು. ಹಿಂಸಾಚಾರ ಸಂತ್ರಸ್ತರಿಗಾಗಿ ಎರಡು ನಿಮಿಷ ಮೌನಾಚರಣೆ ಮಾಡಿದ ಬಳಿಕ ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ಅವರು ನಿರ್ಣಯ ಮಂಡಿಸಿದರು, ಬಳಿಕ ಅಧಿವೇಶನವನ್ನು ಮುಂದೂಡಲಾಯಿತು. ಈ ಸಂಪೂರ್ಣ ಪ್ರಕ್ರಿಯೆಗೆ ಒಂದು ಗಂಟೆಗಿಂತ ಕಡಿಮೆ ಅವಧಿ ತಗುಲಿದೆ' ಜೈರಾಮ್ ರಮೇಶ್ ಅವರು 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡಿದ್ದಾರೆ.

'ಇದೊಂದು ಪ್ರಹಸನದಂತಿದೆ, ಬಹುಮತ ಪಡೆದು ಸರ್ಕಾರ ರಚಿಸಿದ ಬಳಿಕವೂ ಎರಡು ದಿನಗಳ ಅಧಿವೇಶನ ನಡೆಸಲು ಬಿಜೆಪಿ ಹಿಂದೇಟು ಹಾಕುತ್ತಿದೆ. ಇದಕ್ಕೆ ಕಾರಣ ಸ್ಪಷ್ಟವಾಗಿದೆ. ದೀರ್ಘಾವಧಿಗೆ ಅಧಿವೇಶನ ನಡೆದರೆ ಬಿಜೆಪಿಯಲ್ಲಿರುವ ಬಿರುಕು ಬಯಲಿಗೆ ಬರುತ್ತದೆ' ಎಂದು ಅವರು ಹೇಳಿದ್ದಾರೆ.

ಗುಂಡಿನ ದಾಳಿ: ವ್ಯಕ್ತಿ ಸಾವು, ಹಲವರಿಗೆ ಗಾಯ

ಗುವಾಹಟಿ: ಮಣಿಪುರದ ವಿಷ್ಣುಪುರ ಜಿಲ್ಲೆಯಲ್ಲಿ ಶಂಕಿತ ಕುಕಿ ಬಂಡುಕೋರರು ಮಂಗಳವಾರ ನಡೆಸಿದ ಗುಂಡಿನ ದಾಳಿಯಲ್ಲಿ ವ್ಯಕ್ತಿ ಒಬ್ಬರು ಮೃತಪಟ್ಟು, ಮೈತೇಯಿ ಸಮುದಾಯದ ಇಬ್ಬರು ರೈತರು ಸೇರಿ ಹಲವರು ಗಾಯಗೊಂಡಿದ್ದಾರೆ.

ಮೈತೇಯಿ ಜನರು ಪ್ರಾಬಲ್ಯವಾಗಿರುವ ನರೇನ್‌ಸೈನಾ ಗ್ರಾಮದಲ್ಲಿ ಗುಂಡಿನ ದಾಳಿ ನಡೆದಿದೆ. ಮೊದಲು ಇಬ್ಬರು ಮೈತೇಯಿ ರೈತರ ಮೇಲೆ ಗುಂಡಿನ ದಾಳಿ ನಡೆದಿದ್ದು, ಗಾಯಾಳುಗಳನ್ನು ಇಂಫಾಲ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಂತರ ಅಕ್ಕಪಕ್ಕದ ಪ್ರದೇಶದಲ್ಲಿ ದಾಳಿ ನಡೆದಿದ್ದು, ಕನಿಷ್ಠ ಆರು ಮಂದಿ ಮೈತೇಯಿ 'ಗ್ರಾಮ ಸ್ವಯಂಸೇವಕರು' ಗಾಯಗೊಂಡಿದ್ದಾರೆ.

ಭದ್ರತಾ ಪಡೆಗಳು ತಕ್ಷಣ ಕಾರ್ಯಪ್ರವೃತ್ತವಾಗಿದ್ದು, ಭದ್ರತಾ ಪಡೆ ಮತ್ತು ಶಂಕಿತ ಕುಕಿ ಬಂಡುಕೋರರ ಮಧ್ಯೆ ಕೆಲಕಾಲ ಗುಂಡಿನ ಕಾಳಗ ನಡೆಯಿತು ಎಂದು ತಿಳಿಸಿವೆ.

ಷಿಕಾಗೊ ವಿ.ವಿ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್ ಅಧ್ಯಯನ

'ವಿಶ್ವದ ಅತಿ ಹೆಚ್ಚು ಮಾಲಿನ್ಯ ನಗರ ದೆಹಲಿ'

ನವದೆಹಲಿ(ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯ ವಾಯು ಗುಣಮಟ್ಟ ಮತ್ತಷ್ಟು ಕುಸಿದಿದ್ದು, ಜಗತ್ತಿನಲ್ಲೇ ಅತಿ ಹೆಚ್ಚು ಮಾಲಿನ್ಯವಿರುವ ನಗರ ಎನಿಸಿದೆ.

ವಾಯುಮಾಲಿನ್ಯ ಪ್ರಮಾಣ ಇದೇ ಗತಿಯಲ್ಲಿ ಮುಂದುವರಿದಲ್ಲಿ ನಗರ ಜನತೆಯು ತಮ್ಮ ಆಯಸ್ಸಿನಲ್ಲಿ 11.9 ವರ್ಷಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ಅಧ್ಯಯನ ವರದಿಯೊಂದು ಎಚ್ಚರಿಸಿದೆ.

ಷಿಕಾಗೊ ವಿಶ್ವವಿದ್ಯಾಲಯದ ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್ (ಇಪಿಐಸಿ) ಬಿಡುಗಡೆ ಮಾಡಿರುವ 'ವಾಯು ಗುಣಮಟ್ಟ ಜೀವನ ಸೂಚ್ಯಂಕ' (ಎಕ್ಯುಎಲ್‌ಐ) ಕುರಿತ ವರದಿಯಲ್ಲಿ ಈ ಅಂಶಗಳಿವೆ. ವಾರ್ಷಿಕ ಸರಾಸರಿ ಪಾರ್ಟಿಕ್ಯುಲೇಟ್ ಮಾಲಿನ್ಯ ಮಟ್ಟ ಒಂದು ಘನ ಮೀಟರ್‌ಗೆ 5 ಮೈಕ್ರೊ ಗ್ರಾಮ್‌ಗಳಷ್ಟಿರಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳುತ್ತದೆ. ಆದರೆ, ಭಾರತದ 130 ಕೋಟಿ ಜನರು ಈ ಸರಾಸರಿ ಪ್ರಮಾಣಕ್ಕಿಂತ ಹೆಚ್ಚು ಮಾಲಿನ್ಯ ಇರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎಂದು ಇಪಿಐ ಬಿಡುಗಡೆ ಮಾಡಿರುವ ಈ ಸೂಚ್ಯಂಕ ಹೇಳುತ್ತದೆ.

ದೆಹಲಿಯ ಜನಸಂಖ್ಯೆ 1.80 ಕೋಟಿ ಇದೆ. ಒಂದು ವೇಳೆ ವಾಯು ಮಾಲಿನ್ಯವು ಇದೇ ಪ್ರಮಾಣದಲ್ಲಿ ಮುಂದುವರಿದಲ್ಲಿ, ರಾಷ್ಟ್ರೀಯ ಮಾರ್ಗ ಸೂಚಿಯಲ್ಲಿ ಉಲ್ಲೇಖಿಸಿರುವುದಕ್ಕೆ ಹೋಲಿಸಿದಲ್ಲಿ ನಗರ ವಾಸಿಗಳು ತಮ್ಮ ಆಯಸ್ಸಿನಲ್ಲಿ 8.5 ವರ್ಷಗಳನ್ನು ಕಳೆದುಕೊಳ್ಳುವರು ಎಂದು ವಿವರಿಸುತ್ತದೆ.

'ಜಾಗತಿಕವಾಗಿ ದೊಡ್ಡ ಅಪಾಯ'

ವಿಶ್ವದೆಲ್ಲೆಡೆ ಮನುಷ್ಯನ ಆರೋಗ್ಯಕ್ಕೆ ಅಪಾಯ ಒಡ್ಡುವ ಅಂಶಗಳ ಪೈಕಿ ವಾಯುಮಾಲಿನ್ಯ ಪ್ರಮುಖವಾದುದು. ಆದರೆ, ಭಾರತ ಸೇರಿದಂತೆ ಆರು ದೇಶಗಳ ಜನರ ಆಯಸ್ಸಿನ ಮೇಲೆ ವಾಯು ಮಾಲಿನ್ಯ ಹೆಚ್ಚು ಪರಿಣಾಮ ಬೀರುತ್ತಿರುವುದು ಅಧ್ಯಯನದಿಂದ ಕಂಡುಬಂದಿದೆ ಎಂದು ಇಪಿಐಸಿ ತಜ್ಞರು ಹೇಳುತ್ತಾರೆ. ಬಾಂಗ್ಲಾದೇಶ, ಪಾಕಿಸ್ತಾನ, ಚೀನಾ, ನೈಜೀರಿಯಾ ಹಾಗೂ ಇಂಡೊನೇಷ್ಯಾ ಇತರ ದೇಶಗಳಾಗಿವೆ. 'ಈ ಆರು ದೇಶಗಳಲ್ಲಿ ವಾಯು ಮಾಲಿನ್ಯದ ಪರಿಣಾಮ ದೊಡ್ಡದು. ಈ ದೇಶಗಳ ವಾಸಿಗಳು ಉಸಿರಾಡುವ ಗಾಳಿಯಿಂದಾಗಿಯೇ, ಅವರ ಆಯಸ್ಸಿನಲ್ಲಿ ಒಂದರಿಂದ ಆರಕ್ಕಿಂತ ಹೆಚ್ಚು ವರ್ಷಗಳನ್ನು ಕಳೆದುಕೊಳ್ಳುತ್ತಿದ್ದಾರೆ' ಎಂದು ಷಿಕಾಗೊ ವಿವಿಯ ಪ್ರಾಧ್ಯಾಪಕ ಮೈಕಲ್ ಗ್ರೀನ್‌ಸ್ಟೋನ್ ಹೇಳಿದ್ದಾರೆ.

ಅಧ್ಯಯನದ ಇತರ ಅಂಶಗಳು

- ದೇಶದ ಜನಸಂಖ್ಯೆಯಲ್ಲಿ ಶೇ 67.4ರಷ್ಟು ಜನರು ಪ್ರಮಾಣಿತ ರಾಷ್ಟ್ರೀಯ ವಾಯು ಗುಣಮಟ್ಟ 40 ಮೈಕ್ರೊ ಗ್ರಾಮ್/ಘನ ಮೀಟರ್‌ಗಿಂತ ಹೆಚ್ಚು ಮಾಲಿನ್ಯ ಇರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ
- ಮಾಲಿನ್ಯಕಾರಕ 'ಪಿಎಂ 2.5'ನ ಮಟ್ಟವು ಭಾರತೀಯರ ಆಯಸ್ಸನ್ನು 5.3 ವರ್ಷಗಳಷ್ಟು ಕಡಿಮೆ ಮಾಡಲಿದೆ
- ವಾಹನಗಳು, ವಸತಿ ಪ್ರದೇಶಗಳು ಹಾಗೂ ಕೃಷಿ ಚಟುವಟಿಕೆಗಳೇ ಮಾಲಿನ್ಯದ ಮೂಲಗಳು

ನೂಹ್ ಘರ್ಷಣೆಯಲ್ಲಿ ಕಾಂಗ್ರೆಸ್ ಕೈವಾಡ: ಹರಿಯಾಣ ಸಚಿವ

ಚಂಡೀಗಢ (ಪಿಟಿಐ): ನೂಹ್‌ನಲ್ಲಿ ಕಳೆದ ತಿಂಗಳು ನಡೆದಿದ್ದ ಹಿಂಸಾಚಾರದಲ್ಲಿ ಕಾಂಗ್ರೆಸ್‌ನ ಕೈವಾಡವಿರಬಹುದು ಎಂದು ಹರಿಯಾಣ ಗೃಹ ಸಚಿವ ಅನಿಲ್ ವಿಜ್ ಮಂಗಳವಾರ ಹೇಳಿದ್ದಾರೆ.

ಜತೆಗೆ, ಪಾಕಿಸ್ತಾನದ ಸಂಚು ಇರಬಹುದಾ ಎಂಬ ಆಯಾಮದಲ್ಲಿ ತನಿಖೆ ನಡೆಸಲು ಪೊಲೀಸರು ಕೇಂದ್ರ ತನಿಖಾ ತಂಡಗಳ ನೆರವು ಪಡೆಯಲಿದ್ದಾರೆ ಎಂದು ಅವರು ವಿಧಾನಸಭೆಯ ಹೊರಗೆ ಹೇಳಿದರು.

ನೂಹ್ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ತನಿಖೆಗೆ ಹಾಜರಾಗುವಂತೆ ಕಾಂಗ್ರೆಸ್ ಶಾಸಕ ಮಮ್ಮನ್ ಖಾನ್‌ಗೆ ಹರಿಯಾಣ ಪೊಲೀಸರು ನೋಟಿಸ್ ನೀಡಿದ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಈ ಉತ್ತರ ನೀಡಿದರು.

ಸೈಬರ್ ಪೊಲೀಸ್ ಠಾಣೆಯ ಮೇಲಿನ ದಾಳಿಯಂಥ ಘಟನೆಗಳನ್ನು ಪರಿಶೀಲಿಸಲಾಗುತ್ತಿದೆ. ಪಾಕಿಸ್ತಾನದಿಂದ ಅನೇಕ ವಿಡಿಯೊಗಳು ಮತ್ತು ಫೋಟೋಗಳನ್ನು ಹಂಚಿಕೊಳ್ಳಲಾಗಿತ್ತು ಎಂದು ಸಚಿವರು ತಿಳಿಸಿದ್ದಾರೆ.

ಘರ್ಷಣೆಗೆ ಸಂಬಂಧಿಸಿದಂತೆ ಈ ವರೆಗೆ 510 ಮಂದಿಯನ್ನು ಬಂಧಿಸಲಾಗಿದ್ದು, 130 ಎಫ್‌ಐಆರ್ ದಾಖಲಿಸಲಾಗಿದೆ ಎಂದು ವಿಜ್ ಹೇಳಿದ್ದಾರೆ.

ಜುಲೈ 31 ರಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ)ನ ಮೆರವಣಿಗೆಯ ಮೇಲೆ ಗುಂಪೊಂದು ದಾಳಿ ಮಾಡಿತ್ತು. ನಂತರ ನೂಹ್ ಮತ್ತು ಸುತ್ತಲ ಪ್ರದೇಶಗಳಲ್ಲಿ ಕೋಮು ಘರ್ಷಣೆಗಳು ಭುಗಿಲೆದ್ದಿದ್ದವು. ಇಬ್ಬರು ಗೃಹರಕ್ಷಕರು ಮತ್ತು ಧರ್ಮಗುರು ಸೇರಿದಂತೆ ಆರು ಜನ ಮೃತಪಟ್ಟಿದ್ದರು.

'ಕಾಂಗ್ರೆಸ್‌ನವರ ಹಸಿವಿನ ಇತಿಹಾಸ ಜನರಿಗೆ ಗೊತ್ತು'

ಶಿರಸಿ : 'ಕಾಂಗ್ರೆಸ್‌ನವರ ಹಸಿವಿನ ಇತಿಹಾಸ ನಾಡಿನ ಜನರಿಗೆ ಗೊತ್ತಿದೆ. ಅಂಥವರ ತಟ್ಟೆ ಊಟಕ್ಕೆ ಬಿಜೆಪಿ ಶಾಸಕರು ಹೋಗುವುದಿಲ್ಲ' ಎಂದು ವಿಧಾನಸಭೆ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿರುಗೇಟು ನೀಡಿದ್ದಾರೆ.

'ಕಾಂಗ್ರೆಸ್ ತಟ್ಟೆಯಲ್ಲಿ ಉಣ್ಣುವವರಿಗೆ ಸ್ವಾಗತ' ಎಂದು ಸಚಿವ ಮಧು ಬಂಗಾರಪ್ಪ ಹೇಳಿಕೆಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಹಸಿವಾದಾಗ, ಕಾಂಗ್ರೆಸ್ ಪಕ್ಷದವರು ಯಾರ ಮನೆ ಬಾಗಿಲು ತಟ್ಟಿದರು ಎಂಬುದು ಜನರಿಗೆ ಗೊತ್ತು. ಮಧು ಬಂಗಾರಪ್ಪ ಅವರ ಪೂರ್ವ ಇತಿಹಾಸವೂ ನಮ್ಮೆಲ್ಲರ ಎದುರಿದೆ. ಜೆಡಿಎಸ್‌ನಿಂದ ಹೊರ ನಡೆದು ಕಾಂಗ್ರೆಸ್ ತಟ್ಟೆಯ ಊಟ ಮಾಡಿದ ಸ್ವಂತ ಅನುಭವದ ಮಾತು ಹೇಳಿದಂತಿದೆ' ಎಂದರು.

ಬುಧವಾರ, ಆಗಸ್ಟ್ 30, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಹೈದರಾಬಾದ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದು ಹೀಗೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರಾದ **ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ್** ಅವರು ಗೃಹಲಕ್ಷ್ಮೀ ಯೋಜನೆ ಚಾಲನೆಯ ಸಮಾರಂಭದಲ್ಲಿ ಭಾಗವಹಿಸಿದ ಸುಸಂದರ್ಭ.

ಸ್ತ್ರೀ ಸ್ವಾವಲಂಬನೆಯತ್ತ ಒಂದು ದಿಟ್ಟ ಹೆಜ್ಜೆ

ಗೃಹಲಕ್ಷ್ಮಿ

ಯೋಜನೆಯಡಿ

ಮಾಸಿಕ ರೂ. 2000/-

ಅಂದಾಜು **1.28** ಕೋಟಿ
ಕುಟುಂಬದ ಯಜಮಾನಿಯ ಖಾತೆಗೆ
ನೇರ ಹಣ ವರ್ಗಾವಣೆಗೆ ಅಧಿಕೃತ ಚಾಲನೆ

ದಿನಾಂಕ : 30-08-2023, ಬುಧವಾರ
ಸ್ಥಳ : ಮಹಾರಾಜ ಕಾಲೇಜು ಮೈದಾನ, ಮೈಸೂರು

ಯೋಜನೆಯ ಫಲಾನುಭವಿಗಳಿಗೆ ಮೊದಲನೇ ಕಂತಿನ ರೂ. 2,000/- ವರ್ಗಾವಣೆ

ರಾಜ್ಯದ 11,000 ಸ್ಥಳಗಳಿಂದ ಏಕಕಾಲಕ್ಕೆ "ಗೃಹಲಕ್ಷ್ಮೀ" ಯೋಜನೆಗೆ ಚಾಲನೆ

ನುಡಿದಂತೆ ನಡೆದಿದ್ದೇವೆ...

ಸರ್ವರಿಗೂ ಸುಸ್ವಾಗತ

ಗೃಹಲಕ್ಷ್ಮೀ ಯೋಜನೆಯ ಹೆಚ್ಚಿನ ಮಾಹಿತಿಗಾಗಿ QR CODE ಸ್ಕ್ಯಾನ್ ಮಾಡಿ.

ವಿಶೇಷ ಸೂಚನೆ : ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಯಾವುದೇ ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗದೆ ಉಚಿತವಾಗಿ ನೋಂದಣಿ ಮಾಡಿಕೊಳ್ಳಿ.

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಿಇಟಿ, ನೀಟ್: ಇಂದಿನಿಂದ 2ನೇ ಸುತ್ತಿನ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಆ.30ರಿಂದ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಆಸಕ್ತ ಅಭ್ಯರ್ಥಿಗಳು ಆದ್ಯತೆಗಳನ್ನು ನಮೂದಿಸಲು ಸೆ.2 ರ ಮಧ್ಯಾಹ್ನ 2ರವರೆಗೆ ಅವಕಾಶ ನೀಡಲಾಗಿದೆ. ಸೆ.4ರಂದು ಈ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುವುದು.

ಸೀಟು ಹಂಚಿಕೆಯ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಗಳಿಗೆ ತಮ್ಮ ಆದ್ಯತೆ ಆಯ್ಕೆ ಮಾಡಲು ಅವಕಾಶ ಇರುವುದಿಲ್ಲ. ಹಂಚಿಕೆಯಾದ ಸೀಟುಗಳಿಗೆ ಪ್ರವೇಶ ಪಡೆಯುವುದು.

ಹೆಚ್ಚಿನ ಮಾಹಿತಿಗೆ: ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ವೀಕ್ಷಿಸಬಹುದು ಎಂದು ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಅವರು ಹೇಳಿದ್ದಾರೆ.

ವಾಟ್ಸ್ಆ್ಯಪ್‌ನಲ್ಲಿ ಹರಿದಾಡಿದ ಪಿಡಿಒ ವರ್ಗಾವಣೆ ಪಟ್ಟಿ– ಎನ್‌ಐಸಿಯಿಂದ ಮಾಹಿತಿಗೆ ಕೋರಿಕೆ

ಇ–ಆಫೀಸ್‌ನಿಂದಲೇ ಕಡತ ಸೋರಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆ ಪಟ್ಟಿಯನ್ನು ಇ-ಆಫೀಸ್ ತಂತ್ರಾಂಶದಿಂದಲೇ ಕದ್ದು, ಸೋರಿಕೆ ಮಾಡಿರುವ ಶಂಕೆ ಬಲವಾಗುತ್ತಿದೆ. ಸತ್ಯಾಂಶ ಪತ್ತೆಗೆ ಎನ್‌ಐಸಿಯಿಂದ ಕಡತದ ಚಲನೆಯ ವರದಿ ಪಡೆಯಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

'ಪಂಚಾಯತ್ ರಾಜ್ ಆಯುಕ್ತಾಲಯದ ಕಂಪ್ಯೂಟರ್‌ಗಳನ್ನು ಹ್ಯಾಕ್ ಮಾಡಿ ವರ್ಗಾವಣೆ ಪಟ್ಟಿಗಳನ್ನು ಸೋರಿಕೆ ಮಾಡಲಾಗಿದೆ' ಎಂದು ಆಯುಕ್ತಾಲಯದ ಆಡಳಿತ ವಿಭಾಗದ ಉಪ ನಿರ್ದೇಶಕಿ ಭಾಗ್ಯಶ್ರೀ ಎಚ್.ಎಸ್. ದೂರಿನಲ್ಲಿ ತಿಳಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯದರ್ಶಿ ಎನ್. ಜಯರಾಂ ಬಳಿ ಬಾಕಿ ಇರುವ ಪಿಡಿಒಗಳ ವರ್ಗಾವಣೆ ಪಟ್ಟಿಗಳು ಸೋರಿಕೆಯಾಗಿರುವ ಮೂಲ ಪತ್ತೆಗೆ ಬೆಂಗಳೂರು ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ದೂರಿನಲ್ಲಿ ಹೆಸರಿಸಿದ್ದ ಪಿಡಿಒಗಳಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ವಾಟ್ಸ್ ಆ್ಯಪ್ ಗುಂಪುಗಳಲ್ಲಿ ವರ್ಗಾವಣೆ ಪಟ್ಟಿಗಳನ್ನು ಹಂಚಿಕೊಂಡಿದ್ದ ಇನ್ನೂ ಕೆಲವು ಪಿಡಿಒಗಳ ವಿಚಾರಣೆ ನಡೆಸಲಾಗಿದೆ. ಅಧಿಕಾರಿಗಳ ಮೂಲಕ ತಮಗೆ ಪಟ್ಟಿ ಲಭ್ಯವಾಗಿತ್ತು ಎಂಬ ಮಾಹಿತಿಯನ್ನು ಅವರು ತನಿಖಾ ತಂಡದ ಬಳಿ ಹಂಚಿಕೊಂಡಿದ್ದಾರೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಯವರಿಗೆ ಕಡತ ರವಾನಿಸಿದ ಕೆಲವು ದಿನಗಳಲ್ಲೇ ಪಿಡಿಒಗಳ ವರ್ಗಾವಣೆ ಪಟ್ಟಿಗಳು ಸೋರಿಕೆಯಾಗಿದ್ದವು ಎಂಬ ಮಾಹಿತಿ ತನಿಖಾ ತಂಡಕ್ಕೆ ಲಭಿಸಿದೆ. ದೂರಿನಲ್ಲಿ ಹೆಸರಿರುವವರು ಮತ್ತು ವಿಚಾರಣೆ ನಡೆಸಿರುವ ಪಿಡಿಒಗಳನ್ನು ತಲುಪುವ ಮೊದಲೇ ಈ ಪಟ್ಟಿಗಳು ಹಲವು ವ್ಯಕ್ತಿಗಳಿಗೆ ವಿನಿಮಯವಾಗಿದ್ದವು ಎಂಬುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ದತ್ತಾಂಶ ಪಡೆಯಲು ಕೋರಿಕೆ: ಉಪ ನಿರ್ದೇಶಕಿ ಭಾಗ್ಯಶ್ರೀ ಅವರು ಇ- ಆಫೀಸ್ ತಂತ್ರಾಂಶದಲ್ಲಿ ಪಿಡಿಒಗಳ ವರ್ಗಾವಣೆ ಕಡತಗಳನ್ನು ಆರಂಭಿಸಿದ್ದರು. ಅದೇ ವಿಭಾಗದ ಇಬ್ಬರು ನಿರ್ದೇಶಕರು, ಪಂಚಾಯತ್ ರಾಜ್ ಆಯುಕ್ತರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ಕಚೇರಿಗಳ ಮಾರ್ಗವಾಗಿ ಮುಖ್ಯಮಂತ್ರಿ ಕಚೇರಿಗೆ ಕಡತಗಳನ್ನು ರವಾನಿಸಲಾಗಿತ್ತು. ಈ ಮಧ್ಯದಲ್ಲಿ ಇ-ಆಫೀಸ್‌ನಿಂದಲೇ ಕಡತಗಳನ್ನು ಕಳವು ಮಾಡಲಾಗಿತ್ತೇ ಎಂಬುದನ್ನು ತಿಳಿಯಲು ತನಿಖಾ ತಂಡ ಮುಂದಾಗಿದೆ.

'ಇ-ಆಫೀಸ್ ತಂತ್ರಾಂಶದಲ್ಲಿ ಕಡತದ ಚಲನೆಯ ದತ್ತಾಂಶಗಳನ್ನು ಪಡೆದು ವಿಶ್ಲೇಷಣೆ ನಡೆಸಬೇಕು. ಆಗ ಯಾವ ಲಾಗಿನ್‌ನಿಂದ ಮತ್ತು ಯಾವ ಐಪಿ ವಿಳಾಸದಿಂದ ಕಡತವನ್ನು ಡೌನ್‌ಲೋಡ್ ಮಾಡಲಾಗಿತ್ತು ಎಂಬುದನ್ನು ತಿಳಿಯಲು ಸಾಧ್ಯವಿದೆ. ರಾಜ್ಯ ಸರ್ಕಾರವು ಬಳಸುತ್ತಿರುವ ಇ-ಆಫೀಸ್ ತಂತ್ರಾಂಶವನ್ನು ಕೇಂದ್ರ ಸರ್ಕಾರದ ನ್ಯಾಷನಲ್ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) ನಿರ್ವಹಿಸುತ್ತಿದೆ. ಕಡತದ ಚಲನೆಯ ದತ್ತಾಂಶ ಮತ್ತು ಲಾಗಿನ್ ವಿವರಗಳನ್ನು ಒದಗಿಸುವಂತೆ ಎನ್‌ಐಸಿಗೆ ಕೋರಿಕೆ ಸಲ್ಲಿಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಮಗ್ರ ತನಿಖೆಗೆ ಸೂಚನೆ

ಅನುಮೋದನೆಗೆ ಬಾಕಿ ಇರುವ ವರ್ಗಾವಣೆ ಪಟ್ಟಿಯನ್ನು ಸೋರಿಕೆ ಮಾಡಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿಯವರ ಸಚಿವಾಲಯ, ಈ ಬಗ್ಗೆ ಸಮಗ್ರವಾಗಿ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚಿಸಿದೆ.

'ವರ್ಗಾವಣೆ ಪಟ್ಟಿಯ ಕಡತವನ್ನು ಕದ್ದು ಸೋರಿಕೆ ಮಾಡಿದವರು ಮತ್ತು ಅದನ್ನು ದುರ್ಬಳಕೆ ಮಾಡಿಕೊಂಡವರನ್ನು ಪತ್ತೆಹಚ್ಚಲು ಆಳಕ್ಕಿಳಿದು ತನಿಖೆ ನಡೆಸಬೇಕು. ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಕಾನೂನು ಕ್ರಮದ ವ್ಯಾಪ್ತಿಗೆ ತರಬೇಕು ಎಂಬ ಸೂಚನೆಯನ್ನು ಮುಖ್ಯಮಂತ್ರಿಯವರ ಸಚಿವಾಲಯದ ಹಿರಿಯ ಅಧಿಕಾರಿಗಳು ಪೊಲೀಸರಿಗೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

'ಕಾವೇರಿ ನೀರು ಹಂಚಿಕೆ: ವಸ್ತುನಿಷ್ಠ ಸಂಕಷ್ಟ ಸೂತ್ರ ಅಗತ್ಯ'

ಬೆಂಗಳೂರು: 'ಕರ್ನಾಟಕ ಮತ್ತು ತಮಿಳುನಾಡು ನಡುವೆ ಕಾವೇರಿ ನೀರು ಹಂಚಿಕೆ ಸಂಬಂಧವಾಗಿ ಬರಗಾಲದ ವರ್ಷಗಳಿಗೆ ಅನ್ವಯವಾಗುವಂತೆ ಸಂಕಷ್ಟ ಸೂತ್ರವನ್ನು ವಸ್ತುನಿಷ್ಠ ನೆಲೆಯಲ್ಲಿ ಮಾಡಬೇಕು. ಇದೊಂದೇ ನಿಜವಾದ ಪರಿಹಾರ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಇದು ನನ್ನ ವೈಯಕ್ತಿಕ ಅಭಿಪ್ರಾಯ. ಹಿಂದೆ ನಾನು ನೀರಾವರಿ ಸಚಿವನಾಗಿದ್ದ ಅನುಭವದ ಮೇಲೆ ಈ ಸಲಹೆ ನೀಡುತ್ತಿದ್ದೇನೆ' ಎಂದು ಹೇಳಿದರು.

'ತಮಿಳುನಾಡಿನ ಕೋರಿಕೆ ಪ್ರಕಾರ ಈಗ ನೀರು ಬಿಡುವುದು ಅಸಾಧ್ಯ. ಇದನ್ನು ಮನವರಿಕೆ ಮಾಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಯಾವ ರೀತಿಯ ತೀರ್ಮಾನ ಮಾಡಬೇಕು ಎನ್ನುವುದಕ್ಕೆ ಯಾವುದೇ ಆಧಾರ ಇಲ್ಲ. ಹೀಗಾಗಿಯೇ ಎರಡೂ ರಾಜ್ಯಗಳ ತಜ್ಞರು ಸೇರಿಕೊಂಡು ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ' ಎಂದು ಸಲಹೆ ನೀಡಿದರು.

'ಹಿಂದೆ ರಾಜ್ಯವು ಪ್ರತಿವರ್ಷ ತಮಿಳುನಾಡಿಗೆ 192 ಟಿಎಂಸಿ ಅಡಿ ನೀರು ಬಿಡುಗಡೆ ಮಾಡಬೇಕಿತ್ತು. ಕಾನೂನು ಹೋರಾಟ ಮಾಡಿದ್ದರಿಂದ ಅದರಲ್ಲಿ 14 ಟಿಎಂಸಿ ಅಡಿಯಷ್ಟು ಹೊರೆ ನಮಗೆ ಕಡಿಮೆಯಾಗಿ, ಹೆಚ್ಚುವರಿಯಾಗಿ ಬೆಂಗಳೂರಿಗೆ 4.5 ಟಿಎಂಸಿ ಅಡಿ ಸಿಕ್ಕಿತು. ಇದರಿಂದಾಗಿ ನಾವು ಈಗ ಹೇಳುತ್ತಿರುವ ಮೇಕೆದಾಟು ಯೋಜನೆಯ ವಿಚಾರಕ್ಕೆ ಬಲ ಬಂತು' ಎಂದು ಅವರು ವಿವರಿಸಿದರು.

ನ.5ಕ್ಕೆ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನ.5ರಂದು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ-ಸೆಟ್) ನಡೆಸಲು ವೇಳಾಪಟ್ಟಿ ಪ್ರಕಟಿಸಿದೆ.

ಸೆ.5ರಂದು ಅಧಿಸೂಚನೆ ಹೊರಡಿಸಲಾಗುವುದು. 10 ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ಸೆ. 30 ಕೊನೆಯ ದಿನವಾಗಿದ್ದು, ಶುಲ್ಕ ಪಾವತಿಗೆ ಅ.3ರವರೆಗೆ ಅವಕಾಶ ನೀಡಲಾಗಿದೆ ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ಇದುವರೆಗೂ ಮೈಸೂರು ವಿಶ್ವವಿದ್ಯಾಲಯ ಕೆ-ಸೆಟ್ ಪರೀಕ್ಷೆ ನಡೆಸುವ ಹೊಣೆಗಾರಿಕೆ ನಿಭಾಯಿಸುತ್ತಿತ್ತು. ಪರೀಕ್ಷಾ ನಕಲು ತಡೆಯಲು, ಸುಸೂತ್ರವಾಗಿ ಪರೀಕ್ಷೆಗಳನ್ನು ನಡೆಸಲು ವಿಫಲವಾದ ಕಾರಣ ಹೊಣೆಗಾರಿಕೆಯನ್ನು ಸರ್ಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಿತ್ತು. ಹಾಗಾಗಿ, ಎರಡು ವರ್ಷಗಳಿಂದ ಪರೀಕ್ಷೆ ನಡೆದಿರಲಿಲ್ಲ.

ಲೋಕಾಯುಕ್ತ ಬಲೆಗೆ ಬೀಳಗಿ ಶಿರಸ್ತೇದಾರ

ಪ್ರಜಾವಾಣಿ ವಾರ್ತೆ

ಬೀಳಗಿ: ಪಹಣಿ (ಕಾಲಂ 11) ಶರ್ತು ಕಡಿಮೆ ಮಾಡಿ ಕೊಡಲು ₹ 10 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ತಹಶೀಲ್ದಾರ ಕಚೇರಿಯ ಶಿರಸ್ತೇದಾರ ಮಹಾಂತೇಶ ಸುಭಾಷ ಹುರಕಡ್ಲಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಮಹಾಂತೇಶ ಸುಭಾಷ

ತಹಶೀಲ್ದಾರ ಕಚೇರಿಯಲ್ಲಿ ಮಂಗಳವಾರ ಸಿಮೀಕೆರಿಯ ಮಂಜುನಾಥ ಕೃಷ್ಣಪ್ಪ ದಳವಾಯಿ ಅವರಿಂದ ₹ 10 ಸಾವಿರ ಪಡೆಯುತ್ತಿದ್ದ ವೇಳೆ ಪೊಲೀಸರು ಕಾರ್ಯಾಚರಣೆ ನಡೆಸಿದರು. ಮಂಜುನಾಥ ಅವರು ಸುನಗ ಗ್ರಾಮದ 8 ಎಕರೆ ಜಮೀನಿನ ಪಹಣಿ ಕಾಲಂ 11ರಲ್ಲಿರುವ ಶರ್ತು ಕಡಿಮೆ ಮಾಡಿಕೊಡಲು ಅರ್ಜಿ ಸಲ್ಲಿಸಿದ್ದರು.

ಎಸ್‌ಪಿ ಅನಿತಾ ಹದ್ದಣ್ಣವರ ಅವರ ಮಾರ್ಗದರ್ಶನದಲ್ಲಿ ಬಾಗಲಕೋಟೆ ಲೋಕಾಯುಕ್ತ ಡಿವೈಎಸ್‌ಪಿ ಪುಷ್ಪಲತಾ ಎನ್. ಅವರ ನೇತೃತ್ವದಲ್ಲಿ ಸಿಪಿಐಗಳಾದ ಬಸವರಾಜ ಎಂ. ಅವಟಿ, ಬಸನಗೌಡ ಜೆ. ಪಾಟೀಲ ಹಾಗೂ ಸಿಬ್ಬಂದಿ ಬಸವರಾಜ ದೇಸಾಯಿ, ನಾಗಪ್ಪ ಪೂಜಾರಿ, ಹಣಮಂತ ಮಾಸರಡ್ಡಿ, ಭೀಮನಗೌಡ ಪಾಟೀಲ, ಶಂಕರ ಬಳಬಟ್ಟಿ ಕಾರ್ಯಾಚರಣೆ ನಡೆಸಿದರು.

ಶಿಕ್ಷಣ ಇಲಾಖೆ ಅಧೀಕ್ಷಕ ಬಂಧನ

ಬಾಗಲಕೋಟೆ: ಜಿಲ್ಲೆಯ ಬಾದಾಮಿಯ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ₹ 8 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಅಧೀಕ್ಷಕ ವೆಂಕಟೇಶ ಇನಾಮದಾರ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವೆಂಕಟೇಶ ಇನಾಮದಾರ

'ಹುನಗುಂದ ತಾಲ್ಲೂಕಿನ ಚಿತ್ತರಗಿ ಗ್ರಾಮದ ಸತ್ಯಪ್ಪ ಕಾಮಾ ಅವರು ಸ್ಥಗಿತ ವೇತನದ ಬಾಕಿ ಬಿಲ್ ಮಂಜೂರು ಮಾಡಿಕೊಡುವಂತೆ ವೆಂಕಟೇಶ ಇನಾಮದಾರಗೆ ಅರ್ಜಿ ಸಲ್ಲಿಸಿದ್ದರು. ಅದಕ್ಕೆ ₹ 18 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಅವರು ₹ 10 ಸಾವಿರ ಫೋನ್ ಪೇ ಪಡೆದಿದ್ದರು. ನಂತರ ₹ 8 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಸತ್ಯಪ್ಪ ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಡಿಎಸ್‌ಪಿ ಪುಷ್ಪಲತಾ ಎನ್. ಸಿಬ್ಬಂದಿಯೊಂದಿಗೆ ಕಾರ್ಯಾಚರಣೆ ನಡೆಸಿದರು.

ಸಿಕ್ಕಿಬಿದ್ದ ಕಾರಾಗೃಹ ಅಧಿಕಾರಿ

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ಇಲ್ಲಿಯ ಉಪ ಕಾರಾಗೃಹದಲ್ಲಿರುವ ವ್ಯಕ್ತಿಯನ್ನು ಭೇಟಿಗೆ ಅವಕಾಶ ನೀಡಲು ಆತನ ಸಂಬಂಧಿಕರಿಂದ ₹5 ಸಾವಿರ ಲಂಚ ಪಡೆಯುತ್ತಿದ್ದ ಉಪ ಕಾರಾಗೃಹ ಅಧೀಕ್ಷಕ ದೇವೇಂದ್ರ ಆರ್. ಕೋಣಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ದೇವೇಂದ್ರ ಆರ್. ಕೋಣಿ

ಪ್ರಕರಣವೊಂದರಲ್ಲಿ ಮಧುಗಿರಿ ಉಪ ಕಾರಾಗೃಹದಲ್ಲಿರುವ ಶಿರಾ ನಿವಾಸಿ ಅಬ್ಬಾಜ್ ಎಂಬುವರನ್ನು ಆಗಾಗ ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿಕೊಂಡು ಹೋಗಲು ಕುಟುಂಬ ಸದಸ್ಯರು ಬರುತ್ತಿದ್ದರು. ಬಂದಾಗಲೆಲ್ಲ ದೇವೇಂದ್ರ ₹1,500ರಿಂದ ₹2,000 ಹಣಕ್ಕೆ ಬೇಡಿಕೆ ಇಡುತ್ತಿದ್ದರು ಎಂದು ಕುಟುಂಬ ಸದಸ್ಯರು ಆರೋಪ ಮಾಡಿದ್ದಾರೆ.

ಹಣ ಕೊಡದಿದ್ದರೆ ಅಬ್ಬಾಜ್‌ನನ್ನು ಮಧುಗಿರಿ ಜೈಲಿನಿಂದ ತುಮಕೂರು ಜೈಲಿಗೆ ಸ್ಥಳಾಂತರಿಸುವುದಾಗಿ ಕಾರಾಗೃಹ ಅಧೀಕ್ಷಕರು ಬೆದರಿಕೆ ಒಡ್ಡುತ್ತಿದ್ದರು ಎಂದು ಅವರು ಆರೋಪ ಮಾಡಿದ್ದಾರೆ. ಕುಟುಂಬ ಸದಸ್ಯರು ಮಂಗಳವಾರ ಅಬ್ಬಾಜ್‌ನನ್ನು ಭೇಟಿ ಮಾಡಲು ಬಂದಾಗ ಅಧೀಕ್ಷಕರು ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಆ ಪೈಕಿ ₹5 ಸಾವಿರ ಪಡೆಯುವಾಗ ಲೋಕಾಯುಕ್ತರು ದಾಳಿ ನಡೆಸಿ, ಅಧಿಕಾರಿಯನ್ನು ವಶಕ್ಕೆ ಪಡೆದಿದ್ದಾರೆ.

ಓಣಂ ಸಡಗರ ಓಣಂ ಹಬ್ಬದ ದಿನವಾದ ಮಂಗಳವಾರ ಚಿಕ್ಕಮಗಳೂರಿನ ಯುವತಿಯರು ಹೂವಿನ ರಂಗೋಲಿ (ಪೂಕಳಂ) ರಚಿಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ದುಂಡು ಮೇಜಿನ ಸಭೆಯಲ್ಲಿ ಹೋರಾಟಗಾರರು, ರೈತ ಮುಖಂಡರಿಂದ ಸರ್ಕಾರಕ್ಕೆ ಎಚ್ಚರಿಕೆ

ಕದ್ದುಮುಚ್ಚಿ ನೀರು ಹರಿಸಿದರೆ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯು-ಆರ್‌ಸಿ) ಶಿಫಾರಸು ಪಾಲಿಸಬಾರದು. ರಾಜಕೀಯ ಲಾಭಕ್ಕಾಗಿ ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಕದ್ದು ಮುಚ್ಚಿ ನೀರು ಹರಿಸಿದರೆ ರಸ್ತೆಗೆ ಇಳಿದು ಹೋರಾಟ ನಡೆಸಲಾಗುವುದು' ಎಂದು ರೈತ ಮುಖಂಡರು, ಕನ್ನಡ ಸಂಘಟನೆಗಳ ಹೋರಾಟಗಾರರು ಹಾಗೂ ಸಂಘ–ಸಂಸ್ಥೆಗಳ ಮುಖಂಡರು ಎಚ್ಚರಿಕೆ ನೀಡಿದರು.

ನಗರದಲ್ಲಿ ಮಂಗಳವಾರ ಕರ್ನಾಟಕ ಜಲ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ 28 ಸಂಘಟನೆಗಳ ಮುಖಂಡರು ಪಾಲ್ಗೊಂಡು, 'ಸರ್ಕಾರವು ಕನ್ನಡನಾಡಿನ ಹಿತ ಕಾಪಾಡಬೇಕು' ಎಂದು ಆಗ್ರಹಿಸಿದರು.

'ಸಿಡಬ್ಲ್ಯುಆರ್‌ಸಿ ಶಿಫಾರಸ್ಸಿನ ಮೇರೆಗೆ ನೀರು ಹರಿಸಲಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದೆ. ಇದು ಖಂಡನೀಯ. ಅಧಿಕಾರ ಉಳಿಸಿಕೊಳ್ಳಲು, ರಾಜಕೀಯ ಲಾಭಕ್ಕಾಗಿ ಕನ್ನಡಿಗರ ಹಿತಬಲಿ ಕೊಡಬಾರದು' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಅವರು ಹೇಳಿದರು.

'ತಮಿಳುನಾಡು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ತಕ್ಷಣವೇ ಸರ್ಕಾರವು ನೀರು ಹರಿಸುವ ನಿರ್ಧಾರ ಕೈಗೊಂಡಿದ್ದು ತಪ್ಪು' ಎಂದು ಹೇಳಿದರು.

'ಕರ್ನಾಟಕದ ಜನರಿಗೆ ಕುಡಿಯುವ ನೀರಿಲ್ಲದೇ ಸಮಸ್ಯೆಯಾದರೂ ತೊಂದರೆ ಇಲ್ಲ. ನಮಗೆ ಬರಬೇಕಾದ ಪಾಲು ಬಂದುಬಿಡಲಿ' ಎಂಬ ತಮಿಳುನಾಡಿನ ಧೋರಣೆ ಒಕ್ಕೂಟದ ವ್ಯವಸ್ಥೆ ಮಾಡಿದ ದ್ರೋಹ. ಜತೆಗೆ ಅದು ಅಪಾಯಕಾರಿ' ಎಂದರು.

'ಹಿಂದಿನ ವರ್ಷ ನೀರನ್ನು ಹೆಚ್ಚುವರಿಯಾಗಿ ಬಿಡಲಾಗಿತ್ತು. ಅದನ್ನು ಪೂರ್ಣ ಉಳಿಸಿಕೊಳ್ಳಲು ವ್ಯವಸ್ಥೆ ಇಲ್ಲದೆ ಸಮುದ್ರಕ್ಕೆ ಹರಿದು ಹೋಗಿದೆ. ತಮಿಳುನಾಡಿನವರು ನದಿ ಪಾತ್ರದ ತಳ ಭಾಗದಲ್ಲಿ ಯೋಜನೆ ಕೈಗೆತ್ತಿಕೊಂಡಿದ್ದಾರೆ. ಅದಕ್ಕೆ ನೀರಿನ ಹಂಚಿಕೆ ಇಲ್ಲ. ಈ ಬಗ್ಗೆ ತಾಂತ್ರಿಕ ಮಾಹಿತಿ ಕಲೆಹಾಕುವ ಕೆಲಸ ಆಗಬೇಕು. ತಜ್ಞರಿಂದ ಅಧ್ಯಯನ ನಡೆಸಬೇಕು' ಎಂದು ಆಗ್ರಹಿಸಿದರು.

ಕಬ್ಬು ಬೆಳೆಗಾರರ ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್, 'ರಾಜ್ಯದಲ್ಲಿ ಶೇ 64ರಷ್ಟು ಮಳೆ ಕೊರತೆಯಾಗಿದೆ. ಕೆಆರ್‌ಎಸ್, ಕಬಿನಿ ಜಲಾಶಯಗಳಲ್ಲಿ ನೀರು ಖಾಲಿಯಾಗಿದೆ. ಇಂತಹ ಸಂಕಷ್ಟದ ವೇಳೆ ನೀರು ಹರಿಸಬಾರದು. ತಮಿಳನಾಡಿನ ಅಂತರ್ಜಲವನ್ನು ಪರಿಗಣಿಸಿಲ್ಲ. ಇದು ರಾಜ್ಯಕ್ಕೆ ಮಾಡಿದ ದ್ರೋಹ' ಎಂದು ಹೇಳಿದರು.

ಸಭೆಯಲ್ಲಿ ಪ್ರಕಾಶ್ ಕಮ್ಮರಡಿ, ಆಂಜನೇಯ ರೆಡ್ಡಿ, ಸಿ.ಚಂದ್ರಶೇಖರ್, ಪ್ರವೀಣ್ ಶೆಟ್ಟಿ, ಬ್ರಿಜೇಶ್ ಕಾಳಪ್ಪ ಇದ್ದರು.

ಸಭೆಯ ಪ್ರಮುಖ ನಿರ್ಣಯಗಳು...

- ಸಿಡಬ್ಲ್ಯುಆರ್‌ಸಿ ಆದೇಶಿಸಿರುವಂತೆ ಪ್ರತಿನಿತ್ಯ 5 ಸಾವಿರ ಕ್ಯುಸೆಕ್ ನೀರನ್ನು ಯಾವುದೇ ಕಾರಣಕ್ಕೂ ಬಿಡಬಾರದು.
- ಮೇಕೆದಾಟು ಜಲಾಶಯ ನಿರ್ಮಾಣವನ್ನು ತಕ್ಷಣವೇ ಕೈಗೆತ್ತಿಕೊಳ್ಳಬೇಕು.
- ಸಮುದ್ರಕ್ಕೆ ಹರಿಯುವ ಹೆಚ್ಚುವರಿ ನೀರನ್ನು ಸಂಗ್ರಹಿಸಿಕೊಂಡು ಸಂಕಷ್ಟದ ಸಮಯದಲ್ಲಿ ಕುಡಿಯುವ ನೀರಿಗೆ ಬಳಸಬೇಕು.
- ಬೆಂಗಳೂರಿಗೆ ನಿಗದಿ ಪಡಿಸಿರುವ ಕುಡಿಯುವ ನೀರಿನ ಪ್ರಮಾಣವನ್ನು 30 ಟಿಎಂಸಿ ಅಡಿಗೆ ಹೆಚ್ಚಿಸಲು ರಾಜ್ಯ ಸರ್ಕಾರವು ನ್ಯಾಯಾಲಯಕ್ಕೆ ಮನವಿ ಸಲ್ಲಿಸಬೇಕು.
- ಮಳೆ ಕೊರತೆಯಾದ ವರ್ಷದಲ್ಲಿ ಸಂಕಷ್ಟ ಸೂತ್ರವನ್ನು ಕೇಂದ್ರ ಸರ್ಕಾರ ತಕ್ಷಣವೇ ಜಾರಿಗೆ ತರಬೇಕು.

ಕಬಿನಿ, ಹೇಮಾವತಿ, ಹಾರಂಗಿ ಜಲಾಶಯಗಳ ನಿರ್ಮಾಣದ ವೇಳೆ ಕೇಂದ್ರದ ಅನುಮತಿ ಪಡೆದಿರಲಿಲ್ಲ. ಮೇಕೆದಾಟು ವಿಚಾರದಲ್ಲೂ ಅದನ್ನೇ ಮಾಡಬೇಕು

ತಿಮ್ಮೇಗೌಡ, ನಿವೃತ್ತ ವ್ಯವಸ್ಥಾಪಕ ನಿರ್ದೇಶಕ, ಕಾವೇರಿ ನೀರಾವರಿ ನಿಗಮ

ಮಳೆ ಕೊರತೆಯಾದ ವರ್ಷದಲ್ಲಿ ಎರಡೂ ರಾಜ್ಯಗಳು ಸಂಕಷ್ಟವನ್ನೂ ಪರಸ್ಪರ ಹಂಚಿಕೊಳ್ಳಬೇಕು. ಆಗ ನೀರು ಹಂಚಿಕೆಯಲ್ಲಿ ಸಮಸ್ಯೆ ಬರುವುದಿಲ್ಲ

'ಮುಖ್ಯಮಂತ್ರಿ' ಚಂದ್ರು ಅಧ್ಯಕ್ಷ, ಎಎಪಿ ರಾಜ್ಯ ಘಟಕ

ನೀರು ನಿರ್ವಹಣಾ ಮಂಡಳಿ ಆದೇಶ ಪಾಲಿಸಬಾರದು. ನ್ಯಾಯಾಲಯಕ್ಕೆ ಮರು ಪರಿಶೀಲನಾ ಅರ್ಜಿ ಸಲ್ಲಿಸಬೇಕು

ಕುರುಬೂರು ಶಾಂತಕುಮಾರ್ ಅಧ್ಯಕ್ಷ, ರಾಜ್ಯ ಕಬ್ಬು ಬೆಳೆಗಾರರ ಸಂಘ

9.6 ಅಡಿ ಬಿಳಿ ಹೆಬ್ಬಾವು ಪತ್ತೆ

ಪ್ರಜಾವಾಣಿ ವಾರ್ತೆ

ಕುಮಟಾ (ಉತ್ತರ ಕನ್ನಡ): ತಾಲ್ಲೂಕಿನ ಹೆಗಡೆ ಗ್ರಾಮದ ಗಾಂಧಿನಗರದ ದೇವಿ ಮುಕ್ರಿ ಎಂಬುವರ ಮನೆಯಲ್ಲಿ ಸೋಮವಾರ ರಾತ್ರಿ ಉರಗ ರಕ್ಷಕ ಪವನ ನಾಯ್ಕ ಅವರು 9.6 ಅಡಿ ಉದ್ದದ ಬಿಳಿ ಹೆಬ್ಬಾವನ್ನು ರಕ್ಷಿಸಿದರು.

'ಕಳೆದ ವರ್ಷ ತಾಲ್ಲೂಕಿನ ಮಿರ್ಜಾನಿನಲ್ಲಿ ಸಿಕ್ಕ ಸಣ್ಣ ಬಿಳಿ ಹೆಬ್ಬಾವು ರಕ್ಷಿಸಿ ಕಾಡಿಗೆ ಬಿಡಲಾಗಿತ್ತು. ರಾಜ್ಯದಲ್ಲಿ ಕಂಡ ಮೂರು ಬಿಳಿ ಹೆಬ್ಬಾವುಗಳ ಪೈಕಿ ಎರಡು ಕುಮಟಾದಲ್ಲಿ ಸಿಕ್ಕಿದ್ದು ವಿಶೇಷ' ಎಂದು ಪವನ ನಾಯ್ಕ ತಿಳಿಸಿದರು.

'ಸಾಮಾನ್ಯ ಹೆಬ್ಬಾವಿಗೆ ಹಾಗೂ ಬಿಳಿ ಹೆಬ್ಬಾವಿಗೆ ವ್ಯತ್ಯಾಸ ಇರುವುದಿಲ್ಲ. ಆದರೆ, ದೇಹದಲ್ಲಿ ಮೆಲನಿನ್ ಕೊರತೆಯಿಂದ ಹೆಬ್ಬಾವು ಜೈವಿಕವಾಗಿ ಬಿಳಿ ಬಣ್ಣ ಪಡೆಯುತ್ತದೆ. ಇದು ದೇಶದಲ್ಲೇ ಅತಿ ದೊಡ್ಡ ಬಿಳಿ ಹೆಬ್ಬಾವು ಆಗಿರುವ ಸಾಧ್ಯತೆ ಇದೆ. ಹೆಬ್ಬಾವಿನ ಮೇಲೆ ಸಣ್ಣಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ಕೊಡಿಸಿ ಮೈಸೂರು ಪ್ರಾಣಿ ಸಂಗ್ರಹಾಲಯಕ್ಕೆ ಕಳುಹಿಸಲಾಗುವುದು' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸಿ.ರವಿಶಂಕರ ತಿಳಿಸಿದರು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲೋಹಿತ್ ಜಿ, ವಲಯ ಅರಣ್ಯಾಧಿಕಾರಿಗಳಾದ ಎಸ್.ಟಿ. ಪಟಗಾರ, ಪ್ರವೀಣ ನಾಯಕ ಮತ್ತು ಛಾಯಾಗ್ರಾಹಕ ಗೋಪಿ ಜಾಲಿ ಇದ್ದರು.

ಬಿಜೆಪಿ ತೊರೆಯುವ ಪ್ರಶ್ನೆ ಇಲ್ಲ: ಹೆಬ್ಬಾರ್

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): 'ನಾನು ಬಿಜೆಪಿಯ ಶಾಸಕ. ಮುಂದೆಯೂ ಇದೇ ಪಕ್ಷದಲ್ಲಿ ಮುಂದುವರಿಯುವೆ. ಪಕ್ಷ ತೊರೆಯುವ ವದಂತಿ ಯಾರು ಹಬ್ಬಿಸಿದರು ಎಂಬುದು ಗೊತ್ತಿಲ್ಲ. ಅಂತಹ ವಿಚಾರ ಇಲ್ಲ' ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

ತಾಲ್ಲೂಕಿನ ಬಡ್ಡಿಗೇರಿಯಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕ್ಷೇತ್ರವನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲು ಮನವಿ ಸಲ್ಲಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದೆ. ಇದಕ್ಕೆ ರಾಜಕೀಯ ಬಣ್ಣ ಲೇಪಿಸುವುದು ಬೇಡ' ಎಂದರು.

'ರಾಜ್ಯ ಸರ್ಕಾರ ಈಗಷ್ಟೇ ನೂರು ದಿನ ಪೂರೈಸಿದೆ. ಈಗಲೇ ಅವರ ಆಡಳಿತದ ಫಲಿತಾಂಶ ನೀಡಲು ಆಗದು. ಆಡಳಿತದ ಬಗ್ಗೆ ಸ್ಪಷ್ಟವಾಗಿ ಹೇಳಲು ಇನ್ನೂ ಕಾಲಾವಕಾಶ ಬೇಕು' ಎಂದರು.

ಚಂದ್ರನ 'ದಕ್ಷಿಣ'ದಲ್ಲಿ ಗಂಧಕ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನ ದಕ್ಷಿಣ ಧ್ರುವದ ಮೇಲ್ಮೈನಲ್ಲಿ ಗಂಧಕ ಇರುವುದನ್ನು ಚಂದ್ರಯಾನ–3ರ ರೋವರ್ (ಪ್ರಜ್ಞಾನ್) ಪತ್ತೆ ಮಾಡಿದೆ.

ಅಲ್ಲದೇ, ನಿರೀಕ್ಷೆಯಂತೆ ಅಲ್ಯುಮಿನಿಯಂ (ಎಎಲ್), ಕ್ಯಾಲ್ಸಿಯಂ, ಕಬ್ಬಿಣ, ಕ್ರೋಮಿಯಂ, ಟೈಟೆನಿಯಂ, ಮ್ಯಾಂಗನೀಸ್, ಸಿಲಿಕಾನ್ ಮತ್ತು ಆಮ್ಲಜನಕ ಧಾತುಗಳು ಪತ್ತೆಯಾಗಿವೆ. ಜಲಜನಕ ಧಾತುವಿನ ಪತ್ತೆ ಕಾರ್ಯ ಮುಂದುವರೆದಿದೆ ಎಂದು ಇಸ್ರೊ ತಿಳಿಸಿದೆ.

ಪ್ರಜ್ಞಾನ್‌ನಲ್ಲಿರುವ ಲಿಬ್ಸ್ ಉಪಕರಣವು ಈ ಧಾತುಗಳನ್ನು ಪತ್ತೆ ಮಾಡಿದ್ದು, ಚಂದ್ರನ ದಕ್ಷಿಣ ಧ್ರುವದಲ್ಲಿ ರೋವರ್ ಇಳಿದು ಬುಧವಾರಕ್ಕೆ ಒಂದು ವಾರ ತುಂಬಲಿದೆ. ಇನ್ನು ಏಳು ದಿನಗಳ ಕಾಲ ಪ್ರಯೋಗ ಮುಂದುವರಿಸಲಿದೆ. ಅಂದರೆ ಸೆ. 5 ರವೇಳೆಗೆ ಚಂದ್ರನಲ್ಲಿ ಕತ್ತಲು ಆವರಿಸಲಿದೆ. ಅಲ್ಲಿ ಇನ್ನು ಬೆಳಕು ಕಾಣಲು ಮುಂದಿನ 14 ದಿನಗಳು ಕಾಯಬೇಕು. ಆ ಬಳಿಕ ಮತ್ತೆ ಲ್ಯಾಂಡರ್ ಮತ್ತು ರೋವರ್‌ಗಳಿಗೆ ಮರು ಜೀವ ನೀಡಲು ಸಾಧ್ಯವೇ ಎಂಬುದನ್ನು ಇಸ್ರೊ ಪ್ರಯತ್ನ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಲಿಬ್ಸ್ (ಲೇಸರ್ ಇಂಡ್ಯೂಸ್ಡ್ ಬ್ರೇಕ್‌ಡೌನ್ ಸ್ಪೆಕ್ಟ್ರೊಸ್ಕೋಪ್) ಉಪಕರಣವನ್ನು ಬೆಂಗಳೂರಿನ ಎಲೆಕ್ಟ್ರೊ–ಆಪ್ಟಿಕ್ಸ್ ಸಿಸ್ಟಮ್ ಪ್ರಯೋಗಾಲಯ ಅಭಿವೃದ್ಧಿ ಪಡಿಸಿತ್ತು.

ದಸರಾ ಉದ್ಘಾಟನೆಗೆ ಸಂಗೀತ ನಿರ್ದೇಶಕ ಹಂಸಲೇಖ ಆಯ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಈ ಬಾರಿಯ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾಗಿ ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ತಿಳಿಸಿದರು.

ಈ ಬಾರಿಯ ದಸರಾ ಮಹೋತ್ಸವವು ಅಕ್ಟೋಬರ್ 15ರಿಂದ 24ರವರೆಗೆ ನಡೆಯಲಿದೆ.

15ರಂದು ಬೆಳಿಗ್ಗೆ ಹಂಸಲೇಖ ಅವರು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಪೂಜೆ ಸಲ್ಲಿಸುವ ಮೂಲಕ ದಸರಾ ಆಚರಣೆಗೆ ಚಾಲನೆ ನೀಡಲಿದ್ದಾರೆ. ದಸರಾ ಸಿದ್ಧತೆ ಕುರಿತು ಈಚೆಗೆ ಪೂರ್ವಭಾವಿ ಸಭೆ ನಡೆದಿದ್ದು, ಉದ್ಘಾಟಕರ ಆಯ್ಕೆ ನಿರ್ಧಾರವನ್ನು ಮುಖ್ಯಮಂತ್ರಿ ವಿವೇಚನೆಗೆ ಬಿಡಲಾಗಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕಳೆದ ಬಾರಿಯ ಉತ್ಸವವನ್ನು ಉದ್ಘಾಟಿಸಿದ್ದರು.

ಮಂತ್ರಾಲಯದಲ್ಲಿ ಸಪ್ತ ರಾತ್ರೋತ್ಸವ ಆರಂಭ

ರಾಯರ ಆರಾಧನೆಗೆ ವಿಧ್ಯುಕ್ತ ಚಾಲನೆ

ಪ್ರಜಾವಾಣಿ ವಾರ್ತೆ

ರಾಯಚೂರು: ರಾಘವೇಂದ್ರ ತೀರ್ಥರ 352ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಮಂತ್ರಾಲಯದಲ್ಲಿ ಆಯೋಜಿಸಿರುವ ಸಪ್ತ ರಾತ್ರೋತ್ಸವಕ್ಕೆ ಮಂಗಳವಾರ ರಾತ್ರಿ ವಿಧ್ಯುಕ್ತ ಚಾಲನೆ ನೀಡಲಾಯಿತು.

ಅಪಾರ ಭಕ್ತರ ಸಮ್ಮುಖದಲ್ಲಿ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಆರಾಧನಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಇದಕ್ಕೂ ಮೊದಲು ರಾಯರ ಮೂಲ ಬೃಂದಾವನಕ್ಕೆ ವಿಶೇಷ ಪೂಜೆ, ಗೋ ಪೂಜೆ, ಅಶ್ವಪೂಜೆ, ಧಾನ್ಯ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ವಿವಿಧ ಸೇವಾ ಕೇಂದ್ರಗಳ ಕಚೇರಿಗಳ ಪೂಜೆ ನೆರವೇರಿಸಲಾಯಿತು. ಮಠದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ವಸ್ತ್ರಗಳನ್ನು ವಿತರಿಸಲಾಯಿತು. ಮಠದ ವ್ಯವಸ್ಥಾಪಕ ಎಸ್.ಕೆ.ಶ್ರೀನಿವಾಸರಾವ್, ಸಹಾಯಕ ವ್ಯವಸ್ಥಾಪಕ ಐ.ಪಿ.ನರಸಿಂಹಾಚಾರ್ ಹಾಗೂ ಆಡಳಿತಾಧಿಕಾರಿ ಮಾಧವಶೆಟ್ಟಿ ಇದ್ದರು.

ಮೂಲ ಬೃಂದಾವನಕ್ಕೆ ವಿಶೇಷ ಪೂಜೆ: ಒಂದು ವಾರ ನಿತ್ಯ ರಾಯರ ಮೂಲ ಬೃಂದಾವನಕ್ಕೆ ವಿಶೇಷ ಪೂಜೆ, ಮೂಲ ರಾಮದೇವರ ಪೂಜೆ, ರಾತ್ರಿ ಪ್ರಾಕಾರದಲ್ಲಿ ಪ್ರಹ್ಲಾದರಾಜರಿಗೆ ಪ್ರಭಾಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಮಂತ್ರಾಲಯದಲ್ಲಿ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಗೋಪೂಜೆ ನೆರವೇರಿಸಿದರು

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಲಿವೆ.

ಮಂಗಳವಾದ್ಯ, ಮಂತ್ರಘೋಷಗಳೊಂದಿಗೆ ರಾಯರ ಮೂಲ ಬೃಂದಾವನಕ್ಕೆ ಪೂಜೆ ಆರಂಭವಾಗಿದೆ. ಪುಷ್ಪಗಳಿಂದ ಬೃಂದಾವನಕ್ಕೆ ಅಲಂಕಾರ ಮಾಡಲಾಗಿದೆ. ಮಂಗಳವಾರ ಬೆಳಿಗ್ಗೆಯಿಂದಲೇ ಭಕ್ತರು ಭಾರಿ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಿದ್ದಾರೆ. ತುಂಗಭದ್ರಾ ನದಿಯಲ್ಲಿ ಪವಿತ್ರ ಸ್ನಾನ ಮಾಡಿ ರಾಯರ ದರ್ಶನ ಪಡೆಯಲು ಭಕ್ತರು ಸಜ್ಜಾಗಿದ್ದಾರೆ.

ಮಂತ್ರಾಲಯದಲ್ಲಿ ಪರಿಮಳ ಪ್ರಸಾದ ವಿತರಣೆಗೆ ಕೇಂದ್ರಗಳನ್ನು ತೆರೆಯಲಾಗಿದೆ. ಅಲ್ಲಲ್ಲಿ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅನ್ನಪೂರ್ಣ ಭೋಜನ ಶಾಲೆಯಲ್ಲಿ ಉಪಾಹಾರ ಹಾಗೂ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲಾಗಿದೆ. ಮೈಸೂರಿನಿಂದ ಬಂದಿರುವ ಸ್ವಯಂ ಸೇವಕರು ಭಕ್ತರಿಗೆ ಎಲ್ಲ ರೀತಿಯ ನೆರವು ಕಲ್ಪಿಸುತ್ತಿದ್ದಾರೆ.

ಏಳು ದಿನ ಪ್ರಾರ್ಥನೋತ್ಸವ, ಪ್ರಭಾ ಉತ್ಸವ, ಧನ್ಯೋತ್ಸವ, ಋಗ್ವೇದ ನಿತ್ಯ ನೂತನ ಉಪಾಕರ್ಮ ನಡೆಯಲಿದೆ.

ಆಗಸ್ಟ್ 30ರಂದು ಶಾಖೋತ್ಸವ ರಜತ ಮಂಟಪೋತ್ಸವ, ಆಗಸ್ಟ್ 31ರಂದು ಪೂರ್ವಾ ಆರಾಧನಾ ರಜತ ಸಿಂಹ ವನೋತ್ಸವ, ಸೆಪ್ಟೆಂಬರ್ 1 ರಂದು ಮಧ್ಯಾರಾಧನಾ ಮಹಾ ಪಂಚಾಮೃತ ಅಭಿಷೇಕ, ಗಜರಾಜ ಸ್ವರ್ಣ ರಥೋತ್ಸವ, ಸೆಪ್ಟೆಂಬರ್ 2ರಂದು ಉತ್ತರ ಆರಾಧನಾ ರಾಜಬೀದಿಯಲ್ಲಿ ಮಹಾರಥೋತ್ಸವ ಜರುಗಲಿದೆ.

ಆರಾಧನಾ ಮಹೋತ್ಸವದ ಪ್ರಯುಕ್ತ ರಥ ಬೀದಿಯನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿದ್ದು, ಮಂತ್ರಾಲಯ ಬಣ್ಣದ ವಿದ್ಯುತ್ ದೀಪಗಳಿಂದ ಝಗಮಗಿಸುತ್ತಿದೆ.

ಮಧ್ಯಮ ವರ್ಗದವರಿಗೆ ಮನೆ ಕಟ್ಟಲು ಅನುಮತಿ ನೀಡದ ಸರ್ಕಾರ: ಬಿಜೆಪಿ

'ವಸೂಲಿಗಾಗಿ ಬಾರ್‌ಗೆ ಇಡೀ ರಾತ್ರಿ ಅನುಮತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲೆಡೆ ಮಧ್ಯರಾತ್ರಿವರೆಗೆ ಪಬ್, ಕ್ಲಬ್ ಮತ್ತು ಬಾರ್‌ಗಳನ್ನು ನಡೆಸಲು ಸರ್ಕಾರ ಮುಕ್ತ ಅವಕಾಶ ನೀಡಿದೆ. ಹಫ್ತಾ ವಸೂಲಿಗಾಗಿಯೇ ಈ ಅವಕಾಶ ನೀಡಲಾಗಿದೆ. ಇದು ಸಿದ್ದರಾಮಯ್ಯ ಸರ್ಕಾರದ ಆಡಳಿತದ ವೈಖರಿ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಕಿಡಿಕಾರಿದರು.



ಬಸವರಾಜ ಬೊಮ್ಮಾಯಿ

ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿ, ಸಿದ್ದರಾಮಯ್ಯ ಸರ್ಕಾರದ 100 ದಿನಗಳ ಆಡಳಿತದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಎಷ್ಟು ಪಬ್, ಬಾರ್ ಮತ್ತು ಕ್ಲಬ್‌ಗಳಿವೆಯೋ ಅವು ರಾತ್ರಿ ಇಡೀ ವಹಿವಾಟು ನಡೆಸಲು ಅವಕಾಶ ನೀಡಿದ್ದಾರೆ. ಮಧ್ಯರಾತ್ರಿಯ ಬಳಿಕವೂ ಇವು ತೆರೆದಿರುತ್ತವೆ ಎಂದರು.

'ನಮ್ಮ ಸರ್ಕಾರದ ಅವಧಿಯಲ್ಲಿ ಪಬ್, ಕ್ಲಬ್ ಮತ್ತು ಬಾರ್‌ಗಳನ್ನು ರಾತ್ರಿ ಬೇಗನೇ ಮುಚ್ಚಿಸುತ್ತಿದ್ದೆವು. ಸಿದ್ದರಾಮಯ್ಯ ಸರ್ಕಾರ ಇವುಗಳಿಂದಲೂ ಹಫ್ತಾ ವಸೂಲಿ ಮಾಡುವ ಉದ್ದೇಶದಿಂದಲೇ ರಾತ್ರಿ ಇಡೀ ಕಾರ್ಯ ನಿರ್ವಹಿಸಲು ಅವಕಾಶ ನೀಡಿದೆ. ಪ್ರತಿಯೊಂದು ಕ್ಲಬ್ ಮತ್ತು ಬಾರ್‌ಗಳಿಗೆ ಹಣವನ್ನು ಫಿಕ್ಸ್ ಮಾಡಿದ್ದಾರೆ. ಪೊಲೀಸರ ಮೂಲಕ ವಸೂಲಿ ಮಾಡಿಸುತ್ತಾರೆ. ಕಾಂಗ್ರೆಸ್‌ನ ಸ್ಥಳೀಯ ನಾಯಕರು, ಶಾಸಕರು ಮತ್ತು ಸಚಿವರಿಗೂ ಹಣ ಸಂದಾಯವಾಗುತ್ತಿದೆ' ಎಂದು ಬೊಮ್ಮಾಯಿ ಆರೋಪಿಸಿದರು.

ರಾಜ್ಯದಲ್ಲಿ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದವರು 30X40 ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣ ಮನೆಗಳನ್ನು ಕಟ್ಟಿಕೊಳ್ಳಲು ಕಟ್ಟಡಗಳಿಗೆ ಸರ್ಕಾರ ಅನುಮತಿ ನೀಡುತ್ತಿಲ್ಲ. ಮನೆ ಅಲ್ಲದೇ, ಇತರ ಉದ್ದೇಶಗಳ ಕಟ್ಟಡ ನಿರ್ಮಿಸಲು ಅವಕಾಶ ನಿರಾಕರಿಸುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ದೊಡ್ಡ ಪ್ರಮಾಣದಲ್ಲಿ ತೊಂದರೆ ಆಗಿದೆ. ನಿರ್ಮಾಣ ಚಟುವಟಿಕೆಯೇ ನಿಂತು ಹೋಗಿದೆ. ಖಾಸಗಿ ವಲಯದ ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿಲ್ಲ. ಇದು ಈ ಸರ್ಕಾರದ ನೂರು ದಿನಗಳ ಪ್ರಮುಖ ಸಾಧನೆಗಳು ಎಂದು ವ್ಯಂಗ್ಯವಾಡಿದರು.

ವಾಕ್ ಸ್ವಾತಂತ್ರ್ಯ ದಮನ: ದೇಶದಲ್ಲಿ ವಾಕ್ ಸ್ವಾತಂತ್ರ್ಯ ಇಲ್ಲ ಎಂದು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಕಾಂಗ್ರೆಸ್ ನಾಯಕರು ನಾಲಗೆ ಹರಿಬಿಡುತ್ತಾರೆ. ಆದರೆ, ರಾಜ್ಯದಲ್ಲಿ ಸರ್ಕಾರ ಮತ್ತು ಮುಖ್ಯಮಂತ್ರಿಯವರನ್ನು ಪ್ರಶ್ನಿಸುವವರ ಕತ್ತು ಹಿಸುಕುವ ಕೆಲಸ ನಡೆದಿದೆ. ಸರ್ಕಾರದ ಓರೆಕೋರೆಗಳು, ಕಾರ್ಯಕ್ರಮಗಳನ್ನು ಪ್ರಶ್ನಿಸುವವರನ್ನು ಹಿಡಿದು ಜೈಲಿಗೆ ಹಾಕುತ್ತಿದ್ದಾರೆ. ಬಿ.ಆರ್.ಪಾಟೀಲ ಅವರು ಸಿದ್ದರಾಮಯ್ಯ ಅವರಿಗೆ ಬರೆದ ಪತ್ರ ಸೋರಿಕೆ ಆಗಿದ್ದಕ್ಕಾಗಿ ಮಾಧ್ಯಮದವರನ್ನು ವಿಚಾರಣೆಗೆ ಗುರಿಪಡಿಸಿ ಹಿಂಸಿಸಲಾಗುತ್ತಿದೆ. ತಮ್ಮ ವಿರುದ್ಧ ಬರೆಯುವವರಿಗೂ ಕಿರುಕುಳ ನೀಡಲಾಗುತ್ತಿದೆ. ಇಂತಹ ದಮನಕಾರಿ ಸರ್ಕಾರ ಹಿಂದೆಂದೂ ಬಂದಿರಲಿಲ್ಲ ಎಂದು ಬೊಮ್ಮಾಯಿ ದೂರಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮಾಜಿ ಸಚಿವ ಗೋವಿಂದ ಕಾರಜೋಳ ಅವರು ಇದ್ದರು.

₹13.50 ಕೋಟಿಗೆ ಬಿಕರಿಯಾದ ಹುದ್ದೆ !

ಭ್ರಷ್ಟಾಚಾರ ನಡೆಸಲು ಮಂತ್ರಿಗಳ ಮಧ್ಯೆಯೇ ಪೈಪೋಟಿ ನಡೆದಿದೆ. ಇದು ಮಂತ್ರಿಗಳ ಮಧ್ಯೆ ಕಿತ್ತಾಟಕ್ಕೂ ಕಾರಣವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ವಿಭಾಗೀಯ ಅಧಿಕಾರಿ ಹುದ್ದೆಗೆ ₹13.50 ಕೋಟಿಗೆ ಬಿಕರಿಯಾಗಿದೆ ಎಂದೂ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಈ ಹುದ್ದೆಗಾಗಿ ಭಾರೀ ಪೈಪೋಟಿಯೇ ನಡೆದಿತ್ತು. ಭ್ರಷ್ಟಾಚಾರದ ಬಗ್ಗೆ ಸತ್ಯ ಹರಿಶ್ಚಂದ್ರರ ಹಾಗೆ ಮಾತನಾಡುತ್ತಿದ್ದರು. ಆದರೆ, ಈಗ ಹಗಲು ದರೋಡೆ ರೀತಿಯಲ್ಲೇ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ಪ್ರಶ್ನಿಸುವವರನ್ನು ಜೈಲಿಗೆ ಹಾಕುತ್ತಿದ್ದಾರೆ ಎಂದರು.

ಬುಧವಾರ, ಆಗಸ್ಟ್ 30, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 241 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಭ್ರೂಣದ ಲಕ್ಷಣ ಏನು - ಎಂಬ ಹೊಸ ವ್ಯಾಖ್ಯೆಯೊಂದು ವಿಜ್ಞಾನದಲ್ಲಿ ಸಿದ್ಧವಾಗಿದೆ

ಆಳ-ಅಗಲ
ಮೋಡ ಬಿತ್ತನೆ ಮಾಡಿದಾಗ ಮಳೆ ಬಂದಿದೆ...

ಮುಂಬೈನಲ್ಲಿ ರೈತರ ಪ್ರತಿಭಟನೆ 5

ಇಮ್ರಾನ್ ಖಾನ್‌ಗೆ ವಿಧಿಸಿದ್ದ ಶಿಕ್ಷೆ ಅಮಾನತು 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,075 ▲	19,342 ▲	₹60,780 (ಬೆಂಗಳೂರು) ▲	₹76,000 (ಬೆಂಗಳೂರು) ▲	82.80 ▼

ಚುನಾವಣೆ ಹೊಸಿಲಲ್ಲಿ ದರ ಇಳಿಕೆ ತೀರ್ಮಾನ ಪ್ರಕಟಿಸಿದ ಕೇಂದ್ರ ಸರ್ಕಾರ

ಎಲ್‌ಪಿಜಿ ಬೆಲೆ ₹200 ಇಳಿಕೆ

ನವದೆಹಲಿ (ಪಿಟಿಐ): ಮನೆಗಳಲ್ಲಿ ಅಡುಗೆಗೆ ಬಳಸುವ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಕೇಂದ್ರ ಸರ್ಕಾರವು ₹200ರಷ್ಟು ತಗ್ಗಿಸಿದೆ. ಪರಿಷ್ಕೃತ ಬೆಲೆಯು ಬುಧವಾರದಿಂದ ಅನ್ವಯವಾಗಲಿದೆ.

ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗಿದ್ದು, ಅಧಿಕಾರಕ್ಕೆ ಬಂದರೆ ಕಡಿಮೆ ಬೆಲೆಗೆ ಎಲ್‌ಪಿಜಿ ಪೂರೈಸಲಾಗುವುದು ಎಂದು ಕಾಂಗ್ರೆಸ್ ಭರವಸೆ ನೀಡಿದೆ. ರಾಜಸ್ಥಾನ, ತೆಲಂಗಾಣ, ಛತ್ತೀಸಗಢ, ಮಿಜೋರಾಂ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ. 2024ರಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ.

ಬೆಂಗಳೂರಿನಲ್ಲಿ ಈಗ 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯು ₹1,105.5 ಇದೆ. ₹200 ಕಡಿತದ ನಂತರ ಬೆಲೆಯು ₹905.5 ಆಗಲಿದೆ. ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ಇದೇ ಎಲ್‌ಪಿಜಿ ಸಿಲಿಂಡರ್ ₹705.5ಕ್ಕೆ ಸಿಗಲಿದೆ. ಊರಿನಿಂದ ಊರಿಗೆ ಎಲ್‌ಪಿಜಿ ಬೆಲೆಯಲ್ಲಿ ವ್ಯತ್ಯಾಸ ಇರುತ್ತದೆ.

ಕೇಂದ್ರದ ಈ ತೀರ್ಮಾನವನ್ನು ಪ್ರಕಟಿಸಿದ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, ಜನರಿಗೆ ನೆರವಾಗುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ. ಕೇಂದ್ರವು ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ ಅಡಿಯಲ್ಲಿ ಹೆಚ್ಚುವರಿಯಾಗಿ 75 ಲಕ್ಷ ಎಲ್‌ಪಿಜಿ ಸಂಪರ್ಕ ಕಲ್ಪಿಸಲಿದೆ. ಆಗ ಈ ಯೋಜನೆಯ ಫಲಾನುಭವಿಗಳ ಸಂಖ್ಯೆಯು 10.35 ಕೋಟಿ ಆಗಲಿದೆ.

ಅಡುಗೆ ಅನಿಲದ ಬೆಲೆಯು ಮೂರು ವರ್ಷಗಳಿಂದ ಈಚೆಗೆ ಭಾರಿ ಏರಿಕೆ ಕಂಡಿದೆ. ಇದು ಚುನಾವಣಾ ವಿಷಯವೂ ಆಗಿದೆ. 2020ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆ ₹590ರಿಂದ ₹600ರ ನಡುವೆ ಇತ್ತು. ಆ ದರಕ್ಕೆ ಹೋಲಿಸಿದರೆ ಈಗ ಬೆಲೆಯು ಸರಿಸುಮಾರು ದುಪ್ಪಟ್ಟಾಗಿದೆ.

ಓಣಂ ಹಾಗೂ ರಕ್ಷಾ ಬಂಧನದ ಪ್ರಯುಕ್ತ ದೇಶದ ಮಹಿಳೆಯರಿಗೆ ಉಡುಗೊರೆಯ ರೂಪದಲ್ಲಿ ಬೆಲೆ ಕಡಿತದ ನಿರ್ಧಾರವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೈಗೊಂಡಿದೆ ಎಂದು ಠಾಕೂರ್ ಹೇಳಿದ್ದಾರೆ.

9ನೇ ಪುಟ ನೋಡಿ



> ರಕ್ಷಾ ಬಂಧನವು ಕುಟುಂಬದಲ್ಲಿನ ಸಂತಸವನ್ನು ಹೆಚ್ಚಿಸುವಂಥದ್ದು. ಎಲ್‌ಪಿಜಿ ಬೆಲೆ ಇಳಿಕೆಯು ನನ್ನ ಕುಟುಂಬದ ಸಹೋದರಿಯರಿಗೆ ಹೆಚ್ಚು ನೆಮ್ಮದಿ ತರಲಿದೆ. ನನ್ನ ಸಹೋದರಿಯರೆಲ್ಲ ಸಂತಸದಿಂದ, ಆರೋಗ್ಯದಿಂದ ಇರಲಿ ಎಂಬುದು ದೇವರಲ್ಲಿ ನನ್ನ ಕೋರಿಕೆ
>
> **ನರೇಂದ್ರ ಮೋದಿ,** ಪ್ರಧಾನಿ

ಇನ್ನಷ್ಟು ಕೊಡುಗೆ ನಿರೀಕ್ಷೆ: 'ಇಂಡಿಯಾ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರ ಸರ್ಕಾರ ಬುಧವಾರದಿಂದ ಅನ್ವಯವಾಗುವಂತೆ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ₹ 200 ಕಡಿತಗೊಳಿಸಿರುವುದು ಪ್ರತಿಪಕ್ಷಗಳ ಮೈತ್ರಿಕೂಟದ ಎರಡು ಸಭೆಗಳ ಫಲ' ಎಂದು 'ಇಂಡಿಯಾ' ಮೈತ್ರಿಕೂಟವು ಪ್ರತಿಪಾದಿಸಿದೆ.

'ಪ್ರಧಾನಿ ನರೇಂದ್ರ ಮೋದಿ ಈಗ ತಮ್ಮ ಕುರ್ಚಿ ಉಳಿಸಿಕೊಳ್ಳುವ ಹತಾಶೆಗೆ ಒಳಗಾಗಿದ್ದಾರೆ. ಬರುವ ದಿನಗಳಲ್ಲಿ ಇಂತಹ ಇನ್ನಷ್ಟು 'ಕೊಡುಗೆ'ಗಳನ್ನು ನಿರೀಕ್ಷಿಸಬಹುದು' ಎಂದು 'ಇಂಡಿಯಾ' ಭಾಗವಾಗಿರುವ ಕಾಂಗ್ರೆಸ್ ಪಕ್ಷದ ವಕ್ತಾರ ಜೈರಾಂ ರಮೇಶ್ ಅವರು ಪ್ರತಿಕ್ರಿಯಿಸಿದ್ದಾರೆ.

9ನೇ ಪುಟ ನೋಡಿ

ರಕ್ಷಾ ಬಂಧನ ಜಮ್ಮು ಮತ್ತು ಕಾಶ್ಮೀರದ ಪೂಂಛ್‌ನಲ್ಲಿ ಬಾಲಕಿಯರು ಯೋಧರಿಗೆ ಮಂಗಳವಾರ ರಾಖಿ ಕಟ್ಟಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಕೆಲ ಭೂಭಾಗ ತನ್ನದೆಂದು ಪ್ರತಿಪಾದಿಸುತ್ತಿರುವ ರಾಷ್ಟ್ರ

ಅರುಣಾಚಲ ಒಳಗೊಂಡ 'ಚೀನಾ ಭೂಪಟ' ಬಿಡುಗಡೆ

ಪ್ರಜಾವಾಣಿ ವಾರ್ತೆ/ಪಿಟಿಐ

ಬೀಜಿಂಗ್/ನವದೆಹಲಿ: ಭಾರತದ ಅರುಣಾಚಲ ಪ್ರದೇಶ ಸೇರಿದಂತೆ ಕೆಲ ಭೂಭಾಗಗಳನ್ನು ತನ್ನದೆಂದು ಪ್ರತಿಪಾದಿಸುತ್ತಿರುವ ಚೀನಾ, ವಿವಾದಿತ ಪ್ರದೇಶಗಳನ್ನು ಒಳಗೊಂಡ 'ಭೂಪಟ'ದ ಈ ವರ್ಷದ ಆವೃತ್ತಿಯನ್ನು ಬಿಡುಗಡೆ ಮಾಡಿದೆ.

ಅರುಣಾಚಲ ಪ್ರದೇಶ, ಅಕ್ಸಾಯ್ ಚಿನ್ ಪ್ರದೇಶ, ತೈವಾನ್ ಹಾಗೂ ವಿವಾದಿತ ದಕ್ಷಿಣ ಚೀನಾ ಸಮುದ್ರದ ಬೃಹತ್ ಭಾಗ ತನಗೆ ಸೇರಿದ ಪ್ರದೇಶಗಳು ಎಂದು ಹೇಳಿಕೊಂಡಿರುವ ಚೀನಾ, ಈ ಪ್ರದೇಶಗಳನ್ನು ತನ್ನ ಹೊಸ 'ಭೂಪಟ'ದಲ್ಲಿ ತೋರಿಸಿದೆ.

ಅರುಣಾಚಲ ಪ್ರದೇಶವನ್ನು ಚೀನಾ 'ದಕ್ಷಿಣ ಟಿಬೆಟ್' ಎಂದು ಕರೆಯುತ್ತಿದೆ. ಅಕ್ಸಾಯ್ ಚಿನ್ ಪ್ರದೇಶವನ್ನು ಅದು 1962ರ ಯುದ್ಧದ ವೇಳೆ ಆಕ್ರಮಿಸಿಕೊಂಡಿದೆ.

ಅರುಣಾಚಲ ಪ್ರದೇಶ, ಅಕ್ಸಾಯ್ ಚಿನ್ ತನ್ನದೆಂದು ತೋರಿಸಿ ಚೀನಾ ಬಿಡುಗಡೆ ಮಾಡಿರುವ 'ಭೂಪಟ'ವನ್ನು ಭಾರತ ತಿರಸ್ಕರಿಸಿದೆ.

'ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿದ್ದು, ಯಾವಾಗಲೂ ಹಾಗೆಯೇ ಇರಲಿದೆ' ಎಂದು ಭಾರತ ಪುನರುಚ್ಚರಿಸಿದೆ.

'ನೈಸರ್ಗಿಕ ಸಂಪನ್ಮೂಲ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಈ ಭೂಪಟವನ್ನು ಪ್ರಕಟಿಸಲಾಗಿದೆ' ಎಂದು ಸರ್ಕಾರ ಒಡೆತನದ ಪತ್ರಿಕೆ 'ಗ್ಲೋಬಲ್ ಟೈಮ್ಸ್', ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ತಿಳಿಸಿದೆ.

'ಚೀನಾ ಮತ್ತು ವಿಶ್ವದ ವಿವಿಧ ರಾಷ್ಟ್ರಗಳು ಗಡಿಗಳನ್ನು ಗುರುತಿಸಲು ಅನುಸರಿಸುವ ವಿಧಾನದ ಆಧಾರದ ಮೇಲೆ ಈ ಭೂಪಟವನ್ನು ರಚಿಸಲಾಗಿದೆ' ಎಂದು 'ಗ್ಲೋಬಲ್ ಟೈಮ್ಸ್' ಹೇಳಿದೆ.

ದಕ್ಷಿಣ ಚೀನಾ ಸಮುದ್ರದ ಬೃಹತ್ ಭಾಗದ ಮೇಲೆ ಹಕ್ಕುಸ್ಥಾಪಿಸಲು ಯತ್ನಿಸುತ್ತಿರುವ ಚೀನಾ ನಡೆಯನ್ನು ಫಿಲಿಪ್ಪೀನ್ಸ್, ಮಲೇಷ್ಯಾ, ಬ್ರೂನಿ ಹಾಗೂ ತೈವಾನ್ ವಿರೋಧಿಸುತ್ತಲೇ ಇವೆ.

'ಅಸಂಬದ್ಧ ಹಕ್ಕುಸ್ಥಾಪನೆಗೆ ಅರ್ಥ ಇಲ್ಲ'

'ಇತರ ರಾಷ್ಟ್ರಗಳ ಪ್ರದೇಶಗಳನ್ನು ತನ್ನದೆಂದು ಹೇಳಿಕೊಂಡು ಇಂತಹ ಭೂಪಟವನ್ನು ಬಿಡುಗಡೆ ಮಾಡುವುದು ಚೀನಾದ ಹಳೆಯ ಚಾಳಿ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಎನ್‌ಡಿಟಿವಿಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ, ಈ ವಿದ್ಯಮಾನ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಅವರು, 'ಇತರ ದೇಶಗಳ ಭೂಭಾಗಗಳನ್ನು ತನ್ನ ಭೂಪಟದಲ್ಲಿ ಅಳವಡಿಸಿ, ಬಿಡುಗಡೆ ಮಾಡುವ ಚೀನಾದ ಇಂತಹ ನಡೆಗೆ ಯಾವ ಅರ್ಥವೂ ಇಲ್ಲ' ಎಂದಿದ್ದಾರೆ.

'ನಮ್ಮ ಗಡಿಗಳ ಬಗ್ಗೆ ಸರ್ಕಾರಕ್ಕೆ ಸ್ಪಷ್ಟತೆ ಇದೆ. ಅಸಂಬದ್ಧ ಹಕ್ಕುಸ್ಥಾಪನೆ ಮಾಡುವುದರಿಂದ ಇತರ ದೇಶಗಳ ಭೂಭಾಗಗಳು ನಿಮ್ಮದಾಗುವುದಿಲ್ಲ' ಎಂದೂ ಹೇಳಿದ್ದಾರೆ.

'ವಾಸ್ತವ ನಿಯಂತ್ರಣ ರೇಖೆಗುಂಟ (ಎಲ್‌ಎಸಿ) ಕೆಲ ಗಡಿಠಾಣೆಗಳಿಂದ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವ ಕುರಿತ ಮಾತುಕತೆಗೂ, ಚೀನಾ ಬಿಡುಗಡೆ ಮಾಡಿರುವ ಹೊಸ ಭೂಪಟಕ್ಕೂ ಯಾವುದೇ ಸಂಬಂಧ ಇಲ್ಲ' ಎಂದೂ ಜೈಶಂಕರ್ ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ಜಿ–20 ಶೃಂಗಸಭೆ ನಡೆಯಲಿದೆ. ಇತ್ತೀಚೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆದ ಬ್ರಿಕ್ಸ್ ಶೃಂಗದ ಸಂದರ್ಭದಲ್ಲಿ ಅಧ್ಯಕ್ಷ ಷಿ ಜಿನ್‌ಪಿಂಗ್ ಜೊತೆ ಮಾತುಕತೆ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿ, ಎಲ್‌ಎಸಿಯಿಂದ ಯೋಧರನ್ನು ಸಂಪೂರ್ಣವಾಗಿ ಹಿಂಪಡೆಯುವುದು ಸೇರಿದಂತೆ ಇತ್ಯರ್ಥಗೊಳ್ಳದ ಇತರ ವಿಷಯಗಳ ಕುರಿತು ಭಾರತದ ಕಳವಳ ವ್ಯಕ್ತಪಡಿಸಿದ್ದರು.

ಈ ಎಲ್ಲ ಬೆಳವಣಿಗೆಗಳ ನಡುವೆಯೇ, ಚೀನಾ 'ಭೂಪಟ' ಬಿಡುಗಡೆ ಮಾಡಿರುವುದು ಗಮನಾರ್ಹ.

9ನೇ ಪುಟ ನೋಡಿ

ಅಭ್ಯರ್ಥಿಗಳ ಕಣ್ಗಾವಲಿಗೆ ಇನ್ನು 'ಎಐ'

ಕೆಪಿಎಸ್‌ಸಿ: ಮೇಲ್ವಿಚಾರಕರ ಶರ್ಟ್ ಬಟನ್ ಅಥವಾ ಕಾಲರ್‌ಗೆ ಸೂಕ್ಷ್ಮ ಕ್ಯಾಮೆರಾ!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ತಡೆಯಲು ಇದೇ ಮೊದಲ ಬಾರಿಗೆ 'ಕೃತಕ ಬುದ್ಧಿಮತ್ತೆ' (ಎಐ) ತಂತ್ರಜ್ಞಾನ ಬಳಸಲು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಿರ್ಧರಿಸಿದೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಾನಾ ವೃಂದಗಳ ಹುದ್ದೆಗಳ ಭರ್ತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕೆಪಿಎಸ್‌ಸಿ ಪರೀಕ್ಷೆಗಳನ್ನು ನಡೆಸುತ್ತದೆ.

ಅಲ್ಲದೆ, ಪರೀಕ್ಷಾ ಕೊಠಡಿಗಳ ಮೇಲ್ವಿಚಾರಕರು ಧರಿಸುವ ಶರ್ಟ್‌ನ ಬಟನ್ ಅಥವಾ ಕಾಲರ್‌ನಲ್ಲಿ ಅತಿಸೂಕ್ಷ್ಮ ಕ್ಯಾಮೆರಾ ಅಳವಡಿಸಿ ಇಡೀ ಕೇಂದ್ರದಲ್ಲಿ ನಡೆಯುವ ಚಟುವಟಿಕೆಯನ್ನು ಚಿತ್ರೀಕರಿಸಿ, ನಿಗಾ ವಹಿಸುವ ವ್ಯವಸ್ಥೆಯನ್ನೂ ಜಾರಿಗೆ ತರಲು ತೀರ್ಮಾನಿಸಲಾಗಿದೆ.

ಪರೀಕ್ಷಾ ವ್ಯವಸ್ಥೆಯನ್ನು ಮತ್ತಷ್ಟು ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಈ ಸುಧಾರಣಾ ಕ್ರಮಗಳ ಅನುಷ್ಠಾನಕ್ಕೆ ಮಂಗಳವಾರ (ಆಗಸ್ಟ್ 29) ನಡೆದ ಆಯೋಗದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್, 'ಕಳ್ಳ ಮಾರ್ಗಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಅಭ್ಯರ್ಥಿಗಳ ಮೇಲಿನ ಕಣ್ಗಾವಲು ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಹೊಸತಾಗಿ ಈ ಎರಡು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ಆಯೋಗ ಒಪ್ಪಿಗೆ ನೀಡಿದೆ' ಎಂದರು.

ಏನಿದು ವ್ಯವಸ್ಥೆ: ಸದ್ಯ ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟಲಿಜೆನ್ಸ್) ಪ್ರಚಲಿತದಲ್ಲಿದೆ. ಸಿಸಿಟಿವಿ ಕ್ಯಾಮೆರಾಗಳಲ್ಲಿ ಈ ತಂತ್ರಾಂಶವನ್ನು ಅಳವಡಿಸಿದರೆ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಸಾಮೂಹಿಕ ನಕಲು, ಅಭ್ಯರ್ಥಿಗಳಿಂದ ಬ್ಲೂ ಟೂತ್ ಬಳಕೆ ಸೇರಿದಂತೆ ಎಲ್ಲ ಅಕ್ರಮಗಳನ್ನು ತಡೆಯಲು ಸಾಧ್ಯವಿದೆ.

8ನೇ ಪುಟ ನೋಡಿ

ಸಿಸಿಟಿವಿ ಕ್ಯಾಮೆರಾಗಳಿಗೂ 'ಎಐ' ತಂತ್ರಾಂಶ

'ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿದ ಸಿಸಿಟಿವಿ ಕ್ಯಾಮೆರಾಗಳನ್ನು ಕೇಂದ್ರೀಕೃತ ವ್ಯವಸ್ಥೆಯಡಿ ಬೆಂಗಳೂರಿನಲ್ಲಿರುವ ಕೆಪಿಎಸ್‌ಸಿ ಮುಖ್ಯ ಕಚೇರಿಯಲ್ಲಿ ವೀಕ್ಷಿಸಲು ಪ್ರತ್ಯೇಕ ತಂಡ ರಚಿಸಲಾಗುತ್ತದೆ. ಸಿಸಿಟಿವಿ ಕ್ಯಾಮೆರಾ ಇದೆ ಎಂಬ ಭಯದಿಂದ ಕೆಲವು ಅಭ್ಯರ್ಥಿಗಳು ಅಕ್ರಮ ಚಟುವಟಿಕೆಯಲ್ಲಿ ಭಾಗಿ ಆಗುತ್ತಿರಲಿಲ್ಲ. ಅನುಮಾನ ವ್ಯಕ್ತವಾದ ಕೇಂದ್ರಗಳ ವಿಡಿಯೊ ತುಣುಕುಗಳನ್ನು ಪರಿಶೀಲಿಸಲಾಗುತ್ತಿದೆ. ಇನ್ನು ಮುಂದೆ ಈ ಸಿಸಿಟಿವಿ ಕ್ಯಾಮೆರಾಗಳಿಗೆ ಎಐ ತಂತ್ರಾಂಶ ಅಳವಡಿಸಲಾಗುತ್ತದೆ' ಎಂದು ವಿಕಾಸ್ ಕಿಶೋರ್ ಸುರಳ್ಕರ್ ತಿಳಿಸಿದರು.

'ಯಾವುದಾದರೂ ಕೇಂದ್ರದಲ್ಲಿ ಸಾಮೂಹಿಕವಾಗಿ ನಕಲು ನಡೆದರೆ, ಅಭ್ಯರ್ಥಿ ಉತ್ತರ ಬರೆಯಲು ಕೊಠಡಿಯ ಮೇಲ್ವಿಚಾರಕನೇ ನೆರವಾದರೆ, ಬ್ಲೂ ಟೂತ್ ಬಳಕೆಯಾದರೆ, ಆ ನಿರ್ದಿಷ್ಟ ಕೊಠಡಿಯಲ್ಲಿ ಅಳವಡಿಸಿರುವ ಎಐ ತಂತ್ರಾಂಶವಿರುವ ಸಿಸಿಟಿವಿ ಕ್ಯಾಮೆರಾ 'ಫ್ಲಾಶ್' ಆಗಲಿದೆ. ಅಂತಹ ಕೊಠಡಿಯನ್ನು ಕೇಂದ್ರೀಕರಿಸಿ ಅಲ್ಲಿ ಪರೀಕ್ಷೆಗೆ ಹಾಜರಾದ ಅಭ್ಯರ್ಥಿ, ಮೇಲ್ವಿಚಾರಕರನ್ನು ವಿಚಾರಣೆಗೆ ಒಳಪಡಿಸಲು ಈ ಹೊಸ ವ್ಯವಸ್ಥೆಯಲ್ಲಿ ಅವಕಾಶ ಆಗಲಿದೆ' ಎಂದೂ ವಿವರಿಸಿದರು.

'ಗೃಹಲಕ್ಷ್ಮಿ'ಯರ ಸ್ವಾಗತಕ್ಕೆ ಮೈಸೂರು ಸಜ್ಜು

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರೂರಲ್ಲಿ ಬುಧವಾರ ಚಾಲನೆ ದೊರೆಯಲಿದ್ದು, 'ಗೃಹಲಕ್ಷ್ಮಿ'ಯರು ಹಾಗೂ ಗಣ್ಯರ ಸ್ವಾಗತಕ್ಕೆ ನಗರಿ ಸಜ್ಜಾಗಿದೆ.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬೆಳಿಗ್ಗೆ 11.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಂಸದ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ. ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ 1.5 ಲಕ್ಷ ಮಹಿಳೆಯರು ಸಮಾವೇಶಕ್ಕೆ ಸಾಕ್ಷಿ ಆಗಲಿದ್ದಾರೆ.

ಕಾರ್ಯಕ್ರಮಕ್ಕೆಂದು ಅರಮನೆ ಮಾದರಿ ಪ್ರವೇಶ ದ್ವಾರ ನಿರ್ಮಿಸಿದ್ದು, ವೇದಿಕೆಯಲ್ಲಿ 140 ಅಡಿ ಉದ್ದದ ಎಲ್‌ಇಡಿ ಪರದೆ ಅಳವಡಿಸಲಾಗಿದೆ. ಇಡೀ ನಗರ ಕಾಂಗ್ರೆಸ್ ನಾಯಕರ ಫ್ಲೆಕ್ಸ್, ಬ್ಯಾನರ್‌ಗಳಿಂದ ತುಂಬಿಹೋಗಿದೆ. ಸಮಾವೇಶಕ್ಕೆ ಜನರನ್ನು ಕರೆತರಲು ಸರ್ಕಾರವೇ ಸುಮಾರು 2 ಸಾವಿರ ಬಸ್‌ಗಳ ವ್ಯವಸ್ಥೆ ಮಾಡಿದೆ.

5ನೇ ಪುಟ ನೋಡಿ

ಶಿವಮೊಗ್ಗ- ಬೆಂಗಳೂರು ವಿಮಾನ ಹಾರಾಟ ನಾಳೆ ಆರಂಭ 8

₹1 ಕೋಟಿ ಮೌಲ್ಯದ ಪಟಾಕಿ ಭಸ್ಮ ಮೂವರು ಆಸ್ಪತ್ರೆಗೆ ದಾಖಲು

ಗೋದಾಮಿಗೆ ಬೆಂಕಿ: ನಾಲ್ವರ ಸಜೀವ ದಹನ

ಪ್ರಜಾವಾಣಿ ವಾರ್ತೆ

ಹಾವೇರಿ: ತಾಲ್ಲೂಕಿನ ಆಲದಕಟ್ಟಿಯ ಹೊರವಲಯದ ಹಾವೇರಿ– ಹಾನಗಲ್ ಮುಖ್ಯರಸ್ತೆಯ ಪಕ್ಕದ ಪಟಾಕಿ ಗೋದಾಮಿನಲ್ಲಿ ಮಂಗಳವಾರ ಬೆಂಕಿ ಹೊತ್ತಿಕೊಂಡು ನಾಲ್ವರು ಸಜೀವ ದಹನಗೊಂಡು, ಇಬ್ಬರು ಗಂಭೀರ ಸ್ವರೂಪದಲ್ಲಿ ಗಾಯಗೊಂಡಿದ್ದಾರೆ. ಸುಮಾರು ₹ 1 ಕೋಟಿಗೂ ಹೆಚ್ಚು ಮೌಲ್ಯದ ಪಟಾಕಿಗಳು ಭಸ್ಮವಾಗಿವೆ.

ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ ಹಾವೇರಿ ತಾಲ್ಲೂಕಿನ ಕಾಟೇನಹಳ್ಳಿಯ ದ್ಯಾಮಪ್ಪ ಓಲೇಕಾರ (45), ರಮೇಶ ಬಾರ್ಕಿ (28), ಶಿವಲಿಂಗ ಅಕ್ಕಿ (28) ಮತ್ತು ಜಯಣ್ಣ (45) ಮೃತರು. ನಾಲ್ವರ ದೇಹಗಳು ಸುಟ್ಟು ಕರಕಲಾಗಿವೆ.

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ತಗ್ಗಿನಕೆರೆಯ ವಾಸಿಂ ಶಫಿ ಅಹಮದ್ (32) ಮತ್ತು ಶೇರು ಮಾಳಪ್ಪ ಕಟ್ಟಿಮನಿಗೆ ಗಂಭೀರ ಗಾಯಗಳಾಗಿದೆ.

5ನೇ ಪುಟ ನೋಡಿ

ಹಾವೇರಿ ತಾಲ್ಲೂಕಿನ ಆಲದಕಟ್ಟಿ ಸಮೀಪ ಮಂಗಳವಾರ ಪಟಾಕಿ ಗೋದಾಮಿನಲ್ಲಿ ಹೊತ್ತಿಕೊಂಡ ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು

ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಪರಿಸರಕ್ಕೆ ಹಾನಿಯಾದರೆ ಸರಿಪಡಿಸಲಾಗದು: 'ಸುಪ್ರೀಂ' ಪ್ರತಿಪಾದನೆ

'ಕುಲಾಂತರಿ ಸಾಸಿವೆ ಪರೀಕ್ಷೆ ಬೇಡ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಸರಕ್ಕೆ ಒಮ್ಮೆ ಹಾನಿಯಾದರೆ ಮತ್ತೆ ಅದನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಕುಲಾಂತರಿ ಸಾಸಿವೆಯನ್ನು ತೆರೆದ ಪರಿಸರದಲ್ಲಿ ಬೆಳೆದು ಪರೀಕ್ಷೆಗೆ ಒಳಪಡಿಸಲು ಕೇಂದ್ರ ಸರ್ಕಾರ ಮುಂದಾಗಬಾರದು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಕುಲಾಂತರಿ ತಳಿ ಪರಿಶೀಲನಾ ಸಮಿತಿಯು (ಜಿಇಎಸಿ) ಸಾಸಿವೆ ತಳಿ ಡಿಎಂಎಚ್–11 ಅನ್ನು ಪರೀಕ್ಷೆಗೆ ಒಳಪಡಿಸಲು ಅನುಮತಿ ನೀಡುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಕೇಂದ್ರವು ಇದಕ್ಕೆ ಅನುಮೋದನೆ ನೀಡಿ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಅರುಣಾ ರಾಡ್ರಿಗಸ್ ಅವರು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು.

'ಪರೀಕ್ಷೆಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರ ಕೈಗೊಂಡಿಲ್ಲ' ಎಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2022ರ ನವೆಂಬರ್‌ನಲ್ಲಿ ನಡೆದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್‌ನ ಮುಂದೆ ಕೇಂದ್ರವು ಹೇಳಿಕೆ ನೀಡಿತ್ತು.

ಪರಿಸರ ಸಂರಕ್ಷಣೆ ಮುಖ್ಯ: ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ಮಂಗಳವಾರ ಈ ಅರ್ಜಿಯ ವಿಚಾರಣೆ ನಡೆಸಿತು.

ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು, 'ಕುಲಾಂತರಿ ಸಾಸಿವೆ ಬಗ್ಗೆ ಹನ್ನೆರಡು ವರ್ಷಗಳಿಂದ ಸಂಶೋಧನೆ ನಡೆಯುತ್ತಿದೆ. ಈಗ ತೆರೆದ ಪರಿಸರದ ವಿಭಿನ್ನ ಸನ್ನಿವೇಶದಲ್ಲಿ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ' ಎಂದ ಅವರು, ಮುಂಬರುವ ಬಿತ್ತನೆ ಕಾಲ ಹಾಗೂ ಖಾದ್ಯ ತೈಲದ ಬೇಡಿಕೆ ಕುರಿತು ಪೀಠದ ಗಮನ ಸೆಳೆಯಲು ಮುಂದಾದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಯಾವುದೇ ಪರೀಕ್ಷೆ ಮಾಡದಂತೆ ಸ್ಪಷ್ಟವಾಗಿ ಸೂಚಿಸಿದ್ದೇವೆ. ಹಾಗಿದ್ದರೂ ಮತ್ತೆ ಯಾವ ವಿಷಯ ಪ್ರಸ್ತಾಪಿಸುತ್ತೀರಿ' ಎಂದು ಖಾರವಾಗಿ ಪ್ರಶ್ನಿಸಿತು.

ಅರ್ಜಿದಾರರ ಪರ ಹಾಜರಿದ್ದ ವಕೀಲ ಪ್ರಶಾಂತ್ ಭೂಷಣ್, 'ತೆರೆದ ಪರಿಸರದಲ್ಲಿ ಪರೀಕ್ಷೆ ಒಳಪಡಿಸುವುದು ಎಂದರೆ ನಿಸರ್ಗದಲ್ಲಿಯೇ ಬೆಳೆಯುವುದಾಗಿದೆ. ಪರೀಕ್ಷೆಗೆ ಒಳಪಡಿಸಲು ಅಪೇಕ್ಷಿಸಿದರೆ ಗ್ರೀನ್ ಹೌಸ್ ವಾತಾವರಣದಲ್ಲಿ ಬೆಳೆಯುವುದು ಉತ್ತಮ. ಇಲ್ಲವಾದರೆ ಅದು ಪರಿಸರ ಮಾಲಿನ್ಯಕ್ಕೆ ಕಾರಣವಾಗಲಿದೆ. ಜೊತೆಗೆ, ಸ್ಥಳೀಯ ತಳಿಗಳ ಮೇಲೂ ಪರಿಣಾಮ ಬೀರುತ್ತದೆ' ಎಂದು ಪೀಠದ ಗಮನ ಸೆಳೆದರು.

'ನಿಸರ್ಗ ಹಾಗೂ ಜೀವ ಪರಿಸರದ ನಿರ್ವಹಣೆ ಅತಿಮುಖ್ಯವಾದುದು. ಇಡೀ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ಸಮಯ ಬೇಕಿದೆ' ಎಂದು ಹೇಳಿದ ನ್ಯಾಯಪೀಠವು, ಸೆಪ್ಟೆಂಬರ್ 26ಕ್ಕೆ ವಿಚಾರಣೆಯನ್ನು ಮುಂದೂಡಿತು.

ಕುಲಾಂತರಿ ತಳಿ ಪರಿಶೀಲನಾ ಸಮಿತಿಯು 2022ರ ಅಕ್ಟೋಬರ್ 18ರಂದು ತೆರೆದ ಪರಿಸರದಲ್ಲಿ ಪರೀಕ್ಷೆ ನಡೆಸಲು ಅನುಮತಿ ನೀಡುವಂತೆ ಶಿಫಾರಸು ಮಾಡಿತ್ತು. ಅಕ್ಟೋಬರ್ 25ರಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಇದಕ್ಕೆ ಅನುಮೋದನೆ ನೀಡಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇ-ಜಿಎಸ್‌ಯು-ಇಎಲ್‌ಇ-2023-24-ಓಟಿ-11
ದಿನಾಂಕ : 24-08-2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
(1) ಎಸ್‌ಬಿಸಿ ಕೋಚಿಂಗ್ ಡಿಪೋದಲ್ಲಿ ಸಿಕ್‌ಲೈನ್ ಶೆಡ್‌ನ್ನು ಕ್ರಮಬದ್ಧವಾಗಿ ವಿಸ್ತರಿಸುವುದರಿಂದ ಕೋಚ್ ನಿರ್ವಹಣಾ ಸೌಲಭ್ಯದ ಉದ್ದೇಶಿತ ಉನ್ನತೀಕರಣಕ್ಕಾಗಿ ವಿದ್ಯುತ್ ವ್ಯವಸ್ಥೆಗಳು ಮತ್ತು ಇತರ ಸಂಬಂಧಿತ ಕಾಮಗಾರಿಗಳು. (2) ಯಶವಂತಪುರಕ್ಕಾಗಿ ವಿದ್ಯುತ್ ವ್ಯವಸ್ಥೆಗಳು – ಯಶವಂತಪುರ ಕೋಚಿಂಗ್ ಡಿಪೋದಲ್ಲಿ ಇತರ ಸೌಕರ್ಯಗಳೊಂದಿಗೆ ಸಿಕ್‌ಲೈನ್ ಶೆಡ್‌ನ್ನು 30 ಮೀ.ಗೆ ವಿಸ್ತರಣೆ.	ರೂ. 56,48,496/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :
15-09-2023 ರಂದು 11:00 ಗಂಟೆಯವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಗತಿ ಶಕ್ತಿ ಘಟಕ
ಪಿಯುಬಿ/333/ಎಎಸ್/ಪಿಆರ್‌ಜಿ/ಎಸ್‌ಡಬ್ಲ್ಯುಆರ್/2023-24 ಬೆಂಗಳೂರು
S.W.Railways SWRRLY SWRRLY

PUBLIC NOTICE

This is to inform the general public that my client wish to enter into agreement to purchase the Land bearing Sy. no: 184 (Old Sy. no: 18) measuring 1 Acre 13 guntas excluding 7guntas Kharab and Land bearing Sy. no: 185 (Old Sy. no: 18) measuring 1Acre 12 guntas excluding 8 guntas Kharab situated at Hagaduru village, K.R.Puram Hobli, Bangalore East Taluk, Bangalore more fully described hereunder as Item-I and Item-2 from its owners M/s Mahathi Properties LLP Rep., by its Partner Mr. Muthyalapati Arjun and M/s League Homes LLP Rep., by its designated partner Mr. B.Pavankumar Reddy respectively.

If any body is having any right, title, claim, interest or objections over the same, may file their objections with documents within 10 days from this date, failing which my client will proceed further.

SCHEDULE PROPERTY

ITEM -1: All that piece and parcel of the land bearing Sy.no: 184 (Old Sy. no: 18) measuring 1 Acre 13 guntas excluding 7guntas Kharab situated at Hagaduru village, K.R.Puram Hobli, Bangalore East Taluk, Bangalore and bounded on
EAST : Road,
WEST : Govt. Land,
NORTH : Land in Sy no: 185
SOUTH : Land in Sy No.21/2 belongs to Anitha W/o Late Srinivasmurthy

ITEM -2: All that piece and parcel of the land bearing Sy.no.185 (Old Sy. no: 18) measuring 1 Acre 12 guntas excluding 8 guntas Kharab situated at Hagaduru village, K.R.Puram Hobli, Bangalore East Taluk, Bangalore and bounded on
EAST : Road,
WEST : Land in Sy No.15,
NORTH : Road
SOUTH : Land in old Sy No.18 New Sy no: 184

R.SURENDRANATH BENARJY, Advocate, # 14& 15, 2nd Cross, Kodandaramareddy Layout, Ramamurthy nagar, Bangalore – 16. Mobile - 9845784151.

ಕಲುಷಿತ ನೀರು ಸೇವಿಸಿ ಹಲವರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಕ್ಷೇತ್ರದ ಪ್ಯಾಲೇಸ್ ಗುಟ್ಟಹಳ್ಳಿಯ ವಿನಾಯಕ ವೃತ್ತದ 1ನೇ ಕ್ರಾಸ್ ಬಳಿಯ ನಿವಾಸಿಗಳು ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಥಳೀಯರಾದ ನಾಗರಾಜ್, ಶಾರದಮ್ಮ ಅವರು ಅಸ್ವಸ್ಥಗೊಂಡಿದ್ದು ಅವರನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ, ಹೆಚ್ಚಿನ ಚಿಕಿತ್ಸೆಗೆ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಪುತ್ರನ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಇನ್ನೂ ಹಲವರು ಕಲುಷಿತ ನೀರು ಸೇವಿಸಿ ವಾಂತಿಭೇದಿಯಿಂದ ಬಳಲುತ್ತಿದ್ದಾರೆ.

1ನೇ ಕ್ರಾಸ್ ಬಳಿ ಕುಡಿಯುವ ನೀರಿನ ಪೈಪ್ ಒಡೆದಿತ್ತು. ಆ ಪೈಪ್‌ಗೆ ಚರಂಡಿಯ ಕಲುಷಿತ ನೀರು ಸೇರಿಕೊಂಡಿತ್ತು. ಅದೇ ನೀರನ್ನು ಬಳಸಿದ್ದರಿಂದ ಕೆಲವರು ತೊಂದರೆ ಅನುಭವಿಸಿದರು. ಒಡೆದಿರುವ ಪೈಪ್ ಅನ್ನು ಇನ್ನೂ ದುರಸ್ತಿ ಪಡಿಸಿಲ್ಲ ಎಂದು ನಿವಾಸಿಗಳು ದೂರಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಗೆ ಶಾಸಕ ಸಿ.ಎನ್.ಅಶ್ವತ್ಥ್ ನಾರಾಯಣ್ ಹಾಗೂ ಬಿಬಿಎಂಪಿ ಅಧಿಕಾರಿಗಳು ಮಂಗಳವಾರ ಬೆಳಿಗ್ಗೆ ಭೇಟಿ ನೀಡಿ ನಾಗರಾಜ್ ಕುಟುಂಬದವರ ಆರೋಗ್ಯ ವಿಚಾರಿಸಿದರು. ಉತ್ತಮ ಚಿಕಿತ್ಸೆ ನೀಡುವಂತೆ ಶಾಸಕರು ವೈದ್ಯರಿಗೆ ಸೂಚನೆ ನೀಡಿದರು.

ಮನೆಯಲ್ಲಿ ಸಂಗ್ರಹಿಸಿ ಇಟ್ಟುಕೊಂಡಿರುವ ಕಲುಷಿತ ನೀರನ್ನು ಬಳಸಬಾರದು ಎಂದು ಜಾಗೃತಿ ಮೂಡಿಸಲಾಗಿದೆ.

ಜಿಲ್ಲಾ ಪಂಚಾಯತ್, ಕೋಲಾರ ಜಿಲ್ಲೆ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಜಿಲ್ಲಾ ಒಳಾಂಗಣ ಕ್ರೀಡಾಂಗಣ, ಸರ್ಕಾರಿ ಪ್ರಥಮ ದರ್ಜೆ ಬಾಲಕರ ಕಾಲೇಜು ಮುಂಭಾಗ, ಬಂಗಾರಪೇಟೆ ರಸ್ತೆ, ಕೋಲಾರ ಜಿಲ್ಲೆ-563101,
ದೂ:08152-222320, ಇ-ಮೇಲ್:adysskolar@gmail.com
ಸಂ:ಸ.ನಿ/ಯು.ಸ.ಕ್ರೀ.ಇ./ಕೋ/09/2023-24 ದಿನಾಂಕ:28.08.2023

ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಅಗತ್ಯವಿರುವ ಸಿಬ್ಬಂದಿಗಳನ್ನು **1** ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು **ದಿನಾಂಕ: 22.08.2023** ರಂದು ಇ-ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನ ವಾರ್ಷಿಕ ಮೊತ್ತ: **ರೂ. 42.00 ಲಕ್ಷಗಳು,** ಇಎಂಡಿ ಶುಲ್ಕ **ರೂ: 1,00,000/-** ಹಾಗೂ ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ **ದಿನಾಂಕ: 05.09.2023** ಆಗಿರುತ್ತದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/- ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:105/ಕೆಎಸ್‌ಎಂ.ಸಿ.ಎ/2023-24

ಪ್ರಗತಿ ಪರಿಶೀಲನಾ ಸಭೆ • ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಎಚ್ಚರಿಕೆ

‘ವಿವಾದಾತ್ಮಕ ಅತಿಥಿ ಆಹ್ವಾನಿಸಿದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳಿಗೆ ವಿವಾದಾತ್ಮಕ ಅತಿಥಿಗಳನ್ನು ಕರೆಸಿ, ಗೊಂದಲಕ್ಕೆ ಕಾರಣರಾಗುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಎಚ್ಚರಿಸಿದರು.

ನಗರದಲ್ಲಿ ಮಂಗಳವಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಅತಿಥಿಗಳನ್ನು ಆಹ್ವಾನಿಸುವಾಗ ಗೊಂದಲಕ್ಕೆ ಅವಕಾಶ ಮಾಡಿಕೊಡಬಾರದು. ವಿಶ್ವವಿದ್ಯಾಲಯಗಳು ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಸಚಿವರ ಕಚೇರಿಯಿಂದ ಬರುವ ಕಡತಗಳ ವಿಲೇವಾರಿ ಸಾಕಷ್ಟು ವಿಳಂಬವಾಗುತ್ತಿದೆ. ಅಧಿಕಾರಿಗಳು, ಸಿಬ್ಬಂದಿ ಕಡತ ವಿಲೇವಾರಿ ಸಮರ್ಪವಾಗಿ ನಿರ್ವಹಿಸಲು ಸಾಧ್ಯವಾಗದಿದ್ದರೆ ಸಕಾರಣಗಳನ್ನು ನೀಡಬೇಕು. ಕಾನೂನು ತೊಡಕಿದ್ದರೆ ಗಮನಕ್ಕೆ ತರಬೇಕು ಎಂದು ಸೂಚಿಸಿದರು.

ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ಪರೀಕ್ಷೆ ವೇಳಾಪಟ್ಟಿ, ಪರೀಕ್ಷೆ ಶುಲ್ಕ, ಅಂತರ ವಿಶ್ವವಿದ್ಯಾಲಯ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡುವ ಕುರಿತು ಶೀಘ್ರದಲ್ಲೇ ಏಕರೂಪ ನೀತಿ ಜಾರಿಗೆ ತರಲಾಗುವುದು ಎಂದು ಮಾಹಿತಿ ನೀಡಿದರು.

ಅಮೆರಿಕಕ್ಕೆ ಎಸ್‌ಜೆಪಿಯ 48 ವಿದ್ಯಾರ್ಥಿಗಳು

ಬೆಂಗಳೂರು: ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನ 48 ವಿದ್ಯಾರ್ಥಿಗಳು ಒಂದು ವರ್ಷದ ಅಧ್ಯಯನಕ್ಕಾಗಿ ಅಮೆರಿಕದ ಎರಡು ವಿಶ್ವವಿದ್ಯಾನಿಲಯಗಳಿಗೆ ತೆರಳಲಿದ್ದಾರೆ.

ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಪೋಷಕರು ಮಂಗಳವಾರ ಸಚಿವ ಎಂ.ಸಿ. ಸುಧಾಕರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ನಂತರ ಅಮೆರಿಕಕ್ಕೆ ಕಳುಹಿಸುವ ಪ್ರಸ್ತಾವನೆಗೆ ಉನ್ನತ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಪಾಲಿಟೆಕ್ನಿಕ್ ಮಾಡಿಕೊಂಡ ಒಪ್ಪಂದದಂತೆ ಅಂತರರಾಷ್ಟ್ರೀಯ ಅವಳಿ ಕಾರ್ಯಕ್ರಮದ ಅಂಗವಾಗಿ ಕ್ಯಾಂಪಸ್ ಅಧ್ಯಯನಕ್ಕಾಗಿ ವಿದೇಶಕ್ಕೆ ಕಳುಹಿಸಲಾಗುತ್ತಿದೆ. ಪ್ರಯಾಣ ಮತ್ತು ವಾಸ್ತವ್ಯ ಸೇರಿದಂತೆ ಪ್ರತಿ ವಿದ್ಯಾರ್ಥಿಗೆ ತಗಲುವ ₹ 20 ಲಕ್ಷ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಲಿದೆ.

‘ಅಂಗಾಂಗ ದಾನ: ಜಾಗೃತಿ ಕೊರತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾಗೃತಿ ಕೊರತೆಯಿಂದಾಗಿ ಅಂಗಾಂಗ ದಾನ ಮಾಡುವವರ ಸಂಖ್ಯೆ ಕಡಿಮೆಯಿದೆ. ಇದರಿಂದಾಗಿ ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರು ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಸ್ಪರ್ಶ್ ಆಸ್ಪತ್ರೆಯ ಸಮೂಹದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಜೋಸೆಫ್ ಪಸಂಗಾ ತಿಳಿಸಿದರು.

ಆರ್.ಆರ್ ನಗರದ ಸ್ಪರ್ಶ್ ಆಸ್ಪತ್ರೆ ವತಿಯಿಂದ 15ಕ್ಕೂ ಅಧಿಕ ಅಂಗಾಂಗ ದಾನಿಗಳು ಮತ್ತು ಅವರ ಕುಟುಂಬದ ಸದಸ್ಯರನ್ನು ಗೌರವಿಸಿ, ಮಾತನಾಡಿದರು.

‘ಅಂಗಾಂಗ ದಾನದ ಬಗ್ಗೆ ಜನಜಾಗೃತಿ ಮೂಡಿಸಿ, ದಾನಿಗಳಾಗಿ ಮುಂದೆ ಬರುವಂತೆ ಪ್ರೋತ್ಸಾಹಿಸುವ ತುರ್ತು ಅಗತ್ಯವಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ. ಅಂಗಾಂಗ ದಾನಕ್ಕೆ ವಯಸ್ಸಿನ ಮಿತಿಯಿಲ್ಲ’ ಎಂದು ತಿಳಿಸಿದರು.

27 ವರ್ಷದ ಮಹಿಳೆ 58 ವರ್ಷದ ತಂದೆಗೆ ಯಕೃತ್ತನ್ನು ದಾನ ಮಾಡಿದ್ದಾಳೆ. 57 ವರ್ಷದ ವ್ಯಕ್ತಿ 28 ವರ್ಷದ ಮಗನಿಗೆ ಮೂತ್ರಪಿಂಡ ನೀಡಿ ನೆರವಾಗಿದ್ದಾಳೆ. 24 ವರ್ಷದ ಯುವತಿ ತಂದೆಗೆ ಯಕೃತ್ತನ್ನು ದಾನವಾಗಿ ನೀಡಿದ್ದಾಳೆ. ಕಾರ್ಯಕ್ರಮದಲ್ಲಿ ದಾನಿಗಳು ಈ ಬಗ್ಗೆ ತಮ್ಮ ಅನುಭವನ್ನು ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಟ ಅವಿನಾಶ್, ಜೀವಸಾರ್ಥಕತೆಯ ಸದಸ್ಯ ಕಾರ್ಯದರ್ಶಿ ಡಾ.ರಜನಿ ಎಂ., ಜೀವಸಾರ್ಥಕತೆಯ ಮುಖ್ಯ ಕಸಿ ಸಂಯೋಜಕಿ ಲಿಜಾಮೋಲ್ ಜೋಸೆಫ್ ಭಾಗವಹಿಸಿದ್ದರು.

ರಾಮಕೃಷ್ಣ ಹೆಗಡೆ ಜನ್ಮದಿನೋತ್ಸವ

ರಾಷ್ಟ್ರೀಯ ನವನಿರ್ಮಾಣ ವೇದಿಕೆಯು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಮಂಗಳವಾರ ಆಯೋಜಿಸಿದ್ದ ರಾಮಕೃಷ್ಣ ಹೆಗಡೆ ಅವರ 97ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ (ಎಡದಿಂದ) ರಂಗಕರ್ಮಿ ಕೆ.ವಿ. ನಾಗರಾಜ್ ಮೂರ್ತಿ, ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಹಾಗೂ ವೇದಿಕೆ ಅಧ್ಯಕ್ಷೆ ಮಮತಾ ನಿಚ್ಚಾನಿ ಅವರು ರಾಮಕೃಷ್ಣ ಹೆಗಡೆ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು -ಪ್ರಜಾವಾಣಿ ಚಿತ್ರ

ಟೌನ್ ಕೋ ಆಪರೇಟಿವ್ ಸೊಸೈಟಿಗೆ ಆಯ್ಕೆ

ನೆಲಮಂಗಲ: ಟೌನ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಎನ್. ಚೆನ್ನಬಸವರಾಜು ಹಾಗೂ ಉಪಾಧ್ಯಕ್ಷರಾಗಿ ರಾಧಾಬಾಯಿ ಗಂಗಾಧರರಾವ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಸ್.ಎನ್.ಕಾರ್ತಿಕ್, ಎನ್.ಕೃಷ್ಣಪ್ಪ, ಎನ್.ಸಿ.ಜಗದೀಶ್, ಬಿ.ಆರ್.ನಾರಾಯಣಗುಪ್ತ, ಎನ್.ಪಿ.ರಘುನಾಥ್, ಎಚ್.ಜಿ.ರಾಜು, ಎನ್.ವಿ.ಭಾಗ್ಯಜ್ಯೋತಿ, ಎಂ.ಎಸ್.ಗೋಪಾಲ್, ಸಿ.ಕೇಶವಮೂರ್ತಿ, ಮಹೇಶ್.ಕೆ.ಒ, ಎನ್.ಜಿ.ನಾಗರಾಜು ಸೇರಿದಂತೆ 13 ಮಂದಿ ನಿರ್ದೇಶಕರಾಗಿ ಆಯ್ಕೆಯಾಗಿದ್ದರು.

ಚೆನ್ನಬಸವರಾಜು ಮಾತನಾಡಿ, ‘ಶತಮಾನ ಕಂಡ ಟೌನ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷನಾಗಿರುವುದು ಹೆಮ್ಮೆ ತಂದಿದೆ’ ಎಂದರು.

‘ಇತಿಹಾಸ ಅಧ್ಯಯನದಿಂದ ಸದೃಢ ಸಮಾಜ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತಿಹಾಸ ಅಧ್ಯಯನ ಮಾಡುವುದರಿಂದ ಮಾತ್ರ ಭವಿಷ್ಯದಲ್ಲಿ ಸಮಾಜವನ್ನು ಸದೃಢವಾಗಿ ನಿರ್ಮಿಸಬಹುದು’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದಲ್ಲಿ ಪದ್ಮಶಾಲಿ ನೇಕಾರ ಸಮಾಜದ ಸಮ್ಮಿಲನ ಹಾಗೂ ಕೆ.ಜಿ. ಲಕ್ಷ್ಮೀನಾರಾಯಣ ಅವರ ‘ಪದ್ಮಶಾಲಿ ನೇಕಾರ ಇತಿಹಾಸ ಮತ್ತು ಸಂಸ್ಕೃತಿ ದರ್ಶನ’ ಎಂಬ ಸಂಶೋಧನಾ ಗ್ರಂಥ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಪ್ರತಿ ಸಮುದಾಯಕ್ಕೂ ಐತಿಹಾಸಿಕ ಮಹತ್ವವಿದೆ. ಆಚಾರ-ವಿಚಾರ, ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಹೊಂದಿರುತ್ತದೆ. ಈ ದಾಖಲೆಯನ್ನು ಸಂಗ್ರಹಿಸಿದರೇ ಮಾತ್ರ ಮುಂದಿನ ಪೀಳಿಗೆ ಇತಿಹಾಸ ಅರಿಯಲು ಸಹಾಯಕವಾಗುತ್ತದೆ. ಜಾತಿಗಳ ಇತಿಹಾಸ ದಾಖಲಿಸುವ ಮೂಲಕ ಅದರ ಮಹತ್ವ ತಿಳಿಸುವ ಕೆಲಸವಾಗಬೇಕು’ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ, ಪದ್ಮಶಾಲಿ ಸಮುದಾಯದ ಪ್ರಭುಲಿಂಗ ಸ್ವಾಮೀಜಿ, ಮಾಜಿ ಸಂಸದ ಕೆ.ಸಿ. ಕೊಂಡಯ್ಯ, ಶಿಕ್ಷಣ ತಜ್ಞ ಕೆ.ಇ. ರಾಧಾಕೃಷ್ಣ, ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, ಉತ್ತರ ಕರ್ನಾಟಕ ಪದ್ಮಶಾಲಿ ಸಂಘದ ಅಧ್ಯಕ್ಷ ಕೊಂಗತಿ ಕಾಳಪ್ಪ, ಕಾರ್ಯಾಧ್ಯಕ್ಷ ವೆಂಕಟೇಶ ಸಾಕಾ ಇದ್ದರು.

ಸೆ.1ರಂದು ಸಂಗೀತ ಕಾರ್ಯಕ್ರಮ

ಬೆಂಗಳೂರು: ಇಲ್ಲಿನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಸೆ.1ರಂದು ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ಶುಕ್ರವಾರ ಸಂಜೆ 6.30ರಿಂದ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ಕಲಾವಿದರು ‘ಬೋಲ್’ ಕನ್ಸರ್ಟ್‌ನಲ್ಲಿ ಪ್ರೇಕ್ಷಕರನ್ನು ರಂಜಿಸಲಿದ್ದಾರೆ ಎಂದು ಇನ್ಫಿನಿಟಿ ಇವೆಂಟ್ಸ್ ಸಂಸ್ಥಾಪಕ ಯತಿನ್ ಮೊಕಾಶಿ ತಿಳಿಸಿದ್ದಾರೆ.

‘ಎಂಟು ಕಲಾವಿದರ ಸಹಯೋಗವು ಪ್ರೇಕ್ಷಕರನ್ನು ಅತ್ಯುತ್ತಮ ಸಂಗೀತದ ಮತ್ತೊಂದು ಜಗತ್ತಿಗೆ ಕರೆದೊಯ್ಯುವ ಭರವಸೆಯಿದೆ. ಶಾಸ್ತ್ರೀಯ ಸಂಗೀತ, ಜನಪದ, ಗಜಲ್, ಬಾಲಿವುಡ್ ಹಾಗೂ ಸಮಕಾಲೀನ ಸಂಗೀತದವರೆಗೆ ವಿವಿಧ ಸಂಗೀತ ಪ್ರಕಾರಗಳನ್ನು ಕಲಾವಿದರು ಪ್ರಸ್ತುತ ಪಡಿಸಲಿದ್ದಾರೆ. ಟಿಕೆಟ್‌ಗಳು ಬುಕ್‌ಮೈಶೋನಲ್ಲಿ ಲಭ್ಯವಿದೆ ಅಥವಾ 96899 08694ಗೆ ಕರೆ ಮಾಡಬಹುದು’ ಎಂದು ಮಾಹಿತಿ ನೀಡಿದ್ದಾರೆ.

ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಡಿತರತ್ನ ಎ. ಶಾಂತಿ ರಾಜಶಾಸ್ತ್ರಿ ಟ್ರಸ್ಟ್ 2023ನೇ ಸಾಲಿಗೆ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಅಧಿಕ ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಘೋಷಿಸಿದ್ದು, ಒಟ್ಟು ₹5.91 ಲಕ್ಷ ವಿತರಿಸಲಾಗುತ್ತದೆ.

ಎಸ್ಸೆಸ್ಸೆಲ್ಸಿಯಲ್ಲಿ ಬೆಳಗಾವಿಯ ಪದ್ಮ-ಬಾಳಪ್ಪಬಾಗರ, ಪಿಯುಸಿ ವಿಜ್ಞಾನದಲ್ಲಿ ಹಾಸನದ ದಿಶಾ ಎನ್. ಜೈನ್, ಕಲೆ ಮತ್ತು ವಾಣಿಜ್ಯದಲ್ಲಿ ಮಾನ್ಯ ಜೈನ್ ಅವರನ್ನು ಮೊದಲನೇ ಸ್ಥಾನಕ್ಕೆ ಆಯ್ಕೆ ಮಾಡಲಾಗಿದ್ದು, ತಲಾ ₹25 ಸಾವಿರ ನಗದು ಒಳಗೊಂಡಿದೆ. ಎರಡನೇ ಸ್ಥಾನಕ್ಕೆ ಎಸ್ಸೆಸ್ಸೆಲ್ಸಿಯಲ್ಲಿ ಸಂಸ್ಕೃತಿ ಪಿ. ಜೈನ್ ನಸಲಾಪುರ, ಪಿಯುಸಿ ವಿಜ್ಞಾನದಲ್ಲಿ ಪ್ರೀತಿ ಕಲ್ಲಗುಡ್ಡೆ, ಕಲೆ ಹಾಗೂ ವಾಣಿಜ್ಯ ವಿಭಾಗದಿಂದ ಪ್ರಣಮ್ಯ ಡಿ. ಜೈನ್ ಭಾಜನರಾಗಿದ್ದು, ತಲಾ ₹ 10 ಸಾವಿರ ನಗದು ಪಡೆಯಲಿದ್ದಾರೆ.

ಪಿಯುಸಿ ವಿಜ್ಞಾನದಲ್ಲಿ ಶೇ 98.33ರಿಂದ ಶೇ 92ರವರೆಗೆ ಅಂಕ ಪಡೆದ 64 ವಿದ್ಯಾರ್ಥಿಗಳು, ಕಲೆ ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇ 97.33ರಿಂದ ಶೇ 92.50ರವರೆಗೆ ಅಂಕ ಪಡೆದ 28 ವಿದ್ಯಾರ್ಥಿಗಳು, ಎಸ್ಸೆಸ್ಸೆಲ್ಸಿಯಲ್ಲಿ ಶೇ 97.33ರಿಂದ ಶೇ 95.04ರಷ್ಟು ಅಂಕ ಪಡೆದ 70 ವಿದ್ಯಾರ್ಥಿಗಳಿಗೆ ತಲಾ ₹ 3 ಸಾವಿರ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ದೇವಾಲಯ ಮತ್ತು ಸಮೂಹ ದೇವಾಲಯಗಳು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಮಲ್ಲೇಶ್ವರಂ, ಬೆಂಗಳೂರು. ದೂರವಾಣಿ ಸಂಖ್ಯೆ: 080-23313339, Email:samuhadevalya12@gmail.com
ಸಂಖ್ಯೆ: ಕಾ.ನಿ.ಅ/ಸಿಆರ್-17/2023-24 ದಿನಾಂಕ: 30.08.2023

ಸಂಕ್ಷಿಪ್ತ ಮರು ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಹೊರಡಿಸಲಾಗಿರುತ್ತದೆ. ಟೆಂಡರ್ ಸಲ್ಲಿಸುವ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ **(https://eproc.karnataka.gov.in)** ಅಥವಾ ದೇವಾಲಯದ ದೂರವಾಣಿ ಸಂ: 080-23313339 ಅನ್ನು ಸಂಪರ್ಕಿಸಲು ಕೋರಿದೆ.

ಕ್ರ. ಸಂ.	ಇ-ಟೆಂಡರ್ ವಿವರ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ	ಆನ್‌ಲೈನ್ ಮೂಲಕ ಟೆಂಡರ್ ತೆರೆಯುವ ದಿನಾಂಕ
1	ಬೆಂಗಳೂರು ನಗರ ಮಲ್ಲೇಶ್ವರಂ, ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳಿಗೆ ಅವಶ್ಯಕವಾದ ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಬಗ್ಗೆ	30.08.2023 ರಿಂದ 05.09.2023ರ ವರೆಗೆ	07.09.2023

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವೇಣುಗೋಪಾಲ ಕೃಷ್ಣ ಸ್ವಾಮಿ ಮತ್ತು ಸಮೂಹ ದೇವಾಲಯಗಳು, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/1082/ಶಿರಡಿಸಾಯಿ/2023-24

के आई ओ सी एल लिमिटेड
ಕೆಐಓಸಿಎಲ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಉದ್ಯಮ)
CIN: L13100KA1976GOI002974
ನೋಂದಾಯಿತ ಕಚೇರಿ : 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034
ಟೆಲಿಫ್ಯಾಕ್ಸ್ – 080-25531525, ಇಮೇಲ್ : cs@kioclltd.in, ವೆಬ್ : www.kioclltd.in,
KUDREMUKH

47ನೇ ವಾರ್ಷಿಕ ಸಾಮಾನ್ಯ ಸಭೆ, ಇ-ವೋಟಿಂಗ್ ಮತ್ತು ಬುಕ್ ಕ್ಲೋಷರ್‌ನ ಅಧಿಸೂಚನೆ

AGMನ ಅಧಿಸೂಚನೆಯಲ್ಲಿ ತಿಳಿಸಲ್ಪಟ್ಟ ಪ್ರಕಾರ ವ್ಯಾಪಾರ ವಹಿವಾಟನ್ನು ನಡೆಸಲು KIOCL ಲಿಮಿಟೆಡ್ (ದಿ ಕಂಪನಿ) ಸದಸ್ಯರ 47ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಶುಕ್ರವಾರ, 22, 2023 ರಂದು ಮಧ್ಯಾಹ್ನ 12.00 ಗಂಟೆಗೆ ವೀಡಿಯೋ ಕಾನ್ಫರೆನ್ಸ್/ ಇತರ ಆಡಿಯೋ-ವಿಷುವಲ್ ವಿಧಾನದ ಮೂಲಕ (VC/OAVM) ನಿಗದಿಪಡಿಸಲು ಈ ಸೂಚನೆಯನ್ನು ನೀಡಲಾಗಿದೆ.

ಎಜಿಎಂ ನ ವಿವರಗಳು ಕೆಳಕಂಡಂತಿವೆ :

ಕ್ರ.ಸಂ.	ವಿವರಗಳು	ನಿಗದಿಪಡಿಸಿದ ತಾರೀಕು ಮತ್ತು ಸಮಯ
1	ವಾರ್ಷಿಕ ವರದಿಯನ್ನು ಕಳುಹಿಸಲು ಮತ್ತು ಎಜಿಎಂ ಅಧಿಸೂಚನೆಗಾಗಿ ಸದಸ್ಯರನ್ನು ನಿರ್ಧರಿಸುವ ದಿನಾಂಕ	ಶುಕ್ರವಾರ, 25-08-2023
2	ಡಿವಿಡೆಂಟ್ ಪಾವತಿಗೆ ವರದಿಯ ದಿನಾಂಕ ಮತ್ತು ಎಜಿಎಂಗಾಗಿ ಇ-ವೋಟಿಂಗ್ ಹಕ್ಕುಗಳನ್ನು ನಿರ್ಧರಿಸುವ ದಿನಾಂಕ	ಶನಿವಾರ, 15-09-2023
3	ಬುಕ್ ಕ್ಲೋಷರ್	ಶುಕ್ರವಾರ, 16-09-2023, ಶನಿವಾರ, 22-09-2023 ವರೆಗೆ (ಎರಡೂ ದಿನಗಳು ಸೇರಿವೆ)
4	ರಿಮೋಟ್ ಇ-ವೋಟಿಂಗ್ ಪ್ರಾರಂಭವಾಗುವ ದಿನಾಂಕ ಮತ್ತು ಸಮಯ	ಗುರುವಾರ , 19-09-2023 (ಬೆಳಿಗ್ಗೆ 09:00 ಗಂಟೆಗೆ)
5	ರಿಮೋಟ್ ಇ-ವೋಟಿಂಗ್ ಮುಕ್ತಾಯವಾಗುವ ದಿನಾಂಕ ಮತ್ತು ಸಮಯ	ಗುರುವಾರ , 21-09-2023 (ಸಂಜೆ 05:00 ಗಂಟೆಗೆ)
6	ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಲು ಏಜೆನ್ಸಿ	ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (“CDSL”)
7	ಎಜಿಎಂ ನೋಟೀಸು ಲಭ್ಯವಿರುವ ವೆಬ್‌ಸೈಟು(ಗಳು)	1. www.kioclltd.in 2. www.evotingindia.com 3. www.bseindia.com 4. www.nseindia.com 5. www.msei.in
8	ಇ-ವೋಟಿಂಗ್ ಪ್ರಕ್ರಿಯೆಯನ್ನು ನಡೆಸುವ ಪರಿಶೀಲಿಸುವವರು (ದೂರಸ್ಥ ಇ-ವೋಟಿಂಗ್ ಮತ್ತು ಇ-ವೋಟಿಂಗ್ ಸ್ಥಳ) ಮತ್ತು ವರದಿಯನ್ನು ಸಲ್ಲಿಸುವುದು	ಶ್ರೀ.ಪಿ.ಎಸ್. ಬಾಥ್ಲಾ(FCS: 4391) M/s. ಪಿ.ಎಸ್.ಬಾಥ್ಲಾ ಅಂಡ್ ಅಸೋಸಿಯೇಟ್ಸ್, ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರೀಸ್
9	ಇ-ವೋಟಿಂಗ್‌ಗೆ ಸಂಬಂಧಪಟ್ಟಂತೆ ಕುಂದುಕೊರತೆಗಳನ್ನು ಬಗೆಹರಿಸಲು ಜವಾಬ್ದಾರಿಯುತವಾದ ವ್ಯಕ್ತಿಯ ಸಂಪರ್ಕ ವಿವರಗಳು	ಹೆಸರು: ಶ್ರೀ: ರಾಕೇಶ್ ದಲ್ವಿ ಹುದ್ದೆ: ಸೀನಿಯರ್ ಮ್ಯಾನೇಜರ್, CDSL ವಿಳಾಸ: A ವಿಂಗ್, 25ನೇ ಮಹಡಿ, ಮರಥಾನ್ ಫ್ಯೂಚರೆಕ್ಸ್, ಮಫತ್‌ಲಾಲ್ ಮಿಲ್ ಕಾಂಪೌಂಡ್ಸ್, ಎನ್.ಎಂ.ಜೋಷಿ ಮಾರ್ಗ್, ಲೋವರ್ ಪರೇಲ್ (ಪೂರ್ವ), ಮುಂಬೈ - 400013 ಇಮೇಲ್ ಐಡಿ: helpdesk.evoting@cdslindia.com, ಫೋನ್ ನಂ.- 1800 22 55 33.

ಸದಸ್ಯರಿಗೆ ಈ ಕೆಳಗಿನ ಅಂಶಗಳನ್ನು ತಿಳಿಯಪಡಿಸಲಾಗಿದೆ:

1. ಅನ್ವಯವಾಗುವ ಸುತ್ತೋಲೆಗಳಿಗೆ ಅನುಸಾರವಾಗಿ ಕಂಪನಿಯು 2022-23 ನೇ ಸಾಲಿನ ವಾರ್ಷಿಕ ವರದಿಯ ಜೊತೆಗೆ 29.08.2023 ರಂದು ನಡೆಯಲಿರುವ 47ನೇ ಎಜಿಎಂ ಅಧಿಸೂಚನೆಯನ್ನು ಕಂಪನಿ / RTA / ಡಿಪಾಸಿಟರಿಗಳು / ಡಿಪಾಸಿಟರಿ ಭಾಗಿಗಳೊಂದಿಗೆ ನೋಂದಾಯಿಸಲಾಗಿರುವ ಇಮೇಲ್ ವಿಳಾಸಗಳಿಗೆ ಹಾಗೂ 25.08.2023 ರ ತನಕ ಸದಸ್ಯರ ಹಾಜರಿಯಲ್ಲಿ ಕಂಡುಬರುವ / ಫಲಾನುಭವಿ ಮಾಲೀಕರಿಗೆ ಕಳುಹಿಸಲಾಗಿದೆ. ಎಜಿಎಂ ನೋಟೀಸ್ ರವಾನೆಯ ನಂತರ ಮತ್ತು ವಿದ್ಯುನ್ಮಾನ ಮತದಾನಕ್ಕಾಗಿ ಕಟ್-ಆಫ್ ದಿನಾಂಕವಾದ 15.09.2023 ರಂದು ಷೇರುಗಳನ್ನು ಹೊಂದಿರುವ ಷೇರುದಾರರು ಸದಸ್ಯರು, ಇ-ವೋಟಿಂಗ್ ಸೂಚನೆಗಳನ್ನು ಅನುಸರಿಸಬಹುದು. ಎಜಿಎಂ ನಂತರ ಕೂಡಲೇ ಇ-ವೋಟಿಂಗ್ ಫಲಿತಾಂಶಗಳನ್ನು ಪ್ರಕಟಿಸಲಾಗುವುದು. ನಂತರ ಕೊನೆಯ ದಿನಾಂಕದ ನಂತರ ಅಂದರೆ 15.09.2023 ಯಿಂದ ವ್ಯಕ್ತಿಯು ಕಂಪನಿಯ ಸದಸ್ಯರಾಗಿರುವುದಿಲ್ಲ.
2. ಕಂಪನಿಯು VC / OAVM ಮೂಲಕ ವಾರ್ಷಿಕ ಸಭೆ ಸದಸ್ಯರ ಸಭೆ ಅನ್ನು ನಡೆಸಲು ಮತ್ತು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಎಜಿಎಂ ಸಮಯದಲ್ಲಿ ದೂರಸ್ಥ ಇ-ವೋಟಿಂಗ್ ಮತ್ತು ಮತದಾನವನ್ನು ಸುಗಮಗೊಳಿಸಲು ಕಂಪನಿಯು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ನ ಸೇವೆಗಳನ್ನು ತೊಡಗಿಸಿಕೊಂಡಿದೆ. ರಿಮೋಟ್ ಇ-ವೋಟಿಂಗ್ ಅವಧಿಯು 19-09-2023 ರಂದು 09.00 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು 21.09.2023 ರಂದು ಸಂಜೆ 5.00 ಗಂಟೆಗೆ ಕೊನೆಗೊಳ್ಳುತ್ತದೆ. ಈ ಅವಧಿಯ ನಂತರ CDSL ನಿಂದ ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂ ಸಮಯದಲ್ಲಿ ಇ-ವೋಟಿಂಗ್ ಸೂಚನೆಗಳನ್ನು ಎಜಿಎಂ ನೋಟೀಸ್‌ನಲ್ಲಿ ನೀಡಲಾಗಿದೆ.
3. MCA/SEBI ಸುತ್ತೋಲೆಗಳಿಗೆ ಅನುಸಾರವಾಗಿ VC/OAVM ಮೂಲಕ ಎಜಿಎಂ ಅನ್ನು ನಡೆಸುವುದರಿಂದ, ಸದಸ್ಯರ ದೈಹಿಕ ಹಾಜರಾತಿಯನ್ನು ವಿತರಿಸಲಾಗಿದೆ. ಸದಸ್ಯರು ಪ್ರಾಕ್ಸಿಗಳನ್ನು ನೇಮಿಸುವ ಸೌಲಭ್ಯವು ಎಜಿಎಂಗೆ ಲಭ್ಯವಿರುವುದಿಲ್ಲ. ಸದಸ್ಯರು VC/OAVM ಸೌಲಭ್ಯದ ಮೂಲಕ ಎಜಿಎಂಗೆ ಹಾಜರಾಗಬಹುದು ಮತ್ತು ಭಾಗವಹಿಸಬಹುದು.
4. ವಿದ್ಯುನ್ಮಾನವಾಗಿ ಎಜಿಎಂ ಸೂಚನೆಯೊಂದಿಗೆ ವಾರ್ಷಿಕ ವರದಿಯನ್ನು ಸ್ವೀಕರಿಸಲು PAN ಮತ್ತು KYC ವಿವರಗಳ ನೋಂದಣಿ ವಿಧಾನ/ನವೀಕರಣ.

ಭೌತಿಕ ಷೇರುದಾರರಿಗೆ	ಕಂಪನಿಯ ವೆಬ್‌ಸೈಟ್ ಆಗಿರುವ https://kioclltd.in/data.php?id=68 ನಲ್ಲಿ ಹೋಸ್ಟ್ ಮಾಡಲಾದ ಫಾರ್ಮ್ ISR-1, ಫಾರ್ಮ್ ISR-2 ಮತ್ತು SH-13 (ನಾಮನಿರ್ದೇಶನ ಅರ್ಜಿ) ಅನ್ನು ಕಂಪನಿಯ RTA ಗೆ ಪೋಷಕ ದಾಖಲೆಗಳೊಂದಿಗೆ ಅಂದರೆ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ಘಟಕ : KIOCL ಲಿಮಿಟೆಡ್), ನಂ. 30, ರಮಣ ರೆಸಿಡೆನ್ಸಿ, 4 ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003 ಗೆ ಕಳುಹಿಸಿ.
ಡಿಮ್ಯಾಟ್ ಷೇರುದಾರರಿಗೆ	ದಯವಿಟ್ಟು ನಿಮ್ಮ ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪೆಂಟ್ (DP) ಯೊಂದಿಗೆ PAN ಮತ್ತು KYC ಯನ್ನು ನೋಂದಾಯಿಸಿ ಅಥವಾ ನವೀಕರಿಸಿ.

KIOCL ಲಿಮಿಟೆಡ್, ಸಹಿ
ಸ್ಥಳ : ಬೆಂಗಳೂರು
ದಿನಾಂಕ : 30.08.2023
(ಪಿ.ಕೆ.ಮಿಶ್ರಾ) ಕಂಪನಿ ಸೆಕ್ರೆಟರಿ

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com ವೆಬ್‌ಸೈಟ್: www.gokaldasexports.com

20ನೇ ವಾರ್ಷಿಕ ಸಾಮಾನ್ಯ ಸಭೆ, ಇ-ಮತದಾನ ಮಾಹಿತಿ ಮತ್ತು ಪುಸ್ತಕ ಮುಚ್ಚುವಿಕೆಯ ನೋಟೀಸ್

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (“ಕಂಪನಿ”)ಯ ಸದಸ್ಯರ 20ನೇ ವಾರ್ಷಿಕ ಸಾಮಾನ್ಯ ಸಭೆ (‘ಎಜಿಎಂ’) **ಬುಧವಾರ, ಸೆಪ್ಟೆಂಬರ್ 20, 2023ರಂದು ಸಂಜೆ 4:00 ಐಎಸ್‌ಟಿ** ಗೆ ಎಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ನಡೆಸಲು ವಿಡಿಯೋ ಕಾನ್ಫೆರೆನ್ಸಿಂಗ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ (“ವಿಸಿ”) ಮೂಲಕ ನಡೆಯಲಿದ್ದು, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಿಂದ (“ಎಂಸಿಎ”) ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 08, 2020, 17/2020 ದಿನಾಂಕ ಏಪ್ರಿಲ್ 13, 2020, 20/2020 ದಿನಾಂಕ ಮೇ 05, 2020, 33/2020 ದಿನಾಂಕ ಸೆಪ್ಟೆಂಬರ್ 28, 2020, 39/2020 ದಿನಾಂಕ ಡಿಸೆಂಬರ್ 31, 2020, 10/2021 ದಿನಾಂಕ ಜೂನ್ 23, 2021, 20/2021 ದಿನಾಂಕ ಡಿಸೆಂಬರ್ 08, 2021 ಮತ್ತು 10/2022 ದಿನಾಂಕ ಡಿಸೆಂಬರ್ 28, 2022 ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದಿಂದ ಹೊರಡಿಸಲಾದ ಸಂಖ್ಯೆ SEBI/HO/CFD/PoD-2/P/CIR/2023/4 ದಿನಾಂಕ ಜನವರಿ 5, 2023 (ಒಟ್ಟಾರೆಯಾಗಿ ಇನ್ನುಮುಂದೆ “ಸುತ್ತೋಲೆಗಳು” ಎಂದು ಉಲ್ಲೇಖಿಸಲಾಗುವುದು) ರಂತೆ ಕಂಪನಿಗಳು ಸಾಮಾನ್ಯ ಸ್ಥಳದಲ್ಲಿ ಷೇರುದಾರರ ದೈಹಿಕ ಉಪಸ್ಥಿತಿಯಿಲ್ಲದೆ ವಿಸಿ ಮೂಲಕ ಎಜಿಎಂ ನಡೆಸಲು ಅನುಮತಿಸಲಾಗಿದೆ. ಅದರಂತೆ ದಿನಾಂಕ 07ನೇ ಆಗಸ್ಟ್, 2023ರ ಎಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ವ್ಯವಹರಿಸಲು ಕಂಪನಿಯ 20ನೇ ಎಜಿಎಂ ಅನ್ನು ವಿಸಿ ಮೂಲಕ ನಡೆಸಲಾಗುವುದು.

ಸುತ್ತೋಲೆಗಳ ಅನುಸಾರವಾಗಿ, ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳು / ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜಂಟ್‌ರವರೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಎಜಿಎಂ ನೋಟೀಸ್ ಮತ್ತು 2022-23ರ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ರವಾನಿಸಲಾಗಿದೆ. ಈ ದಸ್ತಾವೇಜುಗಳು ಕಂಪನಿಯ ವೆಬ್‌ಸೈಟ್ **www.gokaldasexports.com,** ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಾದ **www.bseindia.com** ಮತ್ತು **www.nseindia.com** ಹಾಗೂ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜಂಟ್ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್‌ಟೆಕ್)ನ ವೆಬ್‌ಸೈಟ್ **https://evoting.kfintech.com/** ನಲ್ಲಿ ಸಹ ಲಭ್ಯವಿದೆ. ಇಮೇಲ್‌ಗಳ ಮೂಲಕ ಎಜಿಎಂ ನೋಟೀಸ್‌ನ ರವಾನೆಯು ಆಗಸ್ಟ್ 29, 2023ರಂದು ಪೂರ್ಣಗೊಂಡಿದೆ.

ಕಟ್-ಆಫ್ ದಿನಾಂಕ (ಸೆಪ್ಟೆಂಬರ್ 13, 2023)ದಂದು ಷೇರುಗಳನ್ನು ಹೊಂದಿರುವ ಸದಸ್ಯರು ಎಜಿಎಂನ ಸೂಚನೆಯಲ್ಲಿ ವಿಧಿಸಿದಂತೆ ವಿದ್ಯುನ್ಮಾನ ರೂಪದಲ್ಲಿ ವ್ಯವಹರಿಸುವ ಕುರಿತಾಗಿ, ಆರ್‌ಟಿಎರವರ ವಿದ್ಯುನ್ಮಾನ ಮತ ವ್ಯವಸ್ಥೆಯ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದಾಗಿರುತ್ತದೆ. ಸದಸ್ಯರುಗಳಿಗೆ ಈ ಕೆಳಕಂಡಂತೆ ಸೂಚಿಸುವುದೇನೆಂದರೆ:

i. ಎಜಿಎಂ ಸೂಚನೆಯಲ್ಲಿ ತಿಳಿಸಿರುವಂತೆ ರಿಮೋಟ್ ಇ-ಮತದಾನ ಅಥವಾ ಎಜಿಎಂನಲ್ಲಿ ಇ-ಮತದಾನ ವ್ಯವಸ್ಥೆಯ ಮೂಲಕ ಮತಚಲಾಯಿಸಿ ವ್ಯವಹರಿಸಬಹುದಾಗಿರುತ್ತದೆ.
ii. ರಿಮೋಟ್ ಇ-ಮತದಾನವು **ಶನಿವಾರ, ಸೆಪ್ಟೆಂಬರ್ 16, 2023ರಂದು (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ)** ಪ್ರಾರಂಭವಾಗುವುದು.
iii. ರಿಮೋಟ್ ಇ-ಮತದಾನವು **ಮಂಗಳವಾರ, ಸೆಪ್ಟೆಂಬರ್ 19, 2023ರಂದು (ಸಂಜೆ 5:00 ಗಂಟೆ ಐಎಸ್‌ಟಿ)** ಮುಕ್ತಾಯವಾಗುವುದು.
iv. ರಿಮೋಟ್ ಇ-ಮತದಾನ ಮಾಡ್ಯೂಲ್ ಅನ್ನು ಸೆಪ್ಟೆಂಬರ್ 19, 2023ರಂದು ಸಂಜೆ 5:00 ಗಂಟೆ ಐಎಸ್‌ಟಿಯ ನಂತರ ನಿಷ್ಕ್ರಿಯಗೊಳಿಸಲಾಗುವುದು.
v. ರಿಮೋಟ್ ಇ-ಮತದಾನ ಅಥವಾ ಎಜಿಎಂನಲ್ಲಿ ಇ-ಮತದಾನ ವ್ಯವಸ್ಥೆಯ ಮೂಲಕ ಮತಚಲಾಯಿಸುವ ಅರ್ಹತೆಯನ್ನು ನಿರ್ಧರಿಸುವ ಕಟ್-ಆಫ್ ದಿನಾಂಕವು ಸೆಪ್ಟೆಂಬರ್ 13, 2023 ಆಗಿರುತ್ತದೆ.
vi. ಎಜಿಎಂ ನೋಟೀಸ್ ರವಾನೆಯಾದ ನಂತರ ಕಂಪನಿಯ ಷೇರುಗಳನ್ನು ಪಡೆದು, ಕಂಪನಿಯ ಸದಸ್ಯರಾದ ಯಾವುದೇ ವ್ಯಕ್ತಿ ಕಟ್-ಆಫ್ ದಿನಾಂಕ ಅಂದರೆ ಸೆಪ್ಟೆಂಬರ್ 13, 2023ರಂದು ಷೇರುಗಳನ್ನು ಹೊಂದಿದ್ದಲ್ಲಿ, ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು einward.ris@kfintech.com ಇಲ್ಲಿಗೆ ಮನವಿ ಸಲ್ಲಿಸಿ ಪಡೆದುಕೊಳ್ಳಬಹುದು. ಅದಾಗ್ಯೂ ಯಾವುದೇ ಸದಸ್ಯರು ಈಗಾಗಲೇ ಆರ್‌ಟಿಎನಲ್ಲಿ ಇ-ಮತದಾನಕ್ಕೆ ನೋಂದಾಯಿಸಿದ್ದಲ್ಲಿ, ತಮ್ಮ ಹಾಲಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಪಯೋಗಿಸಿ ಮತ ಚಲಾಯಿಸಬಹುದಾಗಿರುತ್ತದೆ.
vii. ಸದಸ್ಯರ ಗಮನಕ್ಕೆ: (ಅ) ಒಮ್ಮೆ ಠರಾವಿನ ಮೇಲೆ ಸದಸ್ಯರು ಮತ ಚಲಾಯಿಸಿದ ತರುವಾಯ ಅದನ್ನು ಬದಲಿಸುವ ಅವಕಾಶವಿರುವುದಿಲ್ಲ. (ಆ) ಎಜಿಎಂನಲ್ಲಿ ಮತ ಚಲಾಯಿಸುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಹಾಗೂ ಯಾವ ಸದಸ್ಯರು ರಿಮೋಟ್ ಇ-ಮತದಾನದ ಮೂಲಕ ಠರಾವಿನ ಮೇಲೆ ಮತ ಚಲಾಯಿಸಿರುವುದಿಲ್ಲವೋ ಮತ್ತು ಹಾಗೆ ಮಾಡಲು ನಿರ್ಬಂಧಿತರಾಗಿಲ್ಲವೋ ಅವರು ಎಜಿಎಂನಲ್ಲಿ ಇ-ಮತದಾನದ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. (ಇ) ಎಜಿಎಂ ಮೊದಲು ರಿಮೋಟ್ ಇ-ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಿದ ಸದಸ್ಯರುಗಳು ಸಹ ಎಜಿಎಂನಲ್ಲಿ ಭಾಗವಹಿಸಬಹುದು. ಆದರೆ, ಪುನಃ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರುವುದಿಲ್ಲ. (ಈ) ಕಟ್-ಆಫ್ ದಿನಾಂಕದಂತೆ ನೋಂದಣಿ ದಸ್ತಾವೇಜುಗಳಲ್ಲಿ ಹೆಸರು ದಾಖಲಾಗಿರುವ ಸದಸ್ಯರು ಅಥವಾ ಡೆಪಾಸಿಟರಿಗಳಿಂದ ನಿರ್ವಹಿಸಲ್ಪಟ್ಟ ಫಲಾನುಭವಿ ಮಾಲೀಕರ ಮಸ್ತಕದಲ್ಲಿ ಹೆಸರು ದಾಖಲಿಸಲಾಗಿರುವ ರಿಮೋಟ್ ಇ-ಮತದಾನ ಅಥವಾ ಎಜಿಎಂನಲ್ಲಿ ಇ-ಮತದಾನ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರು.
viii. ಡಿಮೆಟೀರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳು ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದ ಸದಸ್ಯರಿಗೆ ದೂರದಿಂದಲೇ ಮತದಾನ ಚಲಾಯಿಸುವ ವಿಧಾನವನ್ನು ಸದಸ್ಯರಿಗೆ ಎಜಿಎಂ ನೋಟೀಸ್‌ನಲ್ಲಿ ಒದಗಿಸಲಾಗಿರುತ್ತದೆ.
ix. ಷೇರುದಾರರು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದಿದ್ದರೆ ಪರಿಣಾಮವಾಗಿ ವಾರ್ಷಿಕ ವರದಿ, ಇ-ಎಜಿಎಂ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಾಗದಿದ್ದ ಕಾರಣ, https://ris.kfintech.com/email_registration/ ಇದರಲ್ಲಿ ಒದಗಿಸಲಾದ ಸೂಚನೆಗಳನ್ನು ಅನುಸರಿಸುವ ಮೂಲಕ ತಾತ್ಕಾಲಿಕವಾಗಿ ತಮ್ಮ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಕಂಪನಿಯ ಆರ್‌ಟಿಎರವರೊಂದಿಗೆ ನೋಂದಾಯಿಸಿಕೊಳ್ಳಬಹುದು. ಒಂದೊಮ್ಮೆ ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರು einward.ris@kfintech.com ಇದಕ್ಕೆ ಬರೆಯಬಹುದು.
x. ವಾರ್ಷಿಕ ವರದಿ ಮತ್ತು ಎಜಿಎಂ ನೋಟೀಸನ್ನು ಡೌನ್‌ಲೋಡ್ ಮಾಡಲು ಷೇರುದಾರರು ಕಂಪನಿಯ ವೆಬ್‌ಸೈಟ್ www.gokaldasexports.com ಅಥವಾ ಆರ್‌ಟಿಎ ವೆಬ್‌ಸೈಟ್ https://evoting.kfintech.com/ ಗೆ ಭೇಟಿ ನೀಡಬಹುದು.
xi. ಒಂದೊಮ್ಮೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಷೇರುದಾರರು einward.ris@kfintech.com ಗೆ ಬರೆಯಬಹುದು ಅಥವಾ ಕೆಫಿನ್‌ಟೆಕ್‌ನ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಇವರನ್ನು ಟೋಲ್ ಫ್ರೀ ನಂ. 1800 345 4001 ನಲ್ಲಿ ಸಂಪರ್ಕಿಸಬಹುದು.
xii. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಸಹಿ ಮಾಡಿದ ಮನವಿ ಪತ್ರದ ಸ್ಕ್ಯಾನ್ ಮಾಡಿದ ಪ್ರತಿಯೊಂದಿಗೆ ಇ-ಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಸ್ವಯಂ ದೃಢೀಕರಿಸಿದ ಪ್ಯಾನ್ ಪ್ರತಿ ಮತ್ತು ಕ್ಯಾನ್ಸಲ್ ಮಾಡಿದ ಚೆಕ್ ಲೀಫ್ ಅನ್ನು ಒದಗಿಸಿ ತಮ್ಮ ವಾರ್ಷಿಕ ವರದಿ, ಇ-ಎಜಿಎಂ ನೋಟೀಸ್ ಮತ್ತು ರಿಮೋಟ್ ಇ-ಮತದಾನದ ಸೂಚನೆಗಳನ್ನು ಸ್ವೀಕರಿಸಲು ಇ-ಮೇಲ್ ಐಡಿ einward.ris@kfintech.com ನಲ್ಲಿ ಇ-ಮೇಲ್ ಮನವಿಯನ್ನು ಕಳುಹಿಸಬಹುದು.

ಪುಸ್ತಕದ ಮುಚ್ಚುವಿಕೆ ಮತ್ತು ದಾಖಲೆ ದಿನಾಂಕ:
ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 91ರ ಅನುಸಾರವಾಗಿ ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ತಿದ್ದುಪಡಿ ನಿಯಮಗಳು, 2015ರ ನಿಯಮ 10ನ್ನು ಓದಿಕೊಂಡಂತೆ ಎಜಿಎಂ ಉದ್ದೇಶಕ್ಕಾಗಿ ಮತ್ತು ಎಜಿಎಂ ನಲ್ಲಿ ಅನುಮೋದಿಸಿದರೆ ಅಂತಿಮ ಲಾಭಾಂಶ ಪಾವತಿಗಾಗಿ, ಕಂಪನಿಯ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಸೆಪ್ಟೆಂಬರ್ 14, 2023ರಿಂದ ಸೆಪ್ಟೆಂಬರ್ 20, 2023ರ ವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಲ್ಪಡುತ್ತದೆ ಎಂದು ನೋಟೀಸ್ ನೀಡಲಾಗಿದೆ. ಅಂತಿಮ ಲಾಭಾಂಶವನ್ನು ಅನುಮೋದಿಸಿದಲ್ಲಿ, ಸೆಪ್ಟೆಂಬರ್ 13, 2023ರ ಅಂತ್ಯಕ್ಕೆ ಡಿಪಾಸಿಟರೀಸ್ ದಾಖಲೆಗಳ ಪ್ರಕಾರ ಕಂಪನಿಯ ಸದಸ್ಯರ / ಲಾಭದಾಯಕ ಮಾಲೀಕರ ನೋಂದಣಿಯಲ್ಲಿ ಹೆಸರು ಕಂಡುಬರುವ ಸದಸ್ಯರಿಗೆ ಪಾವತಿಸಲಾಗುತ್ತದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ
ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 29, 2023

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವತ್ತು ಮಾಲೀಕತ್ವದ 'ದೃಢೀಕೃತ ಕಾರ್ಡ್'ನಲ್ಲಿ ಹತ್ತಾರು ದೋಷ

ಆಸ್ತಿ ದಾಖಲೆ: ಯುಪಿಒಆರ್ ತಪ್ಪು ಮಾಹಿತಿ

● ಆರ್. ಮಂಜುನಾಥ್

ಬೆಂಗಳೂರು: ನಗರದ ಆಸ್ತಿ ಮಾಲೀಕರಿಗೆ ಇದೊಂದು ಕಾರ್ಡ್ ಇದ್ದರೆ, ಇನ್ನಾವುದರ ಅವಶ್ಯಕತೆಯೂ ಇಲ್ಲ. ಇದು ಆಸ್ತಿಯ ಸಂಪೂರ್ಣ ದಾಖಲೆಗಳ ಭಂಡಾರ ಎಂದೇ ಹೇಳಲಾಗುತ್ತಿರುವ 'ಯುಪಿಒಆರ್ ಕಾರ್ಡ್' ನಾಗರಿಕರ ಕೈಸೇರುತ್ತಿದ್ದು, ಅದು ತಪ್ಪುಗಳ ಕಣಜವಾಗಿದೆ.

'ಇಂತಹ ದಿನ ಸ್ವತ್ತು ಅಳತೆ ಮಾಡಲಾಗುತ್ತದೆ. ದಾಖಲೆಗಳನ್ನು ಒದಗಿಸಬೇಕು' ಎಂದು ಭೂಮಾಪಕರು (ಸರ್ವೆಯರ್) ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡುತ್ತಾರೆ. ಆದರೆ, ಆ ದಿನ ಯಾರೂ ಬರುವುದಿಲ್ಲ. ಅಳತೆಯನ್ನೂ ಮಾಡುವುದಿಲ್ಲ, ದಾಖಲೆಗಳನ್ನೂ ಸಂಗ್ರಹಿಸುವುದಿಲ್ಲ. ಆದರೆ ಎರಡು ತಿಂಗಳ ನಂತರ 'ಯುಪಿಒಆರ್ ಕಾರ್ಡ್' ಮಾಲೀಕರ ಮನೆಗೆ ಬರುತ್ತದೆ. ಅದರಲ್ಲಿ ಮಾಹಿತಿಗಳೆಲ್ಲವೂ ತಪ್ಪಿರುತ್ತವೆ. ಇಂತಹ ಸಾವಿರಾರು ಪ್ರಕರಣಗಳು ನಗರದಲ್ಲಿ ದಾಖಲಾಗಿವೆ.

'ನಮ್ಮ ನಿವೇಶನದ ಅಳತೆ 40x25 ಅಡಿ. ಅದರ, 1,115 ಚದರ ಅಡಿ. ಆದರೆ, ಯುಪಿಒಆರ್ ದಾಖಲೆಯಲ್ಲಿ 1262.2 ಚದರ ಅಡಿ ಎಂದು ನಮೂದಿಸಿದ್ದಾರೆ. ನೋಟಿಸ್ ನೀಡಿದ ದಿನ ಸ್ಥಳಕ್ಕೆ ಬಂದು ಅಳತೆ ಮಾಡಲಿಲ್ಲ. ಅಳತೆ ಮಾಡಿಕೊಂಡು ಹೋದೆವು ಎಂದು ಸರ್ವೆಯರ್ ಹೇಳಿದರು. ನಾವು ಮನೆಯಲ್ಲೇ ಇದ್ದೆವು. ಯಾವ ಮಾಯದಲ್ಲಿ ಬಂದು ಹೋದರೋ ಗೊತ್ತಿಲ್ಲ. ಕಾರ್ಡ್‌ನಲ್ಲಿ ನಮ್ಮದಲ್ಲದ ಸ್ಥಳದಲ್ಲಿ ರೆಡ್ ಮಾರ್ಕ್ ಹಾಕಿ ಫೋಟೊ ಮುದ್ರಿಸಿದ್ದಾರೆ. ನಕ್ಷೆ ಕೊಟ್ಟಿಲ್ಲ ಎಂದು ಬರೆದಿದ್ದಾರೆ. ಅವರು ಬಂದರೆ ತಾನೇ ಕೊಡುವುದು' ಎಂದು ಕೆಂಗೇರಿ ಉಪನಗರದ ಶಿವಕುಮಾರ್ ಪ್ರಶ್ನಿಸಿದರು.

'ತಪ್ಪಾಗಿವೆ, ಹೇಗೆ ಸರಿಪಡಿಸೋದು ಎಂದರೆ ಕೆ.ಆರ್. ವೃತ್ತದ ಕಚೇರಿಗೆ ಹೋಗಿದ ದಾಖಲೆ ಕೊಡಿ ಅನ್ನುತ್ತಾರೆ. ಮಾಡುವುದನ್ನು ಒಂದೇ ಬಾರಿ ಸರಿ ಮಾಡಿದರೆ ಅಲೆದಾಡುವುದು ತಪ್ಪುತ್ತದೆ. ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಆಗುತ್ತಿಲ್ಲ. ಈ ಬಗ್ಗೆ ಹಿರಿಯ ಅಧಿಕಾರಿಗಳು ಗಮನಹರಿಸಬೇಕು' ಎಂದರು.

ಮತ್ತೆ ದಾಖಲೆ ಸಂಗ್ರಹ: 'ಡ್ರೋನ್ ಮೂಲಕ ಆಸ್ತಿಗಳ ನಕ್ಷೆ ಸಂಗ್ರಹಿಸಲಾಗಿದೆ. ಕೆಲವು ಕಡೆ ಮಾಹಿತಿ ತಪ್ಪಾಗಿರುವುದು ಗಮನಕ್ಕೆ ಬಂದಿದೆ. ಅದನ್ನು ಸರಿಪಡಿಸಲು ಸ್ಥಳದಲ್ಲಿ ಪೂರ್ಣ ಅಳತೆಯ ಅಗತ್ಯವಿದೆ. ಅದರ ಜೊತೆಗೆ ದಾಖಲೆಗಳನ್ನೂ ಸಂಗ್ರಹಿಸಲು ತಂಡವನ್ನು ರಚಿಸಲಾಗಿದೆ. ವಾರ್ಡ್‌ವಾರು ಪ್ರತಿ ಆಸ್ತಿಯ ಮಾಲೀಕರಿಂದ ದಾಖಲೆ ಸಂಗ್ರಹಿಸಲಾಗುತ್ತದೆ' ಎಂದು ಯುಪಿಒಆರ್ ಯೋಜನೆಯ ಅಧಿಕಾರಿಗಳು ತಿಳಿಸಿದರು.

100 ಆಸ್ತಿಯ ಗುರಿ: 'ಪ್ರತಿ ಸರ್ವೆಯರ್‌ಗಳಿಗೆ ದಿನಕ್ಕೆ 100 ಆಸ್ತಿಗಳ ಅಳತೆ ಮಾಡಿ, ದಾಖಲೆ ಸಂಗ್ರಹಿಸುವ ಗುರಿ ನೀಡಲಾಗಿದೆ. ಒಂದು ಸ್ವತ್ತಿಗೆ ಕನಿಷ್ಠ 10 ನಿಮಿಷ ವ್ಯಯಿಸಿದರೆ ಗಂಟೆಗೆ ಆರು ಆಸ್ತಿಗಳ ಮಾಹಿತಿ ಕಲೆಹಾಕಬಹುದು. 10 ಗಂಟೆ ಸತತವಾಗಿ ಕೆಲಸ ಮಾಡಿದರೆ 60 ಆಸ್ತಿಯ ದಾಖಲೆ ಸಂಗ್ರಹವಾಗುತ್ತದೆ. 10 ನಿಮಿಷದಲ್ಲಿ ಪೂರ್ಣ ಅಳತೆ, ದಾಖಲೆ ಸಂಗ್ರಹ ಸಾಧ್ಯವಾಗುವುದಿಲ್ಲ. ಸರ್ವೆಯರ್‌ಗಳು ಸಾಕಷ್ಟು ಒತ್ತಡದಿಂದ ಕೆಲಸ ಮಾಡುತ್ತಿದ್ದಾರೆ' ಎಂದು ಹೆಸರು ಹೇಳಲು ಇಚ್ಛಿಸದ ಭೂಮಾಪಕರು ಹೇಳಿದರು.

ಏನಿದು ಯುಪಿಒಆರ್?

'ಯುಪಿಒಆರ್ ಕಾರ್ಡ್' ನಾಗರಿಕರ ಆಸ್ತಿ ಮಾಲೀಕತ್ವದ ಪ್ರಮಾಣಪತ್ರವಾಗಿದೆ. ಆಸ್ತಿಯ ನಕ್ಷೆ, ಮಾಲೀಕತ್ವ ವಿವರ, ಹಕ್ಕುಗಳು ಸೇರಿದಂತೆ ಸಾಲ, ವ್ಯಾಜ್ಯ ಇತರೆ ಮಾಹಿತಿಗಳನ್ನೂ ಹೊಂದಿರುತ್ತದೆ. 'ಯುಪಿಒಆರ್ ಕಾರ್ಡ್' ಹೊಂದಿದ ಆಸ್ತಿ ಮಾರಾಟ ಅಥವಾ ವಿಭಜನೆ, ಬದಲಾವಣೆಗಳಾದರೆ ಉಪ ನೋಂದಣಾಧಿಕಾರಿ ಕಚೇರಿಯಿಂದ ಸ್ವಯಂ ಚಾಲಿತ ವ್ಯವಸ್ಥೆಯಲ್ಲಿ ಮಾಹಿತಿಗಳು ಬದಲಾಗುತ್ತವೆ. ಕೆರೆ ಪ್ರದೇಶ, ಸರ್ಕಾರಿ ಆಸ್ತಿ, ಅರಣ್ಯ ಪ್ರದೇಶದಲ್ಲಿ ಒತ್ತುವರಿಯಾಗಿದ್ದರೆ ಅವುಗಳ ಸ್ಪಷ್ಟ ಮಾಹಿತಿಯನ್ನು ಪ್ರತಿ ಆಸ್ತಿಗೂ ಸಂಪರ್ಕಿಸಲಾಗಿರುತ್ತದೆ. ಇದು ಯುಪಿಒಆರ್ ಯೋಜನೆಯ ಉದ್ದೇಶ.

ನಾಗರಿಕರಿಗೆ ವಿತರಿಸಲಾಗುತ್ತಿರುವ ಯುಪಿಒಆರ್ ಕಾರ್ಡ್

ಕೆಂಗೇರಿ ಉಪನಗರದಲ್ಲಿ ನಿವೇಶನದ ಅಳತೆಗಿಂತ ಹೆಚ್ಚಿನ ವಿಸ್ತೀರ್ಣ ತೋರಿಸಿರುವ ಯುಪಿಒಆರ್ ಕಾರ್ಡ್

'ತಪ್ಪು ಯುಪಿಒಆರ್ ಅಗತ್ಯವೇನು?'

ಟಿ.ಇ. ಶ್ರೀನಿವಾಸ್

'ನೋಟಿಸ್ ನೀಡಿದ ಮೇಲೆ ಅಳತೆ ಮಾಡಲು ಬರಬೇಕು. ನಾವು ಮನೆಯಲ್ಲಿ ಸರ್ವೆಯರ್ ಹೇಳಿದ ದಿನ ಕಾದು ಕುಳಿತರೂ ಬರುವುದಿಲ್ಲ. ಗೂಗಲ್ ಮ್ಯಾಪ್‌ನಲ್ಲಿ ತೆಗೆದುಕೊಳ್ಳುವುದಾದರೆ ನೋಟಿಸ್ ಏಕೆ ಕೊಡಬೇಕು. ನಮ್ಮ ನಿವೇಶನಕ್ಕಿಂತಲೂ ಕಡಿಮೆ ಅಥವಾ ಹೆಚ್ಚಿನ ಅಳತೆ ನಮೂದಿಸಿದರೆ ಮತ್ತೆ ಅದನ್ನು ಸರಿಪಡಿಸಲು ನಾವು ಕಚೇರಿ ಹುಡುಕಿಕೊಂಡು ಹೋಗಬೇಕು. ಬಿಬಿಎಂಪಿಯಿಂದ ಮಾಹಿತಿ ಪಡೆದಿದ್ದೇವೆ ಎನ್ನುತ್ತಾರೆ. ಕ್ರಯ ಪತ್ರ, ಖಾತಾ, ಆಸ್ತಿ ತೆರಿಗೆ ವಿವರವೆಲ್ಲ ಇದ್ದ ಮೇಲೆ ಅದನ್ನೇ ಏಕೆ ನಮೂದಿಸುವುದಿಲ್ಲ. ಇಂತಹ ತಪ್ಪು ಮಾಹಿತಿಯಿಂದ ನಮಗೆ ಮುಂದೆ ತೊಂದರೆಯಾಗುತ್ತದೆ. ದೋಷಯುಕ್ತ ಯುಪಿಒಆರ್ ಕಾರ್ಡ್ ನೀಡುವ ಅಗತ್ಯವೇನು' ಎಂದು ರಾಜರಾಜೇಶ್ವರಿನಗರದ ಟಿ.ಇ. ಶ್ರೀನಿವಾಸ್ ಪ್ರಶ್ನಿಸಿದರು.

'ದಾಖಲೆ ಪಡೆಯದೆ, ಕೊಟ್ಟಿಲ್ಲ ಎನ್ನುತ್ತಾರೆ!'

ಶಿವಕುಮಾರ್

ಯುಪಿಒಆರ್ ಯೋಜನೆಯ ಪ್ರಕಾರ, ಆಸ್ತಿಯ ಮಾಲೀಕತ್ವದ ಕ್ರಯಪತ್ರ, ಆಸ್ತಿ ತೆರಿಗೆ ಪಾವತಿ ರಸೀದಿ, ಆಸ್ತಿ ಋಣಭಾರ ಪತ್ರ, ಬಿಬಿಎಂಪಿ ಖಾತೆ, ನಿವೇಶನ ಹಂಚಿಕೆ ಪತ್ರ, ನಿವೇಶನ ಸ್ವಾಧೀನ ಪತ್ರ, ಭೂಪರಿವರ್ತನೆ ಆದೇಶ/ ಲೇಔಟ್ ನಕ್ಷೆ ಪ್ರತಿ, ಮಾಲೀಕರ ಫೋಟೊ, ಆಸ್ತಿಯ ಫೋಟೊವನ್ನು ಕಾರ್ಡ್‌ನಲ್ಲಿ ಪ್ರಕಟಿಸಬೇಕು. ಇಷ್ಟೆಲ್ಲ ವಿವರ ಅವರ ಬಳಿ ಇಲ್ಲದಿದ್ದರೆ ನಮ್ಮಿಂದ ಪಡೆಯಬೇಕು. ನೋಟಿಸ್ ಕೊಟ್ಟವರು ಬರುವುದೇ ಇಲ್ಲ, ದಾಖಲೆ ಸಂಗ್ರಹಿಸದೆ ಕಾರ್ಡ್ ಕಳುಹಿಸಿ, ಅದನ್ನು ಕೊಟ್ಟಿಲ್ಲ ಎಂದು ನಮೂದಿಸಿದ್ದಾರೆ. ಇದು ಬೇಜವಬ್ದಾರಿ ಯೋಜನೆಯಾಗಿದೆ. ಇದರಿಂದ ಮಾಲೀಕರಿಗೆ ಸಂಕಷ್ಟ ಎದುರಾಗಿದೆ' ಎಂದು ಕೆಂಗೇರಿಯ ಶಿವಕುಮಾರ್ ದೂರಿದರು.

'ಇದು ಕರಡು, ದಾಖಲೆ ಸಲ್ಲಿಸಬಹುದು'

'ಈಗ ನೀಡಿರುವುದು ಕರಡು 'ಯುಪಿಒಆರ್ ಕಾರ್ಡ್'. ಇದರಲ್ಲಿ ತಪ್ಪುಗಳಿರುವ ಬಗ್ಗೆ ಆನ್‌ಲೈನ್‌ನಲ್ಲಿ ಸುಮಾರು ಏಳು ಸಾವಿರ ದೂರುಗಳು ಬಂದಿವೆ. ಕೆ.ಆರ್. ವೃತ್ತದಲ್ಲಿರುವ ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಯುಪಿಒಆರ್ ಆಯುಕ್ತರ ಕಚೇರಿಯಲ್ಲಿ ದೂರು ಸಲ್ಲಿಸಬಹುದು. ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಆನ್‌ಲೈನ್‌ನಲ್ಲೂ (https://rdservices.karnataka.gov.in/service5/) ದೂರು ದಾಖಲಿಸಬಹುದು' ಎಂದು ಯುಪಿಆರ್ ಯೋಜನೆ ನಿರ್ವಹಿಸುವ ಅಧಿಕಾರಿಗಳು ತಿಳಿಸಿದರು.

ಆಸ್ತಿ ಅಕ್ರಮ ಗಳಿಕೆ ಆರೋಪ: ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಕೆ ಆರೋಪದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ರಾಮಕೃಷ್ಣ ಎಂಬುವರಿಗೆ ನಾಲ್ಕು ವರ್ಷ ಜೈಲು ಶಿಕ್ಷೆ, ₹ 30 ಲಕ್ಷ ದಂಡ ವಿಧಿಸಿದ್ದ ಲೋಕಾಯುಕ್ತ ವಿಶೇಷ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಬಿ.ರಾಮಕೃಷ್ಣ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ಅವರನ್ನು ಆರೋಪಮುಕ್ತಗೊಳಿಸಿದೆ.

'ವಿಚಾರಣಾ ನ್ಯಾಯಾಲಯ ಸಾಕ್ಷ್ಯಾಧಾರಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಲೋಕಾಯುಕ್ತ ಪೊಲೀಸರ ದೋಷಾರೋಪ ಪಟ್ಟಿಯನ್ನು ಅಂಗೀಕರಿಸಿದೆ. ಮೇಲ್ಮನವಿದಾರರ ಪತ್ನಿ ವ್ಯಾಪಾರ ಮಾಡುತ್ತಿದ್ದರು. ಅವರೂ ತಮ್ಮ ಆದಾಯಕ್ಕೆ ಪ್ರತ್ಯೇಕವಾಗಿ ತೆರಿಗೆ ಪಾವತಿಸುತ್ತಿದ್ದರು. ಈ ವ್ಯಾಪಾರದಿಂದ ಬಂದ ಆದಾಯವನ್ನು ಮೇಲ್ಮನವಿದಾರರ ಅಕ್ರಮ ಸಂಪಾದನೆ ಎಂದು ಪರಿಗಣಿಸಲಾಗಿದೆ. ಇನ್‌ಸ್ಪೆಕ್ಟರ್ ಅವರ ಹೂಡಿಕೆ ಮತ್ತು ವೆಚ್ಚಗಳನ್ನು ತಪ್ಪಾಗಿ ಲೆಕ್ಕಾಚಾರ ಮಾಡಲಾಗಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸಿದೆ.

ಪ್ರಕರಣವೇನು?: ರಾಮಕೃಷ್ಣ ಮಹಾಲಕ್ಷ್ಮೀ ಬಡಾವಣೆ ಪೊಲೀಸ್ ಠಾಣೆಯಲ್ಲಿ 2008ರಲ್ಲಿ ಸೇವೆ ಸಲ್ಲಿಸುತ್ತಿದ್ದರು. ಈ ಸಮಯದಲ್ಲಿ ಅವರ ನಿವಾಸದ ಮೇಲೆ ಲೋಕಾಯುಕ್ತ ದಾಳಿ ನಡೆಸಿದ್ದರು. 1996ರಿಂದ 2008ರ ಮಧ್ಯದ ಸೇವಾ ಅವಧಿಯಲ್ಲಿ ಆದಾಯ ಮೀರಿ ಆಸ್ತಿ ಗಳಿಸಿದ್ದಾರೆ ಎಂಬ ಆರೋಪದಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಿ, 2009–2010ರಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ವಿಚಾರಣೆ ನಡೆಸಿದ್ದ ನ್ಯಾಯಾಲಯ, ರಾಮಕೃಷ್ಣ ಅವರನ್ನು 2019ರಲ್ಲಿ ದೋಷಿಯಾಗಿ ಪರಿಗಣಿಸಿ, ನಾಲ್ಕು ವರ್ಷ ಜೈಲು ಶಿಕ್ಷೆ ಮತ್ತು ₹ 30 ಲಕ್ಷ ದಂಡ ವಿಧಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ರಿಜ್ವಾನ್ ಅರ್ಷದ್‌ಗೆ ನೋಟಿಸ್

ಬೆಂಗಳೂರು: ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಶಿವಾಜಿನಗರ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಂಪಂಗಿ ರಾಮನಗರದ ಬಿ.ಲಕ್ಷ್ಮೀ ದೇವಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ವಾದ ಮಂಡಿಸಿ, 'ಕಾಂಗ್ರೆಸ್ ಪಕ್ಷ ಪ್ರಕಟಿಸಿದ ಗ್ಯಾರಂಟಿ ಯೋಜನೆಗಳು ಕೊಡುಗೆ ಹಾಗೂ ಭರವಸೆಯ ಸ್ವರೂಪ ಹೊಂದಿವೆ. ಗ್ಯಾರಂಟಿ ಯೋಜನೆಗಳನ್ನು ಪಕ್ಷದ ಅಭ್ಯರ್ಥಿಗಳ ಸಮ್ಮತಿಯೊಂದಿಗೆ ಪ್ರಕಟಿಸಲಾಗಿದೆ. ಅವು ಶಿವಾಜಿನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತಹಾಕಲು ಮತದಾರರನ್ನು ಪ್ರೇರೇಪಿಸಿವೆ. ಈ ಮೂಲಕ ರಿಜ್ವಾನ್ ಅರ್ಷದ್ ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆ. ಮತದಾರರಿಗೆ ಆಮಿಷವೊಡ್ಡುವುದು ಲಂಚ ಮತ್ತು ಭ್ರಷ್ಟಚಾರಕ್ಕೆ ಸಮ. ಆದ್ದರಿಂದ ರಿಜ್ವಾನ್ ಅರ್ಷದ್ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿದರು.

ಪ್ರತಿವಾದಿ ರಿಜ್ವಾನ್ ಅರ್ಷದ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆಪ್ಟೆಂಬರ್ 19ಕ್ಕೆ ಮುಂದೂಡಿದೆ.

'ಗೃಹಲಕ್ಷ್ಮಿ'ಗೆ ಚಾಲನೆ: 198 ವಾರ್ಡ್‌ಗಳಲ್ಲಿ ನೇರ ಪ್ರಸಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹಲಕ್ಷ್ಮಿ ಯೋಜನೆ'ಗೆ ಚಾಲನೆ ನೀಡುವ ಕಾರ್ಯಕ್ರಮ ಮೈಸೂರಿನಲ್ಲಿ ಬುಧವಾರ ನಡೆಯಲಿದ್ದು, ಇದನ್ನು 198 ವಾರ್ಡ್‌ಗಳಲ್ಲಿ ಬಿಬಿಎಂಪಿ ನೇರ ಪ್ರಸಾರ ಮಾಡಲಿದೆ.

ಪೂರ್ವ, ಪಶ್ಚಿಮ, ದಕ್ಷಿಣ ವಲಯದಲ್ಲಿ ತಲಾ 44, ಬೊಮ್ಮನಹಳ್ಳಿಯಲ್ಲಿ 16, ಮಹದೇವಪುರದಲ್ಲಿ 17, ಯಲಹಂಕದಲ್ಲಿ 11, ದಾಸರಹಳ್ಳಿಯಲ್ಲಿ 8 ಹಾಗೂ ರಾಜರಾಜೇಶ್ವರಿ ನಗರ ವಲಯದಲ್ಲಿ 14 ಕಡೆಗಳಲ್ಲಿ ಕಾರ್ಯಕ್ರಮ ಪ್ರಸಾರ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಟಿವಿ/ಎಲ್.ಇ.ಡಿ ಪರದೆ ವ್ಯವಸ್ಥೆ ಮಾಡಲಾಗಿದ್ದು, ಆಸನ, ಶೌಚಾಲಯ, ಕುಡಿಯುವ ನೀರು, ವಿದ್ಯುತ್, ಇಂಟರ್ನೆಟ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಪ್ರತಿಯೊಂದು ವಾರ್ಡ್‌ಗೆ ನೋಡಲ್ ಅಧಿಕಾರಿಯನ್ನು ನಿಯೋಜಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ 6,16,480 ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಚುನಾವಣೆ ಬಳಿಕವೂ 'ಗ್ಯಾರಂಟಿ' ಮುಂದುವರಿಕೆ

ಸಲೀಂ ಅಹಮದ್

ಬೆಂಗಳೂರು: ಲೋಕಸಭಾ ಚುನಾವಣೆಗಾಗಿ 'ಗ್ಯಾರಂಟಿ' ಯೋಜನೆಗಳನ್ನು ಮಾಡಿಲ್ಲ. 2024ರ ಲೋಕಸಭಾ ಚುನಾವಣೆ ನಂತರವೂ ಯೋಜನೆಗಳು ಮುಂದುವರಿಯಲಿವೆ ಎಂದು ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದರು.

ಕಾಂಗ್ರೆಸ್ ಚುನಾವಣೆಗೂ ಮೊದಲು ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಕಾಲಮಿತಿಯ ಒಳಗೆ ಜಾರಿಗೊಳಿಸುತ್ತಿದೆ. ಈಗಾಗಲೇ ಮೂರು ಗ್ಯಾರಂಟಿಗಳು ಜಾರಿಯಾಗಿವೆ. ಗೃಹಲಕ್ಷ್ಮಿಗೆ ಆ.30ರಂದು ಚಾಲನೆ ದೊರೆಯಲಿದೆ. ಸರ್ಕಾರ ಅಸ್ತಿತ್ವಕ್ಕೆ ಬಂದ 100 ದಿನಗಳಲ್ಲೇ ನುಡಿದಂತೆ ನಡೆದಿದೆ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

40 ಪರ್ಸೆಂಟ್ ಕಮಿಷನ್ ಸೇರಿದಂತೆ ಕಾಂಗ್ರೆಸ್ ಆದೇಶಿಸಿರುವ ತನಿಖೆಗಳ ಬಗ್ಗೆ ಬಿಜೆಪಿ ನಾಯಕರಿಗೆ ಭಯವಿದೆ. ಅದಕ್ಕಾಗಿಯೇ ತನಿಖೆಗೆ ವಿರೋಧಿಸುತ್ತಿದ್ದಾರೆ. ಟೀಕೆ ಮಾಡುತ್ತಿದ್ದಾರೆ. ಅವರು ಸರಿಯಾಗಿ ನಡೆದುಕೊಂಡಿದ್ದರೆ ಭಯಪಡುವ ಅಗತ್ಯವೇನಿದೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷಕ್ಕೆ ಯಾರನ್ನೂ ಕರೆಯುತ್ತಿಲ್ಲ. ಬಿಜೆಪಿ, ಜೆಡಿಎಸ್ ನಾಯಕರೇ ಪಕ್ಷದ ತತ್ವ, ಸಿದ್ಧಾಂತ ಒಪ್ಪಿ ಬರುತ್ತಿದ್ದಾರೆ. ಬೇರೆ ಪಕ್ಷದ ಕೆಲ ನಾಯಕರು ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ. ಶಾಸಕರು, ಮಾಜಿ ಶಾಸಕರ ಸೇರ್ಪಡೆ ಕುರಿತು ದೆಹಲಿ ವರಿಷ್ಠರು ತೀರ್ಮಾನ ಕೈಗೊಳ್ಳುತ್ತಾರೆ ಎಂದರು.

ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ನೂರು ದಿನಗಳ ದೋಷಾರೋಪಪಟ್ಟಿ ಬಿಡುಗಡೆ ಮಾಡುವ ಮೊದಲು ಪ್ರತಿಪಕ್ಷದ ನಾಯಕರನ್ನು ಆಯ್ಕೆ ಮಾಡಲಿ. ಕಾಂಗ್ರೆಸ್ ಈಗಾಗಲೇ ಲೋಕಸಭಾ ಚುನಾವಣೆಯ ಸಿದ್ಧತೆ ನಡೆಸಿದೆ. ಪ್ರತಿ ಲೋಕಸಭೆ ಕ್ಷೇತ್ರಕ್ಕೆ ಒಬ್ಬ ಸಚಿವರು ಹಾಗೂ ಮುಖಂಡರಿಗೆ ಉಸ್ತುವಾರಿ ನೀಡಲಾಗುತ್ತದೆ.ಅವರು ನೀಡುವ ವರದಿ ಆಧಾರದಲ್ಲಿ ಅಭ್ಯರ್ಥಿ ಆಯ್ಕೆ ನಡೆಯಲಿದೆ ಎಂದು ಹೇಳಿದರು.

ಮೋದಿಗೆ 'ಸುಳ್ಳಿನ ಆಸ್ಕರ್'

ಪ್ರಧಾನಿ ಮೋದಿ ಅವರು ಒಂಬತ್ತು ವರ್ಷ ಅಧಿಕಾರ ನಡೆಸಿದರೂ ವಿದೇಶದಿಂದ ಕಪ್ಪು ಹಣ ತರಲಿಲ್ಲ, ಎರಡು ಕೋಟಿ ಉದ್ಯೋಗ ಸೃಷ್ಟಿಸಲಿಲ್ಲ. ರೈತರ ಆದಾಯ ದ್ವಿಗುಣ ಮಾಡಲಿಲ್ಲ. ಸುಳ್ಳಿಗೆ ಆಸ್ಕರ್ ಪ್ರಶಸ್ತಿ ಇಟ್ಟರೆ ಅದು ನರೇಂದ್ರ ಮೋದಿ ಅವರಿಗೆ ಸಲ್ಲುತ್ತದೆ ಎಂದು ಟೀಕಿಸಿದರು.

ನೀಟ್ ಪಿ.ಜಿ ಪರೀಕ್ಷೆ: ಪ್ರವರ್ಗ ಬದಲಾವಣೆಗೆ ಅವಕಾಶ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಗೆ (ನೀಟ್-ಪಿಜಿ) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಪ್ರವರ್ಗವನ್ನು ಸರಿಯಾಗಿ ನಮೂದಿಸುವಲ್ಲಿ ತಪ್ಪೆಸಗಿದ್ದ ವಿದ್ಯಾರ್ಥಿನಿಯ ನೆರವಿಗೆ ಮುಂದಾ ಗಿರುವ ಹೈಕೋರ್ಟ್, ಆಕೆಯ ಪ್ರವರ್ಗದ ಹೆಸರು ಬದಲಾಯಿಸಲು ಅವಕಾಶ ಕಲ್ಪಿಸಿದೆ.

ಈ ಸಂಬಂಧ ಡಾ. ಲಕ್ಷ್ಮೀ ಪಿ ಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ್ ಎ ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಅರ್ಜಿ ನಮೂನೆ ಕಲಂ 7ರಲ್ಲಿ 'ಜನರಲ್' ಎಂದು ನಮೂದಿಸಿದ್ದನ್ನು 'ಒಬಿಸಿ' ಎಂದು ತಿದ್ದುಪಡಿ ಮಾಡಲು ಅವಕಾಶ ನೀಡುವಂತೆ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ ನಿರ್ದೇಶಿಸಿದೆ. ಒಬಿಸಿಯ ಜ್ಯೇಷ್ಠತಾ ಪಟ್ಟಿಯಲ್ಲಿ ಪರಿಗಣಿಸಿ ಹೆಸರು ಸೇರ್ಪಡೆ ಮಾಡುವಂತೆಯೂ ಆದೇಶಿಸಿದೆ.

ಸಂಯುಕ್ತ ಸ್ವಕುಳಸಾಳಿ ಸಂಘ, ಸಂಯುಕ್ತ ಸ್ವಕುಳಸಾಳಿ ಮಹಿಳಾ ಮಂಡಳಿ, ಯುವ ಸ್ವಕುಳ ಸಂಯುಕ್ತ ಸ್ವಕುಳಸಾಳಿ ಕ್ರೆಡಿಟ್ ಕೋಆಪ್ ಸೊಸೈಟಿ ಜಂಟಿಯಾಗಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ 'ಭಗವಾನ್ ಜಿಹ್ವೇಶ್ವರ ಜಯಂತಿ ಆಚರಣೆ ಹಾಗೂ ಸಂಘದ 17ನೇ ವಾರ್ಷಿಕ ಸಭೆ' ಕಾರ್ಯಕ್ರಮದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. (ನಿಂತವರು ಎಡದಿಂದ) ಸಂಯುಕ್ತ ಸ್ವಕುಳಸಾಳಿ ಸಂಘದ ಅಧ್ಯಕ್ಷ ಪ್ರದೀಪ್ ರೋಖಡೆ, ಸಾಂಸ್ಕೃತಿಕ ಕಾರ್ಯದರ್ಶಿ ಸುರೇಶ್ ಸರೋದೆ, ಸಮಾಜ ಸೇವಕ ಎಚ್.ಪಿ ಮಧುಕರ ವಾನ್ಜರೆ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮದ್ಭಗವದ್ಗೀತಾ ಗುರುಕುಲಾಶ್ರಮ ಮಹಾಸಂಸ್ಥಾನದ ಪೀಠಾಧಿಪತಿ ರಮಣಾನಂದಗಿರಿ ಸ್ವಾಮೀಜಿ, ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಸಂಸ್ಥಾಪನಾ ಅಧ್ಯಕ್ಷ ಎಂ.ಡಿ ಲಕ್ಷ್ಮಿನಾರಾಯಣ, ವಿಧಾನ ಪರಿಷತ್ತಿನ ಸದಸ್ಯೆ ಉಮಾಶ್ರೀ, ಸಂಘದ ಮಹಿಳಾ ಮಂಡಳಿ ಪೋಷಕಿ ಪುಷ್ಪ ಕ್ಷೀರಸಾಗರ, ಮಹಿಳಾ ಮಂಡಳಿ ಪ್ರಧಾನ ಕಾರ್ಯದರ್ಶಿ ಜ್ಯೋತಿ ಸರೋದೆ, ಮಹಿಳಾ ಮಂಡಳಿ ಅಧ್ಯಕ್ಷೆ ಜಲಜಾ ಸವ್ವಾ ಸೇರೆ ಮತ್ತು ಗುಣಾಯತಿ ಶ್ವೇತಾ ಮಧುಕರ್ ಶೇಂದ್ರೆ ಇದ್ದರು ಪ್ರಜಾವಾಣಿ ಚಿತ್ರ

ಅನಂತನಾಗ್ ಅಭಿನಂದನೆ ಸೆ.3ಕ್ಕೆ



ಅನಂತನಾಗ್

ಮಂಗಳೂರು: 'ನಟ ಅನಂತನಾಗ್ ಅವರಿಗೆ ಸೆ. 4ರಂದು 75ರ ಸಡಗರ. ಈ ಹಿನ್ನೆಲೆಯಲ್ಲಿ ಅನಂತನಾಗ್ ಉಪಸ್ಥಿತಿಯಲ್ಲಿ ಸೆ.3ರಂದು ನಗರದಲ್ಲಿ ದಿನವಿಡೀ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಅನಂತನಾಗ್ ಅಭಿನಂದನಾ ಸಮಿತಿ ಸಂಚಾಲಕ ಗೋಪಿನಾಥ್ ಭಟ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಅಂದು ಬೆಳಿಗ್ಗೆ 9.30ಕ್ಕೆ ಅನಂತನಾಗ್ ದಂಪತಿಯನ್ನು ಡೊಂಗರಕೇರಿ ಕೆನರಾ ಪ್ರೌಢಶಾಲೆ ಆವರಣದಿಂದ ಸಾರೋಟಿನಲ್ಲಿ ಟಿ.ವಿ. ರಮಣ ಪೈ ಸಭಾಂಗಣಕ್ಕೆ ಕರೆತರಲಾಗುವುದು. ಹುಲಿವೇಷ, ಚೆಂಡೆ, ವಾದ್ಯ, ಕೊಂಬು ಮೆರವಣಿಗೆಯ ಆಕರ್ಷಣೆಯಾಗಿದೆ' ಎಂದರು.

10 ಗಂಟೆಗೆ ಉದ್ಘಾಟನೆ, ನಂತರ ರಂಗಭೂಮಿ, ಸಿನಿಮಾ ದಿಗ್ಗಜರೊಂದಿಗೆ ಸಂವಹನ ನಡೆಯಲಿದೆ. ಮಧ್ಯಾಹ್ನ 2 ಗಂಟೆಯಿಂದ ಮಣಿಕಾಂತ್ ಕದ್ರಿ, ರವೀಂದ್ರ ಪ್ರಭು ಹಾಗೂ ತಂಡದಿಂದ ಅನಂತನಾಗ್ ನಟನೆಯ ಚಿತ್ರದ ಆಯ್ದ ಜನಪ್ರಿಯ ಹಾಡುಗಳು, ನೃತ್ಯ ವೈವಿಧ್ಯದ ನಂತರ ಸಂಜೆ ಸನ್ಮಾನ ಕಾರ್ಯಕ್ರಮ ಇರುತ್ತದೆ.

ಚಿತ್ರನಟ ರಿಷಬ್ ಶೆಟ್ಟಿ, ಕಲಾವಿದ ದೇವಿದಾಸ್ ಕಾಪಿಕಾಡ್, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಶಾಸಕ ವೇದವ್ಯಾಸ ಕಾಮತ್ ಭಾಗವಹಿಸುವರು ಎಂದರು.

ಬೆದರಿಕೆ ಪತ್ರ: ದಾವಣಗೆರೆಯಲ್ಲಿ ಶೋಧ

ಬೆಂಗಳೂರು: ಸಾಹಿತಿ ಹಾಗೂ ಹೋರಾಟಗಾರರಿಗೆ ಜೀವ ಬೆದರಿಕೆ ಪತ್ರಗಳು ಬಂದಿದ್ದ ಪ್ರಕರಣದ ತನಿಖೆಯನ್ನು ಸಿಸಿಬಿ ಪೊಲೀಸರು ಚುರುಕುಗೊಳಿಸಿದ್ದಾರೆ. ಎಸಿಪಿ ನೇತೃತ್ವದ ತಂಡ, ಹಲವು ಪುರಾವೆ ಸಂಗ್ರಹಿಸಿ ಆರೋಪಿಗಳನ್ನು ಪತ್ತೆ ಮಾಡುತ್ತಿದ್ದಾರೆ.

ಸಾಹಿತಿಗಳಾದ ಕುಂ. ವೀರಭದ್ರಪ್ಪ, ಬಿ.ಎಲ್. ವೇಣು, ಬಂಜಗೆರೆ ಜಯಪ್ರಕಾಶ್, ಬಿ.ಟಿ. ಲಲಿತಾ ನಾಯಕ್, ವಸುಂಧರಾ ಭೂಪತಿ ಸೇರಿದಂತೆ ಹಲವರಿಗೆ ಬೆದರಿಕೆ ಪತ್ರಗಳು ಬಂದಿದ್ದವು. ಈ ಬಗ್ಗೆ ದಾಖಲಾಗಿದ್ದ ಪ್ರಕರಣಗಳ ತನಿಖೆಯನ್ನು ಸಿಸಿಬಿಗೆ ವಹಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಅಲೋಕ್ ಮೋಹನ್ ಇತ್ತೀಚೆಗೆ ಆದೇಶ ಹೊರಡಿಸಿದ್ದರು.

ದಾವಣಗೆರೆಯಲ್ಲಿ ಶೋಧ: ಕೊಟ್ಟೂರು, ಚಿತ್ರದುರ್ಗ, ಹಾರೋಹಳ್ಳಿ, ಬೆಂಗಳೂರಿನ ಸಂಜಯನಗರ ಹಾಗೂ ಬಸವೇಶ್ವರನಗರ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳ ಕಡತಗಳನ್ನು ಸಿಸಿಬಿ ಪೊಲೀಸರು ಈಗಾಗಲೇ ತಮ್ಮ ಸುಪರ್ದಿಗೆ ಪಡೆದುಕೊಂಡಿದ್ದಾರೆ.

'ಬೆದರಿಕೆ ಪತ್ರಗಳನ್ನು ಪರಿಶೀಲಿಸಲಾಗುತ್ತಿದೆ. ದಾವಣಗೆರೆಯಲ್ಲಿರುವ ಆರೋಪಿಯೊಬ್ಬ, ಬೆದರಿಕೆ ಪತ್ರ ಕಳುಹಿಸಿರುವ ಮಾಹಿತಿ ಇದೆ. ಹೀಗಾಗಿ, ದಾವಣಗೆರೆಯಲ್ಲಿ ಶೋಧ ನಡೆಸಲಾಗುತ್ತಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ದಾವಣಗೆರೆಯ ಅಕ್ಕ-ಪಕ್ಕದಲ್ಲಿರುವ ರಾಣೆಬೆನ್ನೂರು, ಹರಿಹರ ಹಾಗೂ ಇತರೆ ನಗರಗಳ ಅಂಚೆ ಕಚೇರಿಗಳ ಮೂಲಕ ಪತ್ರಗಳು ಬಂದಿವೆ. ದಾವಣಗೆರೆಯಲ್ಲಿರುವ ಆರೋಪಿ, ತನ್ನ ಸುಳಿವು ಸಿಗಬಾರದೆಂದು ಬೇರೆಡೆ ಹೋಗಿ ಪತ್ರ ಕಳುಹಿಸಿರುವ ಅನುಮಾನವಿದೆ' ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಸಪ್ತರಾತ್ರೋತ್ಸವ: ಶಾಖೋತ್ಸವ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಬೆಳಿಗ್ಗೆ 6ರಿಂದ

ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಪಂಚರಾತ್ರೋತ್ಸವ: ಧಾನ್ಯಲಕ್ಷ್ಮೀ ಪೂಜೆ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ, ಬೆಳಿಗ್ಗೆ 9

ವಚನ ಶ್ರಾವಣ: ವಚನ ವಾಚನ: ಶಾಲಾ ವಿದ್ಯಾರ್ಥಿಗಳಿಂದ ವಚನ ಗಾಯನ: ಕಲಾವತಿ ಬೇವಿನಮರದ, ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಶಿವಲಿಂಗೇಗೌಡ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಸಹನ ಇಂಟರ್ ನ್ಯಾಷನಲ್ ಹೈಟೆಕ್ ಸ್ಕೂಲ್, #25/26, ವೀರಭದ್ರೇಶ್ವರ ನಗರ, ಅಂದ್ರಹಳ್ಳಿ, ಬೆಳಿಗ್ಗೆ 9.30

ಸಂಸ್ಥಾಪನಾ ದಿನ: ಮುಖ್ಯ ಅತಿಥಿ: ಡಾ.ಬಿ.ಎಸ್. ಶ್ರೀನಾಥ್, ಅಧ್ಯಕ್ಷತೆ: ಟಿ. ಸೋಮಶೇಖರ್, ಭಾರತಿ ತುಮ್ಮಲ, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಅಕಾಡೆಮಿ, ಕಲ್ಯಾಣ ನಗರ, ಬೆಳಿಗ್ಗೆ 11

ಹನಿಯೂರು ಚಂದ್ರೇಗೌಡ ಅವರ 'ನೂರೊಂದು ಜನಪದ ಹಾಡುಗಬ್ಬಗಳು' ಹಾಗೂ 'ವಿಚಾರ-ವಿಹಾರ' ಕೃತಿ ಬಿಡುಗಡೆ ಮತ್ತು ಜಾನಪದ ಸಂಭ್ರಮ ಸಮಾರಂಭ: ಪುಸ್ತಕ ಬಿಡುಗಡೆ: ನಿರ್ಮಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ಸೌಮ್ಯನಾಥ ಸ್ವಾಮೀಜಿ, ಆಯೋಜನೆ: ಒಕ್ಕಲಿಗ ಸ್ವಯಂ ಸೇವಕರ ಸಂಘ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಸಂಜೆ 5



ನಿರ್ಮಲಾ ನಂದನಾಥ ಸ್ವಾಮೀಜಿ

ಗುರುರಾಘವೇಂದ್ರ ಗುರುಸಾರ್ವಭೌಮರ 352ನೇ ವರ್ಷದ ಆರಾಧನಾ ಮಹೋತ್ಸವ: ದಾಸವಾಣಿ: ಶ್ರೀನಿಧಿ ಆಚಾರ್ಯ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳವರ ಮಠ, ಸೀತಾಪತಿ ಅಗ್ರಹಾರ, ಸಂಜೆ 6

'55 ನಿಮಿಷದ ಒಂದು ಪ್ರೇಮ ಕಥೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜ್‌ಗುರು, ಆಯೋಜನೆ: ರಂಗಪಯಣ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಎಂ.ಜೆ. ಶ್ರೀನಿವಾಸ್ ಅಯ್ಯಂಗಾರ್ ಶತಮಾನೋತ್ಸವ ಸಮಾರಂಭದ ಪ್ರಯುಕ್ತ ಸಂಗೀತ ಕಛೇರಿ: ಎಂ.ಕೆ. ಸರಸ್ವತಿ, ರಾಜ್ಯಶ್ರೀ ಜೋಸ್ಯರ್, ಐಶ್ವಯ್ಯ ಮಣಿಕರ್ಣಿಕೆ, ಫಣೀಂದ್ರ ಭಾಸ್ಕರ್, ಲತಾ ರಾಮಾಚಾರ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

'ಎ ಹಿಂದು ಇನ್ ಆಕ್ಸ್‌ಫರ್ಡ್' ಪುಸ್ತಕ ಬಿಡುಗಡೆ: ಟಿ.ವಿ. ಮೋಹನದಾಸ್ ಪೈ, ರಶ್ಮಿ ಸಾಮಂತ್, ಆಯೋಜನೆ: ಥಿಂಕರ್ಸ್ ಫೋರಮ್, ಸ್ಥಳ: ಡಾ.ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 6.30

ಹರಿದಾಸ ವೈಭವ: ಗಾಯನ: ಚಾಂದಿನಿ ಗರ್ತಿಕೆರೆ, ವಾದ್ಯ ಸಹಕಾರ: ಮೈಸೂರು ಸಂಜೀವ್ ಕುಮಾರ್, ಮುರಳಿ ನಾರಾಯಣರಾವ್, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಸಂಜೆ 7

ಲಂಚ: ಹೆಡ್‌ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಪ ಪಟ್ಟಿಯಿಂದ ಹೆಸರು ಕೈಬಿಡುವುದಕ್ಕೆ ಲಂಚ ಪಡೆಯುತ್ತಿದ್ದ ವೇಳೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೈಬರ್ ಪೊಲೀಸ್ ಠಾಣೆ ಹೆಡ್‌ಕಾನ್‌ಸ್ಟೆಬಲ್ ಎಂ.ಲೋಕೇಶ್ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ..

ಲಂಚಕ್ಕೆ ಬೇಡಿಕೆಯಿಟ್ಟ ಸಂಬಂಧ ಕಾಮಾಕ್ಷಿಪಾಳ್ಯದ ನಿವಾಸಿ ರೂಪಾ ಅವರು ಲೋಕಾಯುಕ್ತ ನಗರ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ, ಜಾತಿ ನಿಂದನೆ ಹಾಗೂ ಮಾಹಿತಿ ತಂತ್ರಜ್ಞಾನದ ಅಡಿ ದೂರುದಾರರ ಪುತ್ರನ ವಿರುದ್ಧ ಪ್ರಕರಣ ದಾಖಲಾಗಿತ್ತು. ಆತ ಸದ್ಯ ಜೈಲಿನಲ್ಲಿದ್ದಾನೆ. ಆರೋಪಿ ಹೆಸರನ್ನು ಆರೋಪ ಪಟ್ಟಿಯಿಂದ ತೆಗೆಯುವುದು, ನ್ಯಾಯಾಲಯದಿಂದ ಜಾಮೀನು ದೊರೆಯುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಹೆಡ್‌ಕಾನ್‌ಸ್ಟೆಬಲ್ ₹ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ₹ 25 ಸಾವಿರ ಪಡೆಯುವಾಗ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೈಬರ್ ಪೊಲೀಸ್ ಠಾಣೆ ಹೆಡ್‌ಕಾನ್‌ಸ್ಟೆಬಲ್ ಎಂ.ಲೋಕೇಶ್ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದರು.

ಅಪರಾಧ ಸುದ್ದಿ

ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಹರಿದು ಮಹಿಳೆ ಸಾವು

ಬೆಂಗಳೂರು: ಬಿಎಂಟಿಸಿ ಎಲೆಕ್ಟ್ರಿಕ್ ಬಸ್ಸಿನ ಚಕ್ರ ಕಾಲಿನ ಮೇಲೆ ಹರಿದು ತೀವ್ರ ಗಾಯಗೊಂಡಿದ್ದ ಶಿವಮ್ಮ (57) ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಂಗಳವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

‘ಕೆಂಗೇರಿ ಬಸ್ ನಿಲ್ದಾಣದಲ್ಲಿ ಜೂನ್ 9ರಂದು ಸಂಭವಿಸಿದ್ದ ಅಪಘಾತದಲ್ಲಿ ಶಿವಮ್ಮ ಗಾಯಗೊಂಡಿದ್ದರು’ ಎಂದು ಪೊಲೀಸರು ಹೇಳಿದರು.

ಎಡ ಕಾಲಿನ ಮೇಲೆ ಹರಿದಿದ್ದ ಚಕ್ರ: ‘ಶಿವಮ್ಮ ಅವರು ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ನಲ್ಲಿ ಕೆಂಗೇರಿ ನಿಲ್ದಾಣಕ್ಕೆ ಬಂದಿದ್ದರು. ಪ್ಲಾಟ್ ಫಾರಂ 2ರ ಬಳಿ ಬಸ್‌ನಿಂದ ಇಳಿಯುತ್ತಿದ್ದರು. ಅದೇ ವೇಳೆ ಚಾಲಕ, ನಿರ್ಲಕ್ಷ್ಯದಿಂದ ಬಸ್ ಮುಂದಕ್ಕೆ ಚಲಾಯಿಸಿದ್ದ. ಶಿವಮ್ಮ ಕೆಳಗೆ ಬಿದ್ದಿದ್ದರು. ತೀವ್ರ ರಕ್ತಸ್ರಾವ ಉಂಟಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದರು.

ಬಿಬಿಎಂಪಿ ಎಇಇ ಬಂಧನ

ಬೆಂಗಳೂರು: ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ಕಡತಕ್ಕೆ ಸಹಿ ಮಾಡಲು ₹ 10,000 ಲಂಚ ಪಡೆಯುತ್ತಿದ್ದ ಬಿಬಿಎಂಪಿ ಚಾಮರಾಜಪೇಟೆ ವಾರ್ಡ್‌ನ ಘನ ತ್ಯಾಜ್ಯ ವಿಲೇವಾರಿ ವಿಭಾಗದ ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಶಿವಣ್ಣ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಘನ ತ್ಯಾಜ್ಯ ಸಂಗ್ರಹ ಮತ್ತು ವಿಲೇವಾರಿ ಕೆಲಸದ ಗುತ್ತಿಗೆ ಪಡೆದಿರುವ ಡಿ.ಜಿ. ವೆಂಕಟೇಶ್ ಅವರಿಗೆ ಬಿಲ್ ಪಾವತಿ ಬಾಕಿ ಇತ್ತು. ಬಾಕಿ ಮೊತ್ತ ಪಾವತಿಸುವಂತೆ ಅವರು ಎಇಇ ಅವರಲ್ಲಿ ಮನವಿ ಮಾಡಿದ್ದರು. ಬಿಲ್ ಪಾವತಿಯ ಕಡತಕ್ಕೆ ಸಹಿ ಮಾಡಲು ₹ 50,000 ಲಂಚ ನೀಡುವಂತೆ ಶಿವಣ್ಣ ಬೇಡಿಕೆ ಇಟ್ಟಿದ್ದರು. ಈ ಕುರಿತು ವೆಂಕಟೇಶ್ ಅವರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು. ಮಂಗಳವಾರ ಮಧ್ಯಾಹ್ನ ವೆಂಕಟೇಶ್ ಅವರಿಂದ ₹ 10,000 ಲಂಚ ಪಡೆಯುತ್ತಿದ್ದ ವೇಳೆ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು, ಶಿವಣ್ಣ ಅವರನ್ನು ಬಂಧಿಸಿದ್ದಾರೆ. ಆರೋಪಿಯ ವಿಚಾರಣೆ ನಡೆಸುತ್ತಿದ್ದು, ಪ್ರಾಥಮಿಕ ತನಿಖೆಯ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಲೋಕಾಯುಕ್ತದ ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್‌ಪಿ ಕೆ.ವಿ. ಅಶೋಕ್ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಶ್ರೀಕಾಂತ್, ಶಂಕರಪ್ಪ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು.

ಸುದ್ದಿ 2 ನಿಮಿಷ

ಬಸ್ ಗುದ್ದಿ ವ್ಯಾಪಾರಿ ಸಾವು

ಬೆಂಗಳೂರು: ಖಾಸಗಿ ಬಸ್ ಗುದ್ದಿ ತರಕಾರಿ ವ್ಯಾಪಾರಿ ಮಂಜುನಾಥ್ (28) ಮೃತಪಟ್ಟಿದ್ದು, ಈ ಸಂಬಂಧ ಸಿಟಿ ಮಾರ್ಕೆಟ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪಂತರಪಾಳ್ಯದ ನಿವಾಸಿ ಮಂಜುನಾಥ್, ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ’ ಎಂದು ಸಿಟಿ ಮಾರ್ಕೆಟ್ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಚಾಲಕ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ರಸ್ತೆ ದಾಟುತ್ತಿದ್ದ ಮಂಜುನಾಥ್ ಅವರಿಗೆ ಬಸ್ ಗುದ್ದಿತ್ತು. ತೀವ್ರ ಗಾಯಗೊಂಡಿದ್ದರಿಂದ ಮಂಜುನಾಥ್ ಮೃತಪಟ್ಟಿದ್ದಾರೆ. ಅಪಘಾತಕ್ಕೆ ಕಾರಣವಾಗಿರುವ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ಚಾಲಕ ಅಸ್ವಸ್ಥ: ಉರುಳಿದ ಬಿಎಂಟಿಸಿ ವೊಲ್ವೊ ಬಸ್



ಬೆಂಗಳೂರು: ಪ್ಯಾಲೇಸ್ ಗುಟ್ಟಹಳ್ಳಿ ಮೇಲ್ಸೇತುವೆ ಬಳಿಯ ರಸ್ತೆ ವಿಭಜಕಕ್ಕೆ ಬಿಎಂಟಿಸಿ ವೊಲ್ವೊ ಬಸ್ ಡಿಕ್ಕಿ ಹೊಡೆದು ಉರುಳಿಬಿದ್ದಿದ್ದು, ಚಾಲಕ ಹಾಗೂ 13 ಪ್ರಯಾಣಿಕರು ಗಾಯಗೊಂಡಿದ್ದಾರೆ.

‘ಸೋಮವಾರ ರಾತ್ರಿ 12 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ಚಾಲಕ ಹಾಗೂ 13 ಪ್ರಯಾಣಿಕರಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ. ಎಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಹೋಗಿದ್ದಾರೆ’ ಎಂದು ಸದಾಶಿವನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಎಚ್‌ಎಸ್‌ಆರ್ ಲೇಔಟ್‌ನತ್ತ ಬಸ್ (ಕೆಎ 57 ಎಫ್ 0237) ಹೊರಟಿತ್ತು. ಮಾರ್ಗಮಧ್ಯೆಯೇ ಚಾಲಕ ಅಸ್ವಸ್ಥಗೊಂಡಿದ್ದರು. ಪ್ರಜ್ಞೆ ತಪ್ಪುವ ಸ್ಥಿತಿಗೆ ತಲುಪಿದ್ದರು. ಪ್ಯಾಲೇಸ್ ಗುಟ್ಟಹಳ್ಳಿ ಮೇಲ್ಸೇತುವೆ ಬಳಿ ರಸ್ತೆ ಪಕ್ಕದಲ್ಲಿ ಬಸ್ ನಿಲ್ಲಿಸಲು ಯತ್ನಿಸಿದ್ದರು. ಆದರೆ, ಅದು ಸಾಧ್ಯವಾಗಿರಲಿಲ್ಲ.’

‘ರಸ್ತೆ ವಿಭಜಕಕ್ಕೆ ಗುದ್ದಿದ್ದ ಬಸ್, ಉರುಳಿ ಬಿದ್ದಿತ್ತು. ಗಾಯಾಳುಗಳನ್ನು ಸ್ಥಳೀಯರ ಸಹಾಯದಿಂದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಪಘಾತದಲ್ಲಿ ಬಸ್ ಜಖಂಗೊಂಡಿದೆ’ ಎಂದು ತಿಳಿಸಿದರು.

‘ಸಿಇಎನ್‌ಎಸ್’ ವಿಜ್ಞಾನಿ ಕಾರಿಗೆ ಕಲ್ಲೆಸೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾನೊ ಮತ್ತು ಸಾಫ್ಟ್ ಮ್ಯಾಟರ್ ಸೈನ್ಸಸ್ ಕೇಂದ್ರದ (ಸಿಇಎನ್‌ಎಸ್) ವಿಜ್ಞಾನಿ ಅಶುತೋಷ್ ಕುಮಾರ್ ಸಿಂಗ್ ಅವರ ಕಾರಿಗೆ ದುಷ್ಕರ್ಮಿಗಳು ಕಲ್ಲೆಸೆದಿದ್ದು, ಈ ಸಂಬಂಧ ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಗಸ್ಟ್ 24ರಂದು ನಡೆದಿರುವ ಘಟನೆ ಸಂಬಂಧ ಅಶುತೋಷ್ ಕುಮಾರ್ ಸಿಂಗ್ ಅವರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಅಶುತೋಷ್, ಕೆಲಸ ಮುಗಿಸಿಕೊಂಡು ತಮ್ಮ ಕ್ವಿಡ್ ಕಾರಿನಲ್ಲಿ ರಾವುತನಹಳ್ಳಿ ಮುಖ್ಯ-ರಸ್ತೆಯಲ್ಲಿ ಹೊರಟಿದ್ದರು. ವೃತ್ತದಲ್ಲಿ ನಿಂತಿದ್ದ ನಾಲ್ವರು, ಕೈ ಮಾಡಿ ಕಾರು ಅಡ್ಡಗಟ್ಟಲು ಮುಂದಾಗಿದ್ದರು. ಆದರೆ, ದೂರುದಾರ ಕಾರು ನಿಲ್ಲಿಸಿರಲಿಲ್ಲ.’

‘ನಾಲ್ವರೂ ಕಾರು ಬೆನ್ನಟ್ಟಿದ್ದರು. ಮಾರ್ಗಮಧ್ಯೆಯೇ ಕಾರಿಗೆ ಕಲ್ಲು ಹೊಡೆದಿದ್ದರು. ಇದರಿಂದಾಗಿ ಕಾರಿನ ಹಿಂಭಾಗದ ಗಾಜು ಒಡೆದಿತ್ತು. ಭಯಗೊಂಡ ಅಶುತೋಷ್, ವೇಗವಾಗಿ ಕಾರು ಚಲಾಯಿಸಿಕೊಂಡು ಸ್ಥಳದಿಂದ ಹೊರಟು ಹೋಗಿದ್ದರು’ ಎಂದು ಮೂಲಗಳು ಹೇಳಿವೆ.

‘ಅಶುತೋಷ್ ಅವರು ಸಿಇಎನ್‌ಎಸ್‌ನಲ್ಲಿ ಸಂಶೋಧನೆಯಲ್ಲಿ ತೊಡಗಿದ್ದಾರೆ. ಕಲ್ಲೆಸೆತ ಘಟನೆಗೆ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಅಶುತೋಷ್ ಅವರ ಹೇಳಿಕೆ ಆಧರಿಸಿ ತನಿಖೆ ಮುಂದುವರಿಸಲಾಗಿದೆ. ಘಟನಾ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ರೌಡಿ ಅರ್ಷದ್ ಖಾನ್

ಶಂಕಿತ ಜುನೇದ್‌ನ ಸಹಚರ ಬಂಧನ

ಪ್ರಜಾವಾಣಿ ವಾರ್ತೆ

ಅರ್ಷದ್ ಖಾನ್

ಬೆಂಗಳೂರು: ಸ್ಫೋಟಕ್ಕೆ ಸಂಚು ರೂಪಿಸಿದ್ದ ಶಂಕಿತ ಜುನೇದ್ ಅಹಮ್ಮದ್‌ನ ಸಹಚರನಾಗಿದ್ದ ರೌಡಿ ಮೊಹಮ್ಮದ್ ಅರ್ಷದ್ ಖಾನ್‌ನನ್ನು ಆರ್‌.ಟಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಆರು ಶಂಕಿತರನ್ನು ಸಿಸಿಬಿ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಪ್ರಮುಖ ಆರೋಪಿ ಎನ್ನಲಾದ ಜುನೇದ್ ತಲೆಮರೆಸಿಕೊಂಡಿದ್ದಾನೆ. ಇದರ ಬೆನ್ನಲ್ಲೇ, ಆತನ ಸಹಚರನನ್ನು ಪೊಲೀಸರು ಸೆರೆ ಹಿಡಿದಿದ್ದಾರೆ.

‘ಆರ್‌.ಟಿ. ನಗರ ನಿವಾಸಿ ಮೊಹಮ್ಮದ್ ಅರ್ಷದ್ ಖಾನ್, ಅಪರಾಧ ಹಿನ್ನೆಲೆಯುಳ್ಳವ. ಕೊಲೆ, ಕೊಲೆಗೆ ಯತ್ನ, ಸುಲಿಗೆ, ಜೀವ ಬೆದರಿಕೆ ಸೇರಿದಂತೆ 16 ಪ್ರಕರಣಗಳಲ್ಲಿ ಈತ ಆರೋಪಿ. ಆರ್‌.ಟಿ.ನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿದೆ. ಕೊಲೆ ಯತ್ನ ಪ್ರಕರಣದಲ್ಲಿ ಈತನನ್ನು ಸದ್ಯ ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಯನ್ನು ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ 5 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ತಿಳಿಸಿವೆ.

4 ವರ್ಷಗಳಿಂದ ಗೈರು: ‘ಆರೋಪಿ ವಿರುದ್ಧ ದಾಖಲಾಗಿರುವ 16 ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. 4 ವರ್ಷಗಳಿಂದ ವಿಚಾರಣೆಗೆ ಆರೋಪಿ ಗೈರಾಗುತ್ತಿದ್ದ. ಈತನ ವಿರುದ್ಧ 8 ಜಾಮೀನು ರಹಿತ ವಾರಂಟ್ ಜಾರಿಯಾಗಿದ್ದವು’ ಎಂದು ಹೇಳಿವೆ.

ಆತ್ಮಹತ್ಯೆಗೆ ಯತ್ನ, ಬೆನ್ನಟ್ಟಿ ಸೆರೆ: ‘ರೌಡಿ ಅರ್ಷದ್ ಖಾನ್, ಆರ್‌.ಟಿ. ನಗರದ ಮನೆಯಲ್ಲಿರುವ ಮಾಹಿತಿ ಬಂದಿತ್ತು. ಪಿಎಸ್‌ಐ ವಿನೋದ್ ನೇತೃತ್ವದ ತಂಡ, ಸ್ಥಳಕ್ಕೆ ಹೋಗಿ ರೌಡಿಯನ್ನು ಬಂಧಿಸಲು ಮುಂದಾಗಿತ್ತು. ಸಿಬ್ಬಂದಿಯನ್ನೇ ಬೆದರಿಸಿದ್ದ ರೌಡಿ, ಬ್ಲೇಡ್‌ನಿಂದ ಕತ್ತು ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕತ್ತಿನ ಚರ್ಮಕ್ಕೆ ಮಾತ್ರ ಬ್ಲೇಡ್ ತಗುಲಿ ರಕ್ತ ಸೋರುತ್ತಿತ್ತು. ಏನು ಮಾಡುವುದಿಲ್ಲವೆಂದು ಸಿಬ್ಬಂದಿ ಸಮಾಧಾನಪಡಿಸಿದ್ದರು. ಬ್ಲೇಡ್ ಸ್ಥಳದಲ್ಲೇ ಎಸೆದು ಅರ್ಷದ್ ಖಾನ್ ಪರಾರಿಯಾಗಲು ಯತ್ನಿಸಿದ್ದ. ಕಟ್ಟಡವೊಂದರ ಎರಡನೇ ಮಹಡಿಯಿಂದ ಜಿಗಿದಿದ್ದ. ಸಿಬ್ಬಂದಿ ಈತನನ್ನು ಬೆನ್ನಟ್ಟಿ ಹಿಡಿದಿದ್ದಾರೆ' ಎಂದು ಮೂಲಗಳು ಹೇಳಿವೆ.

ಜುನೇದ್ ಜೊತೆ ಒಡನಾಟ: ‘2017ರಲ್ಲಿ ನಡೆದಿದ್ದ ರಿಯಲ್ ಎಸ್ಟೇಟ್ ಉದ್ಯಮಿ ನೂರ್ ಅಹ್ಮದ್ ಕೊಲೆ ಪ್ರಕರಣದಲ್ಲಿ ಅರ್ಷದ್ ಖಾನ್ ಭಾಗಿಯಾಗಿದ್ದ. ಇದೇ ಪ್ರಕರಣದ ಪ್ರಮುಖ ಆರೋಪಿ ಜುನೈದ್ ಜೊತೆ ಅರ್ಷದ್ ಖಾನ್ ಕೆಲ ತಿಂಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜೈಲಿನಲ್ಲಿದ್ದ ವೇಳೆಯಲ್ಲಿ ಜುನೇದ್ ಹಾಗೂ ಸಹಚರರಿಗೆ, ಶಂಕಿತ ಉಗ್ರ ಟಿ. ನಾಸೀರ್ ಪರಿಚಯವಾಗಿತ್ತು. ಅರ್ಷದ್ ಖಾನ್ ಸಹ ನಾಸೀರ್ ಜೊತೆ ಹಲವು ಬಾರಿ ಮಾತನಾಡಿದ್ದನೆಂಬ ಮಾಹಿತಿ ಇದೆ’ ಎಂದು ತಿಳಿಸಿವೆ.

‘ಸಿಸಿಬಿ ವಿಚಾರಣೆ ಸಾಧ್ಯತೆ’

‘ಅರ್ಷದ್ ಖಾನ್, ಜುನೇದ್ ಜೊತೆ ಆಗಾಗ ಮಾತಾನಾಡುತ್ತಿದ್ದ. ತಲೆಮರೆಸಿಕೊಂಡಿರುವ ಜುನೇದ್ ಬಗ್ಗೆ ಅರ್ಷದ್ ಖಾನ್‌ಗೆ ಮಾಹಿತಿ ಇದೆ. ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಅಧಿಕಾರಿಗಳು, ಖಾನ್‌ನನ್ನು ವಿಚಾರಣೆ ನಡೆಸುವ ಸಾಧ್ಯತೆ ಇದೆ’ ಎಂದು ಮೂಲಗಳು ಹೇಳಿವೆ.

ನವೋದ್ಯಮ ಆರಂಭಿಸುವುದಾಗಿ ಹೇಳಿಕೊಂಡಿದ್ದ ಜೋಶ್ವಾ

ಸುಲಿಗೆ: ‘ಇ-ಪೇಮೆಂಟ್’ನಿಂದ ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

ಜೋಶ್ವಾ

ಬೆಂಗಳೂರು: ಮಹಿಳೆಯರು ಒಂಟಿಯಾಗಿರುತ್ತಿದ್ದ ಸಂದರ್ಭದಲ್ಲಿ ಮನೆಗಳಿಗೆ ನುಗ್ಗಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ಐ. ಜೋಶ್ವಾನನ್ನು (25) ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನ್ಯೂ ಗುರಪ್ಪನಪಾಳ್ಯ ನಿವಾಸಿ ಜೋಶ್ವಾ, ಪಿಯುಸಿವರೆಗೂ ಓದಿದ್ದ. ಎರಡು ಕಂಪನಿಗಳಲ್ಲಿ ಕೆಲ ವರ್ಷ ಕೆಲಸ ಮಾಡಿದ್ದ. ಮೂರು ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಚ್‌ಎಸ್‌ಆರ್ ಲೇಔಟ್‌ನ 5ನೇ ಹಂತದ ಮನೆಯೊಂದಕ್ಕೆ ಆಗಸ್ಟ್ 21ರಂದು ನುಗ್ಗಿದ್ದ ಈತ, ಮಹಿಳೆಯನ್ನು ಬೆದರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದ. ಮಹಿಳೆ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ಥಳೀಯ ರೌಡಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳವರ ಜೊತೆ ಆರೋಪಿ ಜೋಶ್ವಾ ಸ್ನೇಹ ಬೆಳೆಸಿದ್ದ. ‘ಗ್ರೇಟ್ ಜಾಬ್’ ಹೆಸರಿನಲ್ಲಿ ಹೊಸದೊಂದು ನವೋದ್ಯಮ ಆರಂಭಿಸುವುದಾಗಿ ಸಹಚರರ ಜೊತೆ ಮಾತನಾಡಿಕೊಂಡಿದ್ದ. ಇದಕ್ಕೆ ಅಗತ್ಯವಿರುವ ಹಣ ಹೊಂದಿಸುವುದಕ್ಕಾಗಿ ಸುಲಿಗೆ ಮಾಡುವುದಾಗಿ ತಿಳಿಸಿದ್ದ’ ಎಂದು ಮೂಲಗಳು ವಿವರಿಸಿವೆ.

ಮಹಿಳೆಯನ್ನು ಹಿಂಬಾಲಿಸಿ ಕೃತ್ಯ: ‘ಶ್ರೀಮಂತರ ಮನೆಯ ಮಹಿಳೆಯರು, ಮಕ್ಕಳನ್ನು ಶಾಲೆಗೆ ಬಿಡಲು ಹೊರಗೆ ಬರುತ್ತಾರೆ. ಅಂಥ ಮಹಿಳೆಯರನ್ನು ಹಿಂಬಾಲಿಸಿ ಸುಲಿಗೆ ಮಾಡಲು ಆರೋಪಿ ಸಂಚು ರೂಪಿಸಿದ್ದ. ಇದಕ್ಕಾಗಿ ತಾವರೆಕೆರೆ ಬಳಿ ₹170 ನೀಡಿ ಚಾಕು ಖರೀದಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಮಹಿಳೆ, ಮಕ್ಕಳನ್ನು ಶಾಲೆಗೆ ಬಿಡಲು ಹೋಗಿದ್ದರು. ಈ ವೇಳೆ ಮಹಿಳೆಯನ್ನು ಹಿಂಬಾಲಿಸಿ, ಅವರು ಮನೆಯೊಳಗೆ ಹೋದ ಬಳಿಕ ಬಾಗಿಲು ಬಡಿದಿದ್ದ. ಮಹಿಳೆ ಬಾಗಿಲು ತೆಗೆಯುತ್ತಿದ್ದಂತೆ ಒಳಗೆ ನುಗ್ಗಿ ಚಾಕು ತೋರಿಸಿ ಬೆದರಿಸಿ ಚಿನ್ನಾಭರಣ ಕಿತ್ತುಕೊಂಡಿದ್ದ. ನಂತರ, ಮಹಿಳೆಯ ಕಣ್ಣಿಗೆ ಖಾರದ ಪುಡಿ ಎರಚಿ ಸ್ಥಳದಿಂದ ಪರಾರಿಯಾಗಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಇ-ಪೇಮೆಂಟ್‌ನಿಂದ ಸಿಕ್ಕಿಬಿದ್ದ: ‘ಮಹಿಳೆ ಹಿಂಬಾಲಿಸುವುದಕ್ಕೂ ಮುನ್ನ ಆರೋಪಿ, ಬೇಕರಿಯೊಂದರಲ್ಲಿ ಸಿಗರೇಟ್ ಖರೀದಿಸಿ ಆನ್‌ಲೈನ್ ಮೂಲಕ ಹಣ ಪಾವತಿಸಿದ್ದ. ‘ಹಣ ಸ್ವೀಕರಿಸಿದ್ದ ಬೇಕರಿ ಮಾಲೀಕರ ಮೂಲಕ ಆರೋಪಿಯ ಬ್ಯಾಂಕ್ ಖಾತೆ ಮಾಹಿತಿ ಲಭ್ಯವಾಗಿತ್ತು. ನಂತರ, ಆರೋಪಿಯ ವಿಳಾಸ ಪತ್ತೆ ಮಾಡಿ ಬಂಧಿಸಲಾಯಿತು ಎಂದು ತಿಳಿಸಿವೆ.

ಪೊಲೀಸರ ಹೆಸರಲ್ಲಿ ಲಿಂಕ್ ಕಳಿಸಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ವಂಚಕರು ನಾನಾ ರೀತಿಯಲ್ಲಿ ವಂಚಿಸುತ್ತಿದ್ದು, ಈಗ ಹೊಸ ಮಾರ್ಗ ಕಂಡುಕೊಂಡಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆಗಾಗಿ ದಂಡ ಪಾವತಿಸುವಂತೆ ಪೊಲೀಸರ ಹೆಸರಿನಲ್ಲೇ ಸಂದೇಶ ಕಳುಹಿಸಿ ಜನರನ್ನು ವಂಚಿಸುತ್ತಿದ್ದಾರೆ. ನಗರದಲ್ಲಿ ಈ ರೀತಿಯ ಹಲವು ಪ್ರಕರಣಗಳು ಪತ್ತೆಯಾಗಿವೆ.

ವಾಹನ ಚಾಲನೆ ವೇಳೆ ನಿಯಮ ಉಲ್ಲಂಘಿಸಿದರೆ ರಸ್ತೆ ಬದಿಯಲ್ಲಿ ಅಳವಡಿಸಿರುವ ಸಿಸಿ ಟಿ.ವಿ ಕ್ಯಾಮೆರಾಗಳು ಹಾಗೂ ಸಂಚಾರ ಪೊಲೀಸರು ಬಾಡಿವೋರ್ನ್ ಕ್ಯಾಮೆರಾದಲ್ಲಿ ಸೆರೆ ಹಿಡಿದು ಅದನ್ನು ವೆಬ್‌ಸೈಟ್‌ನಲ್ಲಿ ಫೋಟೊ ಸಹಿತ ಹಾಕುತ್ತಿದ್ದರು. ಅದಾದ ಮೇಲೆ ಪೊಲೀಸರೇ ದಂಡ ಪಾವತಿಸುವಂತೆ ಮೊಬೈಲ್‌ಗೆ ಸಂದೇಶ ಕಳುಹಿಸುತ್ತಿದ್ದರು. ಅದನ್ನೇ ಬಳಸಿಕೊಂಡು ಇ-ಚಲನ್ ವಂಚನೆ ಜಾಲ ಆರಂಭವಾಗಿದೆ ಎಂದು ಪೊಲೀಸರು ಎಚ್ಚರಿಸಿದ್ದಾರೆ.

ವಂಚಕರು https://echallanparivahan.in/ ಲಿಂಕ್ ತೆರೆದು ದಂಡ ಪಾವತಿಸುವಂತೆ ಮೊಬೈಲ್‌ಗೆ ಸಂದೇಶ ಕಳುಹಿಸುತ್ತಿದ್ದಾರೆ. ಇದನ್ನು ತೆರೆದ ಕೂಡಲೇ ಬ್ಯಾಂಕ್ ಖಾತೆಯನ್ನು ಹ್ಯಾಕ್ ಮಾಡಿ ಕ್ಷಣಾರ್ಧದಲ್ಲಿ ಹಣವನ್ನು ವರ್ಗಾವಣೆ ಮಾಡಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ವಾಹನ ಚಾಲಕರು ಪೊಲೀಸ್ ಇಲಾಖೆಯಿಂದ ಬಂದಿರುವ ಅಸಲಿ ಲಿಂಕ್ ಮಾತ್ರವೇ ತೆರೆದು ದಂಡ ಶುಲ್ಕ ಪಾವತಿಸಬೇಕು. ಲಿಂಕ್ ಬಂದ ತಕ್ಷಣವೇ ಪರಿಶೀಲನೆ ಮಾಡಿಕೊಂಡು ಅಸಲಿಯೇ ಅಥವಾ ನಕಲಿಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಪೊಲೀಸ್ ಇಲಾಖೆ ಕಳುಹಿಸುವ ಅಸಲಿ ಲಿಂಕ್ https://echallan.parivahan.gov.in/ ಎಂಬುದಾಗಿದೆ’ ಎಂದು ತಿಳಿಸಿದ್ದಾರೆ.

‘ದಂಡ ಶುಲ್ಕ ಪಾವತಿಯಲ್ಲಿ ಶೇ 50ರಷ್ಟು ರಿಯಾಯಿತಿ ಘೋಷಿಸಿದ ಮೇಲೆ ಹೊಸ ವಂಚನೆ ಜಾಲ ಪತ್ತೆಯಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಇ-ಚಲನ್ ವಂಚನೆ ಜಾಲದ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು. ಲಿಂಕ್ ತೆರೆಯುವ ಮುನ್ನ ಹೆಚ್ಚು ಜಾಗೃತರಾಗಿರಬೇಕು – **ಬಿ.ದಯಾನಂದ್**, ನಗರ ಪೊಲೀಸ್ ಕಮಿಷನರ್

ವಂಚಕರು ಕಳುಹಿಸಿರುವ ನಕಲಿ ಸಂದೇಶ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
Public Notice is hereby given that my client Mr. **R. NAGARAJU** S/o N. Ramaiah, residing at No.1092/B, 19th Cross, 14th Main, near MAX Show Room, 3rd Sector, HSR Layout, Bangalore-102, intends to purchase Survey Nos. 194/1 measuring 1 Acre 28.08 Guntas, Sy. No.218 measuring 1 Acre, Sy. No.219 measuring 1 Acre, in all measuring 3 Acre 28.08 Guntas, situated at SINGENAAGRAHARA Village. Sarjapura Hobli, Anekal Taluk, Bangalore District from its present owners **Mrs. Akkamma Soman** wife of late. Paul Soman and her children **1. Mr. Gilbert Saman, 2. Mr. Gilroy P Soman.** All or any persons including any banks, any party or person, having any valid and legal claim, right, title, demand or interest of whatsoever nature are required called upon to convey their objection/s in writing at the address mentioned below, within Fifteen **(15)** days from issuance of this notice, along with all supporting documents relating to such claim, failing which it shall be presumed that there is are no claim/s and such claim/s if any, shall be considered to be waived and abandoned in respect of the aforesaid Lands.
T.R. RAVEENDRA
Advocate No.484, 2nd Floor, 17th Cross, HSR Layout, Sector-2, Bangalore-560 102
Mob: 9686164255
Email:rrlawassociates10@gmail.com

REAL ESTATE SELLING

Agricultural Land Converted

General

LAND FOR sale: Uppinangady-Subrahmanya highway side 3.25 Acre Agricultural Land with Areca, Coconut Trees and 2000 Sqft RCC House (Granite Finish) Brokers Excuse 8310892551

House

Frazer Town

HOUSE FOR Sale measuring 50*80 site in Cox Town. Clear titles. Contact: 9886377763, 9341243676.

Sites

Hosur Road

"30X40 SOUTH Facing site for sale @ AECS Layout Singasandra Hosur Road near Metro station. 9845500019/ 7019314962"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Engg/ Production Technical

MISTRY ARCITECTS Required CIVIL ENGINEERS with 2/3 years of experience @ site/office. Should have knowledge of specifications & BOQ'S compulsory. Contact: 080-25256266, 41154416, Email- reception@mistrys.com

General

National Institute of Advanced Studies
Indian Institute of Science Campus Bangalore
Applications are invited for a position of **Junior Executive Assistant (Administration)** at the Institute.
For further details, please visit: https://www.nias.res.in/Opportunities
Last date for receipt of completed application is 20 September2023.
Sd/-
Head-Administration

WANTED FOR Clerical Job Trasport Company Qualification Degree Pass Basic computer knowledge Mail Candidate Location Peenya Call:9845351200 9535218502

WANTED GRAPHIC DESIGNER Computer Typt Male & Female Supervisor @ Jayanagar 9th Block Mob: 9845934508

Marketing & Sales

"FEMALE OFFICE and Marketing Executives needed for-a reputed dental equipment Pvt.Ltd company- in Bangalore. Qualification: graduation in'any discipline,with computer knowledge'and well-versed English language. MBA with,or without experience. Training will be arranged as per requirements,& guidelines. Interested candidates can call: 9341223410/ 9844016274/ 9980546442"

WANTED SALES REPRESENTATIVE Leading Coffee Powder Manufacturer at Bangalore. Send resume to email: moderncoffee33@gmail.com

Part-Time Jobs

TOP MNC Com. Licensed By Central Govt. Restart Your 2nd Career Opporty with Flexible Timings Age Limit 45yrs & Above: 7019215243/ 9886641282

Teachers/ Professors

WANTED LECTURERS in Biology, Computer Science and Commerce for Vidyavana College, Whitefield Bengaluru. Contact: 9663389388, vidyavanahr@gmail.com

Om Sai Ram
NEW BALDWIN GROUP OF SCHOOLS
RECRUITMENT FOR THE ACADEMIC YEAR 2024-25 FOR NEW BRANCHES OF HSR & (KODATIGATE) SARJAPURA.
PRINCIPAL / VICE PRINCIPAL / CO-ORDINATOR
Candidates possessing with brilliant academy records.
HOD & Subject Experts. Post Graduate with 5 to 10 Years experience & leadership qualities in reputed institution (CBSE & IGCSE).
ADMINISTRATION
Candidates having experience as ADMINISTRATOR, ADMIN COUNCILLOR, ADMIN EXECUTIVE, ACCOUNTANT, IT MANAGER in relevant field will be recruited immediately & trained for respective postings.
Remuneration: at par with the institutional standard.
With additional facilities like food & transport in the gross package.
APPLY IMMEDIATELY
Applying candidates should clearly specify the Position Applied for, branch Opted with updated resume
Contact: 91644 99922 / 97398 96820
E-mail: hrcentral.nbgi@gmail.com | Website: www.newbaldwininstitutions.org

WANTED
Wanted One SOCIAL SCIENCE TEACHER for State Board High School on Sarjapur Main Road with BEd qualification. Interested Teachers Call: 9113563816
Resume to Email: vvrschool2003@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Wanted

WANTED
Join Our Compassionate Team at The Beeches UK Ltd!
We're seeking dedicated Residential Care Workers to provide exceptional care to children and young people aged 8-18. As part of our team, you'll support education, behavior, and well-being, provide personalized care, assist with daily activities, implement therapeutic interventions, and ensure compliance with regulations. This opportunity offers 3-year, 2-tier UK visa sponsorship, 28 days holiday, pension contributions, and full training provided. To apply, send your CV to waltermackintosh2023@gmail.com for further information.

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PERSONAL

Change of Name

I, MITESH Pravinchandra Shah, S/O Pravinchandra Ratilal Shah, R/at #40/23 Flat #208, Parkway Tarang Apartment, 1st Main Road, Shivanagar, Bangalore North, Rajajinagar, Bangalore 560010. Aadhar No: 8862 7188 3311 for all purposes my correct name is Mitesh Pravinchandra Shah. Sworn before Notary & Advocate Chanchala Lakshmi, Bangalore, vide Affidavit dated 26.08.2023

I, RAJ, R/at No.T.C RHV-2, Pravijaya Vyaliview, 2nd A Cross, Ittamadu Main Road, Anjaneya Nagar, Bangalore-560085, I have changed my name to RAJ SUDHIRBHAI PATEL vide affidavit dated 28-08-2023 before notary V.Rajashekhara, Bangalore.

CHRIST ACADEMY EDUCATIONAL INSTITUTIONS
Invites Application for Qualified and Experienced Teaching & Non-Teaching Staff
Christ Nagar, Begur - Koppa Road, Hullahalli, Sakkalawara Post, Bangalore - 560083

Christ Academy Institute for Advanced Studies www.caias.in	Christ Academy Junior College www.cajc.in	Christ Academy Institute of Law www.calaw.in
Eligible candidates can apply through Email to : careers@caias.in		Eligible candidates can apply through Email to: office@calaw.in
Management / Commerce / Computer Science & Applications Psychology / Physics / Mathematics / English / Chemistry / Kannada / Sanskrit / Hindi / French / Journalism	Accountancy / English / Economics / Business Studies / Mass Media / Computer Science / Electronics / Psychology / Legal Studies IIT-JEE / NEET Experience in Mathematics / Chemistry / Botany / Zoology / Physics	Law / Economics Political Science Sociology / Management / Sports
Eligibility : NET / Ph.D with Exp.	Eligibility : PG with Exp.	Eligibility : NET/ Ph.D with Exp.

Non-Teaching : Placement Officer / Librarian / Lab Assistant / Security Incharge / Admin Staff / Counsellors / Nurse
SC / ST Candidates can apply for reserved vacancies

CHANGE OF NAME
I, T SUDHIR BABU, T. SUDHIR, SUDHIR BABU T, SUDHIR BABU, SUDHIR, R/at. 488, Shreyas 15th Cross, Poorna Prajna Layout, BMTC Bus Depo33, Uttarahalli, Bengaluru- 61, have changed my name to **THELAPURATH SUDHIR BABU** vide affidavit dt.29/08/2023 before Notary P.N.Nagesha, Bangalore.

CHANGE OF NAME
I, **KANTA RATTANLAL,** R/at.#A/52, 5th Floor, Manish Complex, No.10, Convent Road, Bengaluru- 560025 have changed my name to **KANTA RATTANLAL JAISINGHANI** vide affidavit dated 29/08/2023 before Notary S.I. Balaguru, Bangalore.

I AMBARESHA M #166, New- 305, Adigondanahalli, Muthnallur, Bengaluru-99, have changed my name to AMBARESH M vide affidavit dated- 25/08/2023 before notary K.V.Mani

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
JOB
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9731810277 | +91 9900428036 | +91 9886213331 | +91 9845114560 | 080-45557163/164

ಶಂಕರನಾಗ್ ಚಿತ್ರಮಂದಿರದ ಹಿಂಭಾಗದಲ್ಲಿ ದೂಳು ತಿನ್ನುತ್ತಿರುವ ಮಾರ್ಪಾಡು ವಾಹನಗಳು

ಅಂಗವಿಕಲರ ವಾಹನಗಳು ಮೂಲೆಗುಂಪು

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಅಂಗವಿಕಲರಿಗಾಗಿ ಮಾರ್ಪಾಡು ಮಾಡಲಾದ ದ್ವಿಚಕ್ರ ವಾಹನಗಳು ಎಂ.ಜಿ. ರಸ್ತೆಯಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರದ ಹಿಂಭಾಗದಲ್ಲಿರುವ ಸಾರ್ವಜನಿಕ ಬಹುಪಯೋಗಿ ಕಟ್ಟಡದ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಏಳೆಂಟು ತಿಂಗಳಿಂದ ದೂಳು ತಿನ್ನುತ್ತಿವೆ. ಅರ್ಹ ಫಲಾನುಭವಿಗಳಿಗೆ ತಲುಪದೇ ವ್ಯರ್ಥವಾಗುತ್ತಿವೆ.

'ಇಲ್ಲಿ ಸ್ಕೂಟಿ ಜೆಸ್ಟ್ ವಾಹನಗಳನ್ನು ಸಾಲಾಗಿ ನಿಲ್ಲಿಸಿದ್ದಾರೆ. ಹಲವು ತಿಂಗಳಿಂದ ಇಲ್ಲೇ ಇವೆ. ಯಾರು ನಿಲ್ಲಿಸಿದ್ದಾರೆ? ಯಾಕೆ ನಿಲ್ಲಿಸಿದ್ದಾರೆ ಎಂಬುದು ಗೊತ್ತಿಲ್ಲ. ಆದರೆ, ಕೆಲವು ಸ್ಕೂಟಿಗಳನ್ನು ಮಾರ್ಪಾಡು ಮಾಡಿ ಮತ್ತೆರಡು ಚಕ್ರ ಅಳವಡಿಸಿರುವುದರಿಂದ ಇದು ಅಂಗವಿಕಲರಿಗೆ ವಿತರಿಸುವ ವಾಹನ ಎಂಬುದು ನೋಡುವಾಗಲೇ ಗೊತ್ತಾಗುತ್ತದೆ' ಎಂದು ಈ ಪಾವತಿ ಪಾರ್ಕಿಂಗ್‌ನಲ್ಲಿ ನಿತ್ಯ ಬೈಕ್ ಪಾರ್ಕ್ ಮಾಡುವ ಸವಾರರೊಬ್ಬರು ತಿಳಿಸಿದರು.

ಮೇಲಧಿಕಾರಿಗಳ ಗಮನಕ್ಕೆ ಈ ವಿಚಾರವನ್ನು ತರಲಾಗಿದೆ. ಅವರ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಶೈಲಜಾ, ಎಆರ್‌ಒ, ಕಲ್ಯಾಣ ವಿಭಾಗ, ಬಿಬಿಎಂಪಿ ಪೂರ್ವ ವಲಯ

ಅಂಗವಿಕಲರ ವಾಹನಗಳನ್ನು ಯಾಕೆ ವಿತರಣೆ ಮಾಡಲಾಗಿಲ್ಲ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.
ಪಲ್ಲವಿ, ಬಿಬಿಎಂಪಿ ಪೂರ್ವವಲಯ ಜಂಟಿ ಆಯುಕ್ತೆ

ನಗರದ ಎಂ.ಜಿ.ರಸ್ತೆಯಲ್ಲಿರುವ ಸಾರ್ವಜನಿಕ ಬಹುಪಯೋಗಿ ಕಟ್ಟಡದ ವಾಹನ ನಿಲ್ದಾಣ ಸ್ಥಳದಲ್ಲಿ ಅಂಗವಿಕಲರ ವಾಹನಗಳು ನಿಂತಿರುವುದು – ಪ್ರಜಾವಾಣಿ ಚಿತ್ರ/ ಎಂ.ಎಸ್‌ ಮಂಜುನಾಥ್

ಇಲ್ಲಿ ಒಟ್ಟು 29 ಸ್ಕೂಟಿ ಜೆಸ್ಟ್ ವಾಹನಗಳಿವೆ. ಅದರಲ್ಲಿ 13ಕ್ಕೆ ಮತ್ತೆರಡು ಚಕ್ರಗಳನ್ನು ಅಳವಡಿಸಲಾಗಿದೆ. ಉಳಿದ 16ಕ್ಕೆ ಯಾವುದೇ ಮಾರ್ಪಾಡು ಮಾಡಿಲ್ಲ.

ಬಿಬಿಎಂಪಿ ವಾಹನಗಳು: ಬಿಬಿಎಂಪಿಯಿಂದ ಅಂಗವಿಕಲರಿಗೆ ವಿತರಿಸಬೇಕಾದ ವಾಹನಗಳು ಇವು ಎಂಬುದನ್ನು ಬಿಬಿಎಂಪಿ ಅಧಿಕಾರಿಗಳೇ ಸ್ಪಷ್ಟಪಡಿಸಿದ್ದಾರೆ. ಫಲಾನುಭವಿಗಳು ಬಾರದೇ ಇರುವುದರಿಂದ ಇಲ್ಲಿ ನಿಲ್ಲಿಸಬೇಕಾಯಿತು ಎಂದು ತಿಳಿಸಿದ್ದಾರೆ.

2018–19ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದವರಿಗೆ ವಿತರಿಸಲು ಬೆಂಗಳೂರು ಪೂರ್ವ ವಲಯಕ್ಕೆ 2022–23ನೇ ಸಾಲಿನಲ್ಲಿ ವಾಹನಗಳನ್ನು ನೀಡಲಾಗಿತ್ತು. ಅಷ್ಟು ಹೊತ್ತಿಗೆ ಚುನಾವಣೆ ಬಂದಿದ್ದರಿಂದ ವಾಹನಗಳ ವಿತರಣೆ ಕಾರ್ಯ ನಡೆದಿರಲಿಲ್ಲ. ಚುನಾವಣೆ ಮುಗಿದ ಬಳಿಕ ಫಲಾನುಭವಿಗಳಿಗೆ ಪತ್ರ ಬರೆದಿದ್ದೆವು. ಫಲಾನುಭವಿಗಳು ಬಾರದೇ ವಾಹನಗಳು ಉಳಿದಿವೆ ಎಂದು ಬಿಬಿಎಂಪಿ ಪೂರ್ವ ವಲಯದ ಕಲ್ಯಾಣ ಇಲಾಖೆಯ ಸಹಾಯಕ ಕಂದಾಯ ಅಧಿಕಾರಿ ಶೈಲಜಾ ತಿಳಿಸಿದರು.

'ಎಷ್ಟು ಗಾಡಿಗಳಿವೆ ಎಂದು ಮಹಜರು ಮಾಡಿ ವರದಿ ಸಲ್ಲಿಸಲಾಗಿದೆ. ಸ್ವಲ್ಪ ಸಮಯ ಕಾಯುತ್ತೇವೆ. ಆಗಲೂ ಫಲಾನುಭವಿಗಳು ಬಾರದೇ ಇದ್ದರೆ, ಹೊಸ ಫಲಾನುಭವಿಗಳಿಗೆ ವಿತರಿಸಲು ಅನುಮತಿಯನ್ನು ಕೇಳುತ್ತೇವೆ' ಎಂದು ಮಾಹಿತಿ ನೀಡಿದರು.

ಸರ್ಕಾರದ ಯೋಜನೆಗಳಲ್ಲಿ ಫಲಾನುಭವಿಗಳಿಗೆ ತಲುಪಬೇಕಿದ್ದ ಸೌಲಭ್ಯಗಳು ಈ ರೀತಿ ಹಾಳಾಗುತ್ತಿರುವೆ. ಇದು ಜನಪ್ರತಿನಿಧಿಗಳ, ಅಧಿಕಾರಿಗಳ ನಿಷ್ಕಾಳಜಿಯ ಕಾರ್ಯವೈಖರಿಗೆ ಸಾಕ್ಷಿ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವೈಜ್ಞಾನಿಕ ಚಿಂತನೆ: ಸಂವಾದ ನಾಳೆ

ಬೆಂಗಳೂರು: 'ವಿದ್ಯಾವಂತರೂ ಗ್ರಹಣಕ್ಕೆ ಹೆದರೋದನ್ನು ನಾನು ನೋಡಿದ್ದು ಭಾರತದಲ್ಲಿ ಮಾತ್ರ' ಎಂದೆನ್ನುವ ಖಭೌತಶಾಸ್ತ್ರಜ್ಞೆ ಪ್ರೊ. ಪ್ರಜ್ವಲ್ ಶಾಸ್ತ್ರಿ ಅವರು, 'ವೈಜ್ಞಾನಿಕ ಚಿಂತನೆ ಎಲ್ಲರಿಗಲ್ಲವೇ?' ಎಂಬ ಪ್ರಶ್ನೆ ಮುಂದಿಟ್ಟುಕೊಂಡು ಆ. 31ರಂದು ಸಂಜೆ 6.30 ವಿಶಿಷ್ಟ ಸಂವಾದ ಕಾರ್ಯಕ್ರಮವೊಂದನ್ನು ನಡೆಸಿಕೊಡಲಿದ್ದಾರೆ. ನಗರದ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಈ ಸಂವಾದ ನಡೆಯಲಿದೆ.

ವಿಜ್ಞಾನಾಸಕ್ತರಿಗೆ ಸೀಮಿತವಲ್ಲದ, ಎಲ್ಲರೂ ತೊಡಗಬಹುದಾದ ಆಪ್ತ ಸಂವಾದ ಇದಾಗಿದೆ.

ನಮ್ಮ ಆಧುನಿಕ ಜೀವನ, ವಿಜ್ಞಾನ ಮತ್ತು ತಂತ್ರಜ್ಞಾನದ ಫಲಗಳನ್ನು ಮಹತ್ತರ ರೀತಿಯಲ್ಲಿ ಅವಲಂಬಿಸಿರುವುದು ನಿಸ್ಸಂದೇಹ. ಪ್ರಪಂಚದ ಎಲ್ಲೆಡೆ ಹೀಗಿದ್ದರೂ ಭಾರತದ ವೈಶಿಷ್ಟ್ಯವೇ ಬೇರೆ. ಒಂದೆಡೆ, ಮೊಬೈಲ್ ಫೋನ್‌ಗಳನ್ನು ಬಳಸುತ್ತಾ, ಅಲ್ಟ್ರಾ ಸೌಂಡ್‌ನಂತಹ ವೈದ್ಯಕೀಯ ತಪಾಸಣೆಗಳ ಪ್ರಯೋಜನವನ್ನೂ ಅನುಭವಿಸುತ್ತಾ ಎಲ್ಲ ವಿಧದ ತಂತ್ರಜ್ಞಾನದ ಲಾಭ ಪಡೆಯುವ ಉತ್ಸಾಹ. ಇನ್ನೊಂದೆಡೆ, ಈ ತಂತ್ರಜ್ಞಾನಗಳ ಬುನಾದಿಯಾಗಿರುವ ವೈಜ್ಞಾನಿಕ ವಿಧಾನಗಳ ಕಡೆಗೆ ತಿರಸ್ಕಾರ. ಈ ವೈರುಧ್ಯಕ್ಕೆ ಕಾರಣಗಳೇನು?

ಪ್ರಜ್ವಲ್ ಶಾಸ್ತ್ರಿ

ವೈಜ್ಞಾನಿಕ ಚಿಂತನೆ ಎಂದರೆ ಅದು ವಿಜ್ಞಾನಕ್ಕೆ ಮಾತ್ರ ಸೀಮಿತವಾಗಿರುವುದೇ? ಇಷ್ಟಕ್ಕೂ ವೈಜ್ಞಾನಿಕ ಚಿಂತನೆ ಎಂದರೇನು? ಇಂತಹ ಪ್ರಶ್ನೆಗಳ ಸುತ್ತ ಈ ಸಂವಾದ ಬೆಳೆಯಲಿದೆ.

'ಚಂದ್ರನ ನೆರಳನ್ನು ಒಂದು ಕಟ್ಟಡದ ನೆರಳಿನಂತೆಯೇ ಭಾವಿಸಿ. ಗ್ರಹಣ ವೀಕ್ಷಣೆಯಿಂದ ಏನೂ ತೊಂದರೆ ಇಲ್ಲ' ಎಂದು ಜನರಲ್ಲಿ ಜಾಗೃತಿ ಮೂಡಿಸುವ ಪ್ರಜ್ವಲ್ ಶಾಸ್ತ್ರಿ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನಲ್ಲಿ ಖಭೌತಶಾಸ್ತ್ರಜ್ಞೆಯಾಗಿ ಕೆಲಸ ಮಾಡಿದವರು. ಕಪ್ಪು ಕುಳಿಗಳು ಮತ್ತು ಗೆಲ್ಯಾಕ್ಸಿಗಳ ಕುರಿತು ವಿಶೇಷವಾಗಿ ಅಧ್ಯಯನ ಮಾಡಿದವರು. ವೈಜ್ಞಾನಿಕ ವಿಷಯಗಳ ಕುರಿತು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸುಲಭವಾಗಿ ಲೇಖನ ಬರೆಯುವಲ್ಲಿ ಅವರು ಸಿದ್ಧಹಸ್ತರು. ಚಂದ್ರನ ದಕ್ಷಿಣ ಧ್ರುವದಲ್ಲಿ ಸಂಚಾರ ನಡೆಸಿರುವ ಪ್ರಜ್ಞಾನ್ ರೋವರ್‌ನ ಕಾರ್ಯವೈಖರಿಯನ್ನೂ ವಿವರಿಸಬಲ್ಲವರು. ಸಂವಾದದಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಮುಕ್ತ ಅವಕಾಶವಿದೆ ಎಂದು ಬಿಐಸಿ ಪ್ರಕಟಣೆ ತಿಳಿಸಿದೆ.

ಮದುವೆಯಲ್ಲಿ ಬಾಡೂಟ ಮಾಡಿದ ಬಳಿಕ ಕಾಣಿಸಿಕೊಂಡ ವಾಂತಿ– ಭೇದಿ: ಆಸ್ಪತ್ರೆಗೆ ದಾಖಲು

ಕಲುಷಿತ ಆಹಾರ ಸೇವಿಸಿ 162 ಜನ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ತಾಲ್ಲೂಕಿನ ಹಿರೇಕೋಡಿಯಲ್ಲಿ ಕಲುಷಿತ ಆಹಾರ ಸೇವಿಸಿ 162ಕ್ಕೂ ಅಧಿಕ ಜನ ಅಸ್ವಸ್ಥರಾಗಿದ್ದು, ಮಂಗಳವಾರ ಆಸ್ಪತ್ರೆಗೆ ದಾಖಲಿಸಲಾಗಿದೆ. 179 ಜನ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಯಾರಿಗೂ ಪ್ರಾಣಾಪಾಯ ಇಲ್ಲ' ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಹಿರೇಕೋಡಿಯಲ್ಲಿ ಸೋಮವಾರ ಜಾಕೀರ್ ಪಟೇಲ್ ಎಂಬುವವರ ಪುತ್ರಿಯ ಮದುವೆ ನಿಶ್ಚಯವಾಗಿತ್ತು. ಮಧ್ಯಾಹ್ನ ಊರಿನ ಜನ ಹಾಗೂ ಸಂಬಂಧಿಕರು ಬಾಡೂಟ ಸೇವಿಸಿದ್ದರು. ತಡರಾತ್ರಿಗೆ ಕೆಲವರಿಗೆ ವಾಂತಿ ಭೇದಿ ಶುರುವಾಯಿತು. ಅವರು ಗ್ರಾಮದ ಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆದಿದ್ದರು.

ಮಂಗಳವಾರ ಬೆಳಿಗ್ಗೆ ಹೊತ್ತಿಗೆ ನವ ದಂಪತಿ ಸೇರಿ ಮದುವೆಗೆ ಬಂದಿದ್ದ ಎಲ್ಲರಿಗೂ ತೀವ್ರ ವಾಂತಿ ಭೇದಿ ಶುರುವಾಯಿತು. ಆಂಬುಲೆನ್ಸ್‌ಗಳ ಮೂಲಕ 91 ಮಂದಿಯನ್ನು ಚಿಕ್ಕೋಡಿ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಯಿತು. ಮಂಗಳವಾರ ಸಂಜೆ ವೇಳೆಗೆ ಮತ್ತೆ 64 ಮಂದಿಗೆ ತಲೆನೋವು, ಮೈ-ಕೈ ನೋವು ಕಾಣಿಸಿಕೊಂಡು ಅಸ್ವಸ್ಥರಾದರು. ಅವರನ್ನು ಯಕ್ಸಂಬಾದ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಸಲಾಗಿದೆ. ಏಳು ಮಂದಿ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ.

'ಒಟ್ಟು 78 ಪುರುಷರು, 64 ಮಹಿಳೆಯರು ಹಾಗೂ 20 ಮಕ್ಕಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಾಂತಿ–ಭೇದಿ ಸದ್ಯ ನಿಯಂತ್ರಣದಲ್ಲಿದೆ. ಆತಂಕ ಪಡುವ ಅಗತ್ಯವಿಲ್ಲ' ಎಂದು ಹೆಚ್ಚುವರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ಗಡೇದ 'ಪ್ರಜಾವಾಣಿ'ಗೆ ತಿಳಿಸಿದರು.

ಗ್ರಾಮದಲ್ಲಿ ಚಿಕಿತ್ಸೆ: ಹಿರೇಕೋಡಿ ಗ್ರಾಮದಲ್ಲಿ ಇಡೀ ದಿನ ಆಂಬುಲೆನ್ಸ್‌ಗಳ ಓಡಾಟದಿಂದ ಜನ ಭಯಭೀತರಾದರು. ಮುಂಜಾಗ್ರತಾ ಕ್ರಮವಾಗಿ ಮೂರು ತಾತ್ಕಾಲಿಕ ಕ್ಲಿನಿಕ್ ತೆರೆಯಲಾಗಿದ್ದು, ಆರು ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ನಿಯೋಜಿಸಲಾಗಿದೆ. ಎರಡು ಆಂಬುಲೆನ್ಸ್‌ಗಳನ್ನೂ ಸ್ಥಳದಲ್ಲಿ ನಿಲ್ಲಿಸಲಾಗಿದೆ. ಊರಿನಲ್ಲಿ 179 ಜನ ಚಿಕಿತ್ಸೆ ಪಡೆದಿದ್ದಾರೆ. ಪ್ರತಿಯೊಬ್ಬರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ ಎಂದು ಅವರು ಹೇಳಿದರು.

ಮೈಸೂರು ಪ್ರವಾಸ ರದ್ದುಗೊಳಿಸಿ ಆಸ್ಪತ್ರೆಗೆ ಧಾವಿಸಿದ ಶಾಸಕ ಗಣೇಶ ಹುಕ್ಕೇರಿ ಪರಿಸ್ಥಿತಿ ಅವಲೋಕಿಸಿದರು. 'ಚಿಕ್ಕೋಡಿ ಆಸ್ಪತ್ರೆಯಲ್ಲಿ ಬೆಡ್‌ಗಳು ಸಿಗದ ಕಾರಣ ಒಂದಷ್ಟು ಮಂದಿಯನ್ನು ಯಕ್ಸಂಬಾ ಹಾಗೂ ಸದಲಗಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಳುಹಿಸಲಾಗಿದೆ. ಮದುವೆಗೆ ಸಿದ್ಧಪಡಿಸಿದ್ದ ಆಹಾರದ ಮಾದರಿಯನ್ನು ಬೆಳಗಾವಿಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ನಂತರ ಘಟನೆಗೆ ನಿಖರ ಕಾರಣ ಗೊತ್ತಾಗಲಿದೆ' ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ನೇತೃತ್ವದಲ್ಲಿ ಚಿಕ್ಕೋಡಿ ಪೊಲೀಸರು ಜನರ ನೆರವಿಗೆ ಧಾವಿಸಿದರು. ತಾಲ್ಲೂಕು ಆಡಳಿತದ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ.

ಹಿರೇಕೋಡಿ ಗ್ರಾಮದಲ್ಲಿ ಮದುವೆಯಲ್ಲಿ ಕಲುಷಿತ ಆಹಾರ ಸೇವಿಸಿ ಅಸ್ವಸ್ಥರಾದವರಿಗೆ ಚಿಕ್ಕೋಡಿ ತಾಲ್ಲೂಕು ಆಸ್ಪತ್ರೆಯಲ್ಲಿ ಮಂಗಳವಾರ ಚಿಕಿತ್ಸೆ ನೀಡಲಾಯಿತು

ಎಚ್‌1ಎನ್‌1: 35 ಪ್ರಕರಣ ದೃಢ

ಬೆಂಗಳೂರು: ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ ಈವರೆಗೆ 35 ಎಚ್‌1ಎನ್‌1 ಪ್ರಕರಣಗಳು ದೃಢಪಟ್ಟಿವೆ.

ಜ್ವರದ ಶಂಕಿತರಲ್ಲಿ 2,658 ಮಂದಿಯ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ಈವರೆಗೆ ಐದು ಜಿಲ್ಲೆಗಳಲ್ಲಿ ಎಚ್‌1ಎನ್‌1 ಪ್ರಕರಣಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 22, ಬೆಂಗಳೂರು ನಗರ ಜಿಲ್ಲೆಯಲ್ಲಿ 7, ಉಡುಪಿಯಲ್ಲಿ 4, ಹಾಸನ ಹಾಗೂ ಮೈಸೂರಿನಲ್ಲಿ ತಲಾ ಒಂದು ಪ್ರಕರಣ ದೃಢಪಟ್ಟಿದೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಕಳೆದ ವರ್ಷ ರಾಜ್ಯದಲ್ಲಿ 3,339 ಶಂಕಿತರ ರಕ್ತದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರಲ್ಲಿ 517 ಮಂದಿಯಲ್ಲಿ ಈ ಜ್ವರ ದೃಢಪಟ್ಟಿತ್ತು. 14 ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿದ್ದರು. 2019ರಲ್ಲಿ 2 ಸಾವಿರಕ್ಕೂ ಅಧಿಕ ಮಂದಿ ಈ ಜ್ವರದಿಂದ ಬಳಲಿದ್ದು, 96 ಮಂದಿ ಮರಣ ಹೊಂದಿದ್ದರು.

'ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಪ್ರಕರಣ ಕಡಿಮೆಯಿದೆ. ಅದಾಗಿಯೂ ಶೀಘ್ರ ರೋಗ ಪತ್ತೆ ಹಚ್ಚಿ, ಅಗತ್ಯ ಚಿಕಿತ್ಸೆ ಕೊಡಿಸಲು ಕ್ರಮ ವಹಿಸಲಾಗಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಚಿತ್ರಾವಳಿ

ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕ್ರೀಡಾ ಉತ್ಸವದಲ್ಲಿ ಭಾಗವಹಿಸಿದ್ದ ಬಾಲ ಕುಸ್ತಿ ಪಟುಗಳ ತಾಲೀಮು – ಪ್ರಜಾವಾಣಿ ಚಿತ್ರಗಳು

ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕ್ರೀಡಾ ಉತ್ಸವದಲ್ಲಿ ಪೊಲೀಸರು ಗೋಲಿ ಆಡಿ ಸಂಭ್ರಮಿಸಿದರು



ಬೆಂಗಳೂರಿನ ಸಹಕಾರ ನಗರದ ನಿವಾಸಿ, ಉದ್ಯಮಿ ರಜನಿಕಾಂತ್ ಅವರು ಆಫ್ರಿಕಾದ ಅತಿ ಎತ್ತರದ ಕಿಲಿಮಂಜಾರೊ ಪರ್ವತಾರೋಹಣ ಮಾಡಿದರು. ಇತ್ತೀಚೆಗೆ 5 ದಿನಗಳ ಚಾರಣ ಮಾಡಿದ ಅವರು ಅಂತಿಮವಾಗಿ ಪರ್ವತದಲ್ಲಿ ಭಾರತದ ತ್ರಿವರ್ಣ ಧ್ವಜ ಪ್ರದರ್ಶಿಸಿದರು

ಜಾತಿ ಗಣತಿ ವರದಿ ಸಲ್ಲಿಕೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್. ಕಾಂತರಾಜ ನೇತೃತ್ವದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ತ್ವರಿತವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ಮನವಿ ಮಾಡಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರ ಕಚೇರಿಯಲ್ಲಿ ವೇದಿಕೆ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್ ನೇತೃತ್ವದ ನಿಯೋಗವು ಆಯೋಗದ ಅಧ್ಯಕ್ಷರನ್ನು ಭೇಟಿಮಾಡಿ ಚರ್ಚೆ ನಡೆಸಿತು. ಜಾತಿ ಗಣತಿ ವರದಿ, ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಖಾತರಿಪಡಿಸುವುದು, ವಿಧಾನಮಂಡಲ ಮತ್ತು ಸಂಸತ್ತಿನಲ್ಲೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಲಾಗಿದೆ ಎಂದು ವೇದಿಕೆ ಮುಖಂಡರು ತಿಳಿಸಿದ್ದಾರೆ.

ನವೆಂಬರ್‌ನಲ್ಲಿ ಹೆಗ್ಡೆ ಅವರ ಅಧಿಕಾರದ ಅವಧಿ ಮುಕ್ತಾಯವಾಗಲಿದೆ. ಅದಕ್ಕೂ ಮೊದಲು ಜಾತಿ ಗಣತಿ ವರದಿ ಸಲ್ಲಿಸುವಂತೆ ಮನವಿ ಮಾಡಲಾಗಿದೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಈ ವಿಚಾರಗಳ ಕುರಿತು ನಾಗಮೋಹನ್ ದಾಸ್ ಅವರ ಸಲಹೆಗಳನ್ನೂ ಪಡೆಯಲಾಯಿತು. ಮೀಸಲಾತಿಗೆ ಸಂಬಂಧಿಸಿದ ವಿಚಾರಗಳ ಕುರಿತು ಅವರು ಮಾರ್ಗದರ್ಶನ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ವೇದಿಕೆ ಪ್ರಧಾನ ಕಾರ್ಯದರ್ಶಿ ಎಂ. ನಾಗರಾಜು, ಖಜಾಂಚಿ ಎಲ್.ಎ. ಮಂಜುನಾಥ್, ಕಾರ್ಯದರ್ಶಿಗಳಾದ ಚಂದ್ರಶೇಖರ, ರಾಜು, ಗೋಪಿನಾಥ ರಾಜು ನಿಯೋಗದಲ್ಲಿ ಇದ್ದರು.

ಟರ್ಮಿನಲ್‌-2: ಇಂದಿನಿಂದ ವಿಮಾನ ಹಾರಾಟ ಆರಂಭ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಎಲ್ಲ ಅಂತರರಾಷ್ಟ್ರೀಯ ವಿಮಾನಗಳು ಬುಧವಾರದಿಂದ (ಆಗಸ್ಟ್ 30ರಿಂದ) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌–2ರಿಂದ ಹಾರಾಟ ನಡೆಸಲಿವೆ. ದೇಶಿ ವಿಮಾನಗಳು ಮಾತ್ರ ಟರ್ಮಿನಲ್‌–1ರಿಂದ ಸಂಚಾರ ನಡೆಸಲಿವೆ.

ಮೊದಲಿನ ವೇಳಾಪಟ್ಟಿಯಂತೆ ಸೆಪ್ಟೆಂಬರ್ 1ರಿಂದ ಟಿ-2ನಲ್ಲಿ ಪೂರ್ಣ ಪ್ರಮಾಣದಲ್ಲಿ ಅಂತರರಾಷ್ಟ್ರೀಯ ವಿಮಾನ ಸಂಚಾರ ಆರಂಭವಾಗಬೇಕಿತ್ತು. ಆದರೆ, ನಿಗದಿತ ದಿನಕ್ಕಿಂತ ಎರಡು ದಿನ ಮೊದಲೇ ಸಂಚಾರ ಆರಂಭವಾಗಲಿದೆ.

ಇನ್ನು ಮುಂದೆ ಟಿ–2 ಸಂಪೂರ್ಣವಾಗಿ ಅಂತರರಾಷ್ಟ್ರೀಯ ವಿಮಾನಗಳ ಸಂಚಾರಕ್ಕೆ ಮಾತ್ರ ಸಿಮೀತವಾಗಲಿದೆ. ಒಟ್ಟು 27 ವಿದೇಶಿ ಹಾಗೂ ಎರಡು ದೇಶಿ ವಿಮಾನಯಾನ ಸಂಸ್ಥೆಗಳು ಇಲ್ಲಿ ಕಾರ್ಯಾಚರಣೆ ನಡೆಸಲಿವೆ. ಟರ್ಮಿನಲ್‌-1 ದೇಶೀಯ ವಿಮಾನ ಹಾರಾಟಕ್ಕೆ ಮಾತ್ರ ಸೀಮತ ಮಾಡಲಾಗುತ್ತದೆ.



ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2

ಟರ್ಮಿನಲ್‌–1ರಲ್ಲಿರುವ ಎಲ್ಲ ಸೇವೆಗಳನ್ನು ಟರ್ಮಿನಲ್‌-2ಕ್ಕೆ ಸ್ಥಳಾಂತರ ಮಾಡಲಾಗಿದೆ. ಕಸ್ಟಮ್ಸ್ ಕಚೇರಿ, ಡ್ಯೂಟಿ ಫ್ರೀ ಅಂಗಡಿಗಳು, ಚಿಲ್ಲರೆ ಮಳಿಗೆ, ಆಹಾರ ಮಾರಾಟ ಕೇಂದ್ರಗಳನ್ನು ಇಲ್ಲಿ ತೆರೆಯಲಾಗಿದೆ.

ಈ ಟರ್ಮಿನಲ್‌ನಲ್ಲಿ ಒಟ್ಟು 30 ನಿರ್ಗಮನ ಗೇಟ್‌ಗಳಿವೆ. ಅದರಲ್ಲಿ 10 ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಕಾರ್ಯಾಚರಣೆ ಮಾಡಲಿವೆ. ಇದರೊಂದಿಗೆ 20 ಇ-ವಿಸಾ ಕೌಂಟರ್ ತೆರೆಯಲಾಗಿದೆ ಎಂದು ವಿಮಾನ ನಿಲ್ದಾಣ ಪ್ರಕಟಣೆ ತಿಳಿಸಿದೆ.

ಹಸಿರು ಉದ್ಯಾನದ ಮಾದರಿಯ ಈ ಪರಿಸರಸ್ನೇಹಿ ಟರ್ಮಿನಲ್‌ನಲ್ಲಿ ಇದೇ ಜನವರಿ 15ರಿಂದ ದೇಶಿಯ ವಿಮಾನಯಾನ ಪ್ರಾರಂಭವಾಗಿತ್ತು. ಆರಂಭದಲ್ಲಿ ಆಕಾಸ್ ಏರ್‌ವೇಸ್, ಏರ್ ಏಷ್ಯಾ, ವಿಸ್ತಾರ ಸಂಸ್ಥೆಗಳ ವಿಮಾನಗಳು ಮಾತ್ರವೆ ಈ ಟರ್ಮಿನಲ್ ಬಳಕೆ ಮಾಡಿದ್ದವು. ಪ್ರಯಾಣಿಕರ ಅನುಕೂಲಕ್ಕಾಗಿ ಜುಲೈನಿಂದ ಟಿ-2ದಿಂದ ವೊಲ್ವೊ ವಾಯು ವಜ್ರ ಬಸ್ ಸಂಚಾರವನ್ನೂ ಆರಂಭಿಸಲಾಗಿದೆ.

ಅಶೋಕ ಚಕ್ರವರ್ತಿ ಜನ್ಮದಿನಾಚರಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಂದ್ರಯಾನ–3 ಯಶಸ್ವಿಯಾದಾಗ ಭಾರತದ ಗುರುತಾಗಿ ರೋವರ್‌ನಲ್ಲಿ ಅಶೋಕ ಚಕ್ರ ಮತ್ತು ಸಿಂಹಗಳ ಲಾಂಛನವನ್ನು ಇರಿಸಲಾಗಿದೆ. ಆದರೆ, ಅದೇ ಅಶೋಕ ಚಕ್ರವರ್ತಿಯನ್ನು ಸರ್ಕಾರಗಳು ಮೂಲೆಗುಂಪು ಮಾಡಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಅಶೋಕ ಚಕ್ರವರ್ತಿಯ ಜನ್ಮದಿನ ಆಚರಿಸಬೇಕು' ಎಂದು ಬಿ.ಆರ್. ಅಂಬೇಡ್ಕರ್ ದಲಿತ ಹೋರಾಟಗಾರರ ಒಕ್ಕೂಟದ ಅಧ್ಯಕ್ಷ ಶ್ರೀಧರ ಕಲಿವೀರ ಒತ್ತಾಯಿಸಿದರು.

ಒಕ್ಕೂಟವು ಸೋಮವಾರ ನಗರದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೌರ್ಯ ವಂಶದ ಸಂಸ್ಥಾಪಕ ಚಂದ್ರಗುಪ್ತ ಮೌರ್ಯರ ಜನ್ಮದಿನವನ್ನು ಕೂಡ ಸರ್ಕಾರ ಆಚರಿಸಬೇಕು. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಅಶೋಕ ಚಕ್ರವರ್ತಿ ಬೌದ್ಧ ಧರ್ಮ ಪಸರಿಸಿದ್ದರು.ಮುಂದೆಮತ್ತೆಮನುವಾದಿಗಳು ಈ ವಂಶವನ್ನು ಕೊನೆಗೊಳಿಸಿ ತಮ್ಮ ಪಾರುಪತ್ಯ ಮೆರೆದರು. ದಲಿತರು, ಹಿಂದುಳಿದ ವರ್ಗದವರು ತಮ್ಮ ಇತಿಹಾಸನ ಮರೆತಿದ್ದಾರೆ. ಅದನ್ನು ನೆನಪಿಸುವ ಕೆಲಸ ಮಾಡಬೇಕು ಎಂದರು.

'ಶಿಕ್ಷಣ, ಸಂಪತ್ತಿನಿಂದ ಬುದ್ಧ ಅನುಯಾಯಿಗಳನ್ನು ಮನುವಾದಿಗಳು ಹೊರಗಿಟ್ಟಿದ್ದರು. ಎಲ್ಲ ಶೋಷಣೆ, ಅತ್ಯಾಚಾರ, ಅನಾಚಾರಗಳ ಬಳಿಕವೂ ನಾವು ಉಳಿಯಲು ನಮ್ಮ ಆಹಾರ ಪದ್ಧತಿಯೇ ಕಾರಣ. ನಮ್ಮ ಆಹಾರದ ಹಕ್ಕನ್ನು ಉಳಿಸಿಕೊಳ್ಳಬೇಕು' ಎಂದರು.

'ಪರಿಶಿಷ್ಟ ಜಾತಿ/ ಪಂಗಡದ ಅಭಿವೃದ್ಧಿಗಾಗಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯನ್ನು ಸಿದ್ದರಾಮಯ್ಯ–ಆಂಜನೇಯ ಜೋಡಿ ಜಾರಿಗೆ ತಂದರು. ಆದರೆ, ಮನುವಾದಿ ಅಧಿಕಾರಿಗಳು ಅದಕ್ಕೆ 7ಡಿ ಕಲಂ ಸೇರಿಸಿ ವರ್ಷಕ್ಕೆ ₹ 10 ಸಾವಿರ ಕೋಟಿ ವಂಚಿಸಿದರು' ಎಂದರು.

ಒಕ್ಕೂಟದ ರಾಜ್ಯ ಕಾರ್ಯಾಧ್ಯಕ್ಷ ಎಂ. ಗುರುಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಗೋಷ್ಠಿಗಳು ನಡೆದವು.

ಕೆಎಸ್‌ಆರ್‌ಟಿಸಿ ಮುಡಿಗೆ ಮತ್ತೆ 4 ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ (ಕೆಎಸ್‌ಆರ್‌ಟಿಸಿ) ಮತ್ತೆ ನಾಲ್ಕು ಪ್ರಶಸ್ತಿಗಳು ಸಂದಿವೆ.

'ವೀ ಕನೆಕ್ಟ್ ಇಂಡಿಯಾ ಮೀಡಿಯಾ ಅಂಡ್ ರಿಸರ್ಚ್' ನೀಡುವ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಭಾಜನವಾಗಿದೆ.

ಕಾರ್ಮಿಕ ಕಲ್ಯಾಣ ಉಪಕ್ರಮದ ಉತ್ಕೃಷ್ಟ ಸಾಧನೆ, ಸಾರಿಗೆ ಸುರಕ್ಷತಾ ಕ್ಷೇತ್ರದಲ್ಲಿ ಅತ್ಯುನ್ನತ ಕಾರ್ಯ ಸಾಧನೆ, ಅತ್ಯುನ್ನತ ಬ್ರ್ಯಾಂಡಿಂಗ್ ಹಾಗೂ ಮಾರ್ಕೆಟಿಂಗ್, ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗೆ ಏಷ್ಯಾದ ಬ್ಯುಸಿನೆಸ್ ಕ್ವಾಲಿಟಿಯ ನಾಲ್ಕು ಪ್ರಶಸ್ತಿಗಳು ಸಂದಿವೆ.

ಪ್ರಶಸ್ತಿ ಪ್ರದಾನ ಸಮಾರಂಭವು ಸೆ.29 ರಂದು ದೆಹಲಿಯಲ್ಲಿ ನಡೆಯಲಿದೆ. ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಹಾಗೂ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ರಾಜ್ಯ ಸಚಿವ ರಾಮದಾಸ್ ಅಠಾವಳೆ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹಳಿಗಳ ನಡುವೆ ಮಲಗಿ ಚಲಿಸುತ್ತಿದ್ದ ರೈಲಿನಿಂದ ಪಾರಾದ ಮಹಿಳೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ರಾಜಾನುಕುಂಟೆ ಬಳಿ ಚಲಿಸುತ್ತಿದ್ದ ರೈಲಿನ ಅಡಿಯಲ್ಲಿ ಅಂಗಾತ ಮಲಗಿ ಮಹಿಳೆಯೊಬ್ಬರು ಜೀವ ಉಳಿಸಿಕೊಂಡಿದ್ದಾರೆ. ಇತ್ತೀಚೆಗೆ ಘಟನೆ ನಡೆದಿದ್ದು ಅದರ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ರಾಜಾನುಕುಂಟೆ ಲೆವೆಲ್ ಕ್ರಾಸಿಂಗ್‌ನಲ್ಲಿ ರೈಲು ನಿಂತಿದ್ದರಿಂದ ಮಹಿಳೆ ರೈಲಿನ ಅಡಿಯಲ್ಲೇ ನುಗ್ಗಿ ಆ ಬದಿಗೆ ತೆರಳುತ್ತಿದ್ದರು. ಈ ವೇಳೆ ರೈಲು ಏಕಾಏಕಿ ಚಲಿಸಲಾರಂಭಿಸಿದೆ. ವಿಚಲಿತರಾಗದ ಮಹಿಳೆ, ರೈಲಿನ ಅಡಿಯಲ್ಲಿ ಅಂಗಾತ ಮಲಗಿದ್ದಾರೆ. ರೈಲು ಸಾಗಿ ಹೋದ ನಂತರ ಎದ್ದು ಬಂದಿದ್ದಾರೆ.

ತಿಮ್ಮಸಂದ್ರ, ಅದ್ದಿಗಾನಹಳ್ಳಿ, ತರಹುಣಸೆ, ಬೆಟ್ಟಲಸೂರು, ಬೆಟ್ಟಹಳ್ಳಿ ಹಾಗೂ ವಿಮಾನ ನಿಲ್ದಾಣದ ಮೂಲಕ ಬೇರೆ ರಾಜ್ಯಗಳಿಂದ ಕೆಲಸ ಅರಸಿ ಬರುವಂತಹ ಕೂಲಿ ಕಾರ್ಮಿಕರು ದಿನನಿತ್ಯ ರಾಜನಕುಂಟೆ ತಲುಪಲು ಈ ರೈಲು ಹಳಿಯನ್ನು ದಾಟಿ ಸಾಗಬೇಕಾಗಿದೆ.

'ಪಕ್ಕದಲ್ಲಿಯೇ ಜನರ ಅನುಕೂಲಕ್ಕಾಗಿ ರೈಲ್ವೆ ಇಲಾಖೆ, ಸ್ಕೈವಾಕ್ ನಿರ್ಮಾಣ ಮಾಡಿದ್ದರೂ ಸಹ ಕೆಲವರು ಸ್ಕೈವಾಕ್ ಉಪಯೋಗಿಸದೇ ಸಮಯ ಉಳಿಸಲು ಅವಸರವಾಗಿ ರೈಲು ಹಳಿ ದಾಟಲು, ನಿಂತಿರುವ ಸರಕು ಸಾಗಣೆ ರೈಲುಗಳ ಮಧ್ಯೆ ಹಳಿ ದಾಟಿ ಸಾಗುವಂತಹ ದುಸ್ಸಾಹಸಕ್ಕೆ ಮುಂದಾಗುತ್ತಿರುವುದು ಇಂತಹ ಘಟನೆಗಳಿಗೆ ಕಾರಣವಾಗುತ್ತಿದೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

'ಸಾರ್ವಜನಿಕರು, ರೈಲ್ವೆ ಇಲಾಖೆ ನಿರ್ಮಿಸಿರುವಂತಹ ಸ್ಕೈವಾಕ್ ಬಳಕೆ ಮಾಡದೇ ಬೇಜವಾಬ್ದಾರಿಯಿಂದ ಗೂಡ್ಸ್ ರೈಲುಗಳ ಅಡಿ ನುಗ್ಗಿ ರಸ್ತೆ ದಾಟುವುದು ಇಲ್ಲಿ ಸಾಮಾನ್ಯವಾಗಿದೆ. ಇದರಿಂದ ಅವರ ಪ್ರಾಣಕ್ಕೆ ಕುತ್ತು ತಂದುಕೊಳ್ಳುತ್ತಿದ್ದಾರೆ. ಜನರಿಗೆ ಅರಿವು ಮೂಡಿಸಲು ರೈಲ್ವೆ ಇಲಾಖೆ ಹಲವು ಫಲಕಗಳನ್ನು ಅಳವಡಿಸಿದ್ದರೂ ಯಾವುದೇ ಪ್ರಯೋಜನ ಆಗುತ್ತಿಲ್ಲ' ಎಂದು ಅದ್ದಿಗಾನಹಳ್ಳಿ ನಿವಾಸಿ ಅಂಬುಜ ಹೇಳಿದರು.

ಕೆಳಸೇತುವೆ ಕಾಮಗಾರಿಯು ಮಂಜೂರಾಗಿದ್ದು, ಜರೂರಾಗಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಸಾರ್ವಜನಿಕರು ಮುಕ್ತವಾಗಿ ಓಡಾಡಲು ಅನುಕೂಲ ಮಾಡಿಕೊಡಬೇಕೆಂದು ಸ್ಥಳೀಯ ನಿವಾಸಿ ಸವಿತಾ ಒತ್ತಾಯಿಸಿದ್ದಾರೆ.

ನಿತ್ಯ 5 ಟನ್ ಹಸಿ ತ್ಯಾಜ್ಯ ಸಂಸ್ಕರಣೆ; ಶೀಘ್ರವೆ ಕಾರ್ಯಾರಂಭ: ಜಯರಾಂ ರಾಯಪುರ

ಪಟ್ಟಾಭಿರಾಮನಗರದಲ್ಲಿ ಜೈವಿಕ ಅನಿಲ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ವಲಯದ ಪಟ್ಟಾಭಿರಾಮನಗರದಲ್ಲಿ ನಿತ್ಯ ಸುಮಾರು 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ, ಜೈವಿಕ ಅನಿಲ ಉತ್ಪಾದಿಸುವ ಘಟಕ ಸಿದ್ಧವಾಗಿದೆ.

ಜೈವಿಕ ಅನಿಲ ಘಟಕಗಳನ್ನು ಪರಿಶೀಲನೆ ನಡೆಸಿದ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಪಟ್ಟಾಭಿರಾಮನಗರದಲ್ಲಿ ಉನ್ನತೀಕರಿಸಿರುವ ಘಟಕ ಶೀಘ್ರವೇ ಕಾರ್ಯಾರಂಭ ಮಾಡಲಿದೆ ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಹಸಿ ತ್ಯಾಜ್ಯವನ್ನು ಆಯಾ ಪ್ರದೇಶಗಳಲ್ಲಿಯೇ ಸಂಸ್ಕರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಇರುವ ಜೈವಿಕ ಅನಿಲ ಘಟಕಗಳನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡು ಹಸಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸಿ ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಾಭಿರಾಮನಗರದಲ್ಲಿ ಸ್ಥಗಿತವಾಗಿದ್ದ ಜೈವಿಕ ಅನಿಲ ಘಟಕವನ್ನು ಉನ್ನತೀಕರಿಸಲಾಗಿದೆ. ಪ್ರತಿನಿತ್ಯ 5 ಟನ್ ಹಸಿ ತ್ಯಾಜ್ಯವನ್ನು ಸ್ಕಂಸ್ಕರಣೆ ಮಾಡಲಿದ್ದು, ಅದರಿಂದ 300 ಕ್ಯೂಬಿಕ್ ಮೀಟರ್ ಜೈವಿಕ ಅನಿಲ ಉತ್ಪಾದಿಸಬಹುದಾಗಿದೆ. ಪ್ರಾಯೋಗಿಕವಾಗಿ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ವಿದ್ಯುತ್ ಆಗಿ ಪರಿವರ್ತಿಸಿ ಹತ್ತಿರದ ಉದ್ಯಾನ ಹಾಗೂ ಬೀದಿ ದೀಪಗಳಿಗೆ ಬಳಸಿಕೊಳ್ಳಲಾಗುತ್ತದೆ ಎಂದರು.

ಜೈವಿಕ ಅನಿಲ ಘಟಕದಿಂದ ಬರುವ ತ್ಯಾಜ್ಯದ ಸ್ಲರಿಯನ್ನು ದಕ್ಷಿಣ ವಲಯ ವ್ಯಾಪ್ತಿಯಲ್ಲಿರುವ ಉದ್ಯಾನಗಳಿಗೆ ಬಳಸಿಕೊಳ್ಳಲು ಸೂಚನೆ ನೀಡಲಾಯಿತು.

ಪಟ್ಟಾಭಿರಾಮನಗರದಲ್ಲಿ ಉನ್ನತೀಕರಿಸಲಾಗಿರುವ ಜೈವಿಕ ಅನಿಲ ಉತ್ಪಾದನಾ ಘಟಕವನ್ನು ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ಮಂಗಳವಾರ ಪರಿಶೀಲಿಸಿದರು

ಯಡಿಯೂರಿನ ಘಟಕ ವೀಕ್ಷಣೆ

ಯಡಿಯೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಜೈವಿಕ ಅನಿಲ ಘಟಕವು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಅದರ ಕಾರ್ಯವೈಖರಿಯನ್ನು ಪರಿಶೀಲನೆ ನಡೆಸಿದರು.

ಈ ಘಟಕವು ಪ್ರತಿನಿತ್ಯ 5 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಣೆ ಮಾಡುತ್ತಿದ್ದು, 300 ಕ್ಯೂಬಿಕ್ ಮೀಟರ್ ಜೈವಿಕ ಅನಿಲ ಉತ್ಪತ್ತಿಯಾಗುತ್ತಿದೆ. ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ವಿದ್ಯುತ್ ಆಗಿ ಪರಿವರ್ತಿಸಿ ಉದ್ಯಾನ ಹಾಗೂ ಬೀದಿ ಬದಿ ವಿದ್ಯುತ್ ದೀಪಗಳ ಬಳಕೆಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಜಯರಾಂ ತಿಳಿಸಿದರು.

ವಲಯ ಮುಖ್ಯ ಎಂಜಿನಿಯರ್ ರಾಜೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸಂತೋಷ್, ಶಶಿಕಲಾ ಇದ್ದರು.





ಭ್ರೂಣದ ಲಕ್ಷಣ ಏನು?

ಕೊಳ್ಳೇಗಾಲ ಶರ್ಮ

ಭ್ರೂಣದ ವ್ಯಾಖ್ಯಾನ ಬದಲಾಗಲಿದೆಯೇ? ಅದು ಬದಲಾದರೆ ನಮ್ಮ ಮನಸ್ಸಿನ ಚಿತ್ರಣವೂ ಬದಲಾಗುವುದೇ?

‘ಭ್ರೂಣಹತ್ಯೆ’! ಈ ಶಬ್ದ ಕೇಳಿದರೂ ಸಾಕು ಸಿಟ್ಟು, ರೇಜಿಗೆಯಾಗುತ್ತದಲ್ಲವೆ? ಇನ್ನೂ ಸ್ವಂತ ಬಾಳು ಬಾಳಲು ಆಗದ ಜೀವವೊಂದನ್ನು ಕೊನೆಗೊಳಿಸಿದ್ದಾರಲ್ಲ ಎಂದು ಅನಿಸುತ್ತದೆ. ಆದರೆ ಇನ್ನು ಇದೆಲ್ಲ ಬದಲಾಗಬಹುದು. ಏಕೆಂದರೆ ‘ಭ್ರೂಣ’ ಎನ್ನುವುದರ ವ್ಯಾಖ್ಯಾನವನ್ನೇ ಬದಲಿಸಬೇಕು ಎಂಬ ಪ್ರಸ್ತಾವ ಬಂದಿದೆ. ಭ್ರೂಣ ಎನ್ನುವುದಕ್ಕೆ ಹೊಸ ವ್ಯಾಖ್ಯಾನ ಬೇಕು ಎಂದು ಆಸ್ಟ್ರಿಯನ್ ಅಕಾಡೆಮಿ ಆಫ್ ಸೈನ್ಸಸಿನ ಜೀವವಿಜ್ಞಾನಿ ನಿಕೊಲಾಸ್ ರಿವ್ರಾನ್ ಮತ್ತು ಸಂಗಡಿಗರು ಹೊಸದೊಂದು ವಾದವನ್ನು ಮುಂದಿಟ್ಟಿದ್ದಾರೆ ಎಂದು ‘ಸೆಲ್’ ಪತ್ರಿಕೆ ವರದಿ ಮಾಡಿದೆ.

ಏನಿದು ಹೊಸ ವ್ಯಾಖ್ಯಾನ ಎಂದಿರಾ? ಭ್ರೂಣ ಎಂದರೆ ನಾವು ಇದುವರೆಗೂ ತಿಳಿದಿದ್ದದ್ದು, ಕಣ್ಣು, ಕಿವಿ, ಮೂಗು ಬೆಳೆದ ಅಲ್ಪ, ಸ್ವಲ್ಪ ಇಲಿ, ಮನುಷ್ಯ ಅಥವಾ ಯಾವುದೇ ಜೀವಿಯ ಆಕಾರ ಇರುವಂತಹುದನ್ನು ಅಷ್ಟೆ. ಈಗಲೂ ನಮಗೆ ನೆನಪಿಗೆ ಬರುವುದು ಇಂತಹ ಭ್ರೂಣವೇ. ಆದರೆ ಕಳೆದ ಮೂರ್ನಾಲ್ಕು ದಶಕಗಳಲ್ಲಿ ಭ್ರೂಣದ ವ್ಯಾಖ್ಯೆ ಬದಲಾಗಿದೆ. ಭ್ರೂಣ ಎನ್ನುವುದು ಈಗ ಕೇವಲ ಕೋಶಗಳ ಮುದ್ದೆಯೂ ಆಗಬಹುದು. ಅದರಲ್ಲಿ ನಿರ್ದಿಷ್ಟ ಅಂಗಗಳ ಕುರುಹು ಇರಲೇ ಬೇಕು ಅಂತೇನಲ್ಲ. ಈ ಬದಲಾವಣೆಗೆ ಕಾರಣವಿದೆ. ತಂತ್ರಜ್ಞಾನ ಬೆಳೆದಿದೆ. ಈಗ ನಾವು ಹೆಣ್ಣಿನ ದೇಹದ ಒಂದು ಕೋಶ, ಹಾಗೂ ತಂದೆಯ ದೇಹದ ಒಂದು ಜೀವಕೋಶವನ್ನು ತೆಗೆದು, ಹೊರಗೆ ಪ್ರನಾಳದಲ್ಲಿ ಭ್ರೂಣವನ್ನಾಗಿಸಬಹುದು. ಇದಕ್ಕೆ ತಾಯಿಯ ಗರ್ಭದ



ಆಸರೆ ಬೇಕೇ ಬೇಕು ಎಂದೇನಿಲ್ಲ. ಆದರೆ ಅನಂತರ ಅದು ಶಿಶುವಾಗಿ ಬೆಳೆಯಬೇಕಾದಾಗ ಮಾತ್ರ ತಾಯಿಯ ಗರ್ಭದೊಳಗೆ ಸೇರಿಸಬೇಕು. ಸಾಮಾನ್ಯವಾಗಿ ಇದು ಮೂವತ್ತೆರಡರಿಂದ ಅರವತ್ತನಾಲ್ಕು ಜೀವಕೋಶಗಳ ಮುದ್ದೆಯಾದ ಹಂತ.

ಯಾವುದೇ ಭ್ರೂಣವೂ ಈ ಮುದ್ದೆಯ ಹಂತವನ್ನು ಮೀರಿದ ನಂತರ ‘ಜೀವಿ’ ಎನ್ನಿಸಿಕೊಳ್ಳುತ್ತದೆ. ಆಗಲೂ ಅದರಲ್ಲಿ ಕಿವಿ, ಕಣ್ಣು, ಹೃದಯ ಮೊದಲಾದ ಅಂಗಗಳು ಕಾಣಿಸಿಕೊಂಡಿರುವುದಿಲ್ಲ. ಉದಾಹರಣೆಗೆ, ಕನಿಷ್ಠ ಎರಡು ತಿಂಗಳ ಬಸಿರು ಅಂದರೆ ಎಂಟು ವಾರಗಳು ಪೂರ್ತಿಯಾಗುವವರೆಗೂ ಭ್ರೂಣದಲ್ಲಿ ಮನುಷ್ಯರ ಪಿಂಡವೆಂಬ ಕುರುಹೂ ಇರುವುದಿಲ್ಲ. ಹೀಗಾಗಿಯೇ ಅದಾದ ನಂತರ ಯಾವುದೇ ಬಸಿರನ್ನೂ ಕಳೆಯಲು ನಮ್ಮ ದೇಶದಲ್ಲಿ ಅನುಮತಿ ಇಲ್ಲ. ಅದು ಭ್ರೂಣಹತ್ಯೆ ಎನ್ನಿಸಿಕೊಳ್ಳುತ್ತದೆ. ಇದೂ ಬದಲಾಗಬೇಕು. ಭ್ರೂಣ ಎಂದರೆ ಕೇವಲ ಇಷ್ಟೇ ಸಂಖ್ಯೆಗಳ ಕೋಶಗಳ ಮುದ್ದೆ ಆಗಬೇಕಿಲ್ಲ. ಇದೀಗ ಪ್ರಯೋಗಾಲಯಗಳಲ್ಲಿ ಬೆಳೆಸುತ್ತಿರುವ ‘ಎಂಬ್ರಿಯಾಯಿಡ್’ ಎನ್ನುವ ಅಂಗಾಂಶಗಳನ್ನೂ ‘ಭ್ರೂಣ’ ಎಂದೇ ವ್ಯಾಖ್ಯಾನಿಸಬೇಕು

> ‘ಭ್ರೂಣ’ ಎಂದು ಯಾವಾಗ ಕರೆಯಬೇಕು? ‘ಪಿಂಡ’ ಎಂದು ಯಾವಾಗ ಕರೆಯಬೇಕು? ಹೊಸ ವ್ಯಾಖ್ಯೆಯೊಂದು ಸಿದ್ಧವಾಗಿದೆ...

ಎನ್ನುವುದು ರಿವ್ರಾನ್ ತಂಡದ ವಾದ. ಇದಕ್ಕೆ ಒಂದು ಕಾರಣವಿದೆ. ಇದೀಗ ತಂತ್ರಜ್ಞಾನದ ಸುಧಾರಣೆಯಿಂದಾಗಿ ಮನುಷ್ಯರ ಭ್ರೂಣಗಳನ್ನು ಕುರಿತು ಮಾಡುವ ಅಧ್ಯಯನಗಳನ್ನು ಈ ಎಂಬ್ರಿಯಾಯಿಡ್‌ಗಳನ್ನು ಬಳಸಿ ಮಾಡುತ್ತಿದ್ದಾರೆ. ಆದರೆ ಇವು ನಿಜವಾಗಿಯೂ ಹೊಸ ಜೀವ ಅನ್ನಿಸಿಕೊಳ್ಳದ ಭ್ರೂಣಗಳೋ, ಅಥವಾ ಜೀವವಾಗುವ ಸ್ಥಿತಿ ಮುಟ್ಟಿದವುಗಳೋ ಎನ್ನುವ ವಿವಾದವಿದೆ. ರಿವ್ರಾನ್ ವಾದ ಈ ನಿಟ್ಟಿನಲ್ಲಿ.

ನಲವತ್ತು ವರ್ಷಗಳ ಹಿಂದಿನ ಮಾತು. ಅಲ್ಟ್ರಾ ಸೌಂಡ್ ಪರೀಕ್ಷೆಯಿಂದ ಹುಟ್ಟುವ ಶಿಶುವಿಗೆ ಹಾನಿಯಾಗಬಹುದೇ ಎನ್ನುವ ಬಗ್ಗೆ ಸಂಶೋಧನೆ ನಡೆಸುತ್ತಿದ್ದೆವು. ಮನುಷ್ಯಭ್ರೂಣಗಳ ಮೇಲೆ, ಬಸುರಿಯರ ಮೇಲೆ ಪ್ರಯೋಗ ನಡೆಸುವುದು ಆಗುವುದಿಲ್ಲವಲ್ಲ. ಹೀಗಾಗಿ ನಾವೇ ಸಾಕಿ ಬೆಳೆಸಿದ, ಗರ್ಭಿಣಿ–ಇಲಿಗಳನ್ನು ಅಲ್ಟ್ರಾ ಸೌಂಡ್ ವಿಕಿರಣಗಳಿಗೆ ಒಡ್ಡಿ ಪ್ರಯೋಗ ಮಾಡುತ್ತಿದ್ದೆವು. ಈ ಇಲಿಗಳನ್ನು ವಿವಿಧ ಕಾಲಾವಧಿಯ ನಂತರ ಕೊಂದು, ಗರ್ಭದೊಳಗಿನ ಭ್ರೂಣವನ್ನು ತೆಗೆದು, ಅವುಗಳನ್ನೂ ಕತ್ತರಿಸಿ, ವಿವಿಧ ಅಂಗಾಂಶಗಳ ಪರೀಕ್ಷೆ ನಡೆಸುತ್ತಿದ್ದೆವು. ಅಥವಾ ಅವುಗಳಿಂದ ಹುಟ್ಟಿದ ಮರಿಗಳನ್ನು ಅಧ್ಯಯನ ಮಾಡುತ್ತಿದ್ದೆವು.

ಅಂಗಾಂಶಗಳ ಕೃಷಿ, ಅದರಲ್ಲಿಯೂ ಮಾನವನ ಅಂಗಾಂಶಗಳ ಕೃಷಿ ಇನ್ನೂ ಬೆಳೆಯುತ್ತಿದ್ದ ಕಾಲದಲ್ಲಿ ಇದೊಂದೇ ಮನುಷ್ಯನ ಕುರಿತ ಅಧ್ಯಯನದ ದಾರಿಯಾಗಿತ್ತು. ಕಾಲ ಬದಲಾಗಿದೆ. ಇವತ್ತು ಪ್ರಾಣಿಗಳ. ಬದಲಿಗೆ ನೇರವಾಗಿ ಅಂಗಾಂಶಗಳನ್ನಷ್ಟೆ ಬಳಸಿ ಅಧ್ಯಯನ ನಡೆಸುವುದು ಆರಂಭವಾಗಿದೆ. ಹಾಗೆಯೇ ಮನುಷ್ಯನ ಭ್ರೂಣಗಳನ್ನೂ ಅಧ್ಯಯನ ಮಾಡಲಾಗುತ್ತಿದೆ. ಗರ್ಭಸ್ತವಾಗುವುದಕ್ಕೂ ಮುನ್ನಾ ಹಂತದ ಭ್ರೂಣಗಳನ್ನಷ್ಟೆ ಹೀಗೆ ಅಧ್ಯಯನಗಳಿಗೆ ಬಳಸುವುದು ವಾಡಿಕೆ. ಅಂಗಗಳ ಕುರುಹೂ ಇಲ್ಲದ ಇವನ್ನು ಜೀವ ಎನ್ನಲಾಗುವುದಿಲ್ಲವಾದ್ದರಿಂದ, ಅವನ್ನು ಕಸದ ಬುಟ್ಟಿಗೆ ಬಿಸಾಡುವುದೂ ಅನೈತಿಕವಲ್ಲ; ಕಾನೂನು ಬಾಹಿರವೂ ಅಲ್ಲ.

ಇತ್ತೀಚೆಗೆ ಇನ್ನೂ ಒಂದು ಸುಧಾರಣೆ ಆಗಿದೆ. ಭ್ರೂಣಗಳನ್ನು ಇನ್ನಷ್ಟು ಕಾಲ ಬೆಳೆಸಿ, ಅವು ಗರ್ಭದ ಹೊರಗೆ ನಿಜವಾಗಿಯೂ ಪಿಂಡವಾಗಬಹುದೋ ಎಂದು ಪರೀಕ್ಷಿಸುವುದು. ಹೀಗೆ ಬೆಳೆಸಿದ ಭ್ರೂಣಗಳನ್ನೇ ‘ಎಂಬ್ರಿಯಾಯಿಡ್’ ಎನ್ನುತ್ತಾರೆ. ಇವು ಕೇವಲ ಜೀವಕೋಶಗಳ ಮುದ್ದೆಯಲ್ಲ. ಜೀವಕೋಶಗಳ ಹಲವು ಪದರಗಳಾಗಿರುತ್ತವೆ. ಒಳಗೊಂದು ಪದರ ವಿಶೇಷವಾಗಿ ರೂಪುಗೊಂಡಿರುತ್ತದೆ. ಅದು ಮುಂದೆ ವಿವಿಧ ಅಂಗಗಳಾಗಿ ರೂಪುಗೊಳ್ಳುವ ‘ಎಪಿಬ್ಲಾಸ್ಟ್’. ಇದನ್ನು ಇನ್ನಷ್ಟು ಬೆಳೆಸಿದರೆ, ಕಶೇರುಕಗಳಲ್ಲಿ ಕಾಣುವ ‘ನರದಂಡ’ (ನ್ಯೂರೋಕಾರ್ಡ್) ಎನ್ನುವ ಮುಂದೆ ಮಿದುಳು, ನರಮಂಡಲಗಳಾಗುವ ಅಂಗಾಂಶ ಬೆಳೆಯುತ್ತದೆ. ಹೃದಯ ಮೊಳೆಯುವುದನ್ನೂ ಕಾಣಬಹುದು. ಜೊತೆಗೆ ಒಂದೆರಡು ಪದರ ಜೀವಾಧಾರವಾಗಿಯೂ ಬೆಳೆದಿರುತ್ತವೆ. ಇವು ಅಂಗಗಳಾಗುವುದೂ ಇಲ್ಲ. ಜೀವಿಯಲ್ಲಿಯೂ ಇರುವುದಿಲ್ಲ. ಇಂತಹ ಎಂಬ್ರಿಯಾಯಿಡನ್ನು ಸದ್ಯಕ್ಕೆ ವಿವಿಧ ಬಗೆಯ ವೈಜ್ಞಾನಿಕ ಅಧ್ಯಯನಗಳಿಗಾಗಿ ಮಾತ್ರ ಬಳಸಲಾಗುತ್ತಿದೆ. ಅನಂತರ ಇವು ಕೂಡ ಕಸದ ಬುಟ್ಟಿಗೇ!

ಆದರೆ ಇವನ್ನು ಭ್ರೂಣ ಎಂದಷ್ಟೆ ಹೇಳಬಹುದೇ? ವಿವಿಧ ಅಂಗಗಳ ಮೊಳಕೆ ಕಾಣುವ ಈ ಹಂತ ಜೀವಿ ಅಲ್ಲವೇ? ಹಾಗೆಂದಾಗ ಈ ರೀತಿಯ ಅಧ್ಯಯನಗಳನ್ನು ಕೈಗೊಳ್ಳುವವರೆಲ್ಲರೂ ಅನೈತಿಕ ಹಾಗೂ ಕಾನೂನುಬಾಹಿರ ಕೆಲಸ ಮಾಡುತ್ತಿದ್ದಾರೆಂದು ಅಲ್ಲವೇ? ಆದ್ದರಿಂದ ಭ್ರೂಣ ಎನ್ನುವ ವಿವರಣೆ ಕಾನೂನಿನಲ್ಲಿಯೂ, ವಿಜ್ಞಾನಿಗಳ ಮಟ್ಟಿಗೂ ಬದಲಾಗಬೇಕು. ‘ಎಂಬ್ರಿಯಾಯಿಡ್’ ಎನ್ನುವ ಈ ಅಂಗಾಂಶವನ್ನೂ ಭ್ರೂಣ ಎಂದೇ ವ್ಯಾಖ್ಯಾನ ಮಾಡಬೇಕು ಎನ್ನುವುದು ರಿವ್ರಾನ್ ತಂಡದ ವಾದ. ಅಲ್ಲದೆ ಭ್ರೂಣ ಪಿಂಡವಾಗುವ ಹಂತವನ್ನು ನಿರ್ಧರಿಸುವ ವಿಧಾನವನ್ನೂ ಇವರು ಚರ್ಚಿಸಿದ್ದಾರೆ. ಇವರು ಭ್ರೂಣ ಎಂಬುದಕ್ಕೆ ನೀಡಿರುವ ವ್ಯಾಖ್ಯಾನ: ‘ಪಿಂಡವಾಗಿ ಬೆಳೆಯಬಲ್ಲ ಸಾಮರ್ಥ್ಯವುಳ್ಳ ಜೀವಕೋಶಗಳ ಮುದ್ದೆ’ ಎಂಬ ವಿವರಣೆಯ ಜೊತೆಗೆ ‘ಪಿಂಡಕ್ಕೆ ಬೆಂಬಲವಾಗಿರುವ ಭ್ರೂಣಾತೀತ ಪದರಗಳು ಹಾಗೂ ಗರ್ಭಸ್ಥವಾಗಲು ನೆರವಾಗುವ ಜೀವಕೋಶಗಳ ಪದರಗಳಿರುವ’ ‘ಜೀವಕೋಶಗಳ ಮುದ್ದೆ’ ಎನ್ನಬೇಕು. ಇದು ಕಾನೂನಿನ ಪ್ರಕಾರ ಭ್ರೂಣ ಎಂದಾಗಬೇಕು ಎಂದು ಇವರು ಸೂಚಿಸಿದ್ದಾರೆ.

ಅಯ್ಯೋ. ಅಷ್ಟೇನಾ? ‘ಭ್ರೂಣ’ ಎಂದು ಯಾವಾಗ ಕರೆಯಬೇಕು. ‘ಪಿಂಡ’ ಎಂದು ಯಾವಾಗ ಎನ್ನುವುದು ಅದೆಂಥ ಸಮಸ್ಯೆ ಎಂದಿರಾ? ನಿಜ. ಹಾಗೆಯೇ ಮೊನ್ನೆ ಸುಪ್ರೀಂ ಕೋರ್ಟು ತೀರ್ಪುಗಳಲ್ಲಿ ಮಹಿಳೆಯರ ಕುರಿತು ಎಂತಹ ಪದಗಳನ್ನು ಬಳಸಬೇಕು ಎಂದು ವ್ಯಾಖ್ಯಾನಿಸಿದೆಯಲ್ಲ. ಅದು ತೀರ್ಪಿನ ಮಟ್ಟಿಗೆ. ಜನರೂ ಹಾಗೆಯೇ ಭಾವಿಸುತ್ತಾರೆಂದು ನಂಬುವುದು ಹೇಗೆ ಕಷ್ಟವೋ ಹಾಗೆಯೇ ಇದುವೂ. ವಿಜ್ಞಾನಿಗಳ ವ್ಯಾಖ್ಯಾನ ಬದಲಾಗಬಹುದು. ನೀತಿ ಹಾಗೂ ಕಾನೂನಿಗೆ ಅದು ಸರಿ ಎನ್ನಿಸಬಹುದು. ಆದರೆ ಅದು ನಮ್ಮ ಮನಸ್ಸಿಗಾಗುವ ರೇಜಿಗೆಯನ್ನು, ಹಿಂಸೆಯನ್ನು ಕಡಿಮೆ ಮಾಡಬಹುದೇ? ಗೊತ್ತಿಲ್ಲ ಎನ್ನುವುದೇ ಸರಿ ಉತ್ತರ.

ಕೀಟಗಳನ್ನು ಉಳಿಸಿ

ಬಿಂಡಿಗನವಿಲೆ ಭಗವಾನ್

ಹತ್ತು ನಿಮಿಷ ಮೊಬೈಲ್ ಕಾಣದಿದ್ದರೆ ನಮ್ಮ ಕಳವಳ, ಚಡಪಡಿಕೆ ಹೇಳತೀರದು. ಕುಟುಂಬಸ್ಥರು, ಗೆಳೆಯರು, ಸಹೋದ್ಯೋಗಿಗಳು ಕಳೆದೆ ಹೋಗಿರುತ್ತಾರೆ! ವ್ಯಾಪಾರ, ವಹಿವಾಟೂ ಸ್ಥಗಿತವಾಗಿರುತ್ತದೆ. ಸಂಪರ್ಕ, ಸಂವಹನ ಅಷ್ಟು ಮಹತ್ವದ್ದು. ಖಗ, ಮೃಗಗಳ ಜಗತ್ತಿನಲ್ಲೂ ಸಂವಹನ ಎನ್ನುವುದಿದೆ. ಅದಕ್ಕೆ ಕಿಂಚಿತ್ತು ಅಡಚಣೆಯಾದರೂ ಜೀವಿಗಳ ಜಂಘಾಬಲವೇ ಉಡುಗಿರುತ್ತದೆ. ಹೌದು, ಈ ಸಮಸ್ಯೆಗೆ ಕಾರಣವಾಗುವುದು ಯಾವುದು ಗೊತ್ತೇ? ವಾಯುಮಾಲಿನ್ಯ.

ವಾಯುಮಾಲಿನ್ಯದಿಂದ ತೀವ್ರವಾಗಿ ಪರಿತಪಿಸುವ ಜೀವಿಗಳೆಂದರೆ ಕೀಟಗಳು. ಕೀಟಗಳಿಗೆ ಮುಂಚಾಚಿರುವ ಜೋಡಿ ಮೀಸೆಗಳೇ ಸ್ಪರ್ಶಾಂಗ (antenna). ಈ ‘ಕುಡಿಮೀಸೆ’ಯಿಂದಲೇ ಅವುಗಳ ಆಹಾರ ಅನ್ವೇಷಣೆ, ಸಂಗಾತಿಯ ಹುಡುಕಾಟ. ಕೈಗಾರಿಕೆ, ಸಾರಿಗೆ, ಕಾಡ್ಗಿಚ್ಚಿನ ದುರ್ದೆಸೆಯಿಂದ ವಾಯು ಮಲಿನಗೊಂಡರೆ ದೂಳಿನ ಕಣಗಳು ‘ಕುಡಿಮೀಸೆ’ಯನ್ನು ಆವರಿಸುತ್ತವೆ. ಹಾಗಾಗಿ ಕೀಟಗಳು ನಿಸ್ತೇಜಗೊಂಡು ದಿಕ್ಕೆಡುತ್ತವೆ. ಆವಾಸವಿರಲಿ, ಮೊಟ್ಟೆಗಳನ್ನು ಇಡಲೂ ಸುರಕ್ಷಿತ ಸ್ಥಳ ಲಭಿಸದೆ ಅವು ಪರದಾಡುತ್ತವೆ.

ಬೀಜಿಂಗ್‌ನಲ್ಲಿ ವಿಜ್ಞಾನಿಗಳು ನಡೆಸಿದ ಪ್ರಯೋಗವೊಂದು ಸ್ವಾರಸ್ಯವಾಗಿದೆ. ಒಂದು ವಿಶಾಲ ವರಾಂಡಾಗೆ ಕಲ್ಲಿದ್ದಲು, ಪೆಟ್ರೋಲು, ಕಟ್ಟಿಗೆ ಉರಿಸಿದ ಹೊಗೆಯನ್ನು ಬಿಡಲಾಯಿತು. ಅಲ್ಲಿ ಸಿಹಿ ಮತ್ತು ಖಾರದ ಖಾದ್ಯಗಳನ್ನು ತೆರೆದ ಬೋಗುಣಿಗಳಲ್ಲಿ ಇರಿಸಲಾಯಿತು. ಅರ್ಧ ತಾಸಿನ ನಂತರ ಗಮನಿಸಿದ್ದೇನು? ತಿಂಡಿ, ತಿನಿಸಿಗೆ ನೊಣಗಳೂ ಕೂಡ ಮುತ್ತಿರಲಿಲ್ಲ. ‘ಸಿಹಿ ಸುದ್ದಿ’ಗೆ ಗ್ರಹಣ ಹಿಡಿಸಿದ್ದು ಸ್ವತಃ ನಿಷ್ಕ್ರಿಯವಾದ ಅವುಗಳ ಕುಡಿಮೀಸೆ. ನೊಣದ ಮಿದುಳನ್ನು ಸಂಪರ್ಕಿಸುವ ವಾಸನೆಗ್ರಹಣ ಸಂಬಂಧಿ ವಿದ್ಯುತ್ ಸಂಕೇತಗಳ ಸಾಮರ್ಥ್ಯ ಕುಸಿದಿದ್ದರಿಂದ ಈ ಅಂಧಕಾರ! ಕೀಟಗಳ ಪಾಲಿಗೆ ನೈಟ್ರೋಜನ್ ಆಕ್ಸೈಡ್, ಓಜೋನ್‌ಗೆ ತೆರೆದುಕೊಳ್ಳುವುದಕ್ಕಿಂತಲೂ ದೂಳು, ಧೂಮ ಅಪಾಯಕರ. ಶೇ 40ರಷ್ಟು ಭೂಪ್ರದೇಶಕ್ಕೆ ವಾಯುಮಾಲಿನ್ಯದ ಶಾಪ ತಟ್ಟಿದೆ. ಮಾಲಿನ್ಯಕಾರಕಗಳನ್ನು ಗಾಳಿ ಸಾವಿರಾರು ಕಿ.ಮೀ. ದೂರಕ್ಕೆ ಒಯ್ಯಬಲ್ಲದು. ಹಾಗಾಗಿ ಗಾಳಿಯ ಗುಣಮಟ್ಟ ಕುಸಿಯಲು ದೇಶ, ಪ್ರಾಂತ್ಯ, ಗಡಿ ಎಂಬ ಭೇದವಿಲ್ಲ.

ಶೇ 13ರಷ್ಟು ಕೀಟಗಳು ಅಳಿವಿನಂಚಿನಲ್ಲಿವೆ. ಕೀಟಗಳ ಸಂತತಿ ಕ್ಷೀಣಿಸಿದರೆ ಅವನ್ನು ಆಹಾರವಾಗಿಸಿಕೊಂಡಿರುವ ಪಕ್ಷಿಗಳು, ಸರೀಸೃಪಗಳು, ಉಭಯಚರಜೀವಿಗಳೂ ಇನ್ನಿಲ್ಲವಾದಾವು. ಭೂಗ್ರಹ ಸಜೀವವಾಗಿರುವುದೂ ಕೀಟಗಳಿಂದಲೇ. ನಮ್ಮ ಪರಿಸರ ವ್ಯವಸ್ಥೆಯಲ್ಲಿ ಕೀಟಗಳು ನಿರ್ಣಾಯಕ ಮತ್ತು ಬಹು ಮಹತ್ವದ ಪಾತ್ರ ವಹಿಸುತ್ತವೆ. ಅವು ಸಾಂಕ್ರಾಮಿಕ ರೋಗಗಳನ್ನು ಉಂಟುಮಾಡುವ ಕ್ರಿಮಿಗಳನ್ನು ನಿಯಂತ್ರಿಸುತ್ತವೆ; ತ್ಯಾಜ್ಯಗಳನ್ನು ಛಿದ್ರಗೊಳಿಸುತ್ತವೆ; ಬೀಜಗಳನ್ನು ಪ್ರಸರಿಸುತ್ತವೆ. ಪರಾಗಸ್ಪರ್ಶ ಮತ್ತು ಪರಿಸರ ಮರುಬಳಕೆಯನ್ನು ನಿರ್ವಹಿಸುವುದು ಕೀಟಗಳೇ. ಶೇ 70ರಷ್ಟು ಬೆಳೆಗಳು ಕೀಟಗಳ ಪರಾಗಸ್ಪರ್ಶ ಕ್ರಿಯೆಯನ್ನು ಅವಲಂಬಿಸಿದೆ. ಕೀಟಗಳ ಕಾರ್ಯದಕ್ಷತೆ ಅವು ರಾಸಾಯನಿಕ ಸಂಕೇತಗಳನ್ನು ಎಷ್ಟು ಸಮರ್ಥವಾಗಿ ನಿಭಾಯಿಸುತ್ತವೆ ಎನ್ನುವುದನ್ನೆ ಅವಲಂಬಿಸಿದೆ. ವಾಯುಮಾಲಿನ್ಯದ ಕಾರಣ ಕೀಟಗಳು ಅವನತಿ ಹೊಂದುತ್ತಿವೆ.

ಮಲ್ಲಿಗೆ, ಸಂಪಿಗೆ, ಜಾಜಿ, ಗುಲಾಬಿ, ಸೌಗಂಧರಾಜ – ಎಷ್ಟು ಹೂವುಗಳೋ ಅಷ್ಟು ಪರಿಮಳ. ಆ ಸುವಾಸನೆಯ ಹಿಂದೆ ಕೀಟಗಳ ಅಮೋಘ, ಅಸದೃಶ ಕೈಂಕರ್ಯವಿದೆ. ವಾಯುಮಾಲಿನ್ಯ ಎಂಥಹ ದುಃಸ್ಥಿತಿ ತಂದಿದೆಯೆಂದರೆ ಕೀಟಗಳನ್ನು ಆಕರ್ಷಿಸಲು ಸಸ್ಯಗಳು ತಯಾರಿಸುವ ಹೂವಿನ ದಳಗಳ ಬಣ್ಣ ಹಾಗೂ ಸುಗಂಧದ್ರವ್ಯಗಳ ಪ್ರಮಾಣವೂ ಕಡಿಮೆಯಾಗತೊಡಗಿವೆ. ಅತ್ತ ಕೀಟಗಳು ಲೈಂಗಿಕಾಸಕ್ತಿಯನ್ನು ಪರಸ್ಪರ ಸೂಚಿಸಲು ಸ್ರವಿಸುವ ದ್ರವದ ಉತ್ಪಾದನೆಗೂ ಕಂಟಕ. ಕೀಟಗಳ ಶ್ವಾಸಾಂಗ ವ್ಯವಸ್ಥೆ ಬಹು ಸಂಕೀರ್ಣ, ನೇರವಾಗಿ ಶರೀರದ ಎಲ್ಲ ಅಂಗಾಂಗಳಿಗೂ ತ್ವರಿತವಾಗಿ ಶ್ವಾಸ ತಲುಪುತ್ತದೆ. ಹಾಗಾಗಿ ಶುದ್ಧಗಾಳಿ ಅವಕ್ಕೆ ಅತ್ಯಗತ್ಯ. ದುಂಬಿ, ಜೇನ್ನೊಣಗಳಂತು ಹೂಗಳ ಹುಡುಕಾಟಕ್ಕೆ ವಿಪರೀತ ಶ್ರಮಪಡುತ್ತವೆ. ಕ್ರಿಮಿನಾಶಕಗಳ ಸಿಂಪಡನೆಯಿಂದ ಗಮನಾರ್ಹ ಪ್ರಮಾಣದಲ್ಲಿ ಕೀಟಗಳು ಸಾಯುತ್ತವೆ. ಜನಸಾಮಾನ್ಯರು ಕೀಟಗಳ ಸಂರಕ್ಷಣೆಗೆ ಮೂರು ದಿಟ್ಟ ಕ್ರಮಗಳನ್ನು ಕೈಗೊಳ್ಳಬಹುದು. ಬೈಸಿಕಲ್ ಬಳಸಿ ಗಾಳಿ ಮಲಿನವಾಗುವುದನ್ನು ತಪ್ಪಿಸಿ. ಸಾರ್ವಜನಿಕ ಸಾರಿಗೆ ವಾಹನಗಳಲ್ಲೇ ಪ್ರಯಾಣಿಸಿ. ನಿಮ್ಮ ಮನೆಯ ಮುಂದೆ ಅಥವಾ ಹಿಂದೆ ಅಷ್ಟು ಹುಲ್ಲುಗಾವಲಿದ್ದರೆ ಅದನ್ನು ಪುಟ್ಟ ಹೂತೋಟವಾಗಿ ಬೆಳಸಿ.

ಧ್ವನಿಯನ್ನು ದಯಪಾಲಿಸಿದ ಕೃತಕ ಬುದ್ಧಿಮತ್ತೆ!

ನೇಸರ ಕಾಡನಕುಪ್ಪೆ

ಮಧ್ಯವಯಸ್ಸಿನ ಅಮೆರಿಕದ ಮಹಿಳೆಯೊಬ್ಬರು ಮಿದುಳಿನ ಪಾರ್ಶ್ವವಾಯು ಸಮಸ್ಯೆಗೆ ತುತ್ತಾಗುತ್ತಾರೆ. ಪಾರ್ಶ್ವವಾಯುವಿನ ಅಡ್ಡಪರಿಣಾಮವಾಗಿ ಸಂಪೂರ್ಣವಾಗಿ ಮಾತನಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ಅವರ ಧ್ವನಿಪೆಟ್ಟಿಗೆಯು ಧ್ವನಿಯನ್ನು ಉತ್ಪಾದಿಸುವ ಶಕ್ತಿಯನ್ನೇ ಕಳೆದುಕೊಂಡಿರುತ್ತದೆ. ಪಾರ್ಶ್ವವಾಯುವಿಗೆ ಚಿಕಿತ್ಸೆ ಪಡೆದ ಸುಮಾರು ನಾಲ್ಕು ವರ್ಷಗಳ ಕಾಲ ಮಾತನಾಡಲು ಸಾಧ್ಯವಾಗದೇ ಕಾಲ ತಳ್ಳುತ್ತಾರೆ. ಧ್ವನಿಯನ್ನು ಕೃತಕವಾಗಿ ಸೃಷ್ಟಿಸಬಲ್ಲ ತಂತ್ರಜ್ಞಾನವೊಂದರ ಶೋಧವಾಗಿದೆ ಎಂಬ ಸುದ್ದಿಯನ್ನು ತನ್ನ ಸ್ನೇಹಿತರಿಂದ ಪಡೆಯುವ ಮಹಿಳೆ ತನ್ನನ್ನು ತಾನೇ ಪ್ರಯೋಗಕ್ಕೆ ಅರ್ಪಿಸಿಕೊಂಡಿದ್ದಾರೆ. ಅವರಿಗೀಗ ನಿಂತುಹೋಗಿದ್ದ ಧ್ವನಿ ಮರುಕಳಿಸಿದೆ. ಅವರು ಧ್ವನಿಯನ್ನು ಮರಳಿ ಪಡೆದು ಸಣ್ಣ ಕಥೆ ಇಲ್ಲಿದೆ.

ಸ್ಯಾನ್‌ಫ್ಯಾನ್ಸಿಸ್ಕೋದ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ ಹಾಗೂ ಬರ್ಕಲಿಯ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ ವಿಜ್ಞಾನಿಗಳು ಸುಮಾರು ನಾಲ್ಕು ವರ್ಷಗಳಿಂದ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಧ್ವನಿಪೆಟ್ಟಿಗೆ ನಿರ್ಮಿಸಿರುವ ವಿಚಾರ ಈ ಮಹಿಳೆಗೆ ದೊರೆಯುತ್ತದೆ. ನರಶಸ್ತ್ರಚಿಕಿತ್ಸೆ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಎಡ್ವರ್ಡ್ ಚಾಂಗ್ ಅವರು ಬ್ರೈನ್ ಕಂಪ್ಯೂಟರ್ ಇಂಟರ್‌ಫೇಸ್ (‘ಬಿಸಿಐ’) ಎಂಬ ಮಿದುಳು ಹಾಗೂ ಕಂಪ್ಯೂಟರ್ ಬೆಸೆಯುವ ಸಂಜ್ಞಾಸೇತುವೆಯನ್ನು ತಯಾರಿಸುವ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರು. ಅವರನ್ನು ಸಂಪರ್ಕಿಸುವ ಈ ಮಹಿಳೆಯು ತಂತ್ರಜ್ಞಾನದ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುತ್ತಾರೆ. ಬಳಿಕ ತಾವೇ ಮಾನವ ಪ್ರಯೋಗಕ್ಕೆ ಒಳಗಾಗುವುದಾಗಿ ಇಚ್ಛೆ ವ್ಯಕ್ತಪಡಿಸುತ್ತಾರೆ. ಇದರ ಬಳಿಕ ನಡೆಯುವ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ಆ ಮಹಿಳೆಗೆ ಧ್ವನಿ ಮರಳಿ ಬರುತ್ತದೆ.

ಏನಿದು ತಂತ್ರಜ್ಞಾನ?

ಪ್ರತಿಷ್ಠಿತ ‘ನೇಚರ್’ ವಿಜ್ಞಾನ ನಿಯತಕಾಲಿಕೆಯಲ್ಲಿ ಈ ಸಂಶೋಧನೆಯನ್ನು ಎಡ್ವರ್ಡ್ ಚಾಂಗ್ ಅವರ ತಂಡವು ಪ್ರಕಟಿಸಿದೆ. ಈ ಸಂಶೋಧನೆಯು ಸಂಕೀರ್ಣವಾದುದು. ಈ ಸಂಶೋಧನೆಯನ್ನು ತಿಳಿದುಕೊಳ್ಳಬೇಕಾದರೆ ಮಾನವ ಧ್ವನಿಪೆಟ್ಟಿಗೆ ಕೆಲಸ ಮಾಡುವ ವಿಧಾನವನ್ನು ಕಲಿತುಕೊಳ್ಳುವುದು ಮುಖ್ಯ. ಧ್ವನಿಪೆಟ್ಟಿಗೆಯಲ್ಲಿರುವ ಸ್ನಾಯುಗಳು ಕಂಪಿಸಿ ವಿಶೇಷವಾದ ಧ್ವನಿಯನ್ನು ಉತ್ಪಾದಿಸುತ್ತವೆ. ಈ ಧ್ವನಿಯು ವಿಶೇಷ ಏಕೆಂದರೆ, ಪ್ರತಿಯೊಬ್ಬ ಮನುಷ್ಯನ ಧ್ವನಿಯೂ ಭಿನ್ನ. ಒಬ್ಬರ ಧ್ವನಿ ಮತ್ತೊಬ್ಬರಿಗೆ ಹೋಲದು. ಆದರೆ, ಇಲ್ಲೊಂದು ವಿಶೇಷ ವಿಜ್ಞಾನ ಕಾರ್ಯನಿರ್ವಹಿಸುತ್ತದೆ. ಅದೇ ಮಿದುಳಿನಿಂದ ಸಂದೇಶ. ನರಗಳ ಮೂಲಕ ಮಿದುಳಿನಿಂದ ಹೊರಡುವ ಸಂದೇಶಗಳು ಧ್ವನಿಪೆಟ್ಟಿಗೆಯನ್ನು ತಲುಪಿದ ಬಳಿಕವೇ ಧ್ವನಿಪೆಟ್ಟಿಗೆಯಲ್ಲಿ ಶಬ್ದ ಉತ್ಪಾದನೆ ಆಗುವುದು. ಯಾವ ರೀತಿಯ ಸಂದೇಶ ಮಿದುಳಿನಿಂದ ಬರುತ್ತದೆ ಎಂಬುದರ ಮೇಲೆ ಧ್ವನಿಯ ಏರಿಳಿತ, ಅವಧಿ ನಿರ್ಣಯವಾಗುತ್ತದೆ.

ಆದರೆ, ಈ ಮಹಿಳೆಯ ಪ್ರಕರಣದಲ್ಲಿ ಸಮಸ್ಯೆ ಎದುರಾಗಿರುವುದು ಧ್ವನಿಪೆಟ್ಟಿಗೆಯಲ್ಲಿ ಮಾತ್ರವೇ ಅಲ್ಲ. ಬದಲಿಗೆ ಧ್ವನಿಯ ಮೂಲದಲ್ಲಿ. ಅಂದರೆ ಮಿದುಳಿನಲ್ಲಿ. ಈ ಮಹಿಳೆಗೆ ಪಾರ್ಶ್ವವಾಯು ಉಂಟಾದಾಗ, ಮಿದುಳಿನಲ್ಲಿ ಉತ್ಪಾದನೆಗೊಂಡ ವಿದ್ಯುತ್ ಅಲೆಗಳು ಧ್ವನಿಸಂದೇಶಗಳನ್ನು ಕೊಂಡೊಯ್ಯುವ ನರಮಂಡಲವನ್ನು ಹಾನಿಗೊಳಿಸಿದ್ದವು. ಅಲ್ಲದೇ, ಧ್ವನಿಪೆಟ್ಟಿಗೆಯನ್ನೂ ಗಾಸಿಗೊಳಿಸಿದ್ದವು. ಈ ವೈದ್ಯಕೀಯ ಸಮಸ್ಯೆಯನ್ನು ನಾಲ್ಕು ವರ್ಷಗಳ ಹಿಂದೆ ಕಿವಿ, ಗಂಟಲು ಮತ್ತು ಮೂಗು ಹಾಗೂ ನರರೋಗ ವಿಜ್ಞಾನಿಗಳು ಪತ್ತೆ ಹಚ್ಚಿದ್ದರು. ಜೊತೆಗೆ, ಈ ಸಮಸ್ಯೆಗೆ ಪರಿಹಾರ ಇಲ್ಲವೆಂದೇ ಸ್ಪಷ್ಟವಾಗಿ ಹೇಳಿದ್ದರು.

ಈ ರೀತಿ ವೈದ್ಯರಿಂದ ತೀರ್ಮಾನ ಹೊರಬಿದ್ದಾಗ ಎಂತಹ ಗಟ್ಟಿ ಮನಸ್ಸಿನ ವ್ಯಕ್ತಿಯೂ ಖಿನ್ನತೆಗೆ ಒಳಗಾಗುವುದು ಸಹಜ. ಅದೇ, ಹಂತವನ್ನು ಈ ಮಹಿಳೆಯೂ ತಲುಪಿದ್ದರು. ಈ ಮಹಿಳೆಯ ವೈದ್ಯಕೀಯ ಇತಿಹಾಸವನ್ನು ಅಧ್ಯಯನ ಮಾಡಿದ ಎಡ್ವರ್ಡ್ ಚಾಂಗ್ ಅವರ ತಂಡವು, ಮಹಿಳೆಗೆ ಧೈರ್ಯ ತುಂಬಿ ತಮ್ಮ ಸಂಶೋಧನೆಯನ್ನು ವಿವರಿಸಿದರು.

ಈ ಹೊಸ ಸಂಶೋಧನೆ ಹೀಗಿದೆ: ಮಿದುಳಿನ ಸಂದೇಶಗಳನ್ನು ಗಮನಿಸಿ ಆ ಸಂದೇಶಗಳನ್ನು ಅರ್ಥ ಮಾಡಿಕೊಳ್ಳುವ ಗಣಿತ ಸೂತ್ರವೊಂದನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಒಂದು ಕಾಗದದಷ್ಟು ದಪ್ಪವಿರುವ ಚೌಕಾಕಾರದ ಲೋಹದ ಹಾಳೆಯಲ್ಲಿ ಸಂಜ್ಞಾಗ್ರಾಹಕಗಳನ್ನು ಮುದ್ರಿಸಿದ್ದಾರೆ. ಈ ಹಾಳೆಯನ್ನು ಬಳಿಕ ಮಿದುಳಿನ ಒಳಗೆ ಶಸ್ತ್ರಚಿಕಿತ್ಸೆಯ ಮೂಲಕ ಇರಿಸಿದ್ದಾರೆ. ಜೊತೆಗೆ, ಮಿದುಳಿನ ಸಂಜ್ಞೆಗಳು ಈ ಹಾಳೆಯ ಮೂಲಕ ಹಾದು ಹೋಗುವಂತೆ ನರಗಳನ್ನು ಜೋಡಿಸಿದ್ದಾರೆ. ಬಳಿಕ, ಲೋಹದ ಹಾಳೆಯಿಂದ ಹೊರಡುವ ಅತಿ ಸೂಕ್ಷ್ಮ ಕೃತಕ ನರಗಳನ್ನು ಬಾಯಿಯ ಸ್ನಾಯುಗಳು ಹಾಗೂ ಧ್ವನಿ ಪೆಟ್ಟಿಗೆಗೆ ಜೋಡಿಸಿದ್ದಾರೆ.

ಇದಿಷ್ಟೇ ಶಸ್ತ್ರಚಿಕಿತ್ಸೆಯ ಮೂಲಕ ನಡೆದಿರುವ ಪ್ರಕ್ರಿಯೆ. ಆದರೆ, ಇಲ್ಲಿ ಶಸ್ತ್ರಚಿಕಿತ್ಸೆಯಷ್ಟೇ ಪ್ರಮುಖ ಪಾತ್ರವನ್ನು ಕೃತಕ ಬುದ್ಧಿಮತ್ತೆ ವಹಿಸಿದೆ. ಈ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದ ಬಳಿಕ ಮಿದುಳಿನ ಒಳಗಿರುವ ಹಾಳೆಯು ಮಿದುಳಿನ ಎಲ್ಲ ಸಂಜ್ಞೆಗಳನ್ನು ಏಕಕಾಲಕ್ಕೆ ಗುರುತಿಸುವ ಶಕ್ತಿಯನ್ನು ಹೊಂದಿರುವುದಿಲ್ಲ. ಅದು ಕಾಲಾಂತರದಲ್ಲಿ ಕಲಿತುಕೊಳ್ಳುತ್ತದೆ. ಮೊದಲು, 1024 ಪದಗಳ ಗುಚ್ಛವನ್ನು ಗುರುತಿಸುವ ಈ ಸಾಧನವು ಅಷ್ಟು ಪದಗಳ ಸಂಜ್ಞೆಯನ್ನು ಸೃಷ್ಟಿಸಿ, ಬಾಯಿಯ ಸ್ನಾಯುಗಳು ಹಾಗೂ ಧ್ವನಿಪೆಟ್ಟಿಗೆಗೆ ಕಳುಹಿಸಿದೆ. ಆಗ ಧ್ವನಿಯೇ ನಿಂತುಹೋಗಿದ್ದ ಧ್ವನಿಪೆಟ್ಟಿಗೆಯಲ್ಲಿ ಶಬ್ದ ಮೂಡುತ್ತದೆ. ಬಾಯಿಯ ಸ್ನಾಯುಗಳು ಧ್ವನಿಯನ್ನು ಮಾತುಗಳಾಗಿ ಪರಿವರ್ತಿಸಲು ಅತ್ಯವಶ್ಯಕ. ಪಾರ್ಶ್ವವಾಯು ಉಂಟಾಗಿರುವವರಿಗೆ ಬಾಯಿಯ ಸ್ನಾಯುಗಳ ನೈಸರ್ಗಿಕ ಆಕಾರವೇ ವಿರೂಪವಾಗಿ ಬಿಟ್ಟಿರುತ್ತದೆ. ದೋಷವುಳ್ಳ ನರಗಳನ್ನು ಬದಲಿಸಿ, ಕೃತಕ ನರಗಳನ್ನು ಜೋಡಿಸಿದ ಮೇಲೆ ಬಾಯಿಯ ಆಕಾರ ಮೂಲ ಆಕಾರಕ್ಕೆ ಬರುತ್ತದೆ. ಈ ಮಹಿಳೆಯ ಪ್ರಕರಣದಲ್ಲೂ ಇದೇ ರೀತಿಯ ಚಿಕಿತ್ಸೆಯನ್ನು ನೀಡಲಾಗಿದೆ.

> ಪಾರ್ಶ್ವವಾಯುವಿನಿಂದ ಧ್ವನಿ ಕಳೆದುಕೊಂಡಿದ್ದ ಮಹಿಳೆಗೆ ಕೃತಕಬುದ್ಧಿ ಮತ್ತೆಯಿಂದ ಧ್ವನಿ ದಕ್ಕಿದೆ

ಸರಿಸುಮಾರು ನಾಲ್ಕು ತಿಂಗಳುಗಳ ಕಾಲ ಮಿದುಳಿನ ಒಳಗೆ ಇರಿಸಿರುವ ಸಾಧನವು ಮಿದುಳು ಸಂಜ್ಞೆಗಳನ್ನು ಗಮನಿಸಿ ವಿದ್ಯಾರ್ಥಿಯಂತೆ ಕಲಿಯುವ ಪ್ರಕ್ರಿಯೆಯಲ್ಲಿ ಭಾಗವಹಿಸಿದೆ. ಈಗ ಸರಿಸುಮಾರು ಶೇ 30ರಷ್ಟು ಮಾತುಗಳನ್ನು ಆಡುವ ಶಕ್ತಿಯನ್ನು ಈ ಮಹಿಳೆ ವಾಪಸ್ಸು ಪಡೆದಿದ್ದಾರೆ. ಮಾತೇ ನಿಂತು ಹೋಗಿದ್ದ ಮಹಿಳೆಗೆ ಇಷ್ಟು ಪ್ರಮಾಣದಲ್ಲಿ ಮಾತು ಬಂದಿರುವುದು ವರದಾನವೇ ಸರಿ. ಅಲ್ಲದೇ, ಈ ಮಾತುಗಳು ಅಸಹಜವಾಗಿ ಅಥವಾ ಅಸ್ಪಷ್ಟವಾಗಿಲ್ಲ. ಮಾತುಗಳ ಸಂಖ್ಯೆ ಕಡಿಮೆಯಷ್ಟೇ. ಇದರಿಂದಾಗಿ ಸಂವಹನ ಹಾಗೂ ಸಂಪರ್ಕಕ್ಕೆ ಬೇಕಾಗುವಷ್ಟು ಮಾತುಗಳನ್ನು ಈಗಾಗಲೇ ಆಡುವ ಶಕ್ತಿ ಅವರಿಗೆ ಬಂದಿದೆ. ಕಾಲಾಂತರದಲ್ಲಿ ಆಕೆ ಮತ್ತಷ್ಟು ಮಾತನಾಡುವ ಶಕ್ತಿಯನ್ನು ಪಡೆಯುತ್ತಾರೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಮುಂದೇನು?

ಈ ಸಂಶೋಧನೆ ಇಲ್ಲಿಗೇ ನಿಲ್ಲುವುದಿಲ್ಲ. ಧ್ವನಿಪೆಟ್ಟಿಗೆಯೇ ನಾಶವಾಗುವ ಪ್ರಕರಣಗಳಲ್ಲೂ ಈ ತಂತ್ರಜ್ಞಾನವನ್ನು ಅಳವಡಿಸುವ ಸಾಧ್ಯತೆ ಇದೆ. ಬದಲಾದ ಧ್ವನಿಯಲ್ಲಿ ಮಾತುಗಳನ್ನು ಹೊರಡಿಸುವ ಅವಕಾಶ ಲಭ್ಯವಾಗುತ್ತದೆ. ಜೊತೆಗೆ, ಕೃತಕವಾಗಿ ಧ್ವನಿಯನ್ನು ಮಧುರಗೊಳಿಸುವ, ಗಡಸುಗೊಳಿಸುವ, ಮೆದುಗೊಳಿಸುವ ಅವಕಾಶಗಳನ್ನೂ ನೀಡಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಪ್ಲಾಸ್ಟಿಕ್ ಸರ್ಜರಿಯ ಮೂಲಕ ಹೇಗೆ ದೇಹದ ರೂಪವನ್ನೇ ಬದಲಿಸಿಕೊಳ್ಳುವ, ಸೌಂದರ್ಯವೃದ್ಧಿಸಿಕೊಳ್ಳುವ ಅವಕಾಶವಿದೆಯೋ, ಹಾಗೆಯೇ, ಧ್ವನಿಯನ್ನೂ ರೂಪಾಂತರ ಮಾಡುವ ಅವಕಾಶಗಳನ್ನು ಭವಿಷ್ಯದಲ್ಲಿ ಎದುರು ನೋಡಬಹುದು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿರುವ ವಿಜ್ಞಾನಿಗಳು ಮಾತಿನ ಸಂದೇಶಗಳನ್ನು ಮಿದುಳಿನ ಹಂತದಲ್ಲೇ ಇತರೆಡೆಗೆ ಪ್ರಸಾರ ಮಾಡುವ ಸಾಧ್ಯತೆಯೂ ಇದೆ ಎಂದಿದ್ದಾರೆ. ಉದಾಹರಣೆಗೆ, ಗಗನಯಾತ್ರಿಗಳು ಬಾಯಿಯ ಮೂಲಕವೇ ಮಾತನಾಡಬೇಕು ಎಂದೇನಿಲ್ಲ. ಅವರು ಮಿದುಳಿನಲ್ಲಿ ಮಾತನಾಡಿಕೊಳ್ಳುವುದು ಸ್ಪೀಕರ್ ಮೂಲಕ ಇತರೆಡೆ ನೇರವಾಗಿ ಪ್ರಸಾರವಾಗುತ್ತದೆ!

ಗೃಹಲಕ್ಷ್ಮಿ ಯೋಜನೆಗೆ ಚಾಲನೆ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಏಕಲವ್ಯ ವೃತ್ತದಲ್ಲಿ ಹಾಕಲಾಗಿರುವ ಫ್ಲೆಕ್ಸ್‌ಗಳು ಪ್ರಜಾವಾಣಿ ಚಿತ್ರ.

'ಗೃಹಲಕ್ಷ್ಮಿ'ಯರ ಸ್ವಾಗತಕ್ಕೆ ಮೈಸೂರು ಸಜ್ಜು

ಒಂದನೇ ಪುಟದಿಂದ

ಯೋಜನೆಗೆ ರಾಜ್ಯದ 1.1 ಕೋಟಿ ಮನೆಯೊಡತಿಯರು ನೋಂದಾಯಿಸಿ ಕೊಂಡಿದ್ದು, ಕಾರ್ಯಕ್ರಮಕ್ಕೆ ಚಾಲನೆ ಸಿಗುತ್ತಲೇ, ಅವರ ಖಾತೆಗೆ ತಲಾ ₹2 ಸಾವಿರ ಸಂದಾಯವಾಗಲಿದೆ. ಈ ಮೊದಲು ಬೆಳಗಾವಿಯಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮ ರಾಹುಲ್ ಗಾಂಧಿ ಪ್ರವಾಸದ ಕಾರಣಕ್ಕೆ ಮೈಸೂರಿಗೆ ಸ್ಥಳಾಂತರವಾಗಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಮಹಿಳಾ, ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಮೂರ್ನಾಲ್ಕು ದಿನದಿಂದ ಮೈಸೂರಿನಲ್ಲಿದ್ದು, ಸಿದ್ಧತೆ ಪರಿಶೀಲಿಸುತ್ತಿದ್ದಾರೆ. ರಾಜ್ಯಾದ್ಯಂತ 10 ಸಾವಿರ ಸ್ಥಳಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರಕ್ಕೆ ಸರ್ಕಾರ ವ್ಯವಸ್ಥೆ ಮಾಡಿದೆ.

ಹರಕೆ ತೀರಿಸಿದ ಸಿ.ಎಂ–ಡಿಸಿಎಂ

ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಮಂಗಳವಾರ ಗೃಹಲಕ್ಷ್ಮಿ ಕಾರ್ಡ್‌ನೊಂದಿಗೆ ಪೂಜೆ ಸಲ್ಲಿಸಿದರು. ದೇವಿಗೆ ಹಸಿರು-ಕೆಂಪು ಸೀರೆ, ಕನಕಾಂಬರ-ಮಲ್ಲಿಗೆಯ ಜೊತೆಗೆ ₹2 ಸಾವಿರ ನೋಟು ಇಟ್ಟು ಹರಕೆ ತೀರಿಸಿದರು.

'ವಿಧಾನಸಭೆ ಚುನಾವಣೆಯ ಮತದಾನದ ಹಿಂದಿನ ದಿನವಾದ ಮೇ 9ರಂದು ನಾನು ಮತ್ತು ಡಿ.ಕೆ. ಶಿವಕುಮಾರ್ ಪಕ್ಷದ ಗ್ಯಾರಂಟಿ ಯೋಜನೆಗಳ ಕಾರ್ಡುಗಳನ್ನು ಇಲ್ಲಿ ಇಟ್ಟು ಪೂಜೆ ಸಲ್ಲಿಸಿದ್ದೆವು. ಬುಧವಾರ ಯೋಜನೆಗೆ ಚಾಲನೆ ನೀಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ದೇವಿ ಸನ್ನಿಧಿಯಲ್ಲಿ ಆಶೀರ್ವಾದ ಬೇಡಿದ್ದೇವೆ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಸೌಜನ್ಯಾ ಹೋರಾಟ ಸಮಿತಿ'ಯಿಂದ ಪ್ರತಿಭಟನಾ ಮೆರವಣಿಗೆ

'ಆರೋಪಿಗಳಿಗೆ ಉಗ್ರ ಶಿಕ್ಷೆ ಕೊಡಿ'

ಪ್ರಜಾವಾಣಿ ವಾರ್ತೆ

ಉಡುಪಿ: ಸೌಜನ್ಯಾ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ ಆರೋಪಿಗಳಿಗೆ ಉಗ್ರ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿ 'ಸೌಜನ್ಯಾ ಹೋರಾಟ ಸಮಿತಿ' ವತಿಯಿಂದ ಮಂಗಳವಾರ ಅಜ್ಜರಕಾಡು ಹುತಾತ್ಮ ಸ್ಮಾರಕದ ಎದುರು ಪ್ರತಿಭಟನೆ ನಡೆಸಲಾಯಿತು.

ಮೊದಲಿಗೆ ಕೃಷ್ಣಮಠದಲ್ಲಿ ಪೂಜೆ ಸಲ್ಲಿಸಿದ ಹೋರಾಟ ಸಮಿತಿ ಮುಖಂಡರು, ಮೆರವಣಿಗೆಗೆ ಚಾಲನೆ ನೀಡಿ ಸೌಜನ್ಯಾ ಪರ ಘೋಷಣೆ ಕೂಗುತ್ತಾ ಪ್ರತಿಭಟನಾ ಸ್ಥಳಕ್ಕೆ ಬಂದರು. ಮಹೇಶ್ ಶೆಟ್ಟಿ ತಿಮರೋಡಿ, ಸೌಜನ್ಯಾ ತಾಯಿ ಕುಸುಮಾವತಿ, ತಮ್ಮಣ್ಣ ಶೆಟ್ಟಿ ಭಾಗವಹಿಸಿದ್ದರು.

ಗೊಂದಲದ ವಾತಾವರಣ: ಧರ್ಮಸ್ಥಳದ ಪರವಾಗಿರುವ ಮಹಿಳೆಯರು ಪ್ರತಿಭಟನಾ ಸ್ಥಳದಲ್ಲಿ ನೆರೆದಿದ್ದರಿಂದ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಕಾರ್ಯಕರ್ತೆಯರನ್ನು ಚದುರಿಸಿ ಪ್ರತ್ಯೇಕ ಸ್ಥಳಕ್ಕೆ ಕರೆದೊಯ್ದರು. 'ಸೌಜನ್ಯಾ ಕೊಲೆ ಪ್ರಕರಣದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಲಿ. ಆದರೆ, ಧರ್ಮಸ್ಥಳದ ಹೆಸರಿಗೆ ಮಸಿ ಬಳಿಯುವಂಥ ಕೆಲಸ ಸಲ್ಲದು' ಎಂದರು.

ಸೌಜನ್ಯಾ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿದ ಆರೋಪಿಗಳಿಗೆ ಉಗ್ರ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿ ಸೌಜನ್ಯಾ ಹೋರಾಟ ಸಮಿತಿ ವತಿಯಿಂದ ಮಂಗಳವಾರ ಉಡುಪಿಯ ಅಜ್ಜರಕಾಡು ಹುತಾತ್ಮ ಸ್ಮಾರಕದ ಎದುರು ಪ್ರತಿಭಟನೆ ನಡೆಸಲಾಯಿತು

ಇಂದಿರಾ ಗಾಂಧಿ ನಡೆ ನೆನಪಿಸಿದ ಕಾಂಗ್ರೆಸ್

ನವದೆಹಲಿ (ಪಿಟಿಐ): ಶಿಷ್ಟಾಚಾರ ಕುರಿತು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವಾಗ್ವಾದ ನಡೆಯುತ್ತಿರುವ ಬೆನ್ನಲ್ಲೇ ಎಂಬತ್ತರ ದಶಕದಲ್ಲಿ ಅಂದಿನ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರು ಪಾಲಿಸಿದ್ದ ಶಿಷ್ಟಾಚಾರದ ನಡೆಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ನೆನಪಿಸಿದ್ದಾರೆ.

1983ರಲ್ಲಿ ಶ್ರೀಹರಿಕೋಟಾದಲ್ಲಿ ಯಶಸ್ವಿಯಾಗಿ ಎಸ್‌ಎಲ್‌ವಿ-3-ಡಿ2 ರಾಕೆಟ್ ಉಡ್ಡಯನಗೊಂಡಿತ್ತು. ಇಂದಿರಾಗಾಂಧಿ ಅವರು, ರಾಜಕೀಯ ವೈರತ್ವದ ಕಹಿ ಮರೆತು ಆಂಧ್ರಪ್ರದೇಶದ ಅಂದಿನ ಮುಖ್ಯಮಂತ್ರಿಯಾಗಿದ್ದ ಎನ್.ಟಿ. ರಾಮರಾವ್ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು ಎಂದು 'ಎಕ್ಸ್'ನಲ್ಲಿ (ಟ್ವಿಟರ್) ಹೇಳಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಲೇಖಕ ವೇದ್ ಪ್ರಕಾಶ್ ಸ್ಯಾಂಡ್ಲಾಸ್ ಅವರು ಬರೆದಿರುವ 'ದಿ ಲೀಪ್‌ಫ್ರೋಗರ್ಸ್: ಆನ್ ಇನ್‌ಸೈಡರ್ಸ್ ಅಕೌಂಟ್ ಆಫ್ ಇಸ್ರೊ' ಪುಸ್ತಕವನ್ನು ಅವರು ಉಲ್ಲೇಖಿಸಿದ್ದಾರೆ.



ಜೈರಾಮ್ ರಮೇಶ್

ವಿದೇಶ ಪ್ರವಾಸದಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ಅವರು 'ಚಂದ್ರಯಾನ 3' ಯಶಸ್ವಿಯಾದ್ದರಿಂದ ಇಸ್ರೊ ವಿಜ್ಞಾನಿಗಳಿಗೆ ಶುಭ ಕೋರಲು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದರು. ಈ ವೇಳೆ ಶಿಷ್ಟಾಚಾರದ ಪ್ರಕಾರ ಎಚ್‌ಎಎಲ್ ಏರ್‌ಪೋರ್ಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಆಹ್ವಾನ ನೀಡಿರಲಿಲ್ಲ ಎಂದು ಕಾಂಗ್ರೆಸ್ ಆಪಾದಿಸಿತ್ತು.

ಪ್ರಧಾನಿ ಕಚೇರಿಯ ಅಧಿಕಾರಿ ಎಂದು ವಂಚನೆ: ಆರೋಪಿಗೆ ಜಾಮೀನು

ಶ್ರೀನಗರ (ಪಿಟಿಐ): ಪ್ರಧಾನಿ ಕಚೇರಿಯಲ್ಲಿ ಉನ್ನತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆಂದು ವಂಚಿಸಿ, ಬಂಧಿತನಾಗಿದ್ದ ಗುಜರಾತ್‌ನ ಆರೋಪಿ ಕಿರಣ್ ಪಟೇಲ್‌ಗೆ ಇಲ್ಲಿನ ಸ್ಥಳೀಯ ನ್ಯಾಯಾಲಯ ಮಂಗಳವಾರ ಜಾಮೀನು ಮಂಜೂರು ಮಾಡಿದೆ.

'ಕೇಂದ್ರ ಕಾರಾಗೃಹದಲ್ಲಿರುವ ಕಿರಣ್‌ಗೆ ₹ 1ಲಕ್ಷದ ಬಾಂಡ್ ಹಾಗೂ ಅಷ್ಟೇ ಮೊತ್ತದ ಶ್ಯೂರಿಟಿ ಆಧಾರದ ಮೇಲೆ ಶ್ರೀನಗರದ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾಮೀನು ನೀಡಿದೆ' ಎಂದು ಆರೋಪಿ ಪರ ವಕೀಲ ತಿಳಿಸಿದ್ದಾರೆ.

ಗೋದಾಮಿಗೆ ಬೆಂಕಿ: ನಾಲ್ವರ ಸಜೀವ ದಹನ

ಒಂದನೇ ಪುಟದಿಂದ

ಎಲ್ಲೆಡೆ ದಟ್ಟ ಹೊಗೆ ಆವರಿಸಿ, ಸಮೀಪದಲ್ಲೇ ವಾಸವಿದ್ದ ಕಲಾವತಿ ಕೆ.ಎಸ್ ಎಂಬುವರು ಅಸ್ವಸ್ಥಗೊಂಡರು. ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಗಿದ್ದೇನು?: 'ಹಾವೇರಿಯ ವೀರಭದ್ರ ಸಾತೇನಹಳ್ಳಿ ಮಾಲೀಕತ್ವದ ಭೂಮಿಕಾ ಪಟಾಕಿ ಡಿಸ್ಟ್ರಿಬ್ಯೂಟರ್ಸ್ ಸೇರಿದ ಗೋದಾಮಿನಲ್ಲಿ ಗಣಪತಿ ಹಬ್ಬ ಮತ್ತು ದೀಪಾವಳಿಗಾಗಿ ಪಟಾಕಿ ದಾಸ್ತಾನು ಮಾಡಲಾಗಿತ್ತು. ಗೋದಾಮಿನ ಗೇಟ್‌ಗೆ ವೆಲ್ಡಿಂಗ್ ಮಾಡುವಾಗ ಕಿಡಿ ಹಾರಿ, ಬೆಂಕಿ ಹೊತ್ತಿಕೊಂಡಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ವೆಲ್ಡಿಂಗ್ ಕೆಲಸಕ್ಕೆ ಬಂದಿದ್ದ ವಾಸಿಂ ಶಫಿ ಅಹಮದ್ ಬೆಂಕಿಯ ಕೆನ್ನಾಲಿಗೆಯಿಂದ ತಪ್ಪಿಸಿಕೊಳ್ಳಲು ಗೋದಾಮಿನ ಮೊದಲ ಮಹಡಿಯಿಂದ ಕೆಳಕ್ಕೆ ಜಿಗಿದಿದ್ದರಿಂದ ಬೆನ್ನು ಮೂಳೆ ಮುರಿದಿದೆ. ಒಂದೇ ಸಮನೆ ಪಟಾಕಿ ಸಿಡಿಯತೊಡಗಿದ್ದರಿಂದ ಬೆಚ್ಚಿಬಿದ್ದ ಜನ ಓಡತೊಡಗಿದರು. ಆತಂಕದ ವಾತಾವರಣ ನಿರ್ಮಾಣವಾಗಿತ್ತು' ಎಂದು ಅವರು ತಿಳಿಸಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ ಹೊರಗಡೆಯಿಂದ ಪೈಪ್‌ಗಳ ಮೂಲಕ ನೀರು ಬಿಟ್ಟು ಬೆಂಕಿ ನಂದಿಸಲು ಪ್ರಯತ್ನಿಸಿದರು. ನೆಲ ಮಹಡಿಯಲ್ಲಿ ಬೆಂಕಿ ಆರಿಸಿದ ಸ್ವಲ್ಪ ಹೊತ್ತಿನಲ್ಲೇ ಮೊದಲನೇ ಮಹಡಿಗೆ ಬೆಂಕಿ ವ್ಯಾಪಿಸಿತು. ಆರು ಅಗ್ನಿಶಾಮಕ ವಾಹನಗಳು, 25 ಸಿಬ್ಬಂದಿ 5 ಗಂಟೆ ಕಾರ್ಯಾಚರಣೆ ನಡೆಸಿದರು.

ಪಟಾಕಿ ಗೋದಾಮು ದುರಂತದಲ್ಲಿ ನಾಲ್ವರು ಸಾವಿಗೀಡಾಗಿದ್ದು, ಕುಟುಂಬದವರಿಗೆ ಸಿಎಂ ಸಿದ್ದರಾಮಯ್ಯ ಅವರು ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ.
– ರಘುನಂದನಮೂರ್ತಿ, ಜಿಲ್ಲಾಧಿಕಾರಿ, ಹಾವೇರಿ

ಮುಂಬೈನಲ್ಲಿ ರೈತರ ಪ್ರತಿಭಟನೆ

ಮುಂಬೈ: ಮಹಾರಾಷ್ಟ್ರದ ವಾರ್ಧಾ ಭಾಗದಲ್ಲಿ, ಯೋಜನೆಗಳಿಂದ ಬಾಧಿತರಾದ ರೈತರು, ರಾಜ್ಯ ಸಚಿವಾಲಯದ ಕಟ್ಟಡದಲ್ಲಿ ಆತ್ಮಹತ್ಯೆ ತಡೆಯಲು ಅಳವಡಿಸಿರುವ ಸುರಕ್ಷತಾ ಬಲೆಯ ಮೇಲೆ ಮಂಗಳವಾರ ಜಿಗಿದಿದ್ದು, ಅಧಿಕಾರಿ ವರ್ಗದಲ್ಲಿ ಆತಂಕ ಸೃಷ್ಟಿ ಮಾಡಿಸಿದರು.

ಸಚಿವಾಲಯದ ಕಟ್ಟಡದ ಮೊದಲ ಮಹಡಿಗೆ ಹೊಂದಿಕೊಂಡಂತೆ, ಆತ್ಮಹತ್ಯೆ ಯತ್ನವನ್ನು ತಡೆಯಲು ಮುಂಜಾಗ್ರತಾ ಕ್ರಮವಾಗಿ ಬಲೆ ಅಳವಡಿಸಲಾಗಿತ್ತು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಭೇಟಿಗೆ ಅವಕಾಶ ನೀಡಲಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ರೈತರನ್ನು ಪೊಲೀಸರ ಕಾವಲಿನಲ್ಲಿ ಹೊರಗೆ ಕಳುಹಿಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತ ಸೌಕರ್ಯ – ಟಿಇಸಿ ವಿಭಾಗ)
ಅನೆಕ್ಸ್–3 ಕಟ್ಟಡ, ಕೊಠಡಿ ಸಂಖ್ಯೆ.09, ಎನ್.ಆರ್.ಚೌಕ, ಬೆಂಗಳೂರು – 560 002.

ಸಂಖ್ಯೆ: ಬಿಬಿಎಂಪಿ/ಕಾಪಾಅ/ರಮೂಸೌ/ಟಿಇಸಿ/ಪಿಆರ್/273/2023–24 ದಿನಾಂಕ : 29.08.2023

ಅನುಬಂಧ–1

ಉಲ್ಲೇಖ: ಟೆಂಡರ್ ಅಧಿಸೂಚನೆ ಸಂ: ಕಾಪಾಅ/ಟಿಇಸಿ/ಟೆಂಡರ್/02/2023–24 ದಿನಾಂಕ: 23.08.2023
ಮೇಲ್ಕಂಡ ಟೆಂಡರ್ ಅಧಿಸೂಚನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅನುಬಂಧವನ್ನು ನೀಡಲಾಗಿದೆ.

ಕ್ರ. ಸಂ.	ಟೆಂಡರ್ ಅಧಿಸೂಚನೆಯ ವಿಷಯ	ಎಂದು ಓದಿಕೊಳ್ಳುವುದು
1	PG Degree in Diploma Management / Science/Social Science/Urban Planning/ Environmental Science/MSW/ Engineering from UGC Recognized University with more than 02 years experience in Disaster Management.	PG Degree in Disaster Management / Science/Social Science/Urban Planning/ Environmental Science/MSW/ Engineering from UGC Recognized University with more than 02 years experience in Disaster Management.
2	PG Degree in Diploma Management / Science/Social Science/Urban Planning/ Environmental Science/MSW/ Engineering from UGC Recognized University with at least 01 year and above experience in Disaster Management.	PG Degree in Disaster Management / Science/Social Science/Urban Planning/ Environmental Science/MSW/ Engineering from UGC Recognized University with at least 01 year and above experience in Disaster Management.

ಇನ್ನುಳಿದಂತೆ ಎಲ್ಲಾ ಷರತ್ತು ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲಾ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬೃಬೆಂಮಪಾ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
ಇ–ಮೇಲ್: midhly@yahoo.co.in ಫೋ.ನಂ: 08284–220113
ನಂ:ಕಾನಿಅ/ಸನೀವಿಹ/ತಾವಿ/ಟೆಂಡರ್/4702 ನಬಾರ್ಡ/ಅ.ಪಿ.ಬಂ/2023–24/684 ದಿನಾಂಕ: 21/08/2023

ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)– ಕೆಡಬ್ಲ್ಯೂ–3

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಕರಾವಳಿ ಪ್ರದೇಶದಲ್ಲಿ ಹರಿಯುವ ನದಿಗಳಿಗೆ ಬಾಂದಾರ/ಅಣೆಕಟ್ಟು ಪಿಕಪ್/ಸ್ವೇಡ್/ತಡೆಗೋಡೆ ನಿರ್ಮಾಣ ಅಭಿವೃದ್ಧಿ ಯೋಜನೆಗಾಗಿ ಜೊಯಿಡಾ, ಅಂಕೋಲಾ, ಹೊನ್ನಾವರ, ಭಟ್ಕಳ ಮತ್ತು ಶಿರಸಿ ತಾಲೂಕಿನಲ್ಲಿನ ಈ ಕೆಳಗಿನ ಕಾಮಗಾರಿಗಾಗಿ **KW-3** (ದ್ವಿ–ಲಕೋಟೆ) ಪದ್ಧತಿಯಲ್ಲಿ "ಇ–ಪ್ರೊಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

ಕಾಮಗಾರಿಯ ಹೆಸರು: 4702–00–101–5–01–436 ನಬಾರ್ಡ ಅಣೆಕಟ್ಟು ಪಿಕಪ್ ಬಂದಾರ ಕಾಮಗಾರಿಗಳು: (1) Indent No: 85 (2) Indent No: 86 (3) Indent No: 87 (4) Indent No: 88 (5) Indent No: 89

ಖಾಲಿ ಟೆಂಡರ ಫಾರಂಗಳನ್ನು ಇ–ಪ್ರೊಕ್ಯೂಮೆಂಟ್ ವೆಬಸೈಟ್ ವಿಳಾಸ: **https://kppp.karnataka.gov.in** ದಲ್ಲಿ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ **ದಿನಾಂಕ: 08–09–2023** ರೊಳಗಾಗಿ ಅನುಮಾನಗಳಿದ್ದರೆ ಕಚೇರಿ ಅಥವಾ ಇ–ಪ್ರೊಕ್ಯೂಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು **ದಿನಾಂಕ: 11–09–2023 ರ ಸಾಯಂಕಾಲ 17.30 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು **ದಿನಾಂಕ: 13–09–2023 ಸಾಯಂಕಾಲ 17.35 ಗಂಟೆಗೆ** ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು **ಕೆಡಬ್ಲ್ಯೂ–3 ಬಿಡ್ ಡಾಕ್ಯುಮೆಂಟ್** ರಲ್ಲಿರುವಂತೆ ಪರಿಗಣಿಸಲಾಗುವುದು. ಈ ಬಗ್ಗೆ ಟೆಂಡರದಾರರು ಟೆಂಡರ ಸಲ್ಲಿಸುವ ಮುನ್ನ ಮನದಟ್ಟು ಮಾಡಿಕೊಳ್ಳುವುದು.

ಟೆಂಡರ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನು ಮೇಲಿನ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಿಗದಿ ಪಡಿಸಿದ ದಿನಾಂಕಗಳಂದು ಪಡೆದುಕೊಳ್ಳಬಹುದು. ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– (ಅವಿನಾಶ ಆರ್. ಆಲೂರು)
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
DIPR/ADK/KSMCA/174/23-24 Dt.23.08.23

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಕೆಆರ್‌ಐಡಿಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕ್‌ಗಳಿಂದ ಒಂದು ವರ್ಷದ ಅವಧಿಗೆ ಸುಮಾರು **ರೂ.1070.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ–ಬಿಡ್ ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ರಲ್ಲಿ **29–08–2023** ರಿಂದ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಭಾರತೀಯ ರೈಲ್ವೆ
ಸಾರ್ವಜನಿಕ ಪ್ರಕಟಣೆ

ಭಾರತೀಯ ರೈಲ್ವೆಯ ಸೂಚಿತ ವಲಯದಡಿ ಪೂರ್ಣಗೊಂಡ ವಿಭಾಗದಲ್ಲಿ ಬರುವ 25 ಸಾವಿರ ವೋಲ್ಟ್ 50 ಎಚ್.ಝಡ್ ಎ.ಸಿ ರಲ್ಲಿ ಇರುವ ರೈಲ್ವೆ ಮಾರ್ಗದ ಮತ್ತು ಆವರಣದ ಎಲ್ಲ ಬಳಕೆದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ನಿರ್ದಿಷ್ಟಪಡಿಸಿದ ವಿಭಾಗಕ್ಕೆ ಪ್ರತಿಯಾದ ದಿನಾಂಕದಂದು ಅಥವಾ ನಂತರ ಕಂಬಗಳ ಮೇಲೆ ಎಳೆಯಲಾದ ತಂತಿಗಳಲ್ಲಿ ವಿದ್ಯುತ್ ಪ್ರವಹಿಸಲಾಗುವುದು. ಅಂದಿನಿಂದ ಮತ್ತು ಅದೇ ದಿನಾಂಕದಿಂದ ಕಂಬಗಳಲ್ಲಿ ಮೇಲೆ ಎಳೆಯಲಾದ ಮಾರ್ಗಗಳನ್ನು ಎಲ್ಲ ಕಾಲದಲ್ಲೂ 'ಜೀವಂತ' ಎಂದು ಪರಿಗಣಿಸಲಾಗುವುದು ಮತ್ತು ಯಾವುದೇ ಅನಧಿಕೃತ ವ್ಯಕ್ತಿ ಸದರಿ ಮೇಲೆ ಎಳೆಯಲಾದ ವಿದ್ಯುತ್ ಮಾರ್ಗಗಳ ಸಮೀಪ ಸುಳಿಯುವಂತಿಲ್ಲ ಅಥವಾ ಕೆಲಸ ಮಾಡುವಂತಿಲ್ಲ.

ನಂ.	ವಿಭಾಗ	ದಿನಾಂಕ
1	ಹೊಳೆನರಸಿಪುರ (Excl.) IR Km 89/000.00 to ಹಾಸನ (Incl.) IR Km 120/100.00	15.09.2023
2	ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್ [MNGT] (Excl.) IR Km 00/000.00 to MBBC (Excl.) IR Km 2/000.00	15.09.2023
3	ಸುಬ್ರಮಣ್ಯ ರೋಡ್ (Incl.) IR Km 96/000.00 to ಕಬಕ ಪುತ್ತೂರ್ (Incl.) IR Km 138/000.00	15.09.2023

ಪ್ರಾಜೆಕ್ಟ್ ಇನ್ ಚಾರ್ಜ್
ಆರ್‌ಐಟಿಇಎಸ್ ಲಿಮಿಟೆಡ್

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
No:RGU/PROC/Cell Cultural/122/2021-22 ದಿನಾಂಕ:28.08.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ) 2ನೇ ಕರೆ

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಇವರು ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವ ಬೆಂಗಳೂರಿನ ಸರ್ಕಾರಿ ಫಾರ್ಮಸಿ ಕಾಲೇಜಿಗೆ ಸೆಲ್ ಕಲ್ಚರ್ ಲ್ಯಾಬೋರೇಟರಿಸ್ ಉಪಕರಣಗಳು ಮತ್ತು ಸಲಕರಣೆಗಳನ್ನು ಪೂರೈಕೆ ಮಾಡುವುದಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ಸಂ: ರಾಗಾಆವಿವಿಕ/2023–24/ಎಸ್‌ಇ0003

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	28/08/2023 ಸಂಜೆ 4:19 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	04/09/2023 ಸಂಜೆ 4:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	05/09/2023 ಸಂಜೆ 5:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/–
ಕುಲಸಚಿವರು
ವಾ.ಸಾ.ಸಂ.ಇ/1087/2023–24

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ಟೆಂಡರ್ ಆಹ್ವಾನ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ : 06/2023–24 Dtd : 25.08.2023

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ **ಎನ್.ಆರ್.ಪುರ ತಾಲ್ಲೂಕಿನ 34** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **ಕನಿಷ್ಠ ಮೊತ್ತ ರೂ. 12.02 ಲಕ್ಷ ಗರಿಷ್ಠ ಮೊತ್ತ ರೂ. 77.35** ಲಕ್ಷದ ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-1,2,3&4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **25.08.2023 ರಿಂದ 16.09.2023** ರವರೆಗೆ **ಸಂಜೆ 5.00** ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ **19.09.2023** ರಂದು **ಸಂಜೆ 05:30ಕ್ಕೆ** ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು https://kppp.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಭಾರತೀಯ ರೈಲ್ವೆ
25 ಕೆವಿ ಎಸಿ ಟ್ರ್ಯಾಕ್ಷನ್ ಪರಿಚಯ

"ರಸ್ತೆ ಬಳಕೆದಾರರಿಗೆ ಎಚ್ಚರಿಕೆ"

ಸಾರ್ವಜನಿಕರ ಮಾಹಿತಿಗಾಗಿ ಅಧಿಸೂಚಿಸುವುದೇನೆಂದರೆ, ಹೆಚ್ಚಿನ ಎತ್ತರದ ಭಾರವಿರುವ ವಾಹನ 'ಜೀವಂತ' ತಂತಿಗಳ ಸಂಪರ್ಕಕ್ಕೆ ಬರುವ ಅಥವಾ ಎಳೆದ ತಂತಿಗಳ ಅಪಾಯಕಾರಿ ಸಾಮೀಪ್ಯಕ್ಕೆ ಬರುವುದನ್ನು ತಡೆಗಟ್ಟುವ ದೃಷ್ಟಿಯಿಂದ ಭಾರತೀಯ ರೈಲ್ವೆಯ ಈ ಕೆಳಗಿನ ವಿಭಾಗಗಳ ಪ್ರತಿಯಾಗಿ ಉಲ್ಲೇಖಿಸಲಾದ ದಿನಾಂಕಗಳಂದು ಮತ್ತು ದಿನಾಂಕದಿಂದ 25 ಕೆ.ವಿ. ಎ.ಸಿ. ಎಲೆಕ್ಟ್ರಿಲ್ ತಂತಿಗಳ ಎತ್ತರ ಮಾಪಕಗಳನ್ನು ಎಲ್ಲ ರೈಲು ಹಳಿ ದಾಟುವ ಸ್ಥಳ (ಲೆವೆಲ್ ಕ್ರಾಸಿಂಗ್)ಗಳಲ್ಲಿ ರಸ್ತೆ ಮಟ್ಟದಿಂದ ಸ್ಪಷ್ಟ ಎತ್ತರವಾದ 4.77 ಮೀಟರ್‌ಗಳದ್ದು ಮೇಲಕ್ಕೆ ಎತ್ತರಿಸಲಾಗುವುದು.

ನಂ.	ವಿಭಾಗ	ದಿನಾಂಕ
1	ಹೊಳೆನರಸಿಪುರ (Excl.) IR Km 89/000.00 to ಹಾಸನ (Incl.) IR Km 120/100.00	15.09.2023
2	ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್ [MNGT] (Excl.) IR Km 00/000.00 to MBBC (Excl.) IR Km 2/000.00	15.09.2023
3	ಸುಬ್ರಮಣ್ಯ ರೋಡ್ (Incl.) IR Km 96/000.00 to ಕಬಕ ಪುತ್ತೂರ್ (Incl.) IR Km 138/000.00	15.09.2023

ವಾಹನಗಳಲ್ಲಿ ಸರಕು ತುಂಬುವ ಉದ್ದೇಶಕ್ಕಾಗಿ ಮೇಲೆ ಸ್ಪಷ್ಟಪಡಿಸಲಾದ ಎತ್ತರವನ್ನು ಗಮನಿಸುವಂತೆ ಮತ್ತು ರಸ್ತೆಯಲ್ಲಿ ಸಾಗುವ ವಾಹನಗಳ ಭಾರವು ಯಾವುದೇ ಸನ್ನಿವೇಶದಲ್ಲೂ ಎತ್ತರದ ಮಾಪಕದ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ವಿಪರೀತ ಎತ್ತರದ ಭಾರದಿಂದಾಗುವ ಅಪಾಯಗಳು ಕೆಳಕಂಡಂತಿವೆ :

i. ಎತ್ತರದ ಮಾಪಕಕ್ಕೆ ಅಪಾಯ ಮತ್ತು ರಸ್ತೆಗೆ ಹಾಗೂ ಮಾರ್ಗಕ್ಕೆ ಪದೇಪದೇ ಅಡಚಣೆ.
ii. ಸಾಗಿಸಲಾಗುವ ಸರಕು ಅಥವಾ ಸಲಕರಣೆಗಳಿಗೆ ಅಥವಾ ಸ್ವತಃ ವಾಹನಗಳಿಗೇ ಅಪಾಯ.
iii. ವಿದ್ಯುತ್ ಪ್ರವಹಿಸುವ ತಂತಿಯ ಸಾಮಪ್ಯಕ್ಕೆ ಬರುವ ಅಪಾಯ ಮತ್ತು ತಾಗಿದಲ್ಲಿ ಅಗ್ನಿ ಅನಾಹುತದ ಅಪಾಯ ಮತ್ತು ಜೀವಕ್ಕೆ ಅಪಾಯ.

ಪ್ರಾಜೆಕ್ಟ್ ಇನ್ ಚಾರ್ಜ್
ಆರ್‌ಐಟಿಇಎಸ್ ಲಿಮಿಟೆಡ್

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಸಂ: 03/ 2023-2024 ದಿನಾಂಕ: 25-08-2023

ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರುನ್ನು ಕೆಳಗೆ ಕಾಣಿಸಿದ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW- 1ರ ರೀತಿ ಒಂದು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ 25-08-2023 ರಿಂದ ಇ-ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ 31-08-2023 ಸಂಜೆ 4.00 ಗಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 01-09-2023 ಸಂಜೆ 4.30 ಘಂಟೆವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ 02-09-2023 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು [ಅಂದಾಜು ಮೊತ್ತ 50.00 ಲಕ್ಷದೊಳಗಿನ ಕಾಮಗಾರಿಗಳಿಗೆ] ಟೆಂಡರ್ ಪ್ರಕ್ರಿಯೆ ಬೆಲೆ ಇ-ಪೋರ್ಟಲ್ ರಂತೆ. ಕಾಲಮಿತಿ: ಮಳೆಗಾಲ ಸೇರಿ 2 ತಿಂಗಳು ಒಟ್ಟು 7 (ಏಳು) ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.9.65 ಲಕ್ಷಗಳು ಕನಿಷ್ಠ ರೂ.6.00 ಲಕ್ಷಗಳು, ಇ.ಎಂ.ಡಿ. ಬೆಲೆ ಇ-ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಕಾ.ಇಂ., ಲೋ.ಇ., ವಿಭಾಗ, ಮಂಡ್ಯ

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್ ಹಾವೇರಿ)
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ). ಹಾವೇರಿ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಹಾವೇರಿ.
ರಾಷ್ಟ್ರೀಯ ಆರೋಗ್ಯ ಅಭಿಯಾನ "ಬಿ" ಬ್ಲಾಕ್ ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ ಆವರಣ, ಜಿಲ್ಲಾ ಆಡಳಿತ ಭವನ, ದೇವಗಿರಿ ಹಾವೇರಿ–581110 Fax : 08375-249009
Email : rchohaveri@gmail.com
ಕ್ರಸಂ/DPMU/HVR/RCH/Cont-Appointments/ /2023-24
ದಿನಾಂಕ : 25–08–2023

ಪ್ರಕಟಣೆ

ಹಾವೇರಿ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲೆಯಲ್ಲಿ ಖಾಲಿ ಇರುವ ತಾಂತ್ರಿಕ ಮೇಲ್ವಿಚಾರಕ (Technical Supervisor) ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಹಾವೇರಿ ಹಾಗೂ ಮಾನ್ಯ ಅಧ್ಯಕ್ಷರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ ಇವರ ಅನುಮೋದನೆ ಮೇರೆಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನವನ್ನು (ವಾಕ್ ಇನ್ ಇಂಟರ್‌ವ್ಯೂವ್) ದಿ : **02–09–2023** ರಂದು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 01.00 ಘಂಟೆವರೆಗೆ ಆರೋಗ್ಯ ಭವನ, ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ, ಆವರಣ ಹಾವೇರಿ ಇಲ್ಲಿ ಅರ್ಜಿ ವಿತರಿಸಲಾಗುವುದು ಹಾಗೂ ಅದೇ ದಿನ ಸದರಿ ಅರ್ಜಿ ಜೊತೆ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಭರ್ತಿ ಮಾಡಿ ಪಡೆದುಕೊಳ್ಳಲಾಗುವುದು, ಹಾಗೂ ಅರ್ಜಿ ಸಲ್ಲಿಸಲು ಆಸಕ್ತರಿರುವ ಅರ್ಹ ಅಭ್ಯರ್ಥಿಗಳು ಸ್ವತಃ ಹಾಜರಿದ್ದು, ಅರ್ಜಿಯನ್ನು ಪಡೆದು ಅರ್ಜಿಯೊಂದಿಗೆ ಮೂಲ ದಾಖಲಾತಿಗಳ ಮತ್ತು ದೃಢೀಕರಿಸಿದ ಝರಾಕ್ಸ್ ಪ್ರತಿ ಹಾಗೂ ತಮ್ಮ ಇತ್ತೀಚಿನ ಭಾವಚಿತ್ರದ ಎರಡು ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಲು ಸೂಚಿಸಲಾಗಿದೆ. ಹುದ್ದೆಯ ವಿವರ ಈ ಕೆಳಗಿನಂತಿದೆ.

ಕ್ರ.ಸಂ	ಹುದ್ದೆ	ನಿಗದಿಪಡಿಸಿದ ವಿದ್ಯಾರ್ಹತೆ	ಮೀಸಲಾತಿ
1	ತಾಂತ್ರಿಕ ಮೇಲ್ವಿಚಾರಕರು (Technical Supervisor) (01 ಹುದ್ದೆ)	DMLT/BMLT ವಿದ್ಯಾರ್ಹತೆ ಜೊತೆ 2 ವರ್ಷ ರಕ್ತ ವಿಧಳನಾ ಘಟಕದಲ್ಲಿ ಅನುಭವ ಹೊಂದಿರಬೇಕು. ಕಂಪ್ಯೂಟರ್ ಜ್ಞಾನ (ಇಂಟರ್‌ನೆಟ್ ಬ್ರೌಸಿಂಗ್, ಇ–ಮೇಲ್, ಎಂ.ಎಸ್ ಆಫೀಸ್‌ಗಳ) ಪರಿಣಿತಿ ಹೊಂದಿರಬೇಕು.	ಸಾಮಾನ್ಯ ಅಭ್ಯರ್ಥಿ

ಸದರಿ ಮೇಲ್ಕಾಣಿಸಿದ ಹುದ್ದೆಯ ನೇಮಕಾತಿಗೆ ಸಂಬಂಧಿಸಿದ ಪೂರ್ಣ ಪ್ರಮಾಣದ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಕಾಯ್ದಿರಿಸಿಕೊಂಡಿರುತ್ತದೆ. ಹಾಗೂ ವಯೋಮಿತಿಯನ್ನು ರಾಜ್ಯ ಮಟ್ಟದ ಮಾರ್ಗಸೂಚಿ ಪ್ರಕಾರ ನಿಗದಿಪಡಿಸಲಾಗುತ್ತದೆ.

ಸದರಿ ನೇಮಕಾತಿ ಕುರಿತು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾಡಳಿತ ಭವನ ದೇವಗಿರಿ (ಆರೋಗ್ಯ ಇಲಾಖೆ) ಹಾವೇರಿ ಇಲ್ಲಿ ಮತ್ತು ದೂರವಾಣಿ ಸಂಖ್ಯೆ: **9449843113** ಯನ್ನು ಸಂಪರ್ಕಿಸಿ ಕಛೇರಿ ಅವಧಿಯಲ್ಲಿ ಮಾಹಿತಿ ಪಡೆಯಬಹುದು. ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಹಿ/– ಉಪಾಧ್ಯಕ್ಷರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/148/2023–24

ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು
ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೆ, ಬೆಂಗಳೂರು–560065.
ಸಂಖ್ಯೆ.ಆಅ/ಟಿ.ಎನ್/503/2023–24, ದಿನಾಂಕ:11.08.2023

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಲೆಕ್ಕ ಪರಿಶೋಧನಾ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ.–5ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ನೋಂದಣಿ ಪಡೆದ ನುರಿತ ಮತ್ತು ಪರಿಣಿತವುಳ್ಳ ಚಾರ್ಟೆಡ್ ಅಕೌಂಟೆಟ್ಸ್‌ರವರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ **(1)** Auditing the accounts of all projects / schemes sponsored by various Agencies, **(2)** e-filling of TDS of UAS(B) account (Salary Section, Works, Contingency and Budget Section) ಕೆಲಸವನ್ನು 2 ವರ್ಷ ನಿರ್ವಹಿಸಲು ಟೆಂಡರ್ ಕರೆಯಲಾಗಿದೆ (CALL-3). ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕೆಲಸದ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಈ ಟೆಂಡರ್ ದ್ವಿಲಕೋಟೆ ಪದ್ಧತಿಯಲ್ಲಿದ್ದು, ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡನ್ನು ಒಳಗೊಂಡಿರುತ್ತದೆ. ಲೆಕ್ಕ ಪರಿಶೋಧನಾ ಸಂಸ್ಥೆಯವರು ಮುಂದೆ ತಿಳಿಸಿದ ದಾಖಲೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಬೇಕಾಗುತ್ತದೆ. **(1)** ಕಂಪನಿ ನೋಂದಣಿ ಪ್ರಮಾಣ ಪತ್ರ, **(2)** ಜಿ.ಎಸ್.ಟಿ. ಪ್ರಮಾಣ ಪತ್ರ, **(3)** ವೃತ್ತಿ ಅನುಭವದ ಪ್ರಮಾಣ ಪತ್ರ, **(4)** ಇದೇ ರೀತಿಯ ಕೆಲಸಗಳನ್ನು ನಿರ್ವಹಿಸಿರುವ ಬಗ್ಗೆ ಪ್ರಮಾಣ ಪತ್ರ, **(5)** 3 ವರ್ಷಗಳ ವಹಿವಾಟಿನ ಪ್ರಮಾಣ ಪತ್ರ, **(6)** ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ.

ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 30.8.2023 ರಂದು ಬೆಳಗ್ಗೆ 10.30ಕ್ಕೆ** ನಡೆಸಲಾಗುವುದು. ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 04.09.2023ರಂದು ಅಪರಾಹ್ನ 4:00 ಗಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 06.09.2023ರಂದು ಬೆಳಗ್ಗೆ 10:30ಕ್ಕೆ ತೆರೆಯಲಾಗುವುದು.** ಹಣಕಾಸಿನ ಬಿಡ್ಡನ್ನು **ದಿನಾಂಕ : 11.09.2023ರಂದು ಬೆಳಗ್ಗೆ 10:30ಕ್ಕೆ ತೆರೆಯಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. 080–23332765 ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: **support@eprochelpdesk.com** ಅಥವಾ 8046010000 ಮತ್ತು 8068948777.

ಸಹಿ/–
ಆಸ್ತಿ ಅಧಿಕಾರಿಗಳು.
ವಾಸಾಸಂಇ/ವಾಪ್ರ/ಜಿಎ/1083/2023–24

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ. ಆರ್. ವೃತ್ತ, ಬೆಂಗಳೂರು – 01.
ದೂ.: 080–22112809 ಇಮೇಲ್ : pwdelediv1@gmail.com
ಸಂಖ್ಯೆ : ಕಾ.ಇಂ.(ವಿ)/ಲೋ.ಇ./ವಿದ್ಯುತ್/2023–24/951 ದಿನಾಂಕ : 23–08–2023

ಟೆಂಡರ್ ಹಾಗೂ ಹರಾಜು ಮಾರಾಟ ಪ್ರಕಟಣೆ ದಿನಾಂಕ : 22-08-2023

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ **ಬೆಂಗಳೂರಿನ ಆನಂದರಾವ್ ವೃತ್ತ, ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ ಕಟ್ಟಡದ ಆವರಣದಲ್ಲಿರುವ ಅಂಬಾಸಿಡರ್ ಕಾರ್ ಕೆಎ–01 ಜಿ 1768 ಕಾರ್** ಅನ್ನು ಈಗಿರುವ ಜಾಗದಲ್ಲಿಯೇ ಎಲ್ಲಿ ಹೇಗಿದೆಯೋ ಹಾಗೆ ಇರುವ ಆಧಾರದ ಮೇಲೆ ವಿಲೇವಾರಿ ಮಾಡಲು ಟೆಂಡರ್ ಕರೆಯಲಾಗಿದೆ. **ಟೆಂಡರ್‌ಗಿಟ್ಟ ಮೊಬಲಗು ರೂ. 22,338/–,** ಇ.ಎಂ.ಡಿ. **ಮೊತ್ತ ರೂ. 1700/– ಟೆಂಡರ್ ಫಾರಂ ಬೆಲೆ : ರೂ. 600.00 ಮೊಬಲಗನ್ನು "ಡಿಮ್ಯಾಂಡ್ ಡ್ರಾಫ್ಟ್" ಮೂಲಕ ಟೆಂಡರ್‌ಗಾಗಿ ಅರ್ಜಿ ಸಲ್ಲಿಸಿ, ಟೆಂಡರ್ ಫಾರಂಗಳನ್ನು ಪಡೆಯಲು ದಿನಾಂಕ : 22–08–2023 ರಿಂದ 06–09–2023 ರವರೆಗೆ ನಿಗದಿಪಡಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ : 08–09–2023 ರ ಸಂಜೆ 4.00 ಗಂಟೆಯೊಳಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು.** ಯಾವ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕಾದಿರಿಸಿಕೊಳ್ಳಲಾಗಿದೆ ಮತ್ತು ಯಾವುದೇ ನಿಬಂಧನೆಗಳನ್ನೊಳಗೊಂಡ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

ಮುಂದುವರೆದು ಈ ಕೆಳಕಂಡಂತೆ ವಿವರಿಸಿರುವ ಅನುಪಯುಕ್ತ ಸಾಮಗ್ರಿಗಳನ್ನು **ದಿನಾಂಕ : 11–09–2023 ರಂದು ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ಕಾರ್ಯಪಾಲಕ ಅಭಿಯಂತರವರು (ವಿದ್ಯುತ್)** ಅಥವಾ ಅವರಿಂದ ಅದೇಶಸಲ್ಪಟ್ಟಿರುವರಿಂದ ಅಧಿಕಾರಿಗಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ಅನುಪಯುಕ್ತ ಕಾರ್ ಎಲ್ಲಿದೆಯೋ ಹೇಗಿದೆಯೋ ಹಾಗೆ ಇರುವ ಅಧಾರದ ಮೇಲೆ ವಿಲೇವಾರಿ ಮಾಡಲು **ಬೆಂಗಳೂರಿನ ಆನಂದರಾವ್ ವೃತ್ತ, ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ ಕಟ್ಟಡದ ಆವರಣದಲ್ಲಿ ಬೆಳಗ್ಗೆ 11.30 ಗಂಟೆಗೆ ಗಂಟೆಯೊಳಗೆ ಹಾಜರಾಗಿ, ಈ ಕೆಳಕಂಡ ಅನುಪಯುಕ್ತ ಸಾಮಗ್ರಿಗಳವಾರು ಮುಂಗಡ ಠೇವಣಿ (ಇ.ಎಂ.ಡಿ.) ಮೊಬಲಗನ್ನು "ಡಿಮ್ಯಾಂಡ್ ಡ್ರಾಫ್ಟ್" ಮೂಲಕ ಕಾರ್ಯಪಾಲಕ ಇಂಜಿನಿಯರ್(ವಿ), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಂದಾಯಿಸಿದವರು ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗುವರು.** ತದನಂತರ ಬಂದ ಸವಾಲುದಾರರಿಗೆ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, (ವಿ),
ಲೋಕೋಪಯೋಗಿ ವಿದ್ಯುತ್ ವಿಭಾಗ,
ಬೆಂಗಳೂರು.
ವಾಸಾಇ/ಬೆಂ.ನ./1052/ಮಣಿಪಾಲ್/2023–24

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ – ಚಿಕ್ಕೋಡಿ
ಸಂಖ್ಯೆ: ಸಶಿಅ/ಕೆಜಿಬಿವಿ/ಆ.ಪೂ/ಟೆಂಡರ್/2023–24 ದಿನಾಂಕ:18/08/2023

ದೀರ್ಘಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ 2023–24 ನೇ ಸಾಲಿಗೆ ಚಿಕ್ಕೋಡಿ ಜಿಲ್ಲೆ ವ್ಯಾಪ್ತಿಯಲ್ಲಿನ 2 ಕೆಜಿಬಿವಿ ಟೈಪ್–1 ಶಾಲೆಗಳ ವಸತಿ ನಿಲಯಗಳಿಗೆ (ವಡ್ಡೇರಹಟ್ಟಿ ತಾ:–ಗೋಕಾಕ & ಬ್ಯಾಕೂಡ್ ತಾ: ರಾಯಬಾಗ) ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಆಹಾರ ಪೂರೈಕೆಗಾಗಿ ನೊಂದಾಯಿತ ಆಸಕ್ತ ಏಜನ್ಸಿಗಳ ಮುಖಾಂತರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಪುನ: ಇ–ಟೆಂಡರ್ ಆಹ್ವಾನಿಸಲಾಗಿದ್ದು, ಅದರಲ್ಲಿನ ವೇಳಾ ಪಟ್ಟಿಯಂತೆ ಆಸಕ್ತ ಏಜನ್ಸಿಯವರು ದ್ವಿ–ಲಕೋಟೆಗಳ ಪದ್ಧತಿಯಲ್ಲಿ ಇ–ಟೆಂಡರ್ ದಾಸ್ತಾವೇಜುಗಳನ್ನು ದಾಖಲಿಸಲು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರಮೆಂಟ್ ವೆಬ್ ಸೈಟ್ http://eproc.karnataka.gov.in ನಲ್ಲಿ & ಕಚೇರಿ ಅವಧಿಯಲ್ಲಿ (ದೂರವಾಣಿ ಸಂಖ್ಯೆ: 08338–295008) ಮೂಲಕ ಸಂಪರ್ಕಿಸಬಹುದಾಗಿದೆ.

1ಅಲ್ಪಾವಧಿ ಟೆಂಡರ್ ಪ್ರಕಟಣೆಯ ಸಂಖ್ಯೆ ಹಾಗೂ ದಿನಾಂಕ:ಎಸ್.ಎಸ್.ಕೆ/ಕೆಜಿಬಿವಿ/(TYPE-1)/ಆ.ಪೂ/2023–24/Re-Call ದಿನಾಂಕ:18/08/2023, 2:ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ:ದಿ: 03/09/2023 ಸಾಯಂಕಾಲ 05:00ಗಂಟೆ, 3:ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ:ದಿ:04/09/2023 ಸಂಜೆ 05:00 ಗಂಟೆ, 4:ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ:ದಿ:05/09/2023 ಬೆಳಿಗ್ಗೆ 11:00 ಗಂಟೆ or After the verification of technical bid, 5:ಟೆಂಡರ್ ಮೊತ್ತ:ರೂ.51.00/– ಲಕ್ಷ 2 ಕೆ.ಜಿ.ಬಿ.ವ್ಹಿಗಳಿಗೆ ವರ್ಷಕ್ಕೆ, 6:ಪಾವತಿಸಬೇಕಾದ ಇ.ಎಮ್.ಡಿ ಮೊತ್ತ:ರೂ. 1,27,500/– 2 ಕೆ.ಜಿ.ಬಿ.ವ್ಹಿಗಳಿ ವರ್ಷಕ್ಕೆ, 7:ವ್ಯವಹರಿಸಬೇಕಾದ ಅಧಿಕಾರಿ, ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ:ಶ್ರೀ ಮೋಹನಕುಮಾರ ಹಂಚಾಟೆ ಉಪ ನಿರ್ದೇಶಕರು ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಚಿಕ್ಕೋಡಿ ಸ್ಥಿರ ದೂರವಾಣಿ ಸಂಖ್ಯೆ:08338–295008

ಸಹಿ/–ಉಪನಿರ್ದೇಶಕರು
ಸಾ.ಶಿ.ಇಲಾಖೆ ಹಾಗೂ ಪದನಿಮಿತ್ತ
ಜಿ.ಯೋ.ಸ. ಸಮಗ್ರ ಶಿಕ್ಷಣ ಕರ್ನಾಟಕ ಚಿಕ್ಕೋಡಿ
DIPR/BGM/RO-NO-337/KSMCA/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಬ್ಬ ವ್ಯಕ್ತಿಯ ಹೃದಯ ಮತ್ತು ಮನಸ್ಸನ್ನು ಅರ್ಥಮಾಡಿಕೊಳ್ಳಬೇಕಾದರೆ, ಆತ ಈಗಾಗಲೇ ಮಾಡಿರುವ ಸಾಧನೆಯನ್ನು ಅಳೆಯಬೇಡಿ, ಭವಿಷ್ಯದ ಬಗೆಗಿನ ಆತನ ಆಕಾಂಕ್ಷೆಗಳನ್ನು ಪರಿಗಣಿಸಿ.

–ಖಲೀಲ್ ಗಿಬ್ರಾನ್

ಜಾತಿವಿಷಕ್ಕೆ ಮತ್ತೆ ಮತ್ತೆ ಬಲಿ ಮರ್ಯಾದೆಗೇಡು ಹತ್ಯೆಗಳಿಗೆ ಕೊನೆಯೆಲ್ಲಿ?

ಸಮಾಜವನ್ನು ಆಳವಾಗಿ ಆವರಿಸಿಕೊಂಡಿರುವ ಜಾತಿವಿಷದ ಮುಂದೆ ಕರುಳ ಸಂಬಂಧಗಳೂ ಬೆಲೆ ಕಳೆದುಕೊಂಡು ಸಾವಿನಂಥ ಘೋರಗಳು ಸಂಭವಿಸುತ್ತವೆ ಎನ್ನುವುದಕ್ಕೆ ಕೋಲಾರ ಜಿಲ್ಲೆಯ ತೊಟ್ಲಿ ಗ್ರಾಮದಲ್ಲಿ ನಡೆದಿರುವ ಯುವತಿಯ ಕೊಲೆ ನಿದರ್ಶನದಂತಿದೆ. ಜಾತಿವ್ಯಸನದ ಕಾರಣದಿಂದಾಗಿ ಹೆತ್ತ ಮಗಳನ್ನು ತಂದೆಯೇ ಕೊಂದಿರುವ ಕೃತ್ಯದ ಹಿಂದಿನ ಕ್ರೌರ್ಯ ನಾಗರಿಕ ಸಮಾಜಕ್ಕೆ ಕಳಂಕಪ್ರಾಯವಾದುದು. ಎಂತಹುದೇ ಸಂದರ್ಭದಲ್ಲೂ ಮಕ್ಕಳ ಹಿತಾಸಕ್ತಿಯನ್ನು ರಕ್ಷಿಸಬೇಕಾದ ತಂದೆಗೆ, ತನ್ನದಲ್ಲದ ಜಾತಿಯ ಯುವಕನನ್ನು ಪ್ರೇಮಿಸಿದ ಮಗಳು ಕೊಲೆಗೆ ಅರ್ಹಳಾಗಿ ಕಾಣಿಸಿರುವುದು ಕೌಟುಂಬಿಕ ಸಂಬಂಧಗಳ ಘನತೆಯನ್ನೇ ಪ್ರಶ್ನಾರ್ಹವನ್ನಾಗಿಸುವಂತಿದೆ. ಪರಿಶಿಷ್ಟ ಪಂಗಡದ ಹುಡುಗನನ್ನು ಪ್ರೇಮಿಸಿದ ಒಕ್ಕಲಿಗ ಕುಟುಂಬದ ರಮ್ಯಾ, ಕೊಲೆಗೀಡಾಗಿರುವ ನತದೃಷ್ಟ ತರುಣಿ. ಜೂನ್ 27ರಂದು ಕೋಲಾರ ಜಿಲ್ಲೆಯ ಬೋಡಗುರ್ಕಿ ಗ್ರಾಮದಲ್ಲಿ ಇಂತಹುದೇ ಪ್ರಕರಣ ನಡೆದಿತ್ತು. ಪರಿಶಿಷ್ಟ ಜಾತಿಯ ಯುವಕನನ್ನು ಪ್ರೀತಿಸಿದ ಯುವತಿ ತನ್ನ ತಂದೆಯಿಂದಲೇ ಕೊಲೆಗೀಡಾಗಿದ್ದಳು ಹಾಗೂ ಪ್ರೇಮಿಯ ಸಾವಿನ ಸುದ್ದಿ ತಿಳಿದು ಆಘಾತಕ್ಕೆ ಒಳಗಾದ ಯುವಕ ಚಲಿಸುವ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದ. ಆ ಘಟನೆ ಹಸಿಯಾಗಿರುವಾಗಲೇ ಗಾಯವನ್ನು ಮತ್ತಷ್ಟು ಹುಣ್ಣಾಗಿಸುವಂತಹ ಮತ್ತೊಂದು ಹತ್ಯೆ ನಡೆದಿದೆ. ತನ್ನ ಮಾತುಗಳಿಗೆ ಬೆಲೆ ಕೊಡದಿರುವ ಮಗಳನ್ನು ಕೊಂದಿರುವ ತಂದೆ, ತನ್ನ ಸಹೋದರರ ಸಹಾಯದಿಂದ ಮೃತದೇಹವನ್ನು ತೋಟದಲ್ಲಿ ಹೂತುಹಾಕಿದ್ದಾನೆ. ಮಗಳು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಊರಿನವರನ್ನು ನಂಬಿಸುವ ಪ್ರಯತ್ನವನ್ನೂ ಮಾಡಿದ್ದಾನೆ. ಆದರೆ, ಇದು ಆತ್ಮಹತ್ಯೆಯಲ್ಲ ಕೊಲೆ ಎಂದು ಊರಿನಲ್ಲಿ ಹಬ್ಬಿದ ವದಂತಿ ಪೊಲೀಸರನ್ನು ತಲುಪಿದೆ. ಪೊಲೀಸರು ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಂಡು ನಡೆಸಿದ ವಿಚಾರಣೆಯಲ್ಲಿ ಹತ್ಯೆಯ ಸಂಗತಿ ಬಹಿರಂಗಗೊಂಡಿದೆ. ಮರ್ಯಾದೆಗೇಡು ಹತ್ಯೆಯ ಹಿನ್ನೆಲೆಯಲ್ಲಿ ಕೊಲೆಗೀಡಾದ ಯುವತಿಯ ತಂದೆ ಹಾಗೂ ಆತನ ಇಬ್ಬರು ತಮ್ಮಂದಿರನ್ನು ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಜಾತಿ ಹಾಗೂ ಧರ್ಮದ ಹೆಸರಿನಲ್ಲಿ ನಡೆಯುವ ದ್ವೇಷ–ಹಿಂಸೆಯನ್ನು ತಡೆಗಟ್ಟದೇ ಹೋದರೆ, ನಮ್ಮ ವೈಜ್ಞಾನಿಕ ಸಾಧನೆಗಳು ಹಾಗೂ ವೈಚಾರಿಕ ಚಿಂತನೆಗಳು 'ಬರಡು ಹೆಮ್ಮೆ'ಯಾಗಿಯೇ ಉಳಿಯಲಿವೆ

ಕರ್ನಾಟಕ ಮಾತ್ರವಲ್ಲದೆ, ದೇಶದ ವಿವಿಧ ಭಾಗಗಳಲ್ಲೂ ಜಾತಿಕುರುಡಿನ ಕಿಚ್ಚಿಗೆ ತರುಣ–ತರುಣಿಯರು ಬಲಿಯಾಗುತ್ತಲೇ ಇದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಕೆಲವು ಪ್ರಕರಣಗಳು ಆತ್ಮಹತ್ಯೆಯ ಹೆಸರಿನಲ್ಲಿ ಮುಚ್ಚಿಹೋಗಿರುವ ಸಾಧ್ಯತೆಗಳೂ ಇವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ ಅಂಕಿಅಂಶಗಳ ಪ್ರಕಾರ, 2017–18ರಲ್ಲಿ ಮರ್ಯಾದೆಗೇಡು ಹತ್ಯೆಯ ಒಂದು ಪ್ರಕರಣವಷ್ಟೇ ದೇಶದಲ್ಲಿ ದಾಖಲಾಗಿದ್ದು, 2019ರಲ್ಲಿ 25 ಪ್ರಕರಣಗಳು ವರದಿಯಾಗಿವೆ. ಆದರೆ, ಸ್ವಯಂ ಸೇವಾಸಂಸ್ಥೆಯೊಂದರ 2019ರ ವರದಿಯ ಪ್ರಕಾರ, ಐದು ವರ್ಷಗಳ ಅವಧಿಯಲ್ಲಿ 195 ಪ್ರಕರಣಗಳು ತಮಿಳುನಾಡೊಂದರಲ್ಲೇ ವರದಿಯಾಗಿವೆ. ಕರ್ನಾಟಕದಲ್ಲೂ ಮರ್ಯಾದೆಗೇಡು ಹತ್ಯೆಯ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ನಾಯಕ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬ ಅನ್ಯಜಾತಿಯ ಯುವಕನನ್ನು ಪ್ರೇಮಿಸಿದ ಮಗಳನ್ನು ಕೊಂದಿರುವ ಸುದ್ದಿ ತುಮಕೂರು ಜಿಲ್ಲೆಯ ಚಿಕ್ಕಹೆಡಿಗೆ ಹಳ್ಳಿಯಲ್ಲಿ ಇತ್ತೀಚೆಗೆ ನಡೆದಿತ್ತು. ಬಳ್ಳಾರಿಯಲ್ಲಿ ಯುವತಿಯೊಬ್ಬಳು ತನ್ನ ಪ್ರೇಮದ ಕಾರಣದಿಂದಾಗಿ ತಂದೆಯಿಂದಲೇ ಕೊಲೆಗೀಡಾದ ಘಟನೆ ಕಳೆದ ವರ್ಷ ನಡೆದಿತ್ತು. ಈಗ ಕೋಲಾರ ಜಿಲ್ಲೆಯಲ್ಲಿ ಎರಡು ತಿಂಗಳ ಅವಧಿಯಲ್ಲಿ ಎರಡು ಮಾರ್ಯದೆಗೇಡು ಹತ್ಯೆಗಳು ನಡೆದಿವೆ. ಈ ಹತ್ಯೆಗಳು ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಜಾತೀಯತೆಯ ಕ್ರೌರ್ಯವನ್ನು ಸೂಚಿಸುವಂತಿವೆ. ಜ್ವಾಲಾಮುಖಿಯಂತೆ ಆಗಾಗ ಸ್ಫೋಟಿಸುವ ಜಾತಿವಿಷಕ್ಕೆ ಯುವಜನ ಬಲಿಯಾಗುತ್ತಿದ್ದಾರೆ. ಈ ಹತ್ಯೆಗಳಿಂದ ದೇಶದ ಜಾತ್ಯತೀತ ಸ್ವರೂಪ ಗಾಸಿಗೊಳ್ಳುತ್ತಿದ್ದು, ಸಂವಿಧಾನದ ಆಶಯಗಳೂ ಮುಕ್ಕಾಗುತ್ತಿವೆ. ಚಂದ್ರಯಾನದಂತಹ ಅತ್ಯುನ್ನತ ವೈಜ್ಞಾನಿಕ ಸಾಧನೆಗಳ ಇನ್ನೊಂದು ತುದಿಯಲ್ಲಿ ಸಮಾಜದ ಅಂತಃಕರಣವೇ ಬರಡಾಗುತ್ತಿದೆಯೇನೋ ಎಂದು ಅನುಮಾನ ಮೂಡಿಸುವಂತಹ ಘಟನೆಗಳು ನಡೆಯುತ್ತಿವೆ. ಜಾತಿ ಹಾಗೂ ಧರ್ಮದ ಹೆಸರಿನಲ್ಲಿ ನಡೆಯುವ ದ್ವೇಷ–ಹಿಂಸೆಯನ್ನು ತಡೆಗಟ್ಟದೇ ಹೋದರೆ, ನಮ್ಮ ವೈಜ್ಞಾನಿಕ ಸಾಧನೆಗಳು ಹಾಗೂ ವೈಚಾರಿಕ ಚಿಂತನೆಗಳು 'ಬರಡು ಹೆಮ್ಮೆ'ಯಾಗಿಯೇ ಉಳಿಯಲಿವೆ. ಸಮಾಜದ ಅಂತಃಕರಣವನ್ನು ನಿರಂತರವಾಗಿ ಜಾಗೃತವಾಗಿರಿಸುವ ಕೆಲಸವನ್ನು ಸರ್ಕಾರಗಳು ಪ್ರಜ್ಞಾಪೂರ್ವಕವಾಗಿ ಮಾಡಬೇಕು. ಆ ಕೆಲಸದಲ್ಲಿ ಜನಸಾಮಾನ್ಯರೂ ತೊಡಗಿಕೊಳ್ಳಬೇಕು.

ದಿನದ ಟ್ವೀಟ್

ಚುನಾವಣೆ ಮಹಿಮೆ!

ಅಡುಗೆ ಅನಿಲ ಸಿಲಿಂಡರ್ ಭಾರಿ ದುಬಾರಿ ಎಂಬುದು ಎರಡು ವರ್ಷಗಳ ಬಳಿಕವಾದರೂ ಕೇಂದ್ರ ಸರ್ಕಾರಕ್ಕೆ ಕೊನೆಗೂ ಮನವರಿಕೆಯಾಗಿದೆ. ಸನ್ನಿಹಿತವಾಗುತ್ತಿರುವ ಚುನಾವಣೆಗಳಿಗೆ ಧನ್ಯವಾದ.

ರಾಮಚಂದ್ರ ಎಂ., ಬರಹಗಾರ

ಕಿಡಿನುಡಿ

ದನವಾದರೆ ಕಟ್ಟಿಹಾಕಬಹುದು. ಪಕ್ಷದಿಂದ ಹೋಗುವವರನ್ನು ತಡೆಯಲಾಗುವುದೇ?

ಸಿ.ಟಿ.ರವಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಭಾನುವಾರ, 30-8-1998

- **ಪ್ರಸಾರ ಭಾರತಿ ಸುಗ್ರೀವಾಜ್ಞೆ ಜಾರಿ**

ನವದೆಹಲಿ, ಆ. 29 (ಪಿಟಿಐ)– ವಿವಾದಾತ್ಮಕ ಪ್ರಸಾರ ಭಾರತಿ ಸುಗ್ರೀವಾಜ್ಞೆಯನ್ನು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ರಾತ್ರಿ ಜಾರಿಗೊಳಿಸಿದ್ದಾರೆ.

ಈ ಸುಗ್ರೀವಾಜ್ಞೆಯ ಪ್ರಕಾರ, ಪ್ರಸಾರ ಭಾರತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ವಯಸ್ಸು 62 ವರ್ಷಕ್ಕಿಂತ ಹೆಚ್ಚಾಗಬಾರದು. ಇದರಿಂದಾಗಿ ಈಗಿನ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಎಸ್. ಗಿಲ್ ಅವರ ಅವಧಿ ತಾನಾಗಿಯೇ ಮುಕ್ತಾಯವಾಗುತ್ತದೆ. ಅವರ ಸ್ಥಾನಕ್ಕೆ ಹಂಗಾಮಿಯಾಗಿ ಆಕಾಶವಾಣಿಯ ಪ್ರಧಾನ ನಿರ್ದೇಶಕ ಒ.ಪಿ. ಕೇಜ್ರಿವಾಲ್ ಅವರನ್ನು ಸರ್ಕಾರ ನೇಮಿಸಿದೆ.

- **ಆನೆಯ ಮೇಲೆ ಅಂಬಾರಿ: ಕೋರ್ಟಿಗೆ?**

ಮೈಸೂರು, ಆ. 29– ದಸರಾ ಮಹೋತ್ಸವದ ಸಂದರ್ಭದಲ್ಲಿ ವಿಜಯದಶಮಿಯ ದಿನದಂದು ಸುಮಾರು 800 ಕೆ.ಜಿ. ತೂಕದ ಅಂಬಾರಿಯನ್ನು ಏರಿಸಿ, ಆನೆಗೆ ಹಿಂಸೆ ನೀಡುವ ಪದ್ಧತಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತೆ ಪೀಪಲ್ ಫಾರ್ ಅನಿಮಲ್ಸ್ ಮೈಸೂರು ಘಟಕಕ್ಕೆ ಸೂಚನೆ ನೀಡಿರುವುದಾಗಿ ಸಾಮಾಜಿಕ ನ್ಯಾಯ ಖಾತೆಯ ಕೇಂದ್ರ ಸಚಿವೆ ಮೇನಕಾ ಗಾಂಧಿ ಇಂದು ಇಲ್ಲಿ ತಿಳಿಸಿದರು.

ರಾಜಮನೆತನದವರ ಕಾಲದಿಂದಲೂ ಜಾರಿಯಲ್ಲಿರುವ ಈ ಹಿಂಸಾಪ್ರವೃತ್ತಿ ಬಗ್ಗೆ ತಮಗೆ ಅರಿವಿದೆ ಎಂದ ಅವರು, ಆನೆಯನ್ನು ಈ ಕೆಲಸಕ್ಕೆ ನಿಯೋಜಿಸಿರುವುದು ಉಚಿತವಲ್ಲ, ಇದನ್ನು ತಡೆಯುವ ಕುರಿತಂತೆ ಸಂಸ್ಥೆಯ ನಗರ ಘಟಕವು ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ತಾವು ಸಲಹೆ ಮಾಡಿದ್ದು, ಇದೇ ಸೂಕ್ತ ಮಾರ್ಗ ಎಂದರು.

50 ವರ್ಷಗಳ ಹಿಂದೆ

ಗುರುವಾರ, 30-8-1973

- **ಹಿಂದುಳಿದಿರುವಿಕೆ ನಿರ್ಧಾರಕ್ಕೆ ಜಾತಿಯೇ ಆಧಾರವಾಗಿರಲೆಂದು ಪ್ರಧಾನಿಗೆ 80 ಎಂ.ಪಿ.ಗಳ ಮನವಿ**

ನವದೆಹಲಿ, ಆ. 29– ಜಾತಿಯ ಆಧಾರದ ಮೇಲೆ ಹಿಂದುಳಿದ ವರ್ಗವನ್ನು ನಿರ್ಧರಿಸಬೇಕೆಂದು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆಯಾದರೂ ಕೇಂದ್ರ ಸರ್ಕಾರ ಕೆಲವು ವರ್ಷಗಳ ಹಿಂದೆ ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಹಿಂದುಳಿದಿರುವಿಕೆಯನ್ನು ನಿಷ್ಕರ್ಶಿಸಬೇಕೆಂದು ಆದೇಶ ನೀಡಿದ್ದು, ಇದರಿಂದ ಅಸಂಖ್ಯಾತ ಭಾರತೀಯರಿಗೆ ತೀವ್ರ ಹಾನಿಯುಂಟಾಗಿದೆಯೆಂದು ಸುಮಾರು ಎಂಬತ್ತು ಮಂದಿ ಸಂಸತ್ ಸದಸ್ಯರು ತಿಳಿಸಿದ್ದಾರೆ.

ಹಿಂದುಳಿದಿರುವಿಕೆಯ ನಿಷ್ಕರ್ಶೆಗೆ ಆರ್ಥಿಕ ಸ್ಥಿತಿಯನ್ನೇ ಅಳತೆಗೋಲಾಗಿಸುವ ಸರ್ಕಾರದ ನಿರ್ಧಾರದಿಂದಾಗಿ ಇತರೆ ಹಿಂದುಳಿದ ಜನರಿಗೆ (ಅಂದರೆ ಹರಿಜನ, ಗಿರಿಜನರನ್ನು ಬಿಟ್ಟು ಉಳಿದವರು) ಆಘಾತವಾಗಿದೆ ಹಾಗೂ ತೀವ್ರ ನೋವುಂಟಾಗಿದೆಯೆಂದು ಇವರುಗಳು ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರಿಗೆ ಸಲ್ಲಿಸಿದ ಮನವಿಪತ್ರದಲ್ಲಿ ಹೇಳಿದ್ದಾರೆ.

- **ಮೈಸೂರು ಅರಮನೆಗಳ ಪರಭಾರೆಗೆ ಅನುಮತಿ ಬೇಡ: ಕೆಂಗಲ್– ವೀರೇಂದ್ರರ ಆಗ್ರಹ**

ನವದೆಹಲಿ, ಆ. 29– ಉದಕಮಂಡಲದಲ್ಲಿರುವ ತಮ್ಮ ಅರಮನೆಯನ್ನು ತಮ್ಮಿಷ್ಟ ಬಂದಂತೆ ವಿಲೇವಾರಿ ಮಾಡಲು ಮೈಸೂರಿನ ಮಾಜಿ ಮಹಾರಾಜರಿಗೆ ಅನುಮತಿ ನೀಡುವ ಕೇಂದ್ರ ಸರ್ಕಾರದ ನಿರ್ಧಾರದ ಬಗ್ಗೆ ಕರ್ನಾಟಕ ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ ಮತ್ತು ವೀರೇಂದ್ರ ಪಾಟೀಲ್ ಇಂದು ಸಂಸತ್‌ನಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯದ ವಿಲೀನ ಕಾಲದಲ್ಲಿ ಮಾಜಿ ಮಹಾರಾಜರು ಮತ್ತು ಕೇಂದ್ರ ಸರ್ಕಾರದ ನಡುವೆ ಆಗಿರುವ ಒಪ್ಪಂದದ ಪ್ರಕಾರ ಬೆಂಗಳೂರು, ಮೈಸೂರು ಮತ್ತು ಉದಕಮಂಡಲಗಳಲ್ಲಿನ ಅರಮನೆಗಳನ್ನು ಪರಭಾರೆ ಮಾಡಲಾಗದೆಂದು ಕೆಂಗಲ್ ಮತ್ತು ವೀರೇಂದ್ರ ಪಾಟೀಲ್ ತಿಳಿಸಿದರು.

ಪ್ರಮುಖ ಆಟಗಾರರ ಶತಕದ ನಡುವೆಯೂ ಪಂದ್ಯ ಸೋತ ಉದಾಹರಣೆಗಳಿವೆ

ಸೆಂಚುರಿ ಓಕೆ, ಆಪರೇಷನ್ ಯಾಕೆ?



ಅನುಸಂಧಾನ

ರವೀಂದ್ರ ಭಟ್ಟ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೂರು ದಿನಗಳನ್ನು ಪೂರೈಸಿದೆ. ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು ಸಾಧನೆಯಾದರೂ ನೂರು ದಿನ ಕಳೆಯುವುದರೊಳಗೇ ಹಲವಾರು ಸಂಕಷ್ಟಗಳನ್ನು ಮೈಮೇಲೆ ಹಾಕಿಕೊಂಡಿದೆ. ಹೀಗಾಗಿ, ಪಾಯಸದಲ್ಲಿ ನೊಣ ಸಿಕ್ಕಂತಾಗಿದೆ. ವರ್ಷಕ್ಕೆ ₹ 54 ಸಾವಿರ ಕೋಟಿಗೂ ಹೆಚ್ಚು ಹಣ ಬೇಡುವ ಗ್ಯಾರಂಟಿ ಯೋಜನೆಗಳ ಜಾರಿಗೆ ಬದ್ಧತೆ ತೋರಿದ್ದು ಅಭಿನಂದನೆಗೆ ಅರ್ಹವಾದರೂ ಅಭಿವೃದ್ಧಿಗೆ ಹಣ ಸಿಗುತ್ತಿಲ್ಲ ಎಂದು ಕಾಂಗ್ರೆಸ್ ಪಕ್ಷದ ಶಾಸಕರೇ ಅಪಸ್ವರ ತೆಗೆಯಲು ಆರಂಭಿಸಿದ್ದು ಸರ್ಕಾರದ ಬಾಲಗ್ರಹಕ್ಕೆ ಮುನ್ಸೂಚನೆ. ಕಾಂಗ್ರೆಸ್ ಶಾಸಕರು ಪತ್ರ ಬರೆದು ರಂಪಾಟ ಮಾಡಿದ ನಂತರ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ಶಾಸಕರನ್ನು ಕರೆದು ಅಹವಾಲು ಆಲಿಸಿದ್ದು ಉತ್ತಮ ನಡೆಯೇ. ಆದರೂ ನೂರು ದಿನಗಳ ಒಳಗೇ ಪಕ್ಷವೊಂದಕ್ಕೆ ಇಂತಹ ಸ್ಥಿತಿ ಬಂದಿದ್ದು ನಗೆಯಾಡುವವರ ಮುಂದೆ ಎಡವಿ ಬಿದ್ದಂತಾಗಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರದ ನೂರು ದಿನಗಳ ಅವಧಿಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಕಾರ್ಯ–ವೈಖರಿಗಳೂ ಬಯಲಾಗಿವೆ. ಸಾಮಾನ್ಯವಾಗಿ ಕಾಂಗ್ರೆಸ್ ಪಕ್ಷವು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದಾಗ ಸೋಮಾರಿತನವನ್ನು ಪ್ರದರ್ಶಿಸುತ್ತದೆ. ಬಿಜೆಪಿಯು ಈ ಹಿಂದೆ ಆಡಳಿತದ ಚುಕ್ಕಾಣಿ ಹಿಡಿದಾಗ, ಮೊದಲ ಎರಡು ವರ್ಷ ಕಾಂಗ್ರೆಸ್‌ನ ಆರ್ಭಟಗಳು ಏನೂ ಇರಲಿಲ್ಲ. ಸರ್ಕಾರದ ಅವಧಿ ಮುಗಿಯುವ ಹೊತ್ತಿನಲ್ಲಿ ಅದು ಚುರುಕಾಯಿತು. ಈ ಮೊದಲು ಎರಡು ಬಾರಿ ಬಿಜೆಪಿ ಅಧಿಕಾರದಲ್ಲಿ ಇದ್ದಾಗಲೂ ಕಾಂಗ್ರೆಸ್ ಹೀಗೆಯೇ ಮಾಡಿದೆ. ಆದರೆ ಬಿಜೆಪಿ ಹಾಗಲ್ಲ. ಅಧಿಕಾರ ಕಳೆದುಕೊಂಡ ದಿನದಿಂದಲೇ ಸರ್ಕಾರದ ವಿರುದ್ಧ ಮುಗಿಬೀಳಲು ಆರಂಭಿಸುತ್ತದೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ನೂರು ದಿನಗಳು ಕಳೆದರೂ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಇನ್ನೂ ಯಾರನ್ನೂ ಆಯ್ಕೆ ಮಾಡುವುದು ಆ ಪಕ್ಷಕ್ಕೆ ಸಾಧ್ಯವಾಗದೇ ಇದ್ದರೂ ಸರ್ಕಾರದ ವಿರುದ್ಧ ಕತ್ತಿ ಮಸೆಯುವುದನ್ನು ಕಡಿಮೆ ಮಾಡಿಲ್ಲ. ಜಾತ್ಯತೀತ ಜನತಾದಳ ಕೂಡ ಕತ್ತಿ ಬೀಸುವುದನ್ನು ನಿಲ್ಲಿಸಿಲ್ಲ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಬರೀ ಗ್ಯಾರಂಟಿಗಳನ್ನಷ್ಟೇ ಜಾರಿಗೆ ತಂದಿಲ್ಲ, ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಕೆಲವು ಹಗರಣಗಳ ಬಗ್ಗೆ ತನಿಖೆ ನಡೆಸಲೂ ಮುಂದಾಗಿದೆ. ಕೋವಿಡ್ ಕಾಲದಲ್ಲಿ ಆರೋಗ್ಯ ಇಲಾಖೆಯಲ್ಲಿ ನಡೆದ ಹಗರಣ, ಶೇ 40ರಷ್ಟು ಲಂಚ ಪ್ರಕರಣ ಕುರಿತ ತನಿಖೆ ಹಾಗೂ ಪಿಎಸ್‌ಐ ನೇಮಕಾತಿಯಲ್ಲಿ ನಡೆದ ಹಗರಣಗಳ ಬಗ್ಗೆ ತನಿಖೆಗೆ ಆದೇಶ ಮಾಡಿದ್ದು ಕೂಡ ಸಾಧನೆಯೆ. ಜೊತೆಗೆ ಬಿಟ್ ಕಾಯಿನ್, ಬಿಬಿಎಂಪಿ ಕಾಮಗಾರಿಗಳ ಬಿಲ್ ಪಾವತಿ ಪ್ರಕರಣಗಳ ತನಿಖೆಗೆ ಎಸ್‌ಐಟಿ ನೇಮಕ, ಉಡುಪಿಯ ಖಾಸಗಿ ಕಾಲೇಜೊಂದರ ಶೌಚಾಲಯದಲ್ಲಿ ವಿಡಿಯೊ ಚಿತ್ರೀಕರಣ, ಬೆಳಗಾವಿ ಜೈನ ಮುನಿ ಹತ್ಯೆ ಪ್ರಕರಣ ಹಾಗೂ ಕೃಷಿ ಸಚಿವರಿಗೆ ಸಂಬಂಧಿಸಿದ ಲಂಚದ ಆರೋಪ ಕುರಿತ 'ನಕಲಿ ಪತ್ರ'ಗಳ ಪ್ರಕರಣಗಳನ್ನು ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ. ಈ ಎಲ್ಲವೂ ಸ್ವಾಗತಾರ್ಹ ಕ್ರಮಗಳೇ ಆಗಿವೆ. ಈ ಎಲ್ಲ ತನಿಖೆಗಳೂ ಕಾಲಮಿತಿಯಲ್ಲಿ ಪೂರ್ಣಗೊಂಡು ನಿಜವಾದ ಅಪರಾಧಿಗಳನ್ನು ಪತ್ತೆ ಮಾಡಿದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ನಿಜಕ್ಕೂ ಅಭಿನಂದನೆಗೆ ಅರ್ಹ–ವಾಗುತ್ತದೆ. ಇಲ್ಲವಾದರೆ ಹತ್ತರ ಜೊತೆಗೆ ಹನ್ನೊಂದರ ಸರ್ಕಾರವಾಗುತ್ತದೆ.

ಒಂದು ಚುನಾಯಿತ ಸರ್ಕಾರದ ಸಾಧನೆಯನ್ನು ಅಳೆಯಲು ನೂರು ದಿನ ಸಾಲದು. ಯಾವುದೇ ಸರ್ಕಾರಕ್ಕೆ ಕನಿಷ್ಠ ಆರು ತಿಂಗಳ ಅವಕಾಶವನ್ನಾದರೂ ನೀಡಬೇಕು. ಆದರೂ ಕಾಂಗ್ರೆಸ್ ನೇತೃತ್ವದ ಸರ್ಕಾರದ ನೂರು ದಿನದ ನಡೆ ನಿರಾಶಾದಾಯಕವೇನಲ್ಲ. 'ಚುನಾವಣೆಗೂ ಮೊದಲು ನೀಡಿದ್ದ ಐದು ಗ್ಯಾರಂಟಿಗಳನ್ನು ಜಾರಿ ಮಾಡುತ್ತಾ ನಾವು ಸೆಂಚುರಿ ಬಾರಿಸಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂತಸ ವ್ಯಕ್ತಪಡಿಸಿದ್ದಾರೆ. ಇಂತಹ ಪ್ರತಿಕ್ರಿಯೆ ಅವರಿಂದ ಸಹಜವಾದದ್ದೆ. ಆದರೆ ಕೆಲವು ಆಟಗಾರರು ಸೆಂಚುರಿ ಹೊಡೆದಾಗಲೂ ತಂಡವು ಪಂದ್ಯವನ್ನು ಸೋತ ಉದಾಹರಣೆಗಳು ಬಹಳಷ್ಟಿವೆ ಎನ್ನುವುದು ನಮ್ಮ ಉಪಮುಖ್ಯಮಂತ್ರಿಯ–ವರ ಗಮನದಲ್ಲಿ ಇರಬೇಕು. ಇಲ್ಲವಾದರೆ ಸೆಂಚುರಿಯು ದಾಖಲೆ ಪಟ್ಟಿಗೆ ಸೇರುತ್ತದೆ, ಸರ್ಕಾರ ಸೋಲಿನ ಹಾದಿ ಹಿಡಿಯುತ್ತದೆ.

ಚುನಾವಣೆಗೆ ಮುನ್ನ ಘೋಷಿಸಿದ ಐದು ಗ್ಯಾರಂಟಿ ಯೋಜನೆಗಳ ಪೈಕಿ ಮೂರು ಯೋಜನೆಗಳು ಜಾರಿಗೆ ಬಂದಿವೆ. 'ಗೃಹಲಕ್ಷ್ಮಿ' ಅನುಷ್ಠಾನಕ್ಕೆ ಸಿದ್ಧತೆ ನಡೆದಿದೆ. 'ಯುವನಿಧಿ' ವರ್ಷಾಂತ್ಯಕ್ಕೆ ಜಾರಿಗೆ ಬರುತ್ತದೆ ಎಂದು ಭರವಸೆ ನೀಡಲಾಗಿದೆ. ಗ್ಯಾರಂಟಿ ಯೋಜನೆಗಳನ್ನು ಸರಿಯಾಗಿ ಜಾರಿಗೊಳಿಸಲು ಹಣ ಎಲ್ಲಿಂದ ಸಂಗ್ರಹಿಸ–ಲಾಗುತ್ತದೆ ಎನ್ನುವುದನ್ನು ಸರ್ಕಾರ ಇನ್ನೂ ಬಹಿರಂಗ ಮಾಡಿಲ್ಲ. 'ಈ ವರ್ಷ ಅಭಿವೃದ್ಧಿಗೆ ಹಣ ಇಲ್ಲ. ಎಲ್ಲ ಶಾಸಕರೂ ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಾರೆ. ಪರಿಶಿಷ್ಟರ ಕಲ್ಯಾಣಕ್ಕೆ ಇಟ್ಟಿರುವ ಹಣದಲ್ಲಿಯೂ ಒಂದು ಪಾಲನ್ನು (₹ 11 ಸಾವಿರ ಕೋಟಿ) ಗ್ಯಾರಂಟಿ ಯೋಜನೆಗಳಿಗೆ ಬಳಸುವುದಾಗಿ ಸರ್ಕಾರ ಹೇಳಿಕೊಂಡಿದೆ. ಇದಕ್ಕೆ ಈಗಾಗಲೇ ವಿರೋಧ ವ್ಯಕ್ತವಾಗಿದೆ. ಇದರ ಜೊತೆಗೆ ನಿರುದ್ಯೋಗ ನಿವಾರಣೆಯ ಗ್ಯಾರಂಟಿಯೂ ಅನುಷ್ಠಾನಕ್ಕೆ ಬಾಕಿ ಇದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.5 ಲಕ್ಷ ಉದ್ಯೋಗಗಳನ್ನು ಹಂತ ಹಂತವಾಗಿ ಭರ್ತಿ ಮಾಡುವುದಾಗಿ ಕಾಂಗ್ರೆಸ್ ಪಕ್ಷ ಹೇಳಿಕೊಂಡಿತ್ತು. ಆದರೆ ಸರ್ಕಾರ ನೂರು ದಿನಗಳ ಅವಧಿಯಲ್ಲಿ ಈ ಬಗ್ಗೆ ಯಾವುದೇ ಹೆಜ್ಜೆ ಇಟ್ಟಂತೆ ಕಾಣುತ್ತಿಲ್ಲ. ನಿರುದ್ಯೋಗ ಭತ್ಯೆ ಕೊಡುವುದಷ್ಟೇ ಸರ್ಕಾರದ ಜವಾಬ್ದಾರಿಯಲ್ಲ. ಉದ್ಯೋಗ ಸೃಷ್ಟಿ ಮತ್ತು ನೇಮಕಾತಿಯೂ ಸರ್ಕಾರದ ಜವಾಬ್ದಾರಿ. ಇದರ ಜೊತೆಗೆ ಮಳೆ ಕೊರತೆ ಉಂಟಾಗಿದ್ದು ಬರ ಪರಿಸ್ಥಿತಿಯನ್ನೂ ನಿಭಾಯಿಸಬೇಕಾಗಿದೆ.

'ಸರ್ಕಾರದ ನೂರು ದಿನಗಳ ಸಾಧನೆ ಓಕೆ. ಆದರೆ ಆಪರೇಷನ್ ಹಸ್ತ ಯಾಕೆ?' ಎಂದು ಜನರು ಕೇಳುವಂತಾಗಿದೆ. ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಪಕ್ಷವನ್ನು ಇನ್ನಷ್ಟು ಬಲಗೊಳಿಸುವ ಆತುರದಲ್ಲಿ ಇತರ ಪಕ್ಷಗಳ ಕೆಲವರನ್ನು ಸೇರಿಸಿಕೊಳ್ಳುವ ಉತ್ಸಾಹದಲ್ಲಿ ಕಾಂಗ್ರೆಸ್ ಪಕ್ಷ ಇದೆ. 'ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಮೆಚ್ಚಿ ಯಾರೇ ಬಂದರೂ ಸ್ವಾಗತ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. 'ನಾವು ಯಾರನ್ನೂ ಪಕ್ಷಕ್ಕೆ ಆಹ್ವಾನಿಸುತ್ತಿಲ್ಲ. ತಾವಾಗಿಯೇ ಯಾರಾದರೂ ಬಂದರೆ ಅವರನ್ನು ಸೇರಿಸಿ–ಕೊಳ್ಳುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಹೇಳುತ್ತಾರೆ. ಇತರ ಸಚಿವರೂ ಅವ್ರು ಬರ್ತಾರೆ, ಇವ್ರು ಬರ್ತಾರೆ ಎಂದು ಹೇಳುತ್ತಲೇ ಇದ್ದಾರೆ. ಮಾಜಿ ಶಾಸಕರು, ಮಾಜಿ ಸಚಿವರು, ಕಾರ್ಯಕರ್ತರು, ಮುಖಂಡರು ಯಾರೇ ಕಾಂಗ್ರೆಸ್ ಪಕ್ಷ ಸೇರಿದರೂ ಯಾರದ್ದೂ ತಕರಾರಿಲ್ಲ. ಆದರೆ ಮೂರು ತಿಂಗಳ ಹಿಂದಷ್ಟೇ ಜನರಿಂದ ಆಯ್ಕೆಯಾಗಿರುವ ಶಾಸಕರು ತಾವು ಗೆದ್ದ ಪಕ್ಷವನ್ನು ಬಿಟ್ಟು ಈಗ ಕಾಂಗ್ರೆಸ್ ಸೇರುವುದು ಸರಿಯಲ್ಲ.

ಸುಮಾರು ಮೂರು ದಶಕಗಳ ನಂತರ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದ ಮತದಾರರು ಅಪೂರ್ವವಾದ ಬಹುಮತವನ್ನು ನೀಡಿದ್ದಾರೆ. 135 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷ ಗೆದ್ದಿದೆ. ಸಂಖ್ಯೆಯ ದೃಷ್ಟಿಯಿಂದ ಕಾಂಗ್ರೆಸ್ ನೇತೃತ್ವದ ಸರ್ಕಾರ ಸುಭದ್ರವಾಗಿಯೇ ಇದೆ. ಆದರೂ ಇತರ ಪಕ್ಷಗಳ ಶಾಸಕರನ್ನು ಸೇರಿಸಿಕೊಳ್ಳುವುದು ಅನೈತಿಕ ನಡೆಯೂ ಹೌದು, ಮತದಾರರಿಗೆ ಮಾಡುವ ದ್ರೋಹವೂ ಹೌದು.

ಒಂದು ಪಕ್ಷದಿಂದ ಗೆದ್ದ ಮೇಲೆ ಅದನ್ನು ಬಿಟ್ಟು ಆಡಳಿತ ಪಕ್ಷಕ್ಕೆ ಹೋಗುವುದು ನೈತಿಕ ಅಧೋಗತಿಯ ಪರಮಾವಧಿ. ಚುನಾವಣೆ ಗೆಲ್ಲುವ ಕಲೆಯನ್ನು ಕರಗತ ಮಾಡಿಕೊಂಡಿದ್ದೇವೆ ಎಂಬ ಭ್ರಮೆಯಲ್ಲಿ ಇರುವ ವ್ಯಕ್ತಿಗಳೇ ಹೀಗೆ ಮಾಡುತ್ತಾರೆ. ಇದಕ್ಕೆ ತಡೆ ಹಾಕುವ ಶಕ್ತಿ ಇರುವುದು ಮತದಾರರಿಗೆ ಮಾತ್ರ. ರಾಜಕಾರಣಿಗಳು ಪದೇ ಪದೇ ತಪ್ಪು ಮಾಡಬಹುದು. ಆದರೆ ಮತದಾರರು ಮಾಡಬಾರದು. ಈ ಬಾರಿ ಉಪಚುನಾವಣೆ ನಡೆದರೆ ಮತದಾರರು ತಪ್ಪು ಮಾಡಲಿಕ್ಕಿಲ್ಲ. ಮತಾಸ್ತ್ರವೆಂಬ ದೊಣ್ಣೆ ಹಿಡಿದು ನಿಂತಾರು.

ಚುರುಮುರಿ



ಚಂದ್ರ ಮೋಹ

• ಮಣ್ಣೆರಾಜು

'ನನ್ನ ಮದ್ವೆ ಸೆಟ್ಟಾಗಿದೆ ಅಂಕಲ್...' ಮನೆಗೆ ಬಂದ ಸೂರಿ ಇನ್ವಿಟೇಷನ್ ಕಾರ್ಡ್ ಕೊಟ್ಟ.

'ವೆರಿಗುಡ್. ಪ್ರಿಯೇ, ಚಂದ್ರನ ತಂದು ನಿನ್ನ ಮುಡಿಗೆ ಮುಡಿಸಲೇ? ನಕ್ಷತ್ರಗಳನ್ನು ಹೆಕ್ಕಿತಂದು ಪೋಣಿಸಿ ಹಾರವಾಗಿ ನಿನ್ನ ಕೊರಳಿಗೆ ಹಾಕಲೇ... ಎಂದು ಫೇಸ್‌ಬುಕ್ಕಿನಲ್ಲಿ ಪ್ರೇಮಕವನ ಬರೆದಿದ್ದೆ–ಯಲ್ಲ, ಅದೇ ಹುಡುಗಿನಾ?' ಶಂಕ್ರಿ ಕೇಳಿದ.

'ಹೌದು ಅಂಕಲ್...' ನಾಚಿದ.

'ಹುಡುಗಿ ಫೋಟೊ ನೋಡಿದ್ದೇನೆ, ಚಂದ್ರಮುಖಿಯಂತೆ ಸುಂದರವಾಗಿದ್ದಾಳೆ' ಎಂದು ಸುಮಿ ಕಾಫಿ ತಂದುಕೊಟ್ಟಳು.

'ಚಂದ್ರನ ಅಂಗಳದಲ್ಲಿ ಪ್ರೀ ವೆಡ್ಡಿಂಗ್ ಫೋಟೊ ಶೂಟ್ ಮಾಡಿಸಿದ್ವಿ. ನಾವೇನು ಚಂದ್ರನಲ್ಲಿಗೆ ಹೋಗಿರಲಿಲ್ಲ, ಫೋಟೊಗ್ರಾಫರ್ ಗ್ರೀನ್ ಸ್ಕ್ರೀನ್ ಹಾಕಿ ನಮ್ಮನ್ನು ಶೂಟ್ ಮಾಡಿ, ಚಂದ್ರನ ಚಿತ್ರಗಳನ್ನು ಮಿಕ್ಸ್ ಮಾಡಿದ್ದಾರೆ. ಚಂದ್ರನ ಅಂಗಳದಲ್ಲೇ ಆಡಿಬಂದೆವೇನೋ ಅನ್ನುವಷ್ಟು ಅದ್ಭುತವಾಗಿ ಫೋಟೊಗಳು ಮೂಡಿಬಂದಿವೆ!'

'ನಿನ್ನ ಹುಡುಗಿಗೆ ವಿಪರೀತ ಚಂದ್ರಮೋಹವಿದೆ ಅಲ್ವಾ?'

'ಹೌದು ಆಂಟಿ. ಮಗುವಾಗಿದ್ದಾಗ ಅವಳ ಅಮ್ಮ ಚಂದಮಾಮನನ್ನು ತೋರಿಸಿ ಊಟ ಮಾಡಿಸುತ್ತಿದ್ದರಂತೆ. ಚಂದ್ರನೊಂದಿಗೆ ಉಂಡು ಬೆಳೆದ ಅವಳಿಗೆ ಬಾಲ್ಯದಿಂದಲೂ ಚಂದ್ರಪ್ರೇಮ'.

'ಮದ್ವೆ ಆದಮೇಲೆ ಹನಿಮೂನ್‌ಗೆ ಚಂದ್ರನಲ್ಲಿಗೆ ಹೋಗೋಣ ಅಂತ ನಿನ್ನ ಹುಡುಗಿ ಆಸೆಪಡಬಹುದು'.

'ಆಸೆ ಇದೆ. ಚಂದ್ರನಲ್ಲಿ ಗಾಳಿ, ನೀರು, ಲಾಡ್ಜ್, ರೆಸ್ಟೋರೆಂಟ್ ವ್ಯವಸ್ಥೆಯಾದಮೇಲೆ ಹೋಗೋಣ ಅಂತ ಹೇಳಿದ್ದೀನಿ'.

'ನಿಮ್ಮ ಚಂದ್ರಯಾನ ಅಸಾಧ್ಯ' ಅಂದ ಶಂಕ್ರಿ.

'ಸಾಧ್ಯವಿದೆ ಅಂಕಲ್. ಆದಿತ್ಯ ಯಾನ ಆರಂಭಿಸಿ ಸೂರ್ಯನಿಗೇ ಟಾರ್ಚ್ ಹಾಕಲು ಹೊರಟಿರುವ ನಮ್ಮ ವಿಜ್ಞಾನಿಗಳು, ಚಂದ್ರನಲ್ಲಿ ಗಿಡಮರ ಬೆಳೆಸಿ ಗಾಳಿ, ನೀರು, ಆಹಾರ ಉತ್ಪಾದನೆಯ ಪ್ರಯತ್ನ ಮಾಡೇಮಾಡ್ತಾರೆ. ಅಷ್ಟಾದಮೇಲೆ ಚಂದ್ರಲೋಕಕ್ಕೆ ಹೋಗಿಬರಲು ಸರ್ಕಾರ ಪ್ಯಾಸೆಂಜರ್ ರಾಕೆಟ್ ಸೇವೆ ಒದಗಿಸುತ್ತದೆ. ಆಗ ನಾವು ಚಂದ್ರಲೋಕಕ್ಕೆ ಹೋಗಿಬರೋಣ ಅಂತ ನನ್ನ ಹುಡುಗಿಗೆ ಹೇಳಿದ್ದೀನಿ' ಎಂದು ಹೇಳಿ ಸೂರಿ ಹೊರಟ.

ಸಂಗತ

ಕಿವಿ ಮುಟ್ಟಲಿ ಕಾರ್ಮಿಕರ ಕೂಗು

ಕಾರ್ಮಿಕರ ವೇತನವನ್ನು ಬಾಕಿ ಉಳಿಸಿಕೊಳ್ಳುವುದು, ಒಪ್ಪಿಕೊಂಡಷ್ಟು ಕೊಡದೇ ಕಡಿಮೆ ಕೊಡುವುದು ದುಡಿಮೆಗೆ ಮಾಡುವ ಅಪಮಾನ

• ಮಲ್ಲಿಕಾರ್ಜುನ ಹೆಗ್ಗಳಗಿ

'ಕೂಲಿಯವನ ದುಡಿಮೆಯ ಬೆವರು ಆರುವ ಮೊದಲೇ ಅವನ ಕೂಲಿ ಕೊಡಬೇಕು' ಎಂಬುದು ಕುರಾನ್‌ನಲ್ಲಿನ ಒಂದು ನೀತಿವಾಕ್ಯ.

ಕನಕಪುರ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಪೌರಕಾರ್ಮಿಕರಿಬ್ಬರು ತಮ್ಮ 14 ತಿಂಗಳ ಬಾಕಿ ವೇತನಕ್ಕೆ ಆಗ್ರಹಿಸಿ, ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದ ವರದಿ ಓದಿದಾಗ, ಕುರಾನ್‌ನ ಈ ಸಂದೇಶ ನೆನಪಾಯಿತು.

ಪಂಚಾಯಿತಿಯು ವೇತನವನ್ನು ದೀರ್ಘಕಾಲ ಬಾಕಿ ಉಳಿಸಿಕೊಂಡದ್ದು ಈ ಪೌರಕಾರ್ಮಿಕರ ಪಾಲಿಗೆ ಒಂದು ದೊಡ್ಡ ಹಿಂಸೆ. ವಿನಂತಿಯ ಮಾರ್ಗಗಳು ನಿಷ್ಫಲವಾದಾಗ ತಮ್ಮನ್ನೇ ತಾವು ದಂಡಿಸಿಕೊಳ್ಳುವ ನೋವಿನ ವಿಧಾನವನ್ನು ಈ ಇಬ್ಬರು ಅನುಸರಿಸಿದ್ದಾರೆ. ಕಾರ್ಮಿಕರ ವೇತನವನ್ನು ಬಾಕಿ ಉಳಿಸಿಕೊಳ್ಳುವುದು, ಒಪ್ಪಿಕೊಂಡಷ್ಟು ಕೊಡದೇ ಕಡಿಮೆ ಕೊಡುವುದು ದುಡಿಮೆಗೆ ಮಾಡುವ ಅಪಮಾನ.

ಕೆಲವೆಡೆ, ದುಡಿಸಿಕೊಳ್ಳುವ ಒಡೆಯರು, ಸಂಘ–ಸಂಸ್ಥೆಗಳು, ಉದ್ಯಮಿಗಳು, ಸರ್ಕಾರಿ ಅಧಿಕಾರಿಗಳು ಸಕಾಲಕ್ಕೆ ವೇತನ ಪಾವತಿ ಮಾಡುವುದಿಲ್ಲ ಎನ್ನುವ ಆರೋಪ ಸಾಮಾನ್ಯವಾಗಿದೆ. ದುಡಿಯಲು ಹೋದರೆ ಪಗಾರ ಕೈಗೆ ಬರುವುದಿಲ್ಲ. ಬುತ್ತಿ ಕಟ್ಟಿಕೊಂಡು ಹೋಗಿ ದುಡಿದು ಬರಿಗೈಯಿಂದ ಮನೆಗೆ ಬರಬೇಕಾಗುತ್ತದೆ, ಕೂಲಿಯ ಹಣ ಪಡೆಯುವುದಕ್ಕೆ ಮಾಲೀಕನ ಮನೆಗೆ ಅಲೆಯಬೇಕಾಗುತ್ತದೆ ಎಂದು ದುಡಿಯುವವರು ಮರುಗುತ್ತಾರೆ.

ಸರಿಯಾಗಿ ಮತ್ತು ಸಕಾಲಕ್ಕೆ ಸಂಬಳ ಪಾವತಿ ಆಗದಿದ್ದರೆ, ಮಾತಿಗೆ ತಪ್ಪಿ ಕಡಿತ ಮಾಡಿದರೆ ಕುಟುಂಬಗಳು ತೀವ್ರ ಸಂಕಷ್ಟ ಅನುಭವಿಸುತ್ತವೆ. ಅವರ ದೈನಂದಿನ ಬದುಕು ದುಸ್ತರವಾಗುತ್ತದೆ. ಇದು ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತದೆ.

ಸರ್ಕಾರವು ಉಚಿತವಾಗಿ ಪಡಿತರ ಹಂಚುವುದರಿಂದ ಕೂಲಿ ಕಾರ್ಮಿಕರ ಕೊರತೆ ಉಂಟಾಗಿದೆ, ಅವರು ಆಲಸಿಗಳಾಗಿದ್ದಾರೆ ಎಂದು ಕೆಲವರು ದೂರುತ್ತಾರೆ. ಇದು ವಾಸ್ತವವಲ್ಲ. ದುಡಿಮೆಗೆ ತಕ್ಕ ಸಂಬಳ ಮತ್ತು ಸಕಾಲಕ್ಕೆ ಹಣ ಪಾವತಿ ಆಗುವುದಿಲ್ಲ ಎಂದಾದರೆ, ದುಡಿಯಬೇಕು ಎನ್ನುವವರು ಕೂಡ ಉತ್ಸಾಹ ಕಳೆದುಕೊಳ್ಳುತ್ತಾರೆ.

ಸಂಬಳ ಒಂದು ಬಹುದೊಡ್ಡ ಆಕರ್ಷಣೆ. ಕಾರ್ಮಿಕ ತನ್ನ ವೈಯಕ್ತಿಕ ಖುಷಿಯ ಕೆಲಸಗಳನ್ನು ಬದಿಗಿಟ್ಟು, ಬೇಗನೆ ಎದ್ದು, ಸರಿಯಾಗಿ ಉಪಾಹಾರವನ್ನೂ ಮಾಡದೆ ಓಡಿಬಂದು ಕೆಲಸಕ್ಕೆ ಹಾಜರಾಗುತ್ತಾನೆ. ಯಾವ ಉದ್ದೇಶಕ್ಕಾಗಿ ಅವನು ಇಷ್ಟೆಲ್ಲ ಹೆಣಗುತ್ತಾನೆ ಎಂಬುದನ್ನು ದುಡಿಸಿಕೊಳ್ಳುವವರು ತೆರೆದ ಮನಸ್ಸಿನಿಂದ ಆಲೋಚಿಸುವುದು ಅವಶ್ಯವಾಗಿದೆ.

ಕೇಂದ್ರ ಸರ್ಕಾರವು 1948ರಲ್ಲಿ ವೇತನ ಪಾವತಿ ಕಾನೂನು ರಚಿಸಿದೆ. ಕೈಗಾರಿಕೆಗಳು, ಸಂಘ ಸಂಸ್ಥೆಗಳು ಪ್ರತಿ ತಿಂಗಳ ಏಳನೇ ತೇದಿಯ ಒಳಗಾಗಿ ಹಿಂದಿನ ತಿಂಗಳ ಸಂಬಳ ಪಾವತಿ ಮಾಡಬೇಕು ಮತ್ತು ಕಾನೂನುಬಾಹಿರವಾಗಿ ಕಡಿತಗಳನ್ನು ಮಾಡಬಾರದು ಎಂದು ಈ ಕಾನೂನು ಹೇಳುತ್ತದೆ. ಆದರೆ ಇದನ್ನು ಗಂಭೀರವಾಗಿ ಪಾಲಿಸುವ ಮನೋಭಾವ ಕಾಣುವುದಿಲ್ಲ. ಕೈಗಾರಿಕೆಗಳು, ನಿರ್ಮಾಣ ಸಂಸ್ಥೆಗಳು ಹೊರಗುತ್ತಿಗೆ ವಿಧಾನವನ್ನು ಹೆಚ್ಚಾಗಿ ಅನುಸರಿಸುತ್ತಿವೆ. ಇದು ಬಹುಮಟ್ಟಿಗೆ ಕಾರ್ಮಿಕರ ಶೋಷಣೆಗಾಗಿ ರೂಪುಗೊಂಡ ಒಳಹಾದಿ. ಸಂಸ್ಥೆಗಳು ಕಾರ್ಮಿಕರಿಂದ ಸೇವೆ ಪಡೆದುಕೊಳ್ಳುತ್ತವೆ, ಆದರೆ ಅವು ನೇರವಾಗಿ ದುಡಿಯುವವರಿಗೆ ಸಂಬಳ ನೀಡುವುದಿಲ್ಲ. ಮಧ್ಯವರ್ತಿ ಗುತ್ತಿಗೆದಾರರ ಕೈಗೆ ಹಣ ಕೊಟ್ಟು ತಾವು ಕಾನೂನು ಕಟ್ಟಲೆಗಳಿಂದ ಬಚಾವಾಗುತ್ತವೆ. ಹೆಚ್ಚಿನ ಮಧ್ಯವರ್ತಿಗಳು ವಾರದ ಸಂತೆಯ ದಿನ, ಹಬ್ಬದ ದಿನ ಅಷ್ಟಿಷ್ಟು ಹಣ ಕೊಟ್ಟು ಉಳಿದ ಹಣವನ್ನು ನುಂಗಿ ಹಾಕುತ್ತಾರೆ. ಹಳ್ಳಿಗಳಲ್ಲಿ ಈಗಲೂ ಜೀತ ಪದ್ಧತಿ ಅಲ್ಲಲ್ಲಿ ಜೀವಂತವಾಗಿದೆ.

ಕೂಲಿಕಾರರ ಕುಟುಂಬದಲ್ಲಿ ನಡೆಯುವ ಮದುವೆ, ದವಾಖಾನೆಯಂತಹ ಅನಿವಾರ್ಯ ಖರ್ಚುಗಳಿಗೆ ಮುಂಗಡ ಹಣ ಕೊಟ್ಟು ಅದರ ಬಡ್ಡಿ ಹಣಕ್ಕೆ ದುಡಿಸಿಕೊಳ್ಳುವ ವಿಧಾನವೂ ಜೀವಂತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶೋಷಣೆ ಹೆಚ್ಚಾಗಿದೆ.

ನನ್ನ ಪರಿಚಿತ ಕುಟುಂಬದ ಹಿರಿಯ ಕಾರ್ಮಿಕ–ರೊಬ್ಬರು, ತಮ್ಮ ಮಗನ ಮದುವೆಗೆ ಮಾಡಿದ ಸಾಲ ತೀರಿಸಲು ಸಾಹುಕಾರರ ಮನೆಯಲ್ಲಿ ಮಗನೊಟ್ಟಿಗೆ ದುಡಿಯುತ್ತಿದ್ದಾರೆ. ಮೂರು ವರ್ಷ ಕಳೆದರೂ ಸಾಲ ಪೂರ್ಣ ಮುಟ್ಟಿಲ್ಲ ಎಂದು ಸಾಹುಕಾರ ಸತಾಯಿಸುತ್ತಿದ್ದಾರೆ.

ಕೋವಿಡ್– 19ರ ಸಂಕಷ್ಟದ ಕಾಲದಲ್ಲಿ ದುಡಿಯುವ ವರ್ಗ ಅನುಭವಿಸಿದ ಸಂಕಟ ಅಷ್ಟಿಷ್ಟಲ್ಲ. ವಲಸೆ ಕಾರ್ಮಿಕರು ಅನ್ನವಿಲ್ಲದೆ, ಬರಿಗಾಲಲ್ಲಿ ನಡೆದು ತಮ್ಮ ಹುಟ್ಟೂರು ತಲುಪಿದ ನೋವಿನ ಕಥೆಗಳನ್ನು ಮರೆಯಲಿಕ್ಕಾಗದು. ಹೀಗೆ ಹೊರಟುಹೋದ ಸುಮಾರು ಶೇ 30ರಷ್ಟು ಕಾರ್ಮಿಕರು ಮರಳಿ ಬಂದಿಲ್ಲ. ಇವರೆಲ್ಲ ಕುಶಲಕರ್ಮಿಗಳಾಗಿದ್ದಾರೆ. ಅವರ ಅನುಪಸ್ಥಿತಿಯು ಗುಣಮಟ್ಟದ ಉತ್ಪಾದನೆಯ ಹಿನ್ನಡೆಗೆ ಕಾರಣವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಆಗಿದ್ದ ಆರ್.ಸಿ.ಹಿರೇಮಠ ತಾವು 'ಮೊದಲು ಗಳಿಸಿದ ಒಂದು ರೂಪಾಯಿ'ಯ ಪ್ರಕರಣವನ್ನು ತಮ್ಮ ಆತ್ಮಕಥೆ 'ಉರಿ ಬರಲಿ ಸಿರಿ ಬರಲಿ' ಕೃತಿಯಲ್ಲಿ ದಾಖಲಿಸಿದ್ದಾರೆ. ವಿದ್ಯಾರ್ಥಿಯಾಗಿದ್ದಾಗ ಶ್ರೀಮಂತರ ಹೊಲದಲ್ಲಿ ನಾಲ್ಕು ದಿನ ಹತ್ತಿ ಬಿಡಿಸಿ, ಒಂದು ರೂಪಾಯಿ ಸಂಪಾದಿಸುತ್ತಾರೆ. ಈ ರೂಪಾಯಿ ಕೊಟ್ಟು, ತಾಯಿ ಅಡವು ಇಟ್ಟಿದ್ದ ತಾಮ್ರದ ಹಂಡೆಯನ್ನು ಬಿಡಿಸಿಕೊಂಡು ಬರುತ್ತಾರೆ. ನೀರು ಸಂಗ್ರಹದ ಹಂಡೆ ಮರಳಿ ಮನೆಗೆ ಬಂದದ್ದರಿಂದ ಹೊಟ್ಟೆ ತುಂಬಾ ನೀರು ಕುಡಿಯಲು ಅನುಕೂಲವಾಯಿತು ಎಂದು ಅವರು ಹೇಳಿದ್ದಾರೆ. ಸಂಬಳವು ಬದುಕಿನೊಂದಿಗೆ ಹೆಣೆದುಕೊಂಡ ಸಂಗತಿಯನ್ನು ಈ ಬರಹ ಮನಕಲಕುವಂತೆ ಹೇಳುತ್ತದೆ.

ವಾಚಕರ ವಾಣಿ

ರೈತರ ಕೈಹಿಡಿಯಲಿ ಕಲ್ಪವೃಕ್ಷ

ತೆಂಗನ್ನು ಕಲ್ಪವೃಕ್ಷ ಎಂದು ಕರೆಯುವುದು ಅನ್ವರ್ಥವಾಗಿಯೇ ಇದೆ. ತೆಂಗಿನ ಉತ್ಪನ್ನಗಳಿಂದ ನಾವು ವಿವಿಧ ತೆರನಾದ ಪ್ರತಿಫಲವನ್ನು ಈವರೆಗೆ ಪಡೆದಿದ್ದೇವೆ. ಈಗ ತೆಂಗಿನಗರಿಯಿಂದ ಸ್ಟ್ರಾ ತಯಾರಿಕೆ ಆರಂಭವಾಗಿರುವುದು (ಪ್ರ.ವಾ., ಆ. 29) ಸಂತಸದ ಸಂಗತಿ. ತೆಂಗಿನಗರಿಯ ಸ್ಟ್ರಾ ವಿದೇಶಗಳಲ್ಲೂ ಗಮನಸೆಳೆದಿರುವುದು ಖುಷಿಯ ವಿಚಾರ. ಇದಕ್ಕೆ ಕಾರಣವಾದ ರಾಜ್ಯದ ಸನ್‌ಬರ್ಡ್ ಸಂಸ್ಥೆಯ ಪ್ರಯತ್ನ ಪ್ರಶಂಸಾರ್ಹ.

ತೆಂಗಿನ ಉತ್ಪನ್ನಗಳ ಮೌಲ್ಯವರ್ಧನೆಗೆ ಇನ್ನೂ ಹೆಚ್ಚಿನ ಅವಕಾಶಗಳಿವೆ. ಈ ದಿಸೆಯಲ್ಲಿ ಪ್ರಯತ್ನಗಳು ಆಗಬೇಕು. ಸರ್ಕಾರವು ತೆಂಗು ಬೆಳೆಗಾರರ ಬೆಂಬಲಕ್ಕೆ ನಿಲ್ಲಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಮದರಸಾದಲ್ಲಿ ಕಲಿಕೆಗೆ ಒತ್ತು: ಸ್ವಾಗತಾರ್ಹ ಕ್ರಮ

ರಾಜ್ಯದಲ್ಲಿರುವ ಮದರಸಾಗಳಲ್ಲಿ ಕನ್ನಡ, ಇಂಗ್ಲಿಷ್ ಸೇರಿದಂತೆ ವಿಜ್ಞಾನ ಮತ್ತು ಗಣಿತದಂತಹ ವಿಷಯಗಳ ಕಲಿಕೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಅಧಿಕಾರಿಗಳಿಗೆ ಸೂಚಿಸಿರುವುದು ಒಳ್ಳೆಯ ಬೆಳವಣಿಗೆ. ಇದರ ಜೊತೆಗೆ ಮದರಸಾಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಲೇಬೇಕು ಎಂದು ನಿರ್ದೇಶಿಸಿದ್ದು ಸ್ವಾಗತಾರ್ಹ. ರಾಜ್ಯದಲ್ಲಿರುವ ಹೆಚ್ಚಿನ ಮದರಸಾಗಳು ಮಕ್ಕಳಿಂದ ಶುಲ್ಕ ಪಡೆಯುವುದಿಲ್ಲ. ಏಕೆಂದರೆ ಇಲ್ಲಿ ಕಲಿಯಲು ಬರುವವರು ಅತಿ ಬಡ ಕುಟುಂಬಗಳ ಮಕ್ಕಳು. ಮದರಸಾಗಳಲ್ಲಿನ ಈ ಬದಲಾವಣೆಯಿಂದ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಸುಧಾರಿಸಬಹುದು ಮತ್ತು ವಿಜ್ಞಾನ ಹಾಗೂ ಗಣಿತ ಕಲಿಕೆಯಿಂದ ಉದ್ಯೋಗಾಧಾರಿತ ಕೌಶಲಾಭಿವೃದ್ಧಿಗೆ ಪೂರಕವಾದ ಶಿಕ್ಷಣ ದೊರೆತಂತೆ ಆಗುತ್ತದೆ. ಇದಕ್ಕೆ ಪೂರಕವಾಗಿ ಸಮುದಾಯದ ಶೈಕ್ಷಣಿಕ ಸಬಲೀಕರಣವೂ ಆಗುತ್ತದೆ.

ಬಸವರಾಜ ನರಗಟ್ಟಿ, ಧಾರವಾಡ

ಇವರು ಸಾಕ್ಷರರು, ಮೌಲ್ಯ ಮರೆತವರು

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಾಗರಮುನ್ನೋಳಿಯಲ್ಲಿ ಮೃತಪಟ್ಟ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಅಂತ್ಯಕ್ರಿಯೆಗೆ ವಿದೇಶದಲ್ಲಿರುವ ಅವರ ಮಕ್ಕಳು ಬರಲು ನಿರಾಕರಿಸಿದ ಬಳಿಕ, ಸ್ಥಳೀಯ ಪೊಲೀಸರು ಮತ್ತು ಅಧಿಕಾರಿಗಳೇ ಸೇರಿ ಅಂತ್ಯಸಂಸ್ಕಾರ ನಡೆಸಿರುವುದು ಅತ್ಯಂತ ನೋವಿನ ಸಂಗತಿ. ಹೆತ್ತು ಹೊತ್ತು ಸಾಕಿ ಸಲಹಿದ ಮಕ್ಕಳು, ಉನ್ನತ ಹುದ್ದೆಗೇರಿ ಕೈತುಂಬಾ ಸಂಬಳ ಪಡೆಯುತ್ತಾ, ಐಷಾರಾಮಿ ಜೀವನ ಸಿಕ್ಕಮೇಲೆ ಪೋಷಕರತ್ತ ತಿರುಗಿಯೂ ನೋಡದಿದ್ದರೆ, ಅವರಿಗೆ ಅದಕ್ಕಿಂತ ದುಃಖದ ಸಂಗತಿ ಬೇರೊಂದಿರುವುದಿಲ್ಲ.

ಓದು ಬಂದರಷ್ಟೇ ಸಾಲದು. ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದೇ ಹೋದರೆ ಏನಾಗುತ್ತದೆ ಎಂಬುದಕ್ಕೆ ಈ ಪ್ರಕರಣ ಜ್ವಲಂತ ನಿದರ್ಶನ. ಪಾಲಕರು ಮಕ್ಕಳಿಗೆ ಮನೆಯಲ್ಲಿ ನೈತಿಕ ಶಿಕ್ಷಣ ಕೊಡಬೇಕು, ಚಿಕ್ಕಂದಿನಲ್ಲೇ ವ್ಯಕ್ತಿತ್ವ ವಿಕಸನ ಶಿಬಿರಗಳಿಗೆ ಕಳುಹಿಸಬೇಕು. ಶಾಲೆ ಕಾಲೇಜುಗಳಲ್ಲಿ ಹೆಚ್ಚು ಹೆಚ್ಚು ಮೌಲ್ಯಯುತ ಶಿಕ್ಷಣ ಕೊಡುವಂತೆ ಆಗಬೇಕು. ಪೋಷಕರೇ, ನೀವು ನೀರು ಎಂದು ತಿಳಿದದ್ದು ಬರೀ ಮರೀಚಿಕೆ. ಬಾವಿ ತೋಡಿ ನೀರು ತನ್ನಿ. ಬಹುಶಃ ಮಕ್ಕಳನ್ನು ಬೆಳೆಸುವಲ್ಲಿ ನಾವೆಲ್ಲರೂ ಎಲ್ಲೋ ತಪ್ಪುತ್ತಿದ್ದೇವೆ ಅನಿಸುತ್ತಿದೆ. ಇಲ್ಲವಾದರೆ ವೃದ್ಧಾಶ್ರಮಗಳ ಸಂಖ್ಯೆ ಯಾಕಿಷ್ಟು ಹೆಚ್ಚುತ್ತಿತ್ತು? ಶಿಕ್ಷಣದ ಉದ್ದೇಶ ಈಡೇರುತ್ತಿದೆಯೇ ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕಾಗಿದೆ. ನಾವು ಹಳಿ ತಪ್ಪುತ್ತಿರುವುದು ಇಲ್ಲಿಯೇ ಅನಿಸುತ್ತದೆ. ವಿದ್ಯಾವಂತ ಎಂಬುದರ ವಿಶಾಲ ಕಲ್ಪನೆ ಸಾಕಾರಗೊಳ್ಳುವಂತೆ ಮಕ್ಕಳನ್ನು ಬೆಳೆಸಬೇಕಾಗಿದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಬುದ್ಧಿಮತ್ತೆಗೆ ಉಂಟೇ ಲಿಂಗಭೇದ?

ಮಹಿಳಾ ವಿಜ್ಞಾನಿಗಳು ಮತ್ತು ಮಹಿಳಾ ಎಂಜಿನಿಯರುಗಳು ಚಂದ್ರಯಾನ-3 ಬಾಹ್ಯಾಕಾಶ ಯೋಜನೆಯಲ್ಲಿ ತೊಡಗಿದ್ದ ಕಾರಣಕ್ಕಾಗಿ, ಭಾರತೀಯ ಮಹಿಳೆಯರ ಶಕ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನ್ ಕಿ ಬಾತ್'ನಲ್ಲಿ ಹೊಗಳಿರುವುದು ವರದಿಯಾಗಿದೆ (ಪ್ರ.ವಾ., ಆ. 28). ಮಹಿಳೆಯರ ಬಗ್ಗೆ ಎಲ್ಲ ಭಾರತೀಯರಿಗೂ ಗೌರವ ಇರಬೇಕಾದದ್ದು ಸರಿ. ಆದರೆ, ಬುದ್ಧಿಮತ್ತೆ ಎನ್ನುವುದು ಹೆಣ್ಣು, ಗಂಡು ಎನ್ನದ ಒಂದು ವಿಶೇಷ ಜ್ಞಾನ. ಅದು ಸಾಧಕರ ಸೊತ್ತು.

ಮಹಿಳೆಯರ ಬಗ್ಗೆ ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲೋ ಹುದುಗಿ ಕುಳಿತಿರುವ ಕೀಳರಿಮೆ, ಮಹಿಳೆಯರ ಸಾಧನೆ ಬಗ್ಗೆ ಗುಣಗಾನ ಮಾಡುವ ಸಂದರ್ಭ ಬಂದಾಗ ಈ ರೀತಿ ಉದಾತ್ತಗೊಂಡು, ಮಹಿಳೆಯಿಂದಲೂ ಇಂತಹ ಕೆಲಸ ಸಾಧ್ಯವಾಯಿತಲ್ಲಾ ಎಂಬ ಆಶ್ಚರ್ಯವನ್ನು ಮೂಡಿಸುತ್ತದೆ. ಆಗ ಈ ರೀತಿಯ ವಿಶೇಷಣದ ಮಾತುಗಳು ಬರುವುದು ಸಹಜ ಎನಿಸುತ್ತದೆ. ಹೆಣ್ಣು, ಗಂಡು ಇಬ್ಬರನ್ನೂ ಸಮ ಸಮಾಜದ ಭಾಗವನ್ನಾಗಿ ಸದಾ ಕಾಣುವ ಜಾಗೃತ ಮನಸ್ಸಿಗೆ, ಜ್ಞಾನ ವಿಜ್ಞಾನದ ಸಾಧನೆಯಲ್ಲಿ ಲಿಂಗಭೇದ ಕಾಣುವುದಿಲ್ಲ. ಇದನ್ನೇ ಅಲ್ಲಮಪ್ರಭುಗಳು 'ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ... ಮನದ ಮುಂದಣ ಆಸೆಯೇ ಮಾಯೆ...' ಎಂದು ವಿವರಿಸಿದ್ದು. ಚಂದ್ರಯಾನ-3 ಯಶಸ್ಸಿಗೆ ಕಾರಣರಾಗಿರುವ ಎಲ್ಲರಿಗೂ ಪ್ರಧಾನಿಯವರು ಮೂರು ತಿಂಗಳ ಹೆಚ್ಚುವರಿ ಸಂಬಳವನ್ನು ಉಡುಗೊರೆಯಾಗಿ ಕೊಟ್ಟು, ಇಸ್ರೊ ವಿಜ್ಞಾನಿಗಳ ಭುಜ ತಟ್ಟುವ ಕೆಲಸ ಮಾಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

'ಚಿಲ್ಲರೆ' ಜಗಳ ತಪ್ಪಿಸಿ

ರಾಜ್ಯ ಸಾರಿಗೆ ನಿಗಮದ ಬಸ್‌ಗಳಲ್ಲಿ ಟಿಕೆಟ್ ಪಡೆಯಲು ಸರಿಯಾದ ಪ್ರಮಾಣದಲ್ಲಿ ಚಿಲ್ಲರೆ ಕೊಡುವಂತೆ ಪ್ರಯಾಣಿಕರ ಮೇಲೆ ನಿರ್ವಾಹಕರು ಒತ್ತಡ ಹಾಕುವುದು, ಆ ಸಂದರ್ಭದಲ್ಲಿ ಪ್ರಯಾಣಿಕರು ನಿರ್ವಾಹಕರ ಜೊತೆ ವಾಗ್ವಾದಕ್ಕೆ ಇಳಿಯುವುದು, ಇದು ಕೆಲವೊಮ್ಮೆ ಅತಿರೇಕಕ್ಕೆ ಹೋಗಿ ಅವಾಚ್ಯ ಪದಗಳನ್ನು ಬಳಸಿ ಜಗಳವಾಡುವುದು ಸಾಮಾನ್ಯ ಸಂಗತಿಯಾಗಿದೆ.

ದೇಶದಲ್ಲಿ ಕರ್ನಾಟಕವು ತಂತ್ರಾಂಶದ ಸಮರ್ಪಕ ಬಳಕೆಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯಗಳಲ್ಲಿ ಒಂದು. ಹೀಗಿರುವಾಗ, ಸಾರಿಗೆ ನಿಗಮದ ಬಸ್‌ಗಳಲ್ಲಿ ಯುಪಿಐ ಕ್ಯುಆರ್ ಕೋಡ್ ವ್ಯವಸ್ಥೆ ಕಲ್ಪಿಸಿ, ಪ್ರಯಾಣಿಕರು ಚಿಲ್ಲರೆಯ ರಗಳೆಯಿಲ್ಲದೆ ಟಿಕೆಟ್ ಖರೀದಿಸಲು ಅನುವು ಮಾಡಿಕೊಡಬೇಕು. ಇಂತಹ ಸರಳ ಮಾರ್ಗದ ಮೂಲಕ ಪ್ರಯಾಣಿಕರು ಹಾಗೂ ನಿರ್ವಾಹಕ ಇಬ್ಬರಿಗೂ ಕಿರಿಕಿರಿ ತಪ್ಪಿ, ನೆಮ್ಮದಿಯಿಂದ ಪ್ರಯಾಣ ಮಾಡಲು ಸಾಧ್ಯವಾಗುತ್ತದೆ.

ಎಸ್.ಆರ್.ನಾಗಭೂಷಣ, ನೆಲಮಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೋಡ ಬಿತ್ತನೆ ಮಾಡಿದಾಗ ಮಳೆ ಬಂದಿದೆ...

ಮೋಡ ಬಿತ್ತನೆ ಸಲುವಾಗಿ 2019ರ ಜುಲೈನಲ್ಲಿ ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದಿಂದ ಕಾರ್ಯಾಚರಣೆ ಆರಂಭಿಸಿದ್ದ ವಿಮಾನ – ಪ್ರಜಾವಾಣಿ ಚಿತ್ರ

ಆಗಸದಲ್ಲಿ ತೇಲುತ್ತಿರುವ ಮೋಡಗಳ ಮೇಲೆ, ವಿಮಾನಗಳ ಮೂಲಕ ಸಿಲ್ವರ್ ಅಯೋಡೈಡ್ ಎಂಬ ರಾಸಾಯನಿಕವನ್ನು ಸಿಂಪಡಿಸಿ ಮಳೆ ಬರಿಸುವ ವಿಧಾನವೇ ಮೋಡಬಿತ್ತನೆ. ಇಂತಹ ರಾಸಾಯನಿಕಗಳನ್ನು ಸಿಂಪಡಿಸಿದಾಗ ಮೋಡಗಳಲ್ಲಿ ಇರುವ ನೀರಿನ ಕಣಗಳ ಸಾಂದ್ರತೆ ಹೆಚ್ಚಾಗುತ್ತದೆ. ಅದರ ಪರಿಣಾಮವಾಗಿ ಮಳೆಯಾಗುತ್ತದೆ. ಇಂತಹ ಮೊದಲ ಪ್ರಯೋಗ 1946ರಲ್ಲೇ ಅಮೆರಿಕದಲ್ಲಿ ನಡೆದಿತ್ತು. ಭಾರತದಲ್ಲೂ 1951–52ರಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಅಂತಹ ಪ್ರಯೋಗ ನಡೆಸಿತ್ತು. ಮೋಡ ಬಿತ್ತನೆಯಿಂದ ಮಳೆಯಾಗುವುದಿಲ್ಲ ಎಂದು ಕೆಲವರು ವಾದಿಸಿದರೆ, ಮಳೆಯಾಗುತ್ತದೆ ಎಂಬುದು ಇನ್ನೂ ಕೆಲವರ ವಾದ. ಇದರ ಮಧ್ಯೆ ಈ ಪ್ರಯೋಗ ಎಷ್ಟು ಪರಿಣಾಮಕಾರಿ ಎಂಬುದನ್ನು ಪರಿಶೀಲಿಸಲು ಹಲವು ದೇಶಗಳು ಅಧ್ಯಯನ ನಡೆಸಿವೆ. ಪ್ರಯೋಗವನ್ನು ಕರಾರುವಕ್ಕಾಗಿ ಮಾಡಿದರೆ, ಮಳೆಯಾಗುತ್ತದೆ ಎಂದು ಈ ಅಧ್ಯಯನಗಳು ಹೇಳುತ್ತವೆ. ರಾಜ್ಯದಲ್ಲೇ ಈ ಹಿಂದೆ ನಡೆಸಿದ ಹಲವು ಮೋಡ ಬಿತ್ತನೆ ಕಾರ್ಯಗಳ ನಂತರ ಮಳೆಯಾದದ್ದು ದಾಖಲಾಗಿದೆ

ಪ್ರಜಾವಾಣಿ ವಾರ್ತೆ

‘ನಿಮಗೆ ಗೊತ್ತಾ? ಮೋಡ ಬಿತ್ತನೆ ಎಲ್ಲೂ ಯಶಸ್ವಿಯಾಗಿಲ್ಲ ಕಣ್ರೀ?’ ಎಂದು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೋಡ ಬಿತ್ತನೆ ಕುರಿತ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಆದರೆ, 2017ರಲ್ಲೂ (ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿದ್ದರು) ಸೇರಿದಂತೆ ಹಲವು ಬಾರಿ ರಾಜ್ಯದಲ್ಲಿ ಮೋಡ ಬಿತ್ತನೆ ನಡೆದಿದೆ. ಈ ಎಲ್ಲದರಲ್ಲೂ ಯಶಸ್ಸನ್ನೂ ಗಳಿಸಲಾಗಿದೆ ಎಂಬುದನ್ನು ವೈಜ್ಞಾನಿಕ ಅಧ್ಯಯನಗಳು ತೋರಿಸಿಕೊಟ್ಟಿವೆ.

‘ರಾಜ್ಯದಲ್ಲಿ ಬರದ ಛಾಯೆ ಇದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ. ಎನ್‌ಡಿಆರ್‌ಎಫ್ ಮಾನದಂಡದ ಅನ್ವಯ ಕೇಂದ್ರವು ಪರಿಹಾರ ನೀಡುತ್ತದೆ’ ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ. ಮಳೆ ಪ್ರಮಾಣದಲ್ಲಿ ಕಡಿತವಾಗಿ ಬರದ ಛಾಯೆ ಎದುರಾದಾಗಲೆಲ್ಲಾ ರಾಜ್ಯದಲ್ಲಿ ಮೋಡ ಬಿತ್ತನೆ ಮಾಡಲಾಗಿದೆ. ಇದರಿಂದ ನೀರು ಸಂಗ್ರಹಣೆಯಲ್ಲಿ ಏರಿಕೆಯೂ ಆಗಿದೆ. ‘ಇನ್ನೂ ಕಾಲ ಮಿಂಚಿಲ್ಲ. ಈಗಲೂ ಮೋಡ ಬಿತ್ತನೆ ಮಾಡಬಹುದು. ಬರದ ಛಾಯೆಯಿಂದ ತಪ್ಪಿಸಿಕೊಳ್ಳಲು ಮೋಡ ಬಿತ್ತನೆ ಉತ್ತಮ ಉಪಾಯವಾಗಬಲ್ಲದು’ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ.

ಮೋಡ ಬಿತ್ತನೆ ಎನ್ನುವುದು ರಾಜ್ಯಕ್ಕೆ ಹೊಸ ಯೋಜನೆ ಏನಲ್ಲ. ಎಂ.ಎಸ್. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಅಂದರೆ, 2002–03ರಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ ಮೋಡ ಬಿತ್ತನೆ ನಡೆದಿತ್ತು. ‘ಪ್ರಾಜೆಕ್ಟ್ ವರುಣಾ’ ಹೆಸರಿನ ಈ ಯೋಜನೆಯನ್ನು 26 ಜಿಲ್ಲೆಗಳಲ್ಲಿ ನಡೆಸಲಾಗಿತ್ತು. ‘ಮೋಡ ಬಿತ್ತನೆ ಯೋಜನೆಯು ಶೇ 95ರಷ್ಟು ಯಶಸ್ವಿಯಾಗಿದೆ’ ಎಂದು ಅಂದಿನ ನೀರಾವರಿ ಸಚಿವ ಎಚ್‌.ಕೆ. ಪಾಟೀಲ ಅವರು ಮಾಹಿತಿ ನೀಡಿದ್ದರು.

ಅಂತೆಯೇ, 2012–13ರಲ್ಲಿ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿ ಆಗಿದ್ದಾಗಲೂ ಕೂಡ ಮೋಡ ಬಿತ್ತನೆಯನ್ನು ಮಾಡಲಾಗಿತ್ತು. 2014ರಲ್ಲಿ ಮಡಿಕೇರಿ ಪ್ರದೇಶದಲ್ಲಿ ಮಾತ್ರವೇ ಮೋಡ ಬಿತ್ತನೆ ಮಾಡಲಾಗಿತ್ತು. ಅಲ್ಲಿಯೂ ಇದು ಯಶಸ್ವಿಯಾಗಿತ್ತು. 2017 ಹಾಗೂ 2019ರಲ್ಲಿ ‘ವರ್ಷಧಾರೆ’ ಹೆಸರಿನ ಮೋಡ ಬಿತ್ತನೆ ಯೋಜನೆ ನಡೆದಿತ್ತು. ಆಗ ಸುಮಾರು ಶೇ 27.9ರಷ್ಟು ಹೆಚ್ಚುವರಿ ಮಳೆ ಆಗಿತ್ತು. ಇದರಿಂದ 2.1 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಿತ್ತು ಎಂಬ ಮಾಹಿತಿಯನ್ನು 2020ರಲ್ಲಿ ಬಂದ ‘ಕರ್ನಾಟಕ ರಾಜ್ಯ ಮೋಡ ಬಿತ್ತನೆ ವರದಿ’ಯಲ್ಲಿ ವಿವರಿಸಲಾಗಿದೆ.

ಮೋಡಗಳೇ ಇಲ್ಲದೆ ಬಿತ್ತನೆ ಸಾಧ್ಯವಿಲ್ಲ

ಆಕಾಶದಲ್ಲಿ ಕಾಣುವ ಎಲ್ಲಾ ಮೋಡಗಳ ಮೇಲೆ ರಾಸಾಯನಿಕಗಳನ್ನು ಸಿಂಪಡಿಸಿ, ಮಳೆ ಬರಿಸಲು ಸಾಧ್ಯವಿಲ್ಲ ಎಂಬುದನ್ನು ವಿಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ. ಕರ್ನಾಟಕದಲ್ಲಿ ಮೋಡ ಬಿತ್ತನೆ ಕಾರ್ಯಕ್ರಮಗಳ ಕುರಿತು ನಡೆದ ಅಧ್ಯಯನ ವರದಿಗಳೆಲ್ಲವೂ ಇದನ್ನು ದೃಢಪಡಿಸಿವೆ. ಹೀಗಾಗಿ ಮೋಡ ಬಿತ್ತನೆ ಮಾಡಲು, ಮೋಡಗಳನ್ನು ಆಯ್ಕೆ ಮಾಡಿಕೊಳ್ಳುವುದು ಅತ್ಯಂತ ನಿರ್ಣಾಯಕ ಅಂಶವಾಗುತ್ತದೆ. ನೀರಿನ ಕಣಗಳ ಸಾಂದ್ರತೆ ಕಡಿಮೆ ಇರುವ, ಭೂಮಿಯ ಮೇಲ್ಮೈನಿಂದ ಕೆಲವೇ ಸಾವಿರ ಅಡಿಗಳಷ್ಟು ಮೇಲೆ ತೇಲುತ್ತಿರುವ ಮೋಡಗಳ ಮೇಲೆ ರಾಸಾಯನಿಕಗಳನ್ನು ಸಿಂಪಡಿಸಿ ಮಳೆ ಬರಿಸಲು ಸಾಧ್ಯವಿಲ್ಲ. ಇಂತಹ ಪ್ರಯೋಗ ಯಶಸ್ವಿಯಾಗಬೇಕು ಅಂದರೆ ಆಕಾಶದಲ್ಲಿ ಮೋಡಗಳು ಇರಲೇಬೇಕು. ಮೋಡಗಳು ಇಲ್ಲದೇ ಇರುವ ಸ್ಥಿತಿಯಲ್ಲಿ, ಮೋಡ ಬಿತ್ತನೆ ಸಾಧ್ಯವಿಲ್ಲ ಎಂದು ಈ ಅಧ್ಯಯನ ವರದಿಗಳಲ್ಲಿ ವಿವರಿಸಲಾಗಿದೆ

ಮೋಡ ಬಿತ್ತನೆ ಸಾಧ್ಯವಿರುವ ಸ್ಥಿತಿ

- ಭೂಮಿಯ ಮೇಲ್ಮೈನಿಂದ 16,500 ಅಡಿ ಎತ್ತರ ಮತ್ತು ಅದಕ್ಕಿಂತಲೂ ಎತ್ತರದಲ್ಲಿ ಇರುವ ಮೋಡಗಳ ಮೇಲೆ ರಾಸಾಯನಿಕಗಳನ್ನು ಸಿಂಪಡಿಸಿ ಮಳೆ ಬರಿಸಲು ಸಾಧ್ಯ. ಭೂಮಿಯ ಮೇಲ್ಮೈನಿಂದ ಸರಾಸರಿ 16,500 ಅಡಿ ಎತ್ತರದಲ್ಲಿ ನೀರು ಘನೀಕರಿಸುತ್ತದೆ. ಇದಕ್ಕಿಂತ ಹೆಚ್ಚು ಎತ್ತರದಲ್ಲಿ ನೀರು ಇನ್ನಷ್ಟು ತಂಪಾಗುತ್ತದೆ. ನೀರಿನ ಕಣಗಳ ಸಾಂದ್ರತೆ ಹೆಚ್ಚಾಗುತ್ತದೆ
- ಇಂತಹ ಮೋಡಗಳು 16,500 ಅಡಿಗಿಂತ ಇನ್ನೂ ಕಡಿಮೆ ಎತ್ತರದಿಂದಲೇ ರೂಪುಗೊಂಡಿರುತ್ತವೆ. ಆಕಾಶದಲ್ಲಿ ನೀರು ಘನೀಕರಿಸುವ ಎತ್ತರಕ್ಕಿಂತ ಇನ್ನೂ ಎತ್ತರದವರೆಗೆ ಇರುತ್ತವೆ. 16,500 ಅಡಿಗಿಂತಲೂ ಹೆಚ್ಚು ಎತ್ತರದಲ್ಲಿ ಇರುವ ನೀರಿನ ಕಣಗಳು ಮಂಜುಕಣಗಳ ರೂಪದಲ್ಲಿರುತ್ತವೆ. ಇವನ್ನು ಅತಿತಂಪಿನ ಕಣಗಳು ಎಂದು ಕರೆಯಬಹುದು
- ಇಂತಹ ಮೋಡಗಳಲ್ಲಿ ಒಂದು ಘನ ಮೀಟರ್ ಪ್ರದೇಶದಲ್ಲಿ ಇರುವ ನೀರಿನ ಕಣಗಳ ಸಂಖ್ಯೆ 500ಕ್ಕಿಂತಲೂ ಹೆಚ್ಚು ಇರಬೇಕು. ಆಗ ರಾಸಾಯನಿಕಗಳನ್ನು ಸಿಂಪಡಿಸಿದರೆ ಮಳೆಯಾಗುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ
- 6,500 ಅಡಿ ಎತ್ತರದಿಂದ ಇಂತಹ ಮೋಡಗಳು ಆರಂಭವಾಗುತ್ತವೆ. ಇವನ್ನು ಮೋಡಗಳ ತಳಭಾಗ ಎಂದು ಪರಿಗಣಿಸಲಾಗುತ್ತದೆ. ಇಂತಹ ಮೋಡಗಳ ತುದಿ 20,000 ಅಡಿ ಎತ್ತರದವರೆಗೂ ಇರುವ ಸಾಧ್ಯತೆ ಇರುತ್ತದೆ

ಬಿತ್ತನೆ ಫಲಕಾರಿಯಾಗದ ಸ್ಥಿತಿ

- 6,500 ಅಡಿಗಿಂತಲೂ ಕಡಿಮೆ ಎತ್ತರದಲ್ಲಿ ಇರುವ ಮೋಡಗಳ ಮೇಲೆ ರಾಸಾಯನಿಕಗಳನ್ನು ಸಿಂಪಡಿಸಿ ಮಳೆ ಬರಿಸಲು ಸಾಧ್ಯವಿಲ್ಲ
- ಇಂತಹ ಮೋಡಗಳಲ್ಲಿ ಇರುವ ನೀರಿನ ಕಣಗಳ ಗಾತ್ರ ದೊಡ್ಡದಾಗಿರುತ್ತದೆ. ಆದರೆ, ಅವುಗಳ ಸಾಂದ್ರತೆ ತೀರಾ ಕಡಿಮೆ ಇರುತ್ತದೆ. ನೈಸರ್ಗಿಕವಾಗಿಯೂ ಈ ಕಣಗಳು ಪರಸ್ಪರ ಘರ್ಷಣೆಗೆ ಒಳಗಾಗುವುದಿಲ್ಲ. ರಾಸಾಯನಿಕಗಳನ್ನು ಸಿಂಪಡಿಸಿದರೂ ಇಂತಹ ಕಣಗಳು ಘರ್ಷಣೆಗೆ ಒಳಗಾಗುವುದಿಲ್ಲ. ಈ ಕಾರಣದಿಂದಲೇ ಇಂತಹ ಮೋಡಗಳ ಬಿತ್ತನೆ ಫಲಕಾರಿಯಾಗುವುದಿಲ್ಲ

ಮೋಡ ಬಿತ್ತನೆ ಉದ್ದೇಶದಿಂದ 2017ರ ಆಗಸ್ಟ್‌ನಲ್ಲಿ ಬೆಂಗಳೂರಿನ ಜಕ್ಕೂರು ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ಸನ್ನದು ಮಾಡಲಾಯಿತು –ಪಿಟಿಐ ಚಿತ್ರ

30ಕ್ಕೂ ಹೆಚ್ಚು ದೇಶಗಳಲ್ಲಿ ಪ್ರಯೋಗ

ಮೋಡ ಬಿತ್ತನೆಯ ಮೊದಲ ಪ್ರಯೋಗ ನಡೆದದ್ದು 1946ರ ನವೆಂಬರ್ 13ರಂದು. ಅಮೆರಿಕದ ಹವಾಮಾನತಜ್ಞ ವಿನ್ಸೆಂಟ್ ಜೆ.ಶಾಯ್‌ಫೆರ್ ಅಂತಹ ಮೊದಲ ಪ್ರಯೋಗ ನಡೆಸಿದ್ದರು. ಅಮೆರಿಕದ ಹಲವು ರಾಜ್ಯಗಳಲ್ಲಿ ಈ ಪ್ರಯೋಗವನ್ನು ಮುಂದುವರಿಸಲಾಯಿತು. ನಂತರ ವಿಶ್ವದ ಬೇರೆ ದೇಶಗಳೂ ಮೋಡ ಬಿತ್ತನೆಯ ಪ್ರಯೋಗ ನಡೆಸಿದವು. ಅಂದಿನಿಂದ ಈವರೆಗೆ 30ಕ್ಕೂ ಹೆಚ್ಚು ದೇಶಗಳಲ್ಲಿ ಈ ಪ್ರಯೋಗ ನಡೆದಿದೆ. ಯುಎಇ ಈ ವಿಧಾನವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ.

- ಆಸ್ಟ್ರೇಲಿಯಾ
- ಭಾರತ
- ಇಸ್ರೇಲ್
- ಜಪಾನ್
- ಅಮೆರಿಕ
- ಥಾಯ್ಲೆಂಡ್
- ಚೀನಾ
- ಅಲ್ಜೀರಿಯಾ
- ಅರ್ಜೆಂಟಿನಾ
- ಚಿಲಿ
- ಕ್ಯೂಬಾ
- ಫ್ರಾನ್ಸ್
- ಇಂಡೊನೇಷ್ಯಾ
- ಇರಾನ್
- ಲಿಬಿಯಾ
- ಮೆಸೆಡೋನಿಯಾ
- ಮಲೇಷ್ಯಾ
- ಮೆಕ್ಸಿಕೊ
- ಮಂಗೋಲಿಯಾ
- ಮೊರಾಕ್ಕೊ
- ಪಾಕಿಸ್ತಾನ
- ಫಿಲಿಪ್ಪೀನ್ಸ್
- ರಷ್ಯಾ
- ಸೆನೆಗಲ್
- ದಕ್ಷಿಣ ಆಫ್ರಿಕಾ
- ಸಿರಿಯಾ
- ಯುಎಇ
- ಉತ್ತರ ಕೊರಿಯಾ
- ಫಾಸೊ
- ಉಜ್ಬೆಕಿಸ್ತಾನ್
- ಸೌದಿ ಅರೇಬಿಯಾ

‘ಮಳೆ ಬರುತ್ತದೆ’

ಮೋಡ ಬಿತ್ತನೆ ಹಾಗೂ ಮೋಡ ಬಿತ್ತನೆಯ ಯಶಸ್ಸಿನ ಕುರಿತು ಸಾಮಾನ್ಯ ಜನರಲ್ಲಿ, ರಾಜಕಾರಣಿಗಳಲ್ಲಿ, ಸರ್ಕಾರಗಳಲ್ಲಿ, ಮಾಧ್ಯಮದವರಲ್ಲಿ ಹಲವು ಬಗೆಯ ಅಭಿಪ್ರಾಯಗಳಿವೆ. ಮೋಡವು ನೆಲ ಮಟ್ಟದಿಂದ 2–5 ಕಿ.ಮೀ ಎತ್ತರದಲ್ಲಿರಬೇಕು. ಆಗ ಮಾತ್ರವೇ ಮೋಡ ಬಿತ್ತನೆ ಮಾಡಲು ಸಾಧ್ಯವಿದೆ. ಆಗ 30–40 ನಿಮಿಷದೊಳಗೆ ಮಳೆ ಬರುತ್ತದೆ. ಪ್ರತಿ ಐದು ಕಿ.ಮೀ.ಗೆ ಮಳೆಮಾಪಕ ಇರಬೇಕು ಮತ್ತು ಇದು ಸ್ವಯಂಚಾಲಿತ ಮಳೆಮಾಪಕವಾಗಿರಬೇಕು. ಆಗ ಮಳೆಯ ಪ್ರಮಾಣವನ್ನು ನೀವು ಇಂತಿಷ್ಟೇ ಎಂದು ನಿರ್ಧರಿಸಬಹುದು. ಇಲ್ಲವೆಂದರೆ, ಮೋಡ ಬಿತ್ತನೆಯಿಂದಾಗಿ ಎಷ್ಟು ಪ್ರಮಾಣದ ಮಳೆಯಾಗಿದೆ ಎಂದು ಗುರುತಿಸುವುದು ಕಷ್ಟವಾಗುತ್ತದೆ. ಇಂಥ ಸಂದರ್ಭಗಳಲ್ಲಿ ಜನರು ಮೋಡ ಬಿತ್ತನೆಯಿಂದ ಉಪಯೋಗ ಇಲ್ಲ ಎಂದು ಹೇಳಿಬಿಡುತ್ತಾರೆ. ಆದರೆ, ಕರ್ನಾಟಕದಲ್ಲಿ ಉತ್ತಮವಾದ ಮಳೆಮಾಪಕ ವ್ಯವಸ್ಥೆ ಇದೆ.

2017 ಹಾಗೂ 2019ರಲ್ಲಿ ನಾವು ಕರ್ನಾಟಕದಲ್ಲಿ ಮೋಡ ಬಿತ್ತನೆ ಮಾಡಿದ್ದೇವೆ. ಇದಾದ ಬಳಿಕ ಡೇಟಾವನ್ನು ವಿಶ್ಲೇಷಿಸಲಾಯಿತು. ಆಗ ನಮಗೆ ತಿಳಿದಿದ್ದು, ಮಳೆ ಪ್ರಮಾಣದಲ್ಲಿ ಏರಿಕೆಯಾಯಿತು ಎಂಬುದಾಗಿ. ಆಗ 2.1 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು. ನೀರಿನ ಕೊರತೆಯಿಂದ ಬೆಳೆಗಳ ಹಾಳಾಗಿದ್ದವು. ಆಗ ಮೋಡ ಬಿತ್ತನೆಯು ಬೆಳೆಗಳ ಉಳಿವಿಗೆ ಸಹಕಾರಿಯಾಗಿತ್ತು. ನಮ್ಮ ಈ ವರದಿಯು ಹಲವು ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲೂ ಪ್ರಕಟವಾಗಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ಬಂದಿತ್ತು.

ಮೋಡ ಬಿತ್ತನೆ ಮಾಡಬೇಕು ಎಂದಾದರೆ, ಮುಂಚಿತವಾಗಿ ಕೇಂದ್ರ ಸರ್ಕಾರದಿಂದ ಹಲವು ಒಪ್ಪಿಗೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ಎಲ್ಲದಕ್ಕೂ ಸುಮಾರು ಒಂದು ತಿಂಗಳು ಸಮಯಬೇಕಾಗುತ್ತದೆ. ಕರ್ನಾಟಕದಲ್ಲಿ ಮಳೆಗಾಲ ಮುಗಿಯುತ್ತಾ ಬಂದಿದೆ. ಕೆಲವೊಮ್ಮೆ ಅಕ್ಟೋಬರ್‌ನಲ್ಲಿಯೂ ಮಳೆಯಾಗುತ್ತದೆ. ಆದರೆ, ಹವಾಮಾನ ಇಲಾಖೆಯು ಈ ಬಾರಿ ದೇಶದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುತ್ತದೆ ಎಂದು ಹೇಳಿದೆ. ಆದ್ದರಿಂದ ಈ ಮೋಡ ಬಿತ್ತನೆ ಮಾಡುವ ಪ್ರಕ್ರಿಯೆ ಕೈಗೊಳ್ಳುವುದು ಕಷ್ಟವೇ ಸರಿ ಎನ್ನಿಸುತ್ತದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಮಾರ್ಚ್ ಹೊತ್ತಿಗೆ ಅಂದರೆ, ಮಳೆಗಾಲ ಪ್ರಾರಂಭವಾಗುವುದಕ್ಕೂ ಮೊದಲೇ ಮಾಡಿಕೊಳ್ಳಬೇಕಿತ್ತು. ಒಂದು ವೇಳೆ ಮಳೆ ಚೆನ್ನಾಗಿ ಆದರೆ, ತೊಂದರೆ ಇರುತ್ತಿರಲಿಲ್ಲ. ಮಳೆ ಕೊರತೆಯಾದರೆ, ಮೋಡ ಬಿತ್ತನೆ ಕಾರ್ಯ ಮಾಡಬಹುದಿತ್ತು.

ಜೀವನ್ ಪ್ರಕಾಶ್ ಕುಲಕರ್ಣಿ
ವಿಶ್ವ ಹವಾಮಾನ ಸಂಘಟನೆಯ ಹವಾಮಾನ ಮಾರ್ಪಾಡು ಸಮಿತಿಯ ಮಾಜಿ ಸದಸ್ಯ

ಆಧಾರ: ಯುಎಇಯ ರಾಷ್ಟ್ರೀಯ ಮಳೆವೃದ್ಧಿ ಸಂಶೋಧನಾ ಕಾರ್ಯಕ್ರಮ ವರದಿ, ಅಮೆರಿಕದ ಸಾಗರ ಮತ್ತು ವಾತಾವರಣ ಸಂಸ್ಥೆಯ ‘ಕ್ಲೌಡ್ ಸೀಡಿಂಗ್’ ವರದಿ, ಕರ್ನಾಟಕ ರಾಜ್ಯ ಮೋಡ ಬಿತ್ತನೆ ವರದಿ–2020, ಪಿಟಿಐ

ಬಿಎಂಟಿಸಿ ಸಿಬ್ಬಂದಿಯೊಂದಿಗೆ ರಜನಿಕಾಂತ್

ಬೆಂಗಳೂರಿನಲ್ಲಿ ರಜನಿ ರೌಂಡ್ಸ್

ಸೂಪರ್ ಸ್ಟಾರ್ ರಜನಿಕಾಂತ್ ಮಂಗಳವಾರ ದಿಢೀರನೆ ಬೆಂಗಳೂರಿನಲ್ಲಿ ಕಾಣಿಸಿಕೊಂಡು ಅಭಿಮಾನಿಗಳಲ್ಲಿ ಸಂತಸ ಮೂಡಿಸಿದರು. ರಜನಿ ಅಭಿನಯದ ‘ಜೈಲರ್’ ಸಿನಿಮಾ ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿದೆ. ಆದರೆ ರಜನಿಕಾಂತ್ ಮಾತ್ರ ಯಾರಿಗೂ ಸಿಗದೆ ಹಿಮಾಚಲ ಪ್ರದೇಶದಲ್ಲಿದ್ದರು.

ಖಾಸಗಿ ಕಾರ್ಯಕ್ರಮದ ನಿಮಿತ್ತ ನಗರಕ್ಕೆ ಆಗಮಿಸಿದ್ದ ರಜನಿಕಾಂತ್, ಪ್ರಾರಂಭದಲ್ಲಿ ತಾವು ಕೆಲಸ ಮಾಡಿದ್ದ ಜಯನಗರದ ಬಿಎಂಟಿಸಿ ಡಿಪೋಗೆ ಭೇಟಿ ನೀಡಿ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. ಬೆಳಿಗ್ಗೆ 11:30ರ ಸುಮಾರಿಗೆ ಬಂದ ಅವರು, 15 ನಿಮಿಷಗಳ ಕಾಲ ಅಲ್ಲಿನ ಸಿಬ್ಬಂದಿ ಜೊತೆ ಮಾತುಕತೆ ನಡೆಸಿದರು. ಬಿಎಂಟಿಸಿ ಅಧಿಕಾರಿಗಳು, ಸಿಬ್ಬಂದಿ ರಜನಿ ಜೊತೆ ಸೆಲ್ಫಿಗಾಗಿ ಮುಗಿಬಿದ್ದರು. ಬಳಿಕ ಚಾಮರಾಜಪೇಟೆಯ ರಾಘವೇಂದ್ರ ಸ್ವಾಮಿ ಮಠಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಅವರ ಗೆಳೆಯ ರಾಜ್ ಬಹದ್ದೂರ್ ಕೂಡ ರಜನಿ ಜೊತೆಗಿದ್ದರು. ರಜನಿಕಾಂತ್ ಅವರೊಂದಿಗಿನ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ಅವರ ಸರಳತೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

‘ಫೈಟರ್’ ಆದ ಮರಿ ಟೈಗರ್!

‘ರಾಬರ್ಟ್’ ಸಿನಿಮಾ ಬಳಿಕ ನಟ ವಿನೋದ್ ಪ್ರಭಾಕರ್ ಸಾಲು ಸಾಲು ಸಿನಿಮಾಗಳಿಗೆ ಹಸಿರು ನಿಶಾನೆ ತೋರುತ್ತಿದ್ದಾರೆ. ಮರಿ ಟೈಗರ್ ಇದೀಗ ‘ಫೈಟರ್’ ಆಗಿ ತೆರೆ ಮೇಲೆ ಬರಲಿದ್ದಾರೆ.

ನೂತನ್ ಉಮೇಶ್ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಸೋಮಶೇಖರ್ ಕಟ್ಟಿಗೇನಹಳ್ಳಿ ನಿರ್ಮಾಣ ಮಾಡಿರುವ ಈ ಚಿತ್ರ ಅಕ್ಟೋಬರ್‌ನಲ್ಲಿ ತೆರೆಗೆ ಬರಲು ಸಜ್ಜಾಗುತ್ತಿದೆ. ‘ಸದ್ಯದಲ್ಲೇ ಚಿತ್ರದ ಹಾಡುಗಳು ಹಾಗೂ ಟ್ರೈಲರ್ ಬಿಡುಗಡೆಯಾಗಲಿದೆ. ‘ಫೈಟರ್’ ಎಂದರೆ ಹೊಡೆದಾಡುವವನು ಎಂದು ತಿಳಿದುಕೊಳ್ಳುತ್ತಾರೆ. ಆದರೆ ನಮ್ಮ ‘ಫೈಟರ್’ ಅನ್ಯಾಯದ ವಿರುದ್ಧ ಹಾಗೂ ತನ್ನ ಕುಟುಂಬಕ್ಕಾಗಿ ಹೋರಾಡುವವನು. ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್ ಅವರು ಹೊಸ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ’ ಎನ್ನುತ್ತಾರೆ ಉಮೇಶ್.

ಚಿತ್ರಕ್ಕೆ ಗುರುಕಿರಣ್ ಅವರ ಸಂಗೀತ ನಿರ್ದೇಶನವಿದ್ದು, ಪಾವನ ಹಾಗೂ ಲೇಖ ಚಂದ್ರ ನಾಯಕಿಯರಾಗಿ ನಟಿಸಿದ್ದಾರೆ. ನಟಿ ನಿರೋಶ ಈ ಚಿತ್ರದ ಮೂಲಕ ಹಲವು ವರ್ಷಗಳ ಬಳಿಕ ಬೆಳ್ಳಿತೆರೆಗೆ ಮರಳುತ್ತಿದ್ದಾರೆ. ಥ್ರಿಲ್ಲರ್ ಮಂಜು ಚಿತ್ರದ ಸಾಹಸ ನಿರ್ದೇಶನ ಮಾಡಿದ್ದಾರೆ.

ಪಾವನ, ವಿನೋದ್ ಪ್ರಭಾಕರ್ ಹಾಗೂ ಲೇಖ ಚಂದ್ರ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಚಂದ್ರಯಾನ–3ರ ಯಶಸ್ಸನ್ನು ಸಂಭ್ರಮಿಸುತ್ತಿದ್ದ ಹಿಂದೂ ಇಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬನನ್ನು ಕಾಶ್ಮೀರಿ ವಿದ್ಯಾರ್ಥಿಗಳು ಥಳಿಸಿದ್ದಾರೆ ಎಂದು ಆರೋಪಿಸಿ, ವಿದ್ಯಾರ್ಥಿಗಳು ‘ಅಲ್ಲಾ ಹು ಅಕ್ಬರ್’ ಎಂದು ಕೂಗುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ರಾಜಸ್ಥಾನದ ಚಿತ್ತೋಡಗಢ ಜಿಲ್ಲೆಯ ಮೆವಾಡ ವಿಶ್ವವಿದ್ಯಾಲಯದಲ್ಲಿ ಚಂದ್ರಯಾನ–3ರನ್ನು ಸಂಭ್ರಮಿಸುತ್ತಿದ್ದ ಆಯುಷ್ ಎನ್ನುವ ವಿದ್ಯಾರ್ಥಿ ಮೇಲೆ ಚೂಪಾದ ಶಸ್ತ್ರಗಳಿಂದ ದಾಳಿ ಮಾಡಲಾಗಿದೆ. ಈತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಉದಯಪುರದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ....’ ಎಂದು ವಿಡಿಯೊದಿಂದಿಗೆ ಬರಹವನ್ನು ಬರೆದುಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಕಾಲೇಜಿನ ಮೆಸ್‌ನಲ್ಲಿ ಊಟಕ್ಕೆ ಸರತಿಯಲ್ಲಿ ನಿಲ್ಲುವ ಸಲುವಾಗಿ ಜಗಳ ಆರಂಭಗೊಂಡು ಅದು ಹೊಡೆದಾಟದಲ್ಲಿ ಅಂತ್ಯಗೊಂಡಿತು ಎಂದು ಚಿತ್ತೋಡಗಢದ ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಇದನ್ನೇ ವಿಶ್ವವಿದ್ಯಾಲಯದ ನಿರ್ದೇಶಕ ಹರೀಶ್ ಗುರ್ನಾನಿ ಕೂಡ ಹೇಳಿದ್ದಾರೆ. ರಾಹುಲ್ ಹಾಗೂ ಕುತುಬುದ್ದೀನ್ ಎನ್ನುವ ವಿದ್ಯಾರ್ಥಿಗಳ ನಡುವೆ ಜಗಳ ನಡೆದಿದೆ. ಅದು ತಾರಕ್ಕೇರಿ ಹೊಡೆದಾಟ ನಡೆದು, ಇತರ ಕೆಲವು ವಿದ್ಯಾರ್ಥಿಗಳು ಹೊಡೆದಾಟದಲ್ಲಿ ಭಾಗಿಯಾಗಿದ್ದಾರೆ. ಆದ್ದರಿಂದ, ಚಂದ್ರಯಾನ–3ಕ್ಕೆ ಸಂಬಂಧಿಸಿ ಹಿಂದೂ ಹಾಗೂ ಮುಸ್ಲಿಂ ವಿದ್ಯಾರ್ಥಿಗಳ ನಡುವೆ ಜಗಳ ನಡೆದಿಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಸರಳತೆಯೇ ಮಹಾನತೆ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿನ ಒಂದು ಘಟನೆ ಹೀಗಿದೆ. ರಾಮ, ಸೀತೆ ಮತ್ತು ಲಕ್ಷ್ಮಣ ಹದಿನಾಲ್ಕು ವರ್ಷ ವನವಾಸಕ್ಕೆ ಹೋಗಿರುತ್ತಾರಷ್ಟೆ. ಆ ಅವಧಿಯಲ್ಲಿ ಲಕ್ಷ್ಮಣನ ಹೆಂಡತಿ ಊರ್ಮಿಳೆ ಕೂಡ ನಾರುಡುಗೆಯನ್ನುಟ್ಟು ಕಠಿಣ ತಪಸ್ಸಿನಲ್ಲಿರುತ್ತಾಳೆ. ಹದಿನಾಲ್ಕು ವರ್ಷಗಳ ನಂತರ ಮರಳುತ್ತಿರುವ ಅವರನ್ನು ಬರಮಾಡಿಕೊಳ್ಳಲು ಸ್ನಾನ ಮಾಡಿ ಬಟ್ಟೆ ಬದಲಾಯಿಸಲು ಹೊರಡುತ್ತಾಳೆ. ಆಗ ಅಲ್ಲಿದ್ದವರು ‘ನೀನು ಹೀಗೆಯೇ ಇರು, ಅವರಷ್ಟೇ ಅಲ್ಲ, ಅರಮನೆಯಲ್ಲಿದ್ದರೂ ನೀನು ಕೂಡ ಕಷ್ಟ ಪಟ್ಟಿದ್ದೀಯೆಂಬುದು ಅವರಿಗೂ ಗೊತ್ತಾಗಲಿ’ ಎನ್ನುತ್ತಾರೆ. ಆಗ ಊರ್ಮಿಳೆ ‘ಕಡಲ್‌ಗಿದಿರ್ ಪನಿಗೇನ್ ಪ್ರದರ್ಶನಂ?’ ಎನ್ನುತ್ತಾಳೆ. ತಾನೂ ಕಷ್ಟಪಟ್ಟಿದ್ದರೂ, ಆ ಮೂವರ ಸಾಗರದಷ್ಟು ಕಷ್ಟದೆದುರು ಅದೇನೂ ಅಲ್ಲ ಎಂಬ ಅವಳ ವಿನಯ ಅಮೂಲ್ಯವಾದದ್ದು. ನಿಜವಾದ ಮಹಾನ್ ವ್ಯಕ್ತಿಗಳು ಎಂದಿಗೂ ಸರಳರಾಗಿರುತ್ತಾರೆ. ತೆನೆ ಹೊತ್ತ ಗಿಡ, ಗೊನೆ ಹೊತ್ತ ಬಾಳೆಯಂತೆ ಉಪಕಾರಿಗಳು ಸದಾ ವಿನಯವಂತರಾಗಿರುತ್ತಾರೆ. ಒಣ ಶಬ್ದಗಳಿಗಿಂತ ಅರ್ಥಹೀನವಾದದ್ದು ಬೇರೇನಿಲ್ಲವೆಂದು ಅರಿತಿರುವ ಅವರು ತಮ್ಮ ಯೋಗ್ಯತೆಯನ್ನು ಜಗತ್ತಿಗೆ ತೋರಿಸಲು ಹಾತೊರೆಯುವುದಿಲ್ಲ.

ನಾಲ್ಕು ಮಂದಿಯೆದುರು ಸೈ ಎನ್ನಿಸಿಕೊಳ್ಳುವುದು ಸಾಮಾನ್ಯ ಮನುಷ್ಯರೆಲ್ಲರ ಕನಸು. ಅದಕ್ಕೋಸ್ಕರ ಕಷ್ಟಪಟ್ಟು ಸಾಧನೆ ಮಾಡುವುದು ಮನುಷ್ಯಸಹಜ ಗುಣ. ಆದರೆ ಸಮಸ್ಯೆ ಪ್ರಾರಂಭವಾಗುವುದು ತೋರಿಕೆಯಿಂದ. ಇರುವುದರ ಜತೆಗೆ ಇಲ್ಲದ್ದನ್ನೂ ಜಗತ್ತಿನೆದುರು ಬಿಂಬಿಸುವ ಹಂಬಲ ತರುವ ಅಪಾಯಗಳು ಒಂದೆರಡಲ್ಲ. ಈ ತೋರಿಕೆಯಿಂದ ನಿಜವಾಗಲೂ ನಷ್ಟವನ್ನನುಭವಿಸುವವರು ನಾವೇ. ಹೇಗೆ ಸುಳ್ಳನ್ನು ಮುಚ್ಚಲೊಂದು ಸುಳ್ಳು, ಅದನ್ನು ಸಮರ್ಥಿಸಿಕೊಳ್ಳಲು ಮಗದೊಂದು ಸುಳ್ಳು ಹೇಳುತ್ತ ಹೇಳುತ್ತ ಸುಳ್ಳಿನ ಸಂಕೋಲೆಯಲ್ಲಿ ಕೆಲವರು ಸಿಕ್ಕಿ ಬೀಳುತ್ತಾರೆ. ಅದೇ ರೀತಿ ತೋರಿಕೆಯ ಸ್ವಭಾವದಿಂದ ಸ್ವಾಭಾವಿಕವಾಗಿ ಬದುಕುವ ಅವಕಾಶವನ್ನು ಕಳೆದುಕೊಂಡು ಮುಖವಾಡಗಳ ಮರೆಯಲ್ಲೇ ಬದುಕುವ ಪರಿಸ್ಥಿತಿ ಹಲವಾರು ಮಂದಿಯದು. ಸರಳವಾಗಿ ಸಹಜವಾಗಿ ಬದುಕುವ ಸುಖದಲ್ಲಿರುವ ಸ್ವಾತಂತ್ರ್ಯದ ಅರಿವಿಲ್ಲದ ಕೈದಿಗಳವರು.

ಜಗತ್ತಿಗೇ ಅನ್ನ ಕೊಡುವ ಸಸಿಗಳು ಭೂಮಿಯಿಂದ ಮೊಳಕೆಯೊಡೆಯುವಾಗ, ಮರಗಳು ಹಣ್ಣು ಬಿಡುವಾಗ, ಸೂರ್ಯಚಂದ್ರರು ದಿನವೂ ಬೆಳಕು ನೀಡುವಾಗ ಜಂಭ ಕೊಚ್ಚಿಕೊಳ್ಳುವುದಿಲ್ಲ. ಜಗತ್ತನ್ನು ಮುನ್ನಡೆಸುವವರೇ ಮೌನವಾಗಿರುವಾಗ, ಇವೆಲ್ಲವುಗಳ ಮೇಲೆ ಅವಲಂಬಿತವಾಗಿರುವ ಮನುಷ್ಯನೇ ನೀನೇನು ಮಹಾನ್ ಸಾಧನೆ ಮಾಡಿದ್ದೀ ಎಂದು ಮಾತಾಡುತ್ತಿ, ನಿನ್ನ ತುಟಿಗಳನ್ನು ಹೊಲಿದುಕೋ ಎಂದು ಡಿವಿಜಿಯವರು ತಮ್ಮ ಕಗ್ಗವೊಂದರಲ್ಲಿ ಹೇಳುತ್ತಾರೆ . ‘ತನ್ನ ಬಣ್ಣಿಸಬೇಡ’ ಎಂದು ಕಿವಿಮಾತು ಹೇಳಿದ ಬಸವಣ್ಣನವರು ‘ಎನಗಿಂತ ಕಿರಿಯರಿಲ್ಲ’ ಎಂದೂ ಹೇಳಿದರು. ತಾನೇ ಮಹಾನ್ ಎಂದು ಬೀಗುವ ಬದಲು ಜಗತ್ತಿನಲ್ಲಿ ನಮಗಿಂತ ಉತ್ತಮರಾದವರು ಅಸಂಖ್ಯಾತ ಜನರಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ವಿನಯದಿಂದ ಒಪ್ಪಿಕೊಳ್ಳುವುದೇ ಮಹಾನತೆಯೆಡೆಗಿನ ಮೊದಲ ಹೆಜ್ಜೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಆಗಸ್ಟ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಚತುರ್ದಶಿ ಗಂ. 10-59 ನಕ್ಷತ್ರ: ಧನಿಷ್ಠಾ ಗಂ. 20-47 ಯೋಗ: ಅತಿಗಂಡ ಗಂ. 21-32 ಕರಣ: ವಣಿಜ ಗಂ. 10-59, ಸಿಂಹ ಮಾಸದ 13 ನೇ ದಿನ, ಮಳೆನಕ್ಷತ್ರ: ಮಘಾ 4.ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-23 ಸೂರ್ಯಾಸ್ತ : 06-40, ಮುಸ್ಲಿಂ ದಿನಾಂಕ : 13 ಸಫರ್, ದಿನ ವಿಶೇಷ : ಓಣಂ ಮೂರನೇ ದಿನ, ರಕ್ಷಾ ಬಂಧನ, ಝುಲಾನಾ ಯಾತ್ರಾ ಸಮಾಪನಾ (ಪ್ರದೋಷ), ಬಲಭದ್ರ ಪೂಜಾ (ಒರಿಸ್ಸಾ), ನರೋಲಿ ಪೂರ್ಣಿಮಾ, ಅವನಿ ಅವಿಟ್ಟಮ್ (ದ.ಭಾರತ), ಶ್ರಾವಣಿ ಪೂರ್ಣಿಮಾ, ಅದೃಷ್ಟ ಸಂಖ್ಯೆ : 8, 6

ಮೇಷ: ಗೃಹದಲ್ಲಿ ಹೊಂದಾಣಿಕೆ ಕೊರತೆಯಿಂದ ಸಣ್ಣಪುಟ್ಟ ಭಿನ್ನಾಭಿಪ್ರಾಯ ಮೂಡಿಬಂದು ದುಗುಡುತನ ಹೆಚ್ಚಾಗಲಿದೆ. ಶ್ರೀ ಮಹಾವಿಷ್ಣುವನ್ನು ಸ್ತುತಿಸಿದಲ್ಲಿ ಮನೆಯಲ್ಲಿ ಆರೋಗ್ಯ, ಐಶ್ವರ್ಯಗಳ ವೃದ್ಧಿಯಾಗುವುದು.

ವೃಷಭ: ವ್ಯವಹಾರದಲ್ಲಿ ವಂಚನೆಯ ಸಾಧ್ಯತೆ ಇರುವುದರಿಂದ ಜಾಗರೂಕತೆಯಿಂದ ವ್ಯವಹರಿಸಿ. ಈ ದಿನ ಕಠಿಣ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ. ವಿಷಯ ವಿನಿಮಯದಿಂದ ಗೊಂದಲಗಳಿಗೆ ಉತ್ತರ ಸಿಗಲಿದೆ.

ಮಿಥುನ: ಗೆಳೆಯರ ಗುಂಪಿನಲ್ಲಿ ಮಿತ್ರತ್ವ ಹಾಗು ಶತ್ರುತ್ವ ಹೊಂದಿದ ಎರಡೂ ಬಗೆಯ ಜನ ಇರುತ್ತಾರೆಂದು ಮರೆಯದಿರಿ. ಉದ್ಯಮಿಗಳಿಗೆ ವಿದೇಶ ವ್ಯವಹಾರಗಳಿಂದ ಹೆಚ್ಚಿನ ಲಾಭ ಪ್ರಾಪ್ತಿಯಾಗುವುದು. ಆತ್ಮವಂಚನೆ ಮಾಡಿಕೊಳ್ಳಬೇಡಿ.

ಕರ್ಕಾಟಕ: ವೃತ್ತಿರಂಗದಲ್ಲಿ ಈ ದಿನ ಹೆಚ್ಚೇನು ಪ್ರಯೋಜಕಾರಿಯಾಗುವುದಿಲ್ಲ, ಆದ್ದರಿಂದ ಮನುಷ್ಯ ಪ್ರಯತ್ನದ ಜತೆಯಲ್ಲಿ ದೇವಬಲವು ಅಗತ್ಯ ಎನ್ನುವ ಕಾರಣದಿಂದ ದೇವರ ಮೊರೆ ಹೋಗುವುದು ಉತ್ತಮ.

ಸಿಂಹ: ಸಂಶೋಧಕರಿಗೆ ಕಾರ್ಯಪ್ರವೃತ್ತಿಯಲ್ಲಿ ದೊಡ್ಡ ಮಟ್ಟದಲ್ಲಿ ವಸ್ತು ನಷ್ಟ ಆಗಬಹುದು ಅಥವಾಸಂಶೋಧನೆಯಲ್ಲಿ ಹಿನ್ನಡೆಯಾಗುತ್ತದೆ. ಕೃಷಿ ಉತ್ಪನ್ನಗಳ ಮಾರಾಟ ಪ್ರತಿನಿಧಿಗಳಿಗೆ ಹೆಚ್ಚಿನ ಕಮಿಷನ್ ದೊರೆಯಲಿದೆ.

ಕನ್ಯಾ: ಹಿರಿಯರೊಡನೆ ಮಾಡಿದ ಅನವಶ್ಯಕ ತರ್ಕ, ವಿವಾದಗಳಿಂದ ಅಧಿಕಪ್ರಸಂಗಿ ಎನ್ನುವ ಪಟ್ಟವನ್ನು ಹೊಂದುವಿರಿ. ಆಸ್ಪತ್ರೆ ಅಲೆದಾಟಗಳು ಕೊನೆಗೊಳ್ಳುವುದು. ಸಾಕು ಪ್ರಾಣಿಗಳ ಆರೋಗ್ಯದ ಬಗ್ಗೆ ಗಮನವಿರಲಿ.

ತುಲಾ: ಸ್ನೇಹಿತರೊಬ್ಬರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಹೋಗುವ ಸಂಭವ ಬರಬಹುದು. ಮನೆಯ ಕೆಲಸದಿಂದ ಹಿಂತಿರುಗುವಆಲೋಚನೆಗಳು ಸರಿಯಲ್ಲ. ಕುಟುಂಬದಲ್ಲಿ ಸುಖ ದುಃಖದ ವಾತಾವರಣ ಕಣ್ಣಾಮುಚ್ಚಾಲೆಯಂತಿರುವುದು.

ವೃಶ್ಚಿಕ: ನಿರ್ದಾಕ್ಷಿಣ್ಯ ಕಾರ್ಯವೈಖರಿಯಿಂದ ನಿಮ್ಮ ಅಧಿಕಾರಿಗಳಿಗೂ ನಿಮಗೂ ಸಂಪರ್ಕ ದೂರಾಗುವಂತಾಗಲಿದೆ. ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರವಿರುವುದು ಜತೆಯಲ್ಲಿ ಕೆಲಸಗಾರರ ಸಹಕಾರ ಸಿಗುವುದು.

ಧನು: ನೂತನ ಅಧಿಕಾರಿಗಳ ಆಗಮನದಿಂದ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ತೋರಿಬರಲಿದೆ. ಮನೋಲ್ಲಾಸಕ್ಕಾಗಿ ದೂರದ ಪ್ರಯಾಣದ ಸಾಧ್ಯತೆಗಳು ಹೆಚ್ಚಿರುವುದು. ಗೆಳೆಯರೊಂದಿಗೆ ಸಂತೋಷ ಕೂಟದಲ್ಲಿ ಪಾಲ್ಗೊಳ್ಳುವಿರಿ.

ಮಕರ: ಆಲಸ್ಯದಿಂದಾಗಿ ಯಾವುದೇ ಕೆಲಸಗಳನ್ನು ಮುಂದೂಡದೆ ಪೂರ್ಣಗೊಳಿಸಲು ಪ್ರಯತ್ನಿಸಿ. ಮಡದಿಯಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ. ಸ್ವ ಪ್ರಯತ್ನದಿಂದ ಕೆಲಸದಲ್ಲಿ ಮುನ್ನುಗಿ.

ಕುಂಭ: ಮಿತ್ರರ ಸಹಕಾರದಿಂದ ಮತ್ತು ಅವರ ಚಾಣಾಕ್ಷತನ, ಮಾತುಗಾರಿಕೆ ನೋಡಿ ಕಲಿಯುವುದರಿಂದ ವ್ಯಾಪಾರದಲ್ಲಿ ಪ್ರಗತಿ ಇರುವುದು. ಬ್ಯಾಂಕ್ ಅಧಿಕಾರಿಗಳಿಗೆ ಉದ್ಯೋಗದಲ್ಲಿ ಬದಲಾವಣೆಯಾಗುವ ಸಂಭವವಿರುವುದು.

ಮೀನ: ಹತ್ತಾರು ವಿಷಯಗಳಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟ ಒಂದು ಗುರಿ ತಲುಪವಂಥ ಪ್ರಯತ್ನವನ್ನು ಮಾಡಿ. ಎಲ್ಲಾ ದಾರಿಗಳೂ ಸುಗಮ ಎನಿಸಿ ಎಲ್ಲಾ ಕಷ್ಟ ನಷ್ಟಗಳೂ ನಿವಾರಣೆಯಾಗುವ ಹಂತ ತಲುಪುವುದು.

ಪದಬಂಧ 5426

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅರ್ಧ ಅಂಗಿಯನ್ನು ಹಿಡಿದಿರುವ ಹೆಂಡತಿ! (3)
3.ಕಂಬದಬೋದಿಗೆಗೆ ಜೋಡಿಸಿರುವ ಅಲಂಕಾರದ ವಿಗ್ರಹ (4)
5.ಕೊನೆಗೆ ಜಾಲ ಬೀಸಿದಾಗಲೇ ಇದು ನಿರಾಯಾಸ! (4)
6.ವಟಗುಟ್ಟುವವನ ಹತ್ತಿರವಿರುವ ಬ್ರಹ್ಮಚಾರಿ! (2)
7.ಗಮನ ಹರಿಸಿ ನೋಡಿ! ಆಕಾಶ ಕಂಡೀತು! (3)
9.ತಿರುಗಿಸಿದರೂ ಇದು ಹೊಸತು (3)
12.ಪರಾಜಯದಲ್ಲೂ ಗೆಲುವು ನುಸುಳಿದೆಯಲ್ಲಾ! (2)
13.ಮಡಿವಂತಿಕೆ ತೋರುತ್ತಿರುವ ಅಗಸ (4)
15.ಆಸರೆ ಮನೆಯಲ್ಲ !ಇದು ಜೈಲು! (4)
16.ಕರುವಿನ ಪಚನಾಂಗ ಇಲ್ಲಿ ಕಾಣಿಸುತ್ತಿದೆ (3)

ಮೇಲಿಂದ ಕೆಳಕ್ಕೆ

1.ಅತ್ತಿತ್ತ ನೋಡುವಾಗಲೇ ಬಂದಳಲ್ಲಾಮಾವನ ಹೆಂಡತಿ (2)
2.ಗೀಟು ಹಾಕಿದವ ಮಾಡಿದ ಮೆರುಗಿನ ಲೇಪನ (3)
3.ಕರೆದುಹೆಣ್ಣು ಕೊಟ್ಟಾಗ ಅಳಿಯನಿಗೆ ಈ ಅಪಸ್ಮಾರವಂತೆ! (4)
4.ವೃತ್ತ ರೇಖೆಯನ್ನು ಎಳೆಯುವ ಸಲಕರಣೆ (3)
6.ಆ ವರ್ತಕನೇ ತಿಳಿಸಿಬಿಡುತ್ತಾನೆ ಎಲ್ಲಾ ಸುದ್ದಿ! (4)
8.ನಯದೊಳಗಿರುವ ಉದಯದ ಪ್ರಾರಂಭ! (4)
10.ಮನೆಯ ಹಜಾರವಿದು (4)
11.ಹಸೆ ಬರೆಯುವ ಜಾಗದಲ್ಲೇ ಬೆಳೆದ ಪಾಚಿ (3)
12.ಉತ್ತರದ ಕಡೆಯವರ ಸ್ನಾನ (3)
14.ಅಗುಳು ನುಂಗುವಾಗ ಕಾಣಿಸಿರುವ ಕಣ್ಣೀರು (2)



5425ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಕವ 3.ಅಣ್ಣ
4.ರಥೋತ್ಸವ 6.ಶತಾಯುಷಿ
8.ನವೀನ 11.ಕಸೂತಿ
13.ಹಸುಗೂಸು 17.ಮದಗಜ
18.ರಾಗ 19.ಲೀಲಾವು

ಮೇಲಿಂದ ಕೆಳಕ್ಕೆ:
1.ಕಗ್ಗಂಟು 2.ವರಮಾನ
3.ಅಲ್ಪಾಯು 5.ವಶ
7.ಷಿಕಾರಿ 9.ನಡುಕ
10.ವಿವಾಹ 12.ತಿಲಾಂಜಲಿ
14.ಸುಯೋಗ 15.ಸುಮ
16.ಹಗೇವು

ಸುಡೊಕು 5812

			1		3	5		7
7		6	4				3	1
	3	9			7	4		
6	1				4			
			8	1	2	6		4
8	2						1	
		3		2		9		8
9			3		6		7	
4		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5811 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ಉಕ್ರೇನ್‌ಗೆ ಬೆಂಬಲ: ಕಿಶಿದಾ

ಟೋಕಿಯೊ (ರಾಯಿಟರ್ಸ್): 'ಉಕ್ರೇನ್‌ಗೆ ನಿರಂತರ ಬೆಂಬಲ ನೀಡಲಾಗುವುದು' ಎಂದು ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ಮಂಗಳವಾರ ತಿಳಿಸಿದ್ದಾರೆ. 'ರಷ್ಯಾ ನಡೆಸುತ್ತಿರುವ ನಿರಂತರ ಆಕ್ರಮಣವನ್ನೂ ನಾನು ಖಂಡಿಸಿದ್ದೇನೆ' ಎಂದೂ ಕಿಶಿದಾ ಸುದ್ದಿಗಾರರಿಗೆ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,306
ಇಂದಿನ ಅಂತ್ಯ	19,342
▲	36
ದಿನದ ಕನಿಷ್ಠ	19,377

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1770(1790)
ಸೋಯಾ (ರಿಫೈನ್ಡ್)	₹925(930)
ಸೂರ್ಯಕಾಂತಿ (ರಿಫೈನ್ಡ್)	₹930(935)
ಪಾಮೋಲಿನ್	₹843(847)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹208-573
ದ್ವಿತಳಿ (ಬಿ.ವಿ)	₹411-706

ಕೊಬ್ಬರಿ ಧಾರಣೆ

ಅರಸೀಕೆರೆ	₹8600-8810
ತಿಪಟೂರು	₹8500-9000
ತುರುವೇಕೆರೆ	₹8800-8800

ಎಕ್ಸ್‌ಟ್ರಾತೇಜ್‌ಗೆ ಕಪೂರ್ ರಾಯಭಾರಿ

ಬೆಂಗಳೂರು: ಇಂಡಿಯನ್ ಆಯಿಲ್ ಕಂಪನಿಯು ತನ್ನ ಇಂಡೇನ್ ಎಕ್ಸ್‌ಟ್ರಾತೇಜ್ ಎಲ್‌ಪಿಜಿ ಬ್ರ್ಯಾಂಡ್‌ಗೆ ಸೆಲೆಬ್ರಿಟಿ ಬಾಣಸಿಗ ಸಂಜೀವ್ ಕಪೂರ್ ಅವರನ್ನು ರಾಯಭಾರಿಯನ್ನಾಗಿ ನೇಮಕ ಮಾಡಿಕೊಂಡಿದೆ.

ಕಂಪನಿಯು ಕಪೂರ್ ಅವರು ಇರುವ ಹೊಸ ಟಿ.ವಿ. ಜಾಹೀರಾತನ್ನು ಕೂಡ ಬಿಡುಗಡೆ ಮಾಡಿದೆ. ಇಂಡಿಯನ್ ಆಯಿಲ್ ಕಂಪನಿಯು ಪ್ರತಿದಿನ 27 ಲಕ್ಷ ಎಲ್‌ಪಿಜಿ ಸಿಲಿಂಡರ್‌ಗಳನ್ನು ಗ್ರಾಹಕರಿಗೆ ತಲುಪಿಸುತ್ತಿದೆ.

ಎಕ್ಸ್‌ಟ್ರಾತೇಜ್ ಎಲ್‌ಪಿಜಿಯು ಕನಿಷ್ಠ ಶೇ 5ರಷ್ಟು ಹೆಚ್ಚು ದಕ್ಷವಾಗಿದೆ ಎಂದು ಕಂಪನಿ ಹೇಳಿದೆ. ಅಲ್ಲದೆ, ಬಳಕೆಯ ಕ್ರಮ ಆಧರಿಸಿ ಇದು ಇನ್ನೂ ಹೆಚ್ಚು ದಕ್ಷವಾಗಬಲ್ಲದು ಎಂದು ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

17ನೇ ವರ್ಷದ ಚಿರಸ್ಮರಣೆ

ಜೆ.ಟಿ.ರಾಮಮೂರ್ತಿ
ನಿಧನ: 30-8-2006
ಒಲವಿನ ಬೀಜಬಿತ್ತಿ ಪ್ರೀತಿವಾತ್ಸಲ್ಯದ ಹೆಮ್ಮರ ಬೆಳೆಸಿದ ಪ್ರೇಮ ಮೂರ್ತಿ ನೀವು
ಪತ್ನಿ: ಶಾಂತ, ಮಕ್ಕಳು ಮತ್ತು ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀನಗರ, ಬೆಂಗಳೂರು.



ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-45,000
ಹಳತು	46,000-48,500
ಪುತ್ತೂರು	
ಕೋಕ	11,000-25,000
ಹೊಸತು	34,000-45,000
ಸಾಗರ	
ಬಿಳಿಗೋಟು	31,200-33,409
ಚಾಲಿ	37,009-38,029
ಕೋಕ	28,111-30,009
ಕೆಂಪುಗೋಟು	32,199-36,811
ರಾಶಿ	44,429-47,899
ಸಿಪ್ಪೆಗೋಟು	21,689-21,689
ಶಿವಮೊಗ್ಗ	
ಬೆಟ್ಟೆ	46,569-52,119
ಗೊರಬಲು	19,008-40,138
ರಾಶಿ	32,869-50,000
ಸರಕು	47,069-81,596
ಸಿದ್ದಾಪುರ	
ಬಿಳಿಗೋಟು	31,669-35,809
ಚಾಲಿ	36,509-41,599
ಕೋಕ	30,519-35,289
ಕೆಂಪುಗೋಟು	33,689-34,319
ರಾಶಿ	43,099-48,499
ತಟ್ಟಿಬೆಟ್ಟೆ	39,209-46,809
ಶಿರಸಿ	
ಬೆಟ್ಟೆ	38,899-47,989
ಬಿಳಿಗೋಟು	28,211-38,369
ಚಾಲಿ	37,589-43,099
ಕೆಂಪುಗೋಟು	32,561-36,902
ರಾಶಿ	46,608-50,699
ಯಲ್ಲಾಪುರ	
ಆಪಿ	56,900-64,869
ಬಿಳಿಗೋಟು	28,899-37,531
ಚಾಲಿ	38,611-43,299
ಕೋಕ	22,122-34,099
ಕೆಂಪುಗೋಟು	29,699-37,131
ರಾಶಿ	48,469-55,139
ತಟ್ಟಿಬೆಟ್ಟೆ	38,900-47,469

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)	
ಮುದ್ರೆಮನೆ	
ಎಪಿ	13,250
ಎಸಿ	7,000
ಆರ್‌ಪಿ	10,000
ಆರ್‌ಸಿ	5,830

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2,000-2,600
ಮಧ್ಯಮ	₹1,600-2,000
ಸಣ್ಣ	₹1,000-1,600

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹122

₹45 ಸಾವಿರ ಕೋಟಿ ಹೂಡಿಕೆ

ಮಾರುತಿ ಸುಜುಕಿ: 8 ವರ್ಷಗಳಲ್ಲಿ ಉತ್ಪಾದನೆ ದುಪ್ಪಟ್ಟು ಮಾಡುವ ಉದ್ದೇಶ

ನವದೆಹಲಿ (ಪಿಟಿಐ): ಆಟೊಮೊಬೈಲ್ ಉದ್ಯಮದಲ್ಲಿ ದೇಶದಲ್ಲಿ ಮೊದಲ ಸ್ಥಾನದಲ್ಲಿ ಇರುವ ಮಾರುತಿ ಸುಜುಕಿ ಇಂಡಿಯಾ, ಮುಂದಿನ ಎಂಟು ವರ್ಷಗಳಲ್ಲಿ ಒಟ್ಟು ₹45 ಸಾವಿರ ಕೋಟಿ ಹೂಡಿಕೆ ಮಾಡುವ ಗುರಿ ಹೊಂದಿದೆ. ಈ ಹೂಡಿಕೆಯ ಮೂಲಕ ವಾಹನ ತಯಾರಿಕಾ ಸಾಮರ್ಥ್ಯವನ್ನು ವರ್ಷಕ್ಕೆ 40 ಲಕ್ಷಕ್ಕೆ ಹೆಚ್ಚಿಸುವ ಉದ್ದೇಶವನ್ನು ಕಂಪನಿ ಹೊಂದಿದೆ.

'ಮಾರುತಿ 3.0' ಯೋಜನೆಯ ಅಡಿಯಲ್ಲಿ ಕಂಪನಿಯು 2030–31ರೊಳಗೆ 28 ಬಗೆಯ ವಾಹನಗಳನ್ನು ಗ್ರಾಹಕರಿಗೆ ಒದಗಿಸುವ ಹಾಗೂ ವಾರ್ಷಿಕ ವಾಹನ ಉತ್ಪಾದನಾ ಸಾಮರ್ಥ್ಯವನ್ನು 20 ಲಕ್ಷದಷ್ಟು ಹೆಚ್ಚಿಸಿಕೊಳ್ಳುವ ಗುರಿ ಹೊಂದಿದೆ.

ಷೇರುದಾರರ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಂಪನಿಯ ಅಧ್ಯಕ್ಷ ಆರ್.ಸಿ. ಭಾರ್ಗವ ಅವರು, 'ಕಂಪನಿಯ ಷೇರುಗಳನ್ನು ಪಾಲು ಮಾಡುವ ಪ್ರಸ್ತಾವನೆಯನ್ನು ನಾವು ಮತ್ತೆ ಪರಿಗಣಿಸಲಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಆರ್‌.ಸಿ. ಭಾರ್ಗವ

ಆದರೆ ಷೇರು ಪಾಲು ಮಾಡುವುದರಿಂದ, ಅದರ ಮೌಲ್ಯವರ್ಧನೆ ಅಥವಾ ಷೇರುದಾರರಿಗೆ ಸಿಗುವ ಲಾಭದ ಮೇಲೆ ಯಾವ ಪರಿಣಾಮವೂ ಇರುವುದಿಲ್ಲ ಎಂದು ಭಾರ್ಗವ ಹೇಳಿದ್ದಾರೆ. ರಾಷ್ಟ್ರೀಯ ಷೇರುಪೇಟೆಯಲ್ಲಿ ಮಾರುತಿ ಸುಜುಕಿ ಷೇರು ಮೌಲ್ಯವು ಮಂಗಳವಾರದ ವಹಿವಾಟಿನ ಅಂತ್ಯಕ್ಕೆ ₹9,634.95 ಆಗಿದೆ.

ಮುಖ್ಯಾಂಶಗಳು

- ಗ್ರಾಹಕರಿಗೆ 2030–31ರೊಳಗೆ 28 ಬಗೆಯ ವಾಹನ ನೀಡುವ ಉದ್ದೇಶ
- ಉತ್ಪಾದನಾ ಸಾಮರ್ಥ್ಯ 20 ಲಕ್ಷದಷ್ಟು ಹೆಚ್ಚಳದ ಗುರಿ

'ಇ.ವಿ. ವಾಹನಗಳನ್ನು ಮಾರುಕಟ್ಟೆಗೆ ತರುವ ವಿಚಾರದಲ್ಲಿ ಇತರ ಕೆಲವು ಕಂಪನಿಗಳಿಗಿಂತ ನಾವು ಹಿಂದುಳಿದಿದ್ದೇವೆ ಎಂಬುದು ನಿಜ. ಅದರ ಅರ್ಥ ನಾವು ಮಾರುಕಟ್ಟೆಗೆ ಬಹಳ ತಡವಾಗಿ ಬರುತ್ತಿದ್ದೇವೆ ಎಂಬುದಲ್ಲ' ಎಂದು ಭಾರ್ಗವ ಹೇಳಿದ್ದಾರೆ.

ಭಾರತದಲ್ಲಿ ಇ.ವಿ.ಗಳಿಗೆ ಇರುವ ಬೇಡಿಕೆಯ ಬಗ್ಗೆ ಕಂಪನಿಯು ಪರಿಶೀಲನೆ ನಡೆಸಿದೆ. 2024–25ರಿಂದ 2030–31ರ ನಡುವೆ ಆರು ಇ.ವಿ. ಮಾದರಿಗಳನ್ನು ಸಿದ್ಧಪಡಿಸುವ ಯೋಜನೆ ಹೊಂದಲಾಗಿದೆ. ಇವು ಕಂಪನಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಸ್ಥಾನವನ್ನು ತಂದುಕೊಡಲಿವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ನಮ್ಮದು ವಾಸ್ತವದಲ್ಲಿ ಸಣ್ಣ ಕಾರುಗಳನ್ನು ತಯಾರಿಸುವ ಕಂಪನಿ. ಆದರೆ ಕೆಲವು ನಿಯಮಗಳು ಹಾಗೂ ಇತರ ಕಾರಣಗಳಿಂದಾಗಿ ಸಣ್ಣ ಕಾರುಗಳಿಗೆ ಬೇಡಿಕೆ ಕಡಿಮೆ ಆಗುತ್ತಿದೆ, ಎಸ್‌ಯುವಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ ಎಂಬ ವಾಸ್ತವಕ್ಕೆ ನಾವು ಹೊಂದಿಕೊಳ್ಳಬೇಕು. ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮ ಮಾರುಕಟ್ಟೆ ಪಾಲನ್ನು ಮತ್ತೆ ಪಡೆದುಕೊಳ್ಳುವ ಯತ್ನ ನಡೆಸಲಾಗುವುದು' ಎಂದು ಭಾರ್ಗವ ಅವರು ಷೇರುದಾರರಿಗೆ ತಿಳಿಸಿದ್ದಾರೆ.

ದೌರ್ಜನ್ಯ ತಡೆಯಲು ಯತ್ನಿಸಿದ ಬಾಲಕನ ಹತ್ಯೆ?

ಪ್ರಯಾಗರಾಜ್ (ಪಿಟಿಐ): ಉತ್ತರ ಪ್ರದೇಶದ ಪ್ರಯಾಗರಾಜ್‌ನ ಖೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 15 ವರ್ಷದ ಬಾಲಕನೊಬ್ಬನನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದೆ. ಸೋದರ ಸಂಬಂಧಿಯ ಮೇಲಿನ ಲೈಂಗಿಕ ದೌರ್ಜನ್ಯ ತಡೆಯಲು ಯತ್ನಿಸಿದ ಕಾರಣಕ್ಕೆ ಬಾಲಕನ ಮೇಲೆ ದಾಳಿ ನಡೆದಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಆದರೆ, ಯಮುನಾ ನಗರ ಪೊಲೀಸ್ ಉಪ ಆಯುಕ್ತ ಸಂತೋಷ್ ಕುಮಾರ್ ಮೀನಾ, ಶಾಲೆಯಲ್ಲಿ ಮಕ್ಕಳ ನಡುವೆ ನಡೆದಿದ್ದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ ಎಂದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಶಿವಮೊಗ್ಗ- ಬೆಂಗಳೂರು ವಿಮಾನ ಹಾರಾಟ ನಾಳೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವಮೊಗ್ಗ ವಿಮಾನ ನಿಲ್ದಾಣದಿಂದ ಗುರುವಾರದಿಂದ (ಆ.31) ವಿಮಾನಯಾನ ಆರಂಭವಾಗಲಿವೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ಇಂಡಿಗೋ ಸಂಸ್ಥೆಯು ವಿಮಾನ ಗುರುವಾರ ಬೆಳಿಗ್ಗೆ 9.50 ಕ್ಕೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಟು 11.05ಕ್ಕೆ ಶಿವಮೊಗ್ಗ ತಲುಪಲಿದೆ. ಮುಂದಿನ ಮೂರು ವಾರಗಳ ವಿಮಾನಯಾನ ಟಿಕೆಟ್ ಮುಂಗಡವಾಗಿ ಬುಕಿಂಗ್ ಆಗಿದೆ' ಎಂದಿದ್ದಾರೆ.

'ಮೊದಲ ಯಾನದಲ್ಲಿ ನಾನು, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದ ಬಿ.ವೈ. ರಾಘವೇಂದ್ರ ಸೇರಿದಂತೆ ಮಲೆನಾಡು ಭಾಗದ ಜನಪ್ರತಿನಿಧಿಗಳು ಇರಲಿದ್ದಾರೆ. ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಇಳಿದ ತಕ್ಷಣ ವಾಟರ್ ಸೆಲ್ಯೂಟ್ ಮೂಲಕ ಸಂಭ್ರಮಾಚರಣೆ ಮಾಡಲಾಗುವುದು' ಎಂದಿದ್ದಾರೆ.

'ಶಿವಮೊಗ್ಗದಿಂದ 15 ಕಿ.ಮೀ. ದೂರದಲ್ಲಿರುವ ಸೋಗಾನೆ ಎಂಬಲ್ಲಿ 779 ಎಕರೆ ಜಾಗದಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗಿದ್ದು, ₹ 450 ಕೋಟಿ ವಿನಿಯೋಗಿಸಲಾಗಿದೆ. ಮಲೆನಾಡು ಭಾಗದಲ್ಲಿ ನಿರ್ಮಾಣವಾಗಿರುವ ಮೊದಲ ವಿಮಾನ ನಿಲ್ದಾಣವಿದು. ಇಲ್ಲಿ ಏರ್‌ಬಸ್ ಮಾದರಿಯ ವಿಮಾನಗಳೂ ಇಳಿಯಬಹುದು. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ ಜಿಲ್ಲೆಗಳ ಜನರಿಗೆ ಇದರಿಂದ ಅನುಕೂಲವಾಗಲಿದೆ' ಎಂದು ಅವರು ವಿವರಿಸಿದ್ದಾರೆ.

'ಶಿವಮೊಗ್ಗದಿಂದ ದೆಹಲಿ, ಮುಂಬೈ, ಹೈದರಾಬಾದ್, ಚೆನ್ನೈ, ಗೋವಾ ಮುಂತಾದ ನಗರಗಳಿಗೆ ನೇರ ವಿಮಾನ ಸಂಪರ್ಕ ಕಲ್ಪಿಸಲು ಪ್ರಯತ್ನಿಸಲಾಗುವುದು. ತಕ್ಷಣಕ್ಕೆ ಬೆಂಗಳೂರಿನಲ್ಲಿ ಈ ಸ್ಥಳಗಳಿಗೆ ಸಂಪರ್ಕ ವಿಮಾನಗಳು ಲಭ್ಯ ಇರಲಿವೆ. ಉಡಾನ್ ಯೋಜನೆಯಡಿ ವಿಮಾನಯಾನ ಸೇವೆ ವಿಸ್ತರಿಸಲು ಟೆಂಡರ್ ಕರೆಯಲಾಗಿದೆ' ಎಂದೂ ಮಾಹಿತಿ ನೀಡಿದ್ದಾರೆ.

ಅಭ್ಯರ್ಥಿಗಳ ಕಣ್ಗಾವಲಿಗೆ ಇನ್ನು 'ಎಐ'

ಒಂದನೇ ಪುಟದಿಂದ...

ಈ ಕಾರಣಕ್ಕೆ ಈ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಲು ತೀರ್ಮಾನಿಸಲಾಗಿದೆ. ಸೆಪ್ಟೆಂಬರ್ ನಂತರ ನಡೆಸುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಈ ವ್ಯವಸ್ಥೆ ಜಾರಿಗೆ ಬರಲಿದೆ.

ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಅಕ್ರಮಗಳನ್ನು ತಡೆಯಲು ಈಗಾಗಲೇ ಹಲವು ಕ್ರಮಗಳು ಜಾರಿಯಲ್ಲಿವೆ. ಸೂಕ್ಷ್ಮ, ಅತಿಸೂಕ್ಷ್ಮವೆಂದು ಗುರುತಿಸಿದ ಕೇಂದ್ರಗಳಲ್ಲಿ ಎಲ್ಲ ಅಭ್ಯರ್ಥಿಗಳನ್ನು ಹೆಚ್ಚುವರಿ ವ್ಯವಸ್ಥೆ ಮೂಲಕ ಪರಿಶೀಲನೆ ನಡೆಸಲಾಗುತ್ತಿದೆ. ಅಸಲಿ ಅಭ್ಯರ್ಥಿ ಬದಲು ನಕಲಿ ವ್ಯಕ್ತಿ ಹಾಜರಾಗುವುದನ್ನು ತಡೆಯಲು ಪರೀಕ್ಷೆ ಆರಂಭಕ್ಕೂ ಮೊದಲೇ ಅಭ್ಯರ್ಥಿಗಳ ನೈಜತೆ ಪರಿಶೀಲನೆಗೆ ಐರಿಸ್ ಸ್ಕ್ಯಾನ್ ಮಾಡಲಾಗುತ್ತದೆ. ದೇಹದ ಯಾವುದೇ ಭಾಗದಲ್ಲಿ ಬ್ಲೂ ಟೂತ್‌ನಂತಹ ಸೂಕ್ಷ್ಮ ಎಲೆಕ್ಟ್ರಾನಿಕ್ ಉಪಕರಣ ಹೊಂದಿದ್ದರೂ ಶೋಧಿಸುವ (ಫ್ರಿಸ್ಕಿಂಗ್) ಸಾಧನವನ್ನು ಕೇಂದ್ರಗಳಲ್ಲಿ ಅಳವಡಿಸಲಾಗುತ್ತಿದೆ. ಇಷ್ಟಾದರೂ ಪರೀಕ್ಷಾ ಅಕ್ರಮಗಳು ನಡೆಯುತ್ತಿರುವುದು ಗಮನಕ್ಕೆ ಬಂದಿರುವುದರಿಂದ ಈ ಕ್ರಮಕ್ಕೆ ಕೆಪಿಎಸ್‌ಸಿ ಮೊರೆ ಹೋಗಿದೆ.

ಪ್ರತ್ಯೇಕ ಟೆಂಡರ್: 'ಅಭ್ಯರ್ಥಿಯ ಮುಖ ಗುರುತಿಸುವಿಕೆ, ಬ್ಲೂ ಟೂತ್ ಬಳಕೆ, ಸಿಸಿಟಿವಿ ಕ್ಯಾಮೆರಾಗಳಿಂದ ವಿಡಿಯೊ ತುಣುಕು ಪ್ರತ್ಯೇಕಿಸುವುದು, ಎಐ ಅಳವಡಿಕೆ, ಮೇಲ್ವಿಚಾರಕರ ದೇಹಕ್ಕೆ ಅತಿಸೂಕ್ಷ್ಮ ಕ್ಯಾಮೆರಾ ಅಳವಡಿಕೆ- ಈ ಎಲ್ಲ ಸುಧಾರಣಾ ಕ್ರಮಗಳನ್ನು ಅಳವಡಿಸಲು ದರ ನಿಗದಿಪಡಿಸಲು ಪ್ರತ್ಯೇಕ ಟೆಂಡರ್ ಆಹ್ವಾನಿಸಲಾಗುವುದು. ಆಯೋಗ ನಡೆಸುವ ಪ್ರತಿ ಪರೀಕ್ಷೆಗೂ ಗುತ್ತಿಗೆ ಪಡೆದ ಏಜೆನ್ಸಿಗಳಿಗೆ ಪ್ರತ್ಯೇಕವಾಗಿ ಕಾರ್ಯಾದೇಶ ನೀಡಲಾಗುವುದು. ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪರೀಕ್ಷಾ ಕೇಂದ್ರಗಳ ಸಂಖ್ಯೆ ನಿರ್ಧರಿಸಲಾಗುತ್ತದೆ' ಎಂದು ವಿಕಾಸ್ ಕಿಶೋರ್ ಸುರಳ್ಕರ್ ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Teachers/ Professors

ಕನ್ನಡ ಮಾಧ್ಯಮ ಪ್ರೌಢಶಾಲೆಗೆ B.A BEd, BSc BEd ಶಿಕ್ಷಕರು ತುರ್ತಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ: 9845559530

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ. 'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366430266, 6366430366

Wanted

ಬೇಕಾಗಿದ್ದಾರೆ : SSLC, PUC, DEGREE ಯುವಕ ಯುವತಿಯರು 15,500/- to 35,000/-. 8861041526, 7022622706

Walk-in

ಬೇಕಾಗಿದ್ದಾರೆ : ಅಟೆಂಡರ್, ಸೆಕ್ಯೂರಿಟಿ ಗಾರ್ಡ್‌ಗಳು. ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

CONNECT

ರಾಜಕೀಯ ನಾಯಕತ್ವದ ಕಾರ್ಯಾಗಾರ
ಜನನಾಯಕರಾಗುವ ಕನಸು ನಿಮ್ಮಲ್ಲಿದೆಯೇ ?
ಹಾಗಾದರೆ ಬನ್ನಿ, ಈ ಶಿಬಿರದಲ್ಲಿ ಪಾಲ್ಗೊಳ್ಳಿ, ನಾವು ನಿಮ್ಮನ್ನು ಭವಿಷ್ಯದ ನಾಯಕರನ್ನಾಗಿ ರೂಪಿಸುತ್ತೇವೆ. ಸಂವಿಧಾನ. ಜನಸೇವೆ, ಕಾನೂನು, ಚುನಾವಣೆ, ನಿಷ್ಕಳಂಕ ವ್ಯಕ್ತಿತ್ವ, ಮೌಲ್ಯಧಾರಿತ ರಾಜಕಾರಣ, ಸಾರ್ವಜನಿಕ ಭಾಷಣ, ವೈಯಕ್ತಿಕ ನಡವಳಿಕೆ, ಮಾನವೀಯ ಮೌಲ್ಯಗಳು, ಸಂವಹನ ಕೌಶಲ್ಯ, ಸಂಸದೀಯ ವ್ಯವಸ್ಥೆ, ಆರ್ಥಿಕ ನಿರ್ವಹಣೆ, ಆಡಳಿತ, ಮಾಧ್ಯಮ, ಸಂಘಟನೆ, ನಾಯಕತ್ವ, ಆರೋಗ್ಯ, ಕ್ರೀಡಾ ಮನೋಭಾವ ಹೀಗೆ ಇನ್ನೂ ಅನೇಕ ವಿಷಯಗಳ ಒಟ್ಟು ಪುಂಜವ ಈ ಕಾರ್ಯಾಗಾರ.
ನೆನಪಿಡಿ – ಸ್ಥಳೀಯ ಸಂಸ್ಥೆಗಳು ಭವಿಷ್ಯದ ಯಶಸ್ಸಿನ ಹೆಬ್ಬಾಗಿಲು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಮತ್ತು ಬಿಬಿಎಂಪಿ ಚುನಾವಣೆಗಳಲ್ಲಿ ಸ್ಪರ್ಧಿಸುವವರಿಗೆ ಸುವರ್ಣಾವಕಾಶ.
ಸೋಮವಾರ, ಮಂಗಳವಾರ 25, 26 ಸೆಪ್ಟೆಂಬರ್ 2023
ಸ್ಥಳ : ಬಾಪೂ ಸಭಾಂಗಣ, ಗಾಂಧಿ ಭವನ, ಶಿವಾನಂದ ಸರ್ಕಲ್, ಬೆಂಗಳೂರು ಆಸಕ್ತರು ಸಂಪರ್ಕಿಸಿ :: ಭಾರತೀಯ ರಾಜಕೀಯ ನಾಯಕತ್ವ ವಿಕಸನ ಸಂಸ್ಥೆ # 62, ಡಿ.ಟಿ. ರಸ್ತೆ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03
ಮೊ: 63645 18936 ಇಮೇಲ್: vikasanapolitics@gmail.com

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರೆಂಟಲ್ ಪ್ರಾಪರ್ಟೀಸ್

Accommodation Available

House

ಮಲ್ಲೇಶ್ವರನಲ್ಲಿ ಒಂದು 3ಬಿಹೆಚ್‌ಕೆ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಲಭ್ಯವಿದೆ. ಬ್ರೋಕರ್ಸ್ ಕ್ಷಮಿಸಿ. 60,000/- ಸ್ವಲ್ಪ ನೆಗೊಶಿಯೇಬಲ್. ಸಂಪರ್ಕಿಸಿ: 9538523028

ಪ್ರವಾಸ

Travel

22.11.2023 ವಿಜಯವಾಡ, ಭದ್ರಾಚಲಂ,ವಾಸವಿಪೆನುಗೊಂಡ, ಕಲ್ಕತ್ತಾ,ಗಂಗಾಸಾಗರ್, ಪೂರಿಜಗನ್ನಾಥ್,ಕೊನಾರ್ಕ್, ಭುವನೇಶ್ವರ್.11.12.2023, 16ದಿನಗಳ ಅಷ್ಟಜ್ಯೋತಿರ್ಲಿಂಗಗಳು, ಮಹಾರಾಷ್ಟ್ರ,ಮಧ್ಯಪ್ರದೇಶ, ಗುಜರಾತ್. ಸಂಪರ್ಕಿಸಿ:ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು-70. 9342287551, 8050629305

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 11 ದಿನಗಳು. 28.09.2023 ಮಹಾಕಾಳೇಶ್ವರ,ಓಂಕಾರೇಶ್ವರ್ ಸೋಮನಾಥ್ ನಾಗೇಶ್ವರ,ದ್ವಾರಕಾ ಅಹಮದಾಬಾದ್ ಇತ್ಯಾದಿ 18000. 16.11.2023 ಗುರುವಾಯೂರು ತ್ರಿವೇಂಡ್ರಮ್ ಮುನ್ನಾರ್,ಕಾಲಡಿ,ಕೊಚ್ಚಿನ್ ಕನ್ಯಾಕುಮಾರಿ,ಪಳನಿ 9600 7 ದಿನಗಳು. 9448390735 9449721678

8 ದಿನಗಳ ಕಾಶಿಯಾತ್ರೆ. 12ದಿನಗಳ ಚಾರ್‌ಧಾಮ್‌ಯಾತ್ರೆ. 12 ದಿನಗಳ ನೇಪಾಳ,ಮುಕ್ತಿನಾಥ್. 10 ದಿನಗಳ ಗುಜರಾತ್. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467 9740228186

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/9 ನೇಪಾಳ ಮುಕ್ತಿನಾಥ್, ಪಶುಪತಿನಾಥ. 7/9 ರಾಮೇಶ್ವರ, ಕನ್ಯಾಕುಮಾರಿ .11/9 ಪುರಿ ಜಗನ್ನಾಥ್, ಭುನೇಶ್ವರ.9964527782, 9591017782

ಭವಿಷ್ಯ

Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

DH DECCAN HERALD
Classifieds
More value, more impact
ಪ್ರಜಾವಾಣಿ
REAL ESTATE
The 1st thing to do when
Selling/Buying your Property
#1
PLACE YOUR AD HERE
www.dhclassifieds.com
BOOK NOW
Book your ad with us now!
For more details contact:
+91 9731810277 | +91 9900428036 |
+91 9845114560 | +91 9901641752 | |
+91 9886213331 | 080- 45557163/164

ಮುಂಬೈ, ಪುಣೆ ಗಣೇಶೋತ್ಸವ ವೀಕ್ಷಣೆಗೆ ಪ್ಯಾಕೇಜ್

ಮುಂಬೈ: ಮುಂಬೈ ಮತ್ತು ಪುಣೆಯಲ್ಲಿ ಸೆಪ್ಟೆಂಬರ್ 19ರಿಂದ 28ರವರೆಗೆ ವಿಜೃಂಭಣೆಯಿಂದ ಗಣೇಶೋತ್ಸವಗಳು ಜರುಗಲಿದ್ದು, ಪ್ರಸಿದ್ಧ ಗಣೇಶ ಮಂಡಳಗಳು ಆಯೋಜಿಸುವ ಉತ್ಸವಗಳ ವೀಕ್ಷಣೆಗೆ ಅನುಕೂಲ ಕಲ್ಪಿಸಲು ಮಹಾರಾಷ್ಟ್ರ ಸರ್ಕಾರದ ಪ್ರವಾಸೋದ್ಯಮ ನಿರ್ದೇಶನಾಲಯ ಪ್ಯಾಕೇಜ್ ಟೂರ್ ಆಯೋಜಿಸಿದೆ.

ಈ ಪ್ರವಾಸಿ ಕಾರ್ಯಕ್ರಮವನ್ನು ಸುಗಮವಾಗಿ ನಡೆಸುವ ಜವಾಬ್ದಾರಿಯನ್ನು ರಾಜ್ಯದ 'ಟೂರಿಸಂ ಗೈಡ್ ಅಸೋಸಿಯೇಷನ್'ಗೆ ಸರ್ಕಾರ ವಹಿಸಿದೆ.

'ಇದೊಂದು ವಿಶಿಷ್ಟ ಕಾರ್ಯಕ್ರಮವಾಗಿದ್ದು, ಇತಿಹಾಸ, ಸಂಸ್ಕೃತಿ, ಆಹಾರ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ತಿಳಿದುಕೊಳ್ಳಲು ಪ್ರವಾಸಿಗರಿಗೆ ನೆರವಾಗುತ್ತದೆ' ಎಂದು ಟೂರಿಸಂ ಗೈಡ್ ಅಸೋಸಿಯೇಷನ್ ಅಧ್ಯಕ್ಷ ಫರ್ಹಾನ್ ಶೇಖ್ ಪ್ರತಿಕ್ರಿಯಿಸಿದ್ದಾರೆ.

ಮುಂಬೈ ಮತ್ತು ಪುಣೆಯಲ್ಲಿ ತಲಾ 6ರಂತೆ ಒಟ್ಟು 12 ಪ್ರಸಿದ್ಧ ಮಂಡಳಗಳು ಆಯೋಜಿಸುವ ಉತ್ಸವಗಳ ವೀಕ್ಷಣೆಗೆ ಈ ಪ್ಯಾಕೇಜ್ ಟೂರ್‌ನಲ್ಲಿ ಅವಕಾಶ ದೊರೆಯಲಿದೆ.

'ನಿತ್ಯ ಎರಡು ಬ್ಯಾಚ್‌ಗಳಂತೆ ಪ್ರವಾಸ ಕಾರ್ಯ ಜರುಗಲಿದ್ದು, ಪ್ರತಿ ಬ್ಯಾಚ್‌ನಲ್ಲಿ ಗರಿಷ್ಠ 20 ಪ್ರವಾಸಿಗಳು ಇರುತ್ತಾರೆ. ಭಾರತೀಯ ಪ್ರವಾಸಿಗಳಿಗೆ ತಲಾ ₹ 300 ಹಾಗೂ ವಿದೇಶಿ ಪ್ರವಾಸಿಗರಿಗೆ ₹ 700 ಶುಲ್ಕ ನಿಗದಿಪಡಿಸಲಾಗಿದೆ. ಪ್ರವಾಸಕ್ಕೆಂದು ಎ.ಸಿ ಬಸ್ ವ್ಯವಸ್ಥೆ ಮಾಡಲಾಗುತ್ತದೆ, ಪ್ರತಿ ಬಸ್‌ನಲ್ಲೂ ಪ್ರವಾಸಿ ಮಾರ್ಗ ದರ್ಶಕರು ಇರುತ್ತಾರೆ' ಎಂದು ಶೇಖ್ ಹೇಳಿದ್ದಾರೆ.

ಪ್ರವಾಸಿ ಕಾರ್ಯಕ್ರಮದ ಸಂಘಟಕರು, ಆನ್‌ಲೈನ್ ವೇದಿಕೆಯಾದ 'ಬುಕ್‌ಮೈಶೋ' ಜತೆಗೂ ಒಪ್ಪಂದ ಮಾಡಿಕೊಂಡಿದ್ದಾರೆ.

ಮುಂಬೈ ಧಾರಣೆ

ಶೇಂಗಾ

29–8–2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12400-12500
ದಪ್ಪ ಮಧ್ಯಪ್ರದೇಶ(ಹೊಸ)	13100-13200
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1780(1800)
ಒಂದು ವಾರದ ಡೆಲಿವರಿ	1775(1795)
ಸೋಯಾ ಕಚ್ಚಾ	870(875)
ಪಾಮ್ ವಾರದ ಡೆಲಿವರಿ	841(845)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58700 (58450)
ಬೆಳ್ಳಿ ಕೆ.ಜಿ 73800 (73600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರೀನಿವಾಸ್, ಊರು ತಿಳಿಸಿಲ್ಲ

ಪ್ರಶ್ನೆ: ನಾನು ಷೇರು ಮಾರುಕಟ್ಟೆಯ ಡಿರೈವೇಟಿವ್ಸ್ ವಿಭಾಗದ ಆಪ್ಷನ್‌ನಲ್ಲಿ ವಹಿವಾಟು ಮಾಡುತ್ತಿರುತ್ತೇನೆ ಮತ್ತು ನನ್ನ ಒಟ್ಟಾರೆ ವಹಿವಾಟು ₹2 ಕೋಟಿಗಿಂತಲೂ ಕಡಿಮೆ ಇದೆ. ನನ್ನ ಪ್ರಶ್ನೆಗಳು ಹೀಗಿವೆ: 1) ಆಪ್ಷನ್‌ನಿಂದ ಬರುವ ಆದಾಯ ಸ್ಪೆಕ್ಯೂಲೇಟಿವ್ ಅಡಿ ಬರದಿರುವುದರಿಂದ ನಾನು ಪ್ರಿಸಂಪ್ಟಿವ್ ತೆರಿಗೆ ವಿಧಾನವನ್ನು ಆಯ್ಕೆ ಮಾಡಿಕೊಳ್ಳಬಹುದೇ? 2) ನನಗೆ ಆಪ್ಷನ್‌ನಿಂದ ಬರುವ ಆದಾಯವನ್ನು ವ್ಯವಹಾರದ ಶೇ 6 ಅಥವಾ ಶೇ 8 ಎಂದು ಪರಿಗಣಿಸಿ ತೆರಿಗೆ ಲೆಕ್ಕಹಾಕಬಹುದೇ? 3) ನನಗೆ ಆಪ್ಷನ್‌ನಿಂದ ಬರುವ ಆದಾಯ, ವ್ಯವಹಾರದ ಶೇ 8ಕ್ಕಿಂತಲೂ ಅಧಿಕವಿದ್ದಾಗಲೂ ಸಹ, ಶೇ 8 ಎಂದೇ ಪರಿಗಣಿಸಿ ಲೆಕ್ಕಹಾಕುವುದರಿಂದ ಕಾನೂನಿನ ತೊಡಕೇನೂ ಇಲ್ಲವೇ? 4) ಮಾರ್ಚ್ 15ಕ್ಕೆ ಮುಂಗಡ ತೆರಿಗೆ ಕಟ್ಟಿದರೆ ಸಾಕೇ? ಪ್ರತಿ ತ್ರೈಮಾಸಿಕ ಅವಧಿಗೊಮ್ಮೆ ಮುಂಗಡ ತೆರಿಗೆ ಕಟ್ಟುವ ಅವಶ್ಯಕತೆ ಇಲ್ಲವೇ? 5) ಇತ್ತೀಚೆಗೆ ಆಪ್ಷನ್ಸ್ ವ್ಯವಹಾರ ಲೆಕ್ಕಹಾಕುವ ವಿಧಾನ (ಲಾಭ ನಷ್ಟದ ಒಟ್ಟು ಮೊತ್ತ) ಬದಲಾಗಿದೆ ಎಂದು ಓದಿದ್ದೇನೆ. ಸರಿಯೇ?

ಉತ್ತರ: ನಿಮ್ಮ ಪ್ರಶ್ನೆಯು ಆದಾಯ ತೆರಿಗೆ ಕಾಯ್ದೆಯ 'ಸೆಕ್ಷನ್ 44ಎಡಿ' ಅಡಿ ಬರುವ ವ್ಯವಹಾರಗಳಿಗೆ ಸಂಬಂಧಿಸಿದೆ. ಫ್ಯೂಚರ್ಸ್ ಮತ್ತು ಆಪ್ಷನ್ಸ್ ವಹಿವಾಟು ಸಾಮಾನ್ಯ ವ್ಯಾಪಾರದ ಪರಿಧಿಯಲ್ಲಿ ಬರುವ ಕಾರಣ ಕೆಲವು ನಿಬಂಧನೆಗಳಿಗೆ ಒಳಪಟ್ಟು ತಮ್ಮ ಆದಾಯ ತೆರಿಗೆ ವಿವರಗಳನ್ನು ಈ ಸೆಕ್ಷನ್ ಅಡಿಯಲ್ಲಿ ಉಲ್ಲೇಖಿಸಿರುವ ಪ್ರಕಾರದಲ್ಲಿ ಸಲ್ಲಿಸಬಹುದು.

ಕೇಂದ್ರ ಸರ್ಕಾರವು 2023ರ ಬಜೆಟ್‌ನಲ್ಲಿ, ಆರ್ಥಿಕ ವರ್ಷ 2023-24ರಿಂದ ಅನ್ವಯಿಸಿ, ಈ ವಹಿವಾಟಿನ ಸಾಮಾನ್ಯ ಮಿತಿಯನ್ನು ₹3 ಕೋಟಿಗೆ ವಿಸ್ತರಿಸಿದೆ. ಆದರೆ ಬ್ಯಾಂಕಿಂಗ್ ಮಾಧ್ಯಮದ ಮೂಲಕ (ನಗದೇತರ) ವ್ಯವಹಾರವಿದ್ದ ಸಂದರ್ಭಗಳಲ್ಲಿ ಸೆಕ್ಷನ್ 44ಎಡಿ ಅಡಿ ಸಿಗುವ ಸೌಲಭ್ಯವನ್ನು ಪಡೆಯಲು ₹10 ಕೋಟಿಗೂ ಮೀರಿರದ ವ್ಯವಹಾರ ಹೊಂದಿರಬೇಕು. ಒಟ್ಟು ಪಾವತಿ ಅಥವಾ ಒಟ್ಟು ಸ್ವೀಕೃತಿಯ ಶೇ 5ರೊಳಗೆ ನಗದು ಪಾವತಿ ಅಥವಾ ಸ್ವೀಕೃತಿ ವ್ಯವಹಾರವಿದ್ದರೆ ಆ ವ್ಯವಹಾರವನ್ನು ಒಟ್ಟಾರೆ ಬ್ಯಾಂಕಿಂಗ್ ಮಾಧ್ಯಮದ ವ್ಯವಹಾರವೆಂದು ತಿಳಿಯಲಾಗುತ್ತದೆ.

ಹೀಗಾಗಿ ಯಾವುದೇ ನಿರ್ದಿಷ್ಟ ವ್ಯವಹಾರ ಮಾಡುವ ತೆರಿಗೆದಾರರು ಅಥವಾ ನಗದೇತರ ಮಾಧ್ಯಮದ ಮೂಲಕ ವ್ಯವಹಾರ ನಡೆಸುವವರು ಕ್ರಮಾಗತವಾಗಿ ಮೇಲಿನ ಮಿತಿಯೊಳಗೆ ಇರುವಷ್ಟು ಸಮಯ ಪ್ರಿಸಂಪ್ಟಿವ್ ತೆರಿಗೆಯ ಅಡಿಯಲ್ಲಿ ವಿವರ ಸಲ್ಲಿಸಬಹುದು. ವ್ಯವಹಾರ ಅದಕ್ಕಿಂತಲೂ ಹೆಚ್ಚಾದಾಗ ಪ್ರತ್ಯೇಕವಾಗಿ ತೆರಿಗೆ ಸಂಬಂಧಿತ ಆಡಿಟ್ ಮಾಡಿಸುವ ಅಗತ್ಯ ಇರುತ್ತದೆ. ನೀವು ನೀಡಿರುವ ಮಾಹಿತಿಯಂತೆ, ಒಟ್ಟಾರೆ ವ್ಯವಹಾರ ₹2 ಕೋಟಿಗಿಂತ ಕಡಿಮೆ ಇರುವುದರಿಂದ ಹಾಗೂ ನಿಮಗೆ ಮುಂದೆ ವಿವರಿಸುವ ಸನ್ನಿವೇಶಗಳು ಅನುಕೂಲಕರವೆಂದು ಕಂಡುಬಂದರೆ ಮಾತ್ರ ಈ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಿ. ಆದಾಯ ತೆರಿಗೆ ಕಾನೂನಿನ ಅಡಿ ಉಲ್ಲೇಖಿಸಿರುವ ವೃತ್ತಿಯನ್ನು ನಿರ್ವಹಿಸುವವರು, ಕಮಿಷನ್ ದಲ್ಲಾಳಿಗಳು, ಏಜೆಂಟ್ ವ್ಯವಹಾರ ನಡೆಸುವವರು, ಸರಕು ಸಾಗಣೆ ವಾಹನ ಹೊಂದಿದವರು ನಿರ್ದಿಷ್ಟ ವ್ಯವಹಾರದ ಪರಿಧಿಯಲ್ಲಿ ಬರುವುದಿಲ್ಲ ಹಾಗೂ ಈ ಸೆಕ್ಷನ್ ಅಡಿ ಪ್ರಯೋಜನ ಪಡೆಯುವಂತಿಲ್ಲ.

ಘೋಷಿಸುವ ಆದಾಯಕ್ಕೆ ಸಂಬಂಧಿಸಿ ಹೇಳುವುದಾದರೆ, ಬ್ಯಾಂಕಿಂಗ್ ಮಾಧ್ಯಮದ ಮೂಲಕ ನಡೆಯುವ ವ್ಯವಹಾರವಾದರೆ ತೆರಿಗೆದಾರರಿಗೆ ವಹಿವಾಟಿನ ಶೇ 6ರಷ್ಟು ಹಾಗೂ ಇತರ ವರ್ಗದಲ್ಲಿರುವ ತೆರಿಗೆದಾರರಿಗೆ ವಹಿವಾಟಿನ ಶೇ 8ರಷ್ಟು ಕನಿಷ್ಠ ಲಾಭಾಂಶವೆಂದು ನಿಗದಿಪಡಿಸಿ ವಿವರ ಸಲ್ಲಿಸುವ ಅವಕಾಶವಿದೆ. ಅಧಿಕ ಆದಾಯವನ್ನು ತೆರಿಗೆದಾರರು ಘೋಷಿಸುವುದಕ್ಕೆ ಯಾವುದೇ ತೊಂದರೆ ಇಲ್ಲ. ಇಂತಹ ಸಂದರ್ಭದಲ್ಲಿ ಪೂರ್ಣ ಪ್ರಮಾಣದ ಲೆಕ್ಕ ಪುಸ್ತಕ ನಿರ್ವಹಣೆಯಿಂದ ತೆರಿಗೆದಾರರಿಗೆ ವಿನಾಯಿತಿ ನೀಡಲಾಗಿದೆ. ಮಾತ್ರವಲ್ಲ ಈ ಬಗ್ಗೆ ನಡೆದ ಕೆಲವು ತೆರಿಗೆ ವ್ಯಾಜ್ಯಗಳಲ್ಲಿ, ತೆರಿಗೆದಾರರಿಗೆ ಕಾನೂನಾತ್ಮಕವಾಗಿ ನೀಡಲಾದ ಅವಕಾಶ ಇದಾದ ಕಾರಣ, ಇದರಂತೆ ಆದಾಯ ಘೋಷಿಸಬಹುದು.

ಒಂದು ವೇಳೆ ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿ, ಈ ಸೆಕ್ಷನ್ ಅಡಿ ನೀವು ತೆರಿಗೆ ವಿವರ ಸಲ್ಲಿಸಲು ಆರಂಭಿಸಿ, ಕ್ರಮಾಗತ ಯಾವುದೇ ಹಿಂದಿನ 5 ವರ್ಷಗಳಲ್ಲಿ ಇದಕ್ಕಿಂತ ಕಡಿಮೆ (ಶೇ 6 ಅಥವಾ ಶೇ 8) ಆದಾಯ ಘೋಷಿಸಿದರೆ, ಆಗ ಅಲ್ಲಿಂದ ಮುಂದಿನ 5 ವರ್ಷಗಳ ಕಾಲ ಈ ಸೆಕ್ಷನ್ ಅಡಿ ಮತ್ತೆ ಪ್ರಯೋಜನ ಪಡೆಯಲಾಗದು ಹಾಗೂ ಯಾವುದೇ ಆದಾಯ ಘೋಷಿಸಲು ನೀವು ತಯಾರಿದ್ದರೂ ಕಡ್ಡಾಯವಾಗಿ ಲೆಕ್ಕಪರಿಶೋಧನೆಗೊಳಪಡಿಸಿ ವಿವರ ಸಲ್ಲಿಸಬೇಕು. ಮಾತ್ರವಲ್ಲ ಅಂತಹ ಅವಧಿಯಲ್ಲಿ ನೀವು ಪೂರ್ಣ ಪ್ರಮಾಣದ ವಾರ್ಷಿಕ ಲೆಕ್ಕ ಪುಸ್ತಕಗಳನ್ನೂ ನಿರ್ವಹಿಸಬೇಕಾಗುತ್ತದೆ. ಹೀಗಾಗಿ ಈ ಸೆಕ್ಷನ್ ಲಾಭ ಪಡೆಯುವವರಿಂದ ಸರ್ಕಾರವೂ ಬದ್ಧತೆಯನ್ನು ಅಪೇಕ್ಷಿಸುತ್ತದೆ. ಹೀಗಾಗಿ ಫ್ಯೂಚರ್ಸ್ ಹಾಗೂ ಆಪ್ಷನ್ಸ್ ವ್ಯವಹಾರದಲ್ಲಿ ಮುಂದಿನ ಲಾಭ-ನಷ್ಟ ಊಹಿಸುವುದು ಕಷ್ಟವಿರುವ ಕಾರಣ, ಯಾವುದೋ ಕಾರಣಕ್ಕೆ ತುಂಬಾ ನಷ್ಟವಾದ ಸಂದರ್ಭದಲ್ಲಿ ಸಹಜವಾಗಿ ಅದನ್ನು ಮುಂದಿನ ವರ್ಷಗಳಿಗೆ ಮುಂದೂಡಬೇಕಾದ ಪರಿಸ್ಥಿತಿ ಎದುರಾದರೆ ನೀವು ಈ ಸೆಕ್ಷನ್ ಅಡಿಯಿಂದ ಹೊರಬರಬೇಕಾಗುತ್ತದೆ. ಇಲ್ಲವಾದರೆ ಲಾಭವಿಲ್ಲದಿದ್ದರೂ ವಹಿವಾಟಿನ ಮೇಲಿನ ನಿಶ್ಚಿತ ಆದಾಯಕ್ಕೆ ವಿನಾ ಕಾರಣ ತೆರಿಗೆ ಕಟ್ಟಬೇಕಾಗುತ್ತದೆ.

ನೀವು ಪ್ರತಿ ತ್ರೈಮಾಸಿಕ ಮುಂಗಡ ತೆರಿಗೆ ಅನ್ವಯವಾಗುತ್ತದೆಯೇ ಅಥವಾ ಕೊನೆಯ ಕಂತಿನ ಮುಂಗಡ ತೆರಿಗೆ ಮಾತ್ರ ಅನ್ವಯವಾಗುತ್ತದೆಯೇ ಎನ್ನುವ ಬಗ್ಗೆ ಕೇಳಿರುತ್ತೀರಿ. ಸೆಕ್ಷನ್ 211(11)(ಬಿ) ಪ್ರಕಾರ ಪ್ರಿಸಂಪ್ಟಿವ್ ತೆರಿಗೆ ಆಯ್ಕೆ ಮಾಡಿರುವ ತೆರಿಗೆದಾರರು ಇಡೀ ವರ್ಷದ ಅವಧಿಯ ತೆರಿಗೆಯನ್ನು ಮಾರ್ಚ್ 15ರೊಳಗೆ ಪಾವತಿಸುವುದಕ್ಕೆ ಅವಕಾಶವಿದೆ. ಇನ್ನು ಆಪ್ಷನ್ಸ್‌ಗೆ ಸಂಬಂಧಪಟ್ಟು ವಹಿವಾಟಿನ ಲೆಕ್ಕ ಹಾಕುವಾಗ, ಖರೀದಿ ಹಾಗೂ ಮಾರಾಟದ ವಹಿವಾಟಿನಲ್ಲಿ ಬರುವ ವ್ಯತ್ಯಾಸ ಇವೆರಡನ್ನೂ ಒಟ್ಟಾಗಿ ಪರಿಗಣಿಸಲಾಗುತ್ತದೆ. ಹೀಗಾಗಿ ಲಾಭ ಹಾಗೂ ನಷ್ಟದ ಮೌಲ್ಯವನ್ನು ಒಟ್ಟಾಗಿ ವಹಿವಾಟೆಂದು ಲೆಕ್ಕಹಾಕಲಾಗುತ್ತದೆ. ಹಿಂದೆ ಆಪ್ಷನ್ಸ್ ಮಾರಾಟದ ಸಂದರ್ಭದಲ್ಲಿ ಗಳಿಸಿದ ಪ್ರೀಮಿಯಂ ಮೊತ್ತವನ್ನೂ ಅಂತಹ ಮೊತ್ತಕ್ಕೆ ಸೇರಿಸಿ ಒಟ್ಟು ವ್ಯವಹಾರ ಲೆಕ್ಕ ಹಾಕಲಾಗುತ್ತಿತ್ತು. ಹೀಗಾಗಿ ವಹಿವಾಟು ಅನಗತ್ಯ ವೃದ್ಧಿಯಾಗಿ ₹10 ಕೋಟಿ ಮೀರಿದ ಸಂದರ್ಭದಲ್ಲಿ ಆಡಿಟ್ ಮಾಡಿಸುವ ವ್ಯಾಪ್ತಿಗೊಳಪಡುತ್ತಿದ್ದರು. ನಿಮ್ಮ ವಿಚಾರದಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ಮತ್ತಷ್ಟು ವಿಚಾರಗಳನ್ನು ಪರಿಣತರಲ್ಲಿ ಸಮಾಲೋಚಿಸಿ ಬಗೆಹರಿಸಿಕೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಇಂದಿನಿಂದ: ಬಾಬರ್ ಆಜಂ ಪಡೆಗೆ ನೇಪಾಳ ಸವಾಲು

ಭಾರತ–ಪಾಕ್ ಮೂರು ಬಾರಿ ಸೆಣಸು?

ಕೊಲಂಬೊ (ಪಿಟಿಐ): ಬುಧವಾರದಿಂದ ಶುರುವಾಗಲಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಮೂರು ಬಾರಿ ಮುಖಾಮುಖಿಯಾಗುವ ಸಾಧ್ಯತೆ ಇದೆ. ಇದರಿಂದಾಗಿ ಕ್ರಿಕೆಟ್‌ಪ್ರಿಯರಿಗೆ ಭರ್ಜರಿ ರಸದೌತಣ ಸಿಗುವ ನಿರೀಕ್ಷೆ ಮೂಡಿದೆ.

ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಆಡಲಿವೆ. ಎರಡು ಗುಂಪುಗಳಲ್ಲಿ ಈ ತಂಡಗಳನ್ನು ವಿಂಗಡಿಸಲಾಗಿದೆ. ಭಾರತ ಹಾಗೂ ಪಾಕ್ ತಂಡಗಳು ಎ ಗುಂಪಿನಲ್ಲಿವೆ. ಇದೇ ಗುಂಪಿನಲ್ಲಿ ನೇಪಾಳ ಕೂಡ ಇದೆ. ಬಿ ಗುಂಪಿನಲ್ಲಿ ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ಶ್ರೀಲಂಕಾ ತಂಡಗಳಿವೆ. ಪ್ರತಿ ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಗಳಿಸುವ ತಂಡಗಳು ಸೂಪರ್ ಫೋರ್ ಸುತ್ತಿನಲ್ಲಿ ಮುಖಾಮುಖಿಯಾಗಲಿವೆ.

ಎ ಗುಂಪಿನ ಬಲಾಢ್ಯ ತಂಡಗಳಾದ ಭಾರತ ಮತ್ತು ಪಾಕ್ ಸೆ.2ರಂದು ಮುಖಾಮುಖಿಯಾಗಲಿವೆ. ಈ ಎರಡೂ ತಂಡಗಳ ಮುಂದೆ ನೇಪಾಳ ಜಯಿಸುವ ಸಾಧ್ಯತೆ ಕಡಿಮೆ. ಆದ್ದರಿಂದ ಇವೇ ಎರಡು ತಂಡಗಳು ಸೂಪರ್ ನಾಲ್ಕರ ಹಂತದಲ್ಲಿ ಹಣಾಹಣಿ ನಡೆಸುವುದು ಖಚಿತ. ನಂತರ ಫೈನಲ್ ಕೂಡ ಪ್ರವೇಶಿಸುವ ಸಾಧ್ಯತೆಯೂ ಇದೆ.

ಬುಧವಾರ ನಡೆಯುವ ಟೂರ್ನಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡವು ನೇಪಾಳ ತಂಡವನ್ನು ಎದುರಿಸಲಿದೆ.

ವಿಶ್ವಕಪ್ ಟೂರ್ನಿಗೆ ಪೂರ್ವಾಭ್ಯಾಸ: ಅಕ್ಟೋಬರ್ -ನವೆಂಬರ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೂ ಏಷ್ಯಾ ಕಪ್ ಪೂರ್ವಾಭ್ಯಾಸದ ವೇದಿಕೆಯಾಗಿದೆ. ಈ ಟೂರ್ನಿಯಲ್ಲಿ ಆಡುತ್ತಿರುವ ಆರು ತಂಡಗಳ ಪೈಕಿ ನೇಪಾಳ ಮಾತ್ರ ವಿಶ್ವಕಪ್‌ಗೆ ಅರ್ಹತೆ ಗಳಿಸಿಲ್ಲ. ಉಳಿದ ಐದು ತಂಡಗಳಿಗೆ ಮಹತ್ವದ್ದಾಗಿದೆ.

ಭಾರತ ತಂಡವು ಏಷ್ಯಾಕಪ್ ನಂತರ ವಿಶ್ವಕಪ್‌ನಲ್ಲಿ ಆಡುವ


ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಬಾಬರ್ ಆಜಂ –ಎಎಫ್‌ಪಿ ಚಿತ್ರ

ತಂಡವನ್ನು ಖಚಿತಗೊಳಿಸುವ ಸಾಧ್ಯತೆ ಇದೆ. ಗಾಯಕ್ಕೆ ಚಿಕಿತ್ಸೆ ಪಡೆದು ಸುದೀರ್ಘ ಸಮಯದ ನಂತರ ತಂಡಕ್ಕೆ ಮರಳಿರುವ ಕೆಲವು ಆಟಗಾರರಿಗೆ ಇದು ಪರೀಕ್ಷೆಯ ಟೂರ್ನಿಯಾಗಿದೆ. ಅವರ ಮೇಲೆ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರೋಹಿತ್ ಶರ್ಮಾ ದೃಷ್ಟಿ ನೆಟ್ಟಿದ್ದಾರೆ.

ಶ್ರೇಯಸ್ ಅಯ್ಯರ್ ಈ ಟೂರ್ನಿಯ ಮೊದಲ ಪಂದ್ಯದಲ್ಲಿಯೇ ಕಣಕ್ಕಿಳಿಯುವ ಸಾಧ್ಯತೆಯೂ ಇದೆ. ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಪ್ರಸಿದ್ಧ ಕೃಷ್ಣ ಅವರ ಮೇಲೆ ಅಪಾರ ನಿರೀಕ್ಷೆ ಮೂಡಿದೆ. ಇಬ್ಬರೂ ದೀರ್ಘ ಸಮಯ ವಿಶ್ರಾಂತಿಯ ನಂತರ ಇತ್ತೀಚೆಗೆ ಐರ್ಲೆಂಡ್‌ನಲ್ಲಿ ಟಿ20 ಸರಣಿಯಲ್ಲಿ ಆಡಿ ಬಂದಿದ್ದಾರೆ.

ವರ್ಷದಿಂದ ವರ್ಷಕ್ಕೆ ಉತ್ತಮ ಸಾಧನೆ ಮಾಡುತ್ತಿರುವ ಅಫ್ಗಾನಿಸ್ತಾನ ಮತ್ತು ಬಾಂಗ್ಲಾ ತಂಡಗಳು ತಮ್ಮ ಎದುರಾಳಿಗಳಿಗೆ ಕಠಿಣ ಪೈಪೋಟಿ ಯೊಡ್ಡುವ ಛಲದಲ್ಲಿವೆ.

ಪಂದ್ಯ ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಹಾಟ್‌ಸ್ಟಾರ್

ಮೊದಲೆರಡು ಪಂದ್ಯಗಳಿಗೆ ರಾಹುಲ್ ಅಲಭ್ಯ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರು ಏಷ್ಯಾಕಪ್ ಟೂರ್ನಿಯ ಮೊದಲೆರಡು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ರಾಹುಲ್ ಹೋದ ಮೇ ತಿಂಗಳಿನಲ್ಲಿ ತೊಡೆ ಸ್ನಾಯುವಿನ ಗಾಯಕ್ಕೆ ಶಸ್ತ್ರಚಿಕಿತ್ಸೆ ಪಡೆದಿದ್ದರು. ಅದರ ನಂತರ ವಿಶ್ರಾಂತಿ ಮತ್ತು ಪುನಶ್ಚೇತನ ಹಾಗೂ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರವುಳಿದಿದ್ದರು. ಇದೀಗ ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಆಯ್ಕೆಯಾಗಿದ್ದರು.

ಆದರೆ ಸ್ನಾಯುವಿನಲ್ಲಿ ಸಣ್ಣ ಪ್ರಮಾಣದ ನೋವು ಇದ್ದ ಕಾರಣ ಅವರಿಗೆ ಮೊದಲೆರಡು ಪಂದ್ಯಗಳಿಂದ ವಿಶ್ರಾಂತಿ ನೀಡಲಾಗುತ್ತಿದೆ. ಅವರ ಬದಲಿಗೆ ಎರಡನೇ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರಿಗೆ ಅವಕಾಶ ಲಭಿಸುವುದು ಖಚಿತವಾಗಿದೆ.

ಶ್ರೇಯಸ್ ಅಯ್ಯರ್ ಕೂಡ ಅಂತಿಮ 11ರ ಬಳಗದಲ್ಲಿ ಸ್ಥಾನ ಗಿಟ್ಟಿಸುವರು ಎಂದು ತಂಡದ ಮೂಲಗಳು ಹೇಳಿವೆ.

ಮಧ್ಯಮ ಕ್ರಮಾಂಕದ ಸವಾಲು: ಕೆ.ಎಲ್. ರಾಹುಲ್, ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ಅವರು ಗಾಯಗೊಂಡ ಕಾರಣ ಭಾರತ ತಂಡದ ಮಧ್ಯಮಕ್ರಮಾಂಕವನ್ನು ಬಲಗೊಳಿಸುವ ಕಾರ್ಯಕ್ಕೆ ಸ್ವಲ್ಪಮಟ್ಟಿನ ಹಿನ್ನಡೆಯಾಗಿದೆ. ಅವರ ಸ್ಥಾನ ತುಂಬುವವರಾಗಿ ಪ್ರಯೋಗಗಳನ್ನು ನಡೆಸುವುದು ಅನಿವಾರ್ಯವಾಗಿದೆ ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಾರತ ಕ್ರಿಕೆಟ್ ತಂಡದ ನಾಲ್ಕು ಮತ್ತು ಐದನೇ ಕ್ರಮಾಂಕದಲ್ಲಿ ಆಡುವ ಆಟಗಾರರು ಯಾರು ಎಂಬುದು 18 ತಿಂಗಳುಗಳ ಹಿಂದೆಯೇ ನಿರ್ಧಾರವಾಗಿತ್ತು. ಆದರೆ ದುರದೃಷ್ಟವಶಾತ್ ಆ ಬ್ಯಾಟರ್‌ಗಳು ಗಾಯಗೊಂಡ ಕಾರಣ ಹೊಸಬರನ್ನು ಹುಡುಕುವ ಕಾರ್ಯ ನಡೆಸಬೇಕಾಯಿತು' ಎಂದರು.

'ಎರಡು ತಿಂಗಳುಗಳ ಅವಧಿಯಲ್ಲಿ ಮೂವರೂ ಗಾಯಗೊಂಡಿದ್ದು ದುರದೃಷ್ಟಕರ. ಈ ಪರಿಸ್ಥಿತಿಯನ್ನು ನಿಭಾಯಿಸಲು ಕೆಲವು ಆಟಗಾರರನ್ನು ಕಣಕ್ಕಿಳಿಸಿ ಪ್ರಯೋಗ ಮಾಡಲಿದ್ದೇವೆ. ಮುಂಬರುವ ವಿಶ್ವಕಪ್ ಟೂರ್ನಿಗೂ ಈ ಮೂವರು ಫಿಟ್ ಆಗದಿದ್ದರೆ ಬೇರೆ ಆಯ್ಕೆಗಳು ನಮ್ಮ ಮುಂದಿರಬೇಕು ಎಂಬ ಕಾರಣಕ್ಕೆ ಪ್ರಯೋಗ ಅನಿವಾರ್ಯವಾಗಿತ್ತು' ಎಂದರು.

ಹೋದ ವರ್ಷದ ಡಿಸೆಂಬರ್‌ನಲ್ಲಿ ಸಂಭವಿಸಿದ್ದ ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಿಷಭ್ ಇನ್ನೂ ಪುನಶ್ಚೇತನದಲ್ಲಿದ್ದಾರೆ. ಅವರು ಇನ್ನೂ ಕಣಕ್ಕೆ ಮರಳಿಲ್ಲ. ಅ.5ರಿಂದ ಭಾರತದ ಆತಿಥ್ಯದಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿದೆ.

ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡವು ಶ್ರೀಲಂಕಾಕ್ಕೆ ಬುಧವಾರ ಪ್ರಯಾಣಿಸಲಿದೆ. ಕಳೆದ ಒಂದು ವಾರದಿಂದ ತಂಡವು ಆಲೂರಿನಲ್ಲಿರುವ ಕೆಎಸ್‌ಸಿಎ ಮೈದಾನದಲ್ಲಿ ಅಭ್ಯಾಸ ನಡೆಸಿತು. ಇಲ್ಲಿಯೇ ಯೋ ಯೋ ಫಿಟ್‌ನೆಸ್ ಟೆಸ್ಟ್ ಕೂಡ ನಡೆದಿತ್ತು.

ಭಾರತ ಕ್ರಿಕೆಟ್ ತಂಡದ ಕೆ.ಎಲ್. ರಾಹುಲ್ ಮಂಗಳವಾರ ಆಲೂರಿನ ಕೆಎಸ್‌ಸಿಎ ಮೈದಾನದಲ್ಲಿ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯನ್ನು ಗೆದ್ದ ಹುಬ್ಬಳ್ಳಿ ಟೈಗರ್ಸ್ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಟಿ20 ಕ್ರಿಕೆಟ್: ಮನೀಷ್, ತಾಹ ಅರ್ಧಶತಕ

ಹುಬ್ಬಳ್ಳಿಗೆ ಮಹಾರಾಜ ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೀಷ್ ಪಾಂಡೆ ಚುರುಕಾದ ಫೀಲ್ಡಿಂಗ್ ಮತ್ತು ಅರ್ಧಶತಕದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಗೆದ್ದುಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಫೈನಲ್ ಕೊನೆಯ ಓವರ್‌ನವರೆಗೂ ಕುತೂಹಲ ಕೆರಳಿಸಿತ್ತು. 204 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಮೈಸೂರು ತಂಡಕ್ಕೆ ಕೊನೆಯ ಓವರ್‌ನಲ್ಲಿ 12 ರನ್‌ಗಳ ಅಗತ್ಯವಿತ್ತು.

ಮನ್ವಂತ್ ಕುಮಾರ್ ಬೌಲಿಂಗ್ ಮಾಡಿದ ಈ ಓವರ್‌ನ ಮೂರನೇ ಎಸೆತವನ್ನು ಸಿಕ್ಸರ್‌ಗೆತ್ತುವ ಮೈಸೂರಿನ ಜೆ. ಸುಚಿತ್ ಪ್ರಯತ್ನಕ್ಕೆ ಮನೀಷ್ ಪಾಂಡೆ ಅಡ್ಡಿಯಾದರು. ಲಾಂಗ್ ಆಫ್ ಬೌಂಡರಿಲೈನ್‌ನಲ್ಲಿದ್ದ ಪಾಂಡೆ ತೋರಿದ ಸಾಹಸಕ್ಕೆ ಚೆಂಡು ಗೆರೆ ದಾಟಲಿಲ್ಲ. ಕೇವಲ ಒಂದು ರನ್ ಮಾತ್ರ ಮೈಸೂರಿಗೆ ಲಭಿಸಿತು. ಐದನೇ ಎಸೆತದಲ್ಲಿ ಮನ್ವಂತ್ ಬೌಲಿಂಗ್‌ನಲ್ಲಿ ಸುಚಿತ್ ಔಟಾದರು. ಇದರೊಂದಿಗೆ ಜಯದ ಅವಕಾಶ ಕೈತಪ್ಪಿತು.

ಅಜೇಯ ಅರ್ಧಶತಕ (50; 23ಎ, 4X3, 6X4) ತಂಡವು ದೊಡ್ಡ ಮೊತ್ತ ಗಳಿಸಲು ಪಾಂಡೆ ಕಾರಣರಾದರು. ಹುಬ್ಬಳ್ಳಿ ತಂಡದ ಆರಂಭಿಕ ಬ್ಯಾಟರ್ ಮೊಹಮ್ಮದ್ ತಾಹ (72; 40ಎ, 4X7, 6X4) ಸೊಗಸಾದ ಅರ್ಧಶತಕ ಗಳಿಸಿದರು. ಇದರಿಂದಾಗಿ ಆರಂಭದಲ್ಲಿ ಆಘಾತ ಅನುಭವಿಸಿದ್ದ ಹುಬ್ಬಳ್ಳಿ ಚೇತರಿಸಿಕೊಂಡಿತು. ಶ್ರೀಜಿತ್ ಕೂಡ (38 ರನ್) ಉತ್ತಮ ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ಮೈಸೂರು ತಂಡಕ್ಕೆ ಸಮರ್ಥ್ (63; 35ಎ) ಮತ್ತು ಕಾರ್ತಿಕ್ (28; 18ಎ) ಉತ್ತಮ ಆರಂಭ ನೀಡಿದರು. ಕೇವಲ ಐದು ಓವರ್‌ಗಳಲ್ಲಿ 56 ರನ್ ಗಳಿಸಿದರು. ಆರನೇ ಓವರ್‌ನಲ್ಲಿ ಈ ಜೊತೆಯಾಟ ಮುರಿದುಬಿದ್ದ ನಂತರ ಕ್ರೀಸ್‌ಗೆ ಬಂದ ಕರುಣ್ (37; 20ಎ) ಕೂಡ ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. ಆದರೆ, ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸದಂತೆ ಮನ್ವಂತ್ ಕುಮಾರ್, ವಿದ್ವತ್, ಕೆ.ಸಿ ಕಾರ್ಯಪ್ಪ ನೋಡಿಕೊಂಡರು.

ಅಭಿಮಾನಿಗಳ ದಂಡು: ಟೂರ್ನಿಯ ಬಹುತೇಕ ಪಂದ್ಯಗಳಲ್ಲಿ ಖಾಲಿ ಇದ್ದ ಕ್ರೀಡಾಂಗಣದ ಗ್ಯಾಲರಿಗಳಿಗೆ ಮಂಗಳವಾರ ಅಭಿಮಾನಿಗಳ ದಂಡು ಕಳೆ ತುಂಬಿತು.

ಫೈನಲ್ ಪಂದ್ಯ ನೋಡಲು ಸುಮಾರು ಏಳು ಸಾವಿರಕ್ಕೂ ಹೆಚ್ಚು ಮಂದಿ ಸೇರಿದ್ದರು. ಅದರಲ್ಲಿ ಮೈಸೂರು ತಂಡದ ಅಭಿಮಾನಿಗಳು ಹೆಚ್ಚು ಸಂಖ್ಯೆಯಲ್ಲಿದ್ದರು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 203 (ಮೊಹಮ್ಮದ್ ತಾಹ 72, ಕೃಷ್ಣನ್ ಶ್ರೀಜಿತ್ 38, ಮನೀಷ್ ಪಾಂಡೆ ಔಟಾಗದೆ 50, ಸಿ.ಎ. ಕಾರ್ತಿಕ್ 33ಕ್ಕೆ2) **ಮೈಸೂರು ವಾರಿಯರ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 195 (ಆರ್. ಸಮರ್ಥ್ 63, ಎಸ್.ಯು. ಕಾರ್ತಿಕ್ 28, ಕರುಣ್ ನಾಯರ್ 37, ವಿದ್ವತ್ ಕಾವೇರಪ್ಪ 40ಕ್ಕೆ2, ಎಲ್. ಮನ್ವಂತ್ ಕುಮಾರ್ 32ಕ್ಕೆ3) **ಫಲಿತಾಂಶ:** ಹುಬ್ಬಳ್ಳಿ ಟೈಗರ್ಸ್‌ಗೆ 8 ರನ್‌ಗಳ ಜಯ. **ಪಂದ್ಯಶ್ರೇಷ್ಠ:** ಮನೀಷ್ ಪಾಂಡೆ, **ಸರಣಿಶ್ರೇಷ್ಠ:** ಮೊಹಮ್ಮದ್ ತಾಹ.

ರ್‍ಯಾಂಕಿಂಗ್: ಪ್ರಣಯ್ ಜೀವನಶ್ರೇಷ್ಠ ಸಾಧನೆ

ನವದೆಹಲಿ (ಪಿಟಿಐ): ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದ ಭಾರತದ ಎಚ್.ಎಸ್. ಪ್ರಣಯ್ ಅವರು ಮಂಗಳವಾರ ಪ್ರಕಟಗೊಂಡ ಡಬ್ಲ್ಯುಟಿಎ ಪುರುಷರ ಸಿಂಗಲ್ಸ್ ರ್‍ಯಾಂಕಿಂಗ್‌ನಲ್ಲಿ 6ನೇ ಸ್ಥಾನಕ್ಕೆ ಏರುವ ಮೂಲಕ ಜೀವನಶ್ರೇಷ್ಠ ಸಾಧನೆ ಮಾಡಿದ್ದಾರೆ.

31 ವರ್ಷದ ಪ್ರಣಯ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅಗ್ರ ಕ್ರಮಾಂಕದ ವಿಕ್ಟರ್ ಆಕ್ಸೆಲ್ಸನ್ ಅವರಿಗೆ ಆಘಾತ ನೀಡಿದ್ದರು. 9ನೇ ಸ್ಥಾನದಲ್ಲಿದ್ದ ಪ್ರಣಯ್ ಅವರು ಮೂರು ಸ್ಥಾನ ಬಡ್ತಿ ಪಡೆದಿದ್ದಾರೆ. ಕಳೆದ ಒಂದು ವರ್ಷದಿಂದ ಉತ್ತಮ ಲಯದಲ್ಲಿರುವ ಅವರು, ಮಲೇಷ್ಯಾ ಮಾಸ್ಟರ್ಸ್ ಚಾಂಪಿಯನ್ ಆಗುವ ಜತೆಗೆ,

ಎಚ್.ಎಸ್. ಪ್ರಣಯ್ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯನ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನ 16 ಘಟ್ಟದಲ್ಲಿ ನಿರ್ಗಮಿಸಿದ ಭಾರತದ ಲಕ್ಷ್ಯ ಸೇನ್ ಅವರು ಒಂದು ಸ್ಥಾನವನ್ನು ಕಳೆದುಕೊಂಡು, 12ನೇ ರ್‍ಯಾಂಕ್‌ನಲ್ಲಿದ್ದಾರೆ. ಕಿದಂಬಿ ಶ್ರೀಕಾಂತ್ 20ನೇ ಸ್ಥಾನದಲ್ಲಿ ಮುಂದುವರಿದ್ದಾರೆ. ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಸುತ್ತಿನಲ್ಲೇ ಪರಾಭವಗೊಂಡಿದ್ದರು.

ಮಾಜಿ ವಿಶ್ವ ಚಾಂಪಿಯನ್ ಪಿ.ವಿ. ಸಿಂಧು ಒಂದು ಸ್ಥಾನ ಬಡ್ತಿ ಪಡೆದು, 14ನೇ ರ್‍ಯಾಂಕ್ ಗಳಿಸಿದ್ದಾರೆ. ಅವರು ವಿಶ್ವ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಬೈ ಪಡೆದು, ಎರಡನೇ ಸುತ್ತಿನಲ್ಲಿ ನಿರ್ಗಮಿಸಿದ್ದರು.

ಪುರುಷರ ಡಬಲ್ಸ್‌ನ ಸ್ಟಾರ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಎರಡನೇ ರ್‍ಯಾಂಕ್‌ನಲ್ಲಿ ಮುಂದುವರಿದಿದ್ದಾರೆ. ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿದ್ದರು.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಎರಡು ಸ್ಥಾನ ಬಡ್ತಿ ಪಡೆದು, 17ನೇ ಕ್ರಮಾಂಕಕ್ಕೆ ಏರಿದ್ದಾರೆ.

ಕಾರ್ಲ್‌ಸನ್–ನೀಮನ್ ವಿವಾದಕ್ಕೆ ತೆರೆ

ನ್ಯೂಯಾರ್ಕ್ (ರಾಯಿಟರ್ಸ್): ವಿಶ್ವದ ಅಗ್ರಮಾನ್ಯ ಚೆಸ್ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಹ್ಯಾನ್ಸ್ ನೀಮನ್ ಅವರು ಮೋಸದಾಟ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ನಡುವೆ ಇದ್ದ ವಿವಾದವನ್ನು ಬಗೆಹರಿಸಿಕೊಂಡಿದ್ದಾರೆ ಎಂದು ಆನ್‌ಲೈನ್ ಚೆಸ್ ಆಟದ ವೇದಿಕೆ 'ಚೆಸ್ ಡಾಟ್ ಕಾಂ' ವರದಿ ಮಾಡಿದೆ.

ಇವರ ನಡುವಿನ ವಿವಾದ ನ್ಯಾಯಾಲಯದ ಮೆಟ್ಟಿಲೇರಿತ್ತು. ಕಾನೂನು ಹೋರಾಟ ಕೊನೆಗೊಳಿಸಿ ವಿವಾದಕ್ಕೆ ತೆರೆ ಎಳೆಯಲು ಇಬ್ಬರೂ ಒಪ್ಪಿಕೊಂಡಿದ್ದಾರೆ.

2022ರ ಸೆಪ್ಟೆಂಬರ್‌ನಲ್ಲಿ ಆರಂಭವಾಗಿದ್ದ ವಿವಾದ ಸಾಕಷ್ಟು ಸುದ್ದಿಮಾಡಿತ್ತು. ಸೆಪ್ಟೆಂಬರ್ ಮೊದಲ ವಾರದಲ್ಲಿ ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿ ನಡೆದಿದ್ದ ಸಿಂಕ್‌ಫೀಲ್ಡ್ ಕಪ್ ಟೂರ್ನಿಯಲ್ಲಿ ಕಾರ್ಲ್‌ಸನ್, ನೀಮನ್ ಎದುರು ಸೋತಿದ್ದರು. ಅಮೆರಿಕದ ಆಟಗಾರ ಮೋಸದ ಆಟವಾಡಿದ್ದಾರೆ ಎಂದು ಆರೋಪಿಸಿ, ಕಾರ್ಲ್‌ಸನ್ ಟೂರ್ನಿಯಿಂದಲೇ ಹಿಂದೆ ಸರಿದಿದ್ದರು.

ಇದಾದ ಬಳಿಕ ನಡೆದಿದ್ದ ಆನ್‌ಲೈನ್ ಟೂರ್ನಿಯಲ್ಲಿ ನಾರ್ವೆಯ ಆಟಗಾರ, 20 ವರ್ಷದ ನೀಮನ್ ವಿರುದ್ಧದ ಪಂದ್ಯದಲ್ಲಿ ಕೇವಲ ಒಂದು ನಡೆಯ ಬಳಿ ಹಿಂದೆ ಸರಿದಿದ್ದರು. 'ನೀಮನ್ ಅಥವಾ ಆ ರೀತಿಯ ಮೋಸದ ಆಟದಲ್ಲಿ

ಮ್ಯಾಗ್ನಸ್ ಕಾರ್ಲ್‌ಸನ್

ತೊಡಗಿದವರ ಜತೆ ನಾನು ಆಡುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದರು.

'ಈ ಹಿಂದೆ 12 ವರ್ಷ ಮತ್ತು 16 ವರ್ಷದವನಾಗಿದ್ದಾಗ ಆನ್‌ಲೈನ್ ಚೆಸ್ ಟೂರ್ನಿಯಲ್ಲಿ ಆಡುವಾಗ ಮೋಸ ಮಾಡಿದ್ದೆ' ಎಂದು ನೀಮನ್ ಒಪ್ಪಿಕೊಂಡಿದ್ದರು. ಆದರೆ ಚೆಸ್‌ಬೋರ್ಡ್ ಮುಂದೆ (ಓವರ್ ದಿ ಬೋರ್ಡ್) ಆಡುವಾಗ ಮೋಸ ಮಾಡಿಲ್ಲ ಎಂದಿದ್ದರು.

ನೀಮನ್ ಆ ಬಳಿಕ ಕಾರ್ಲ್‌ಸನ್ ವಿರುದ್ಧ ₹ 827 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆ ಹೂಡಿದ್ದರು.

ಕಾರ್ಲ್‌ಸನ್ ಆರೋಪಗಳ ಬಗ್ಗೆ 'ಚೆಸ್ ಡಾಟ್ ಕಾಂ' ಸಂಸ್ಥೆ ಕೂಡಾ ತನಿಖೆ ಕೈಗೊಂಡಿತ್ತು. 'ಚೆಸ್ ಬೋರ್ಡ್ ಮುಂದೆ ಆಡುವಾಗ ನೀಮನ್ ಮೋಸ ಮಾಡಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಯಾವುದೇ ನಿರ್ಣಾಯಕ ಪುರಾವೆಗಳು ದೊರೆತಿಲ್ಲ' ಎಂದು ಸೋಮವಾರ ಬಿಡುಗಡೆಗೊಳಿಸಿದ ವರದಿಯಲ್ಲಿ ಹೇಳಿದೆ.

ಚೆಸ್: ಟೂರ್ನಿಯಿಂದ ಹಿಂದೆ ಸರಿದ ವೈಶಾಲಿ

ಕೋಲ್ಕತ್ತ (ಪಿಟಿಐ): ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆರ್. ವೈಶಾಲಿ ಅವರು ಗುರುವಾರದಿಂದ ಆರಂಭವಾಗಲಿರುವ ಟಾಟಾ ಸ್ಟೀಲ್ ಚೆಸ್ ಇಂಡಿಯಾ ಚಾಂಪಿಯನ್‌ಷಿಪ್ ಟೂರ್ನಿಯಿಂದ ಹೊರಗುಳಿದಿದ್ದಾರೆ.

ಆರ್. ವೈಶಾಲಿ

ವೈಶಾಲಿ ಅವರು ಈಚೆಗೆ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಆದ ಪ್ರಜ್ಞಾನಂದ ಅವರ ಅಕ್ಕ. ವೈಶಾಲಿ ಅವರು ಹಿಂದೆ ಸರಿಯುವ ನಿರ್ಧಾರ ಪ್ರಕಟಿಸಿದ ನಂತರ ಮಾಜಿ ರಾಷ್ಟ್ರೀಯ ಚಾಂಪಿಯನ್, ಡಬ್ಲ್ಯುಜಿಎಂ ದಿವ್ಯಾ ದೇಶಮುಖ್ ಅವರಿಗೆ ಆಡಲು ಅವಕಾಶ ನೀಡಲಾಗಿದೆ.

'ಅನಿರೀಕ್ಷಿತ ಕಾರಣದಿಂದ ವೈಶಾಲಿ ಅವರಿಗೆ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಆದರೆ, ದಿವ್ಯಾ ಅವರನ್ನು ಸ್ವಾಗತಿಸಲು ಉತ್ಸುಕರಾಗಿದ್ದೇವೆ' ಎಂದು ಸಂಘಟಕರು ತಿಳಿಸಿದ್ದಾರೆ.

ಸೆ.4ರಂದು ಮುಕ್ತ ವಿಭಾಗದ ಸ್ಪರ್ಧೆ ಆರಂಭವಾಗಲಿದ್ದು, ಪ್ರಜ್ಞಾನಂದ ಸೇರಿದಂತೆ ವಿಶ್ವಕಪ್‌ನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದ ಡಿ.ಗುಕೇಶ್, ವಿದಿತ್ ಗುಜರಾತಿ, ಅರ್ಜುನ್ ಇರಿಗೇಶಿ ಅವರೂ ಸೇರಿಕೊಳ್ಳಲಿದ್ದಾರೆ.

ವೀಲ್‌ಚೇರ್ ಟೆನಿಸ್ ಆಟಗಾರರಿಗೆ ತರಬೇತಿ ಕೇಂದ್ರ ಆರಂಭಕ್ಕೆ ನಿರ್ಧಾರ

ಬೆಂಗಳೂರು: ವೀಲ್‌ಚೇರ್ ಟೆನಿಸ್ ಆಟಗಾರರಿಗೆ ತರಬೇತಿ ನೀಡುವ ಉದ್ದೇಶದಿಂದ ಇಂಡಿಯನ್ ವೀಲ್‌ಚೇರ್ ಟೆನಿಸ್ ಟೂರ್ (ಐಡಬ್ಲ್ಯುಟಿಟಿ) ಮತ್ತು ಆಸ್ತ ಫೌಂಡೇಷನ್ ಸಹಭಾಗಿತ್ವದಲ್ಲಿ 'ಡ್ಯೂಸ್ ಟೆನಿಸ್ ಸೆಂಟರ್' ಆರಂಭಿಸಲು ನಿರ್ಧರಿಸಲಾಗಿದೆ.

'ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಲ್ಲಿ 1.3 ಎಕರೆ ಪ್ರದೇಶದಲ್ಲಿ ಟೆನಿಸ್ ಸೆಂಟರ್ ನಿರ್ಮಾಣವಾಗಲಿದೆ. 2024ರ ಮೇ ತಿಂಗಳಲ್ಲಿ ಕಾರ್ಯಾರಂಭ ಮಾಡಲಿದೆ' ಎಂದು ಆಸ್ತ ಫೌಂಡೇಷನ್ ಸ್ಥಾಪಕ ಮತ್ತು ಐಡಬ್ಲ್ಯುಟಿಟಿ ಮುಖ್ಯಸ್ಥ ಸುನಿಲ್ ಜೈನ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವೀಲ್‌ಚೇರ್ ಟೆನಿಸ್ ಆಟಗಾರರ ತರಬೇತಿಗಾಗಿ ಇಂತಹ ಸೆಂಟರ್‌ಅನ್ನು ಆರಂಭಿಸುತ್ತಿರುವುದು ದೇಶದಲ್ಲಿ ಇದೇ ಮೊದಲು. ಎಲ್ಲ ವಯೋಮಾನದವರಿಗೆ ಗುಣಟ್ಟದ ತರಬೇತಿ ಒದಗಿಸಿಕೊಡುವುದು ಇದರ ಉದ್ದೇಶ. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಆಟಗಾರರು ಉತ್ತಮ ಪ್ರದರ್ಶನ ನೀಡಿ, ಪ್ರಶಸ್ತಿ ಜಯಿಸುವಂತಾಗಬೇಕು' ಎಂದು ಹೇಳಿದರು.

ಆನ್‌ಲೈನ್ ಮೂಲಕ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡ ಮಾಜಿ ಟೆನಿಸ್ ಆಟಗಾರ ಮತ್ತು ಐಡಬ್ಲ್ಯುಟಿಟಿ ಸಲಹಾ ಮಂಡಳಿ ಸದಸ್ಯ ಸೋಮದೇವ್ ದೇವ್‌ವರ್ಮನ್, 'ವೀಲ್‌ಚೇರ್ ಟೆನಿಸ್ ಆಟಗಾರರ ತರಬೇತಿಗೆ ಸೂಕ್ತ ಸೌಲಭ್ಯ ದೊರೆಯುತ್ತಿಲ್ಲ. ಆ ಕೊರತೆ ನೀಗಿಸುವ ವಿಶ್ವಾಸವಿದೆ' ಎಂದರು.

ಪ್ಯಾರಾಲಿಂಪಿಕ್ ವೀಲ್‌ಚೇರ್ ಟೆನಿಸ್ ಆಟಗಾರ್ತಿ ಸ್ವಿಟ್ಜರ್‌ಲೆಂಡ್‌ನ ನಲಾನಿ ಬಾಬ್ ಮತ್ತು ಐಡಬ್ಲ್ಯುಟಿಟಿ ತಾಂತ್ರಿಕ ನಿರ್ದೇಶಕ ನೆದರ್ಲೆಂಡ್ಸ್‌ನ ಮಾರ್ಕ್ ಕಾಲ್ಕ್‌ಮನ್ ಅವರು ವರ್ಚುವಲ್ ಆಗಿ ಪಾಲ್ಗೊಂಡರು.

ಡುರಾಂಡ್: ಫೈನಲ್‌ಗೆ ಈಸ್ಟ್ ಬೆಂಗಾಲ್

ಕೋಲ್ಕತ್ತ (ಪಿಟಿಐ): ಪೆನಾಲ್ಟಿ ಶೂಟೌಟ್‌ನಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು 5–3 ಗೋಲುಗಳಿಂದ ಮಣಿಸಿದ ಈಸ್ಟ್ ಬೆಂಗಾಲ್ ತಂಡ, ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು.

16 ಬಾರಿಯ ಚಾಂಪಿಯನ್ ಬೆಂಗಾಲ್ ತಂಡ 19 ವರ್ಷಗಳ ಬಿಡುವಿನ ಬಳಿಕ ಪ್ರಶಸ್ತಿ ಸುತ್ತು ತಲುಪಿದೆ. 2004 ರಲ್ಲಿ ಕೊನೆಯದಾಗಿ ಫೈನಲ್ ಆಡಿತ್ತು.

ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2 ರಿಂದ ಸಮಬಲ ಸಾಧಿಸಿದ್ದವು. ಪೆನಾಲ್ಟಿ ಶೂಟೌಟ್‌ನಲ್ಲಿ ಅದೃಷ್ಟ ಬೆಂಗಾಲ್‌ಗೆ ಒಲಿಯಿತು.

ಕೊನ್ಸಮ್ ಫಲ್ಗುಣಿ ಸಿಂಗ್ (22 ಮತ್ತು 57ನೇ ನಿ.) ಅವರ ಎರಡು ಗೋಲುಗಳ ನೆರವಿನಿಂದ ನಾರ್ತ್‌ಈಸ್ಟ್ ತಂಡ 2–0 ಗೋಲುಗಳ ಮುನ್ನಡೆ ಸಾಧಿಸಿತ್ತು. 77ನೇ ನಿಮಿಷದಲ್ಲಿ ಎದುರಾಳಿ ನೀಡಿದ 'ಉಡುಗೊರೆ ಗೋಲಿ'ನ ನೆರವಿನಿಂದ ಈಸ್ಟ್ ಬೆಂಗಾಲ್ ಗೆಲುವಿನ ಆಸೆಗೆ ಜೀವ ಬಂತು. ಇಂಜುರಿ ಅವಧಿಯ ಕೊನೆಯ ನಿಮಿಷದಲ್ಲಿ (90 + 7) ನಂದಕುಮಾರ್ ಶೇಖರ್ ಅವರು ಹೆಡರ್ ಮೂಲಕ ಚೆಂಡನ್ನು ಗುರಿ ಸೇರಿಸಿ ಪಂದ್ಯವನ್ನು ಶೂಟೌಟ್‌ಗೆ ಒಯ್ದರು.

ಗೆಲುವಿನ ಸಂಭ್ರಮದಲ್ಲಿ ಈಸ್ಟ್ ಬೆಂಗಾಲ್ ತಂಡ –ಪಿಟಿಐ ಚಿತ್ರ

ಫುಟ್‌ಬಾಲ್: ಎಚ್‌ಎಎಲ್‌ಗೆ ಜಯ

ಬೆಂಗಳೂರು: ಎಚ್‌ಎಎಲ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 2–1ರಿಂದ ಸೌತ್ ಯುನೈಟೆಡ್ ಎಫ್.ಸಿಯನ್ನು ಮಣಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಸೌತ್ ಯುನೈಟೆಡ್ ತಂಡದ ಮಾಗೇಶ್ ಸೆಲ್ವ 22ನೇ ನಿಮಿಷದಲ್ಲಿ ಮುನ್ನಡೆ ಒದಗಿಸಿದರು. ಆದರೆ, 35ನೇ ನಿಮಿಷದಲ್ಲಿ ಎಚ್‌ಎಎಲ್ ತಂಡದ ಲಕ್ಪಾ ನೊರ್ಬು ಶೆರ್ಪಾ ಚೆಂಡನ್ನು ಗುರಿ ಸೇರಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. ಪಂದ್ಯ ಕೊನೆಗೊಳ್ಳಲು ಕೆಲವೇ ನಿಮಿಷಗಳಿರುವಾಗ ಆರ್. ಅಜಿತ್ (88ನೇ) ಎಚ್‌ಎಎಲ್ ಪರ ಗೆಲುವಿನ ಗಳಿಸಿದರು.

ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು 1–1ರಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ಎಂಇಜಿ ತಂಡದ ನಿಯಾಸ್ ನಜರ್ (9ನೇ) ಮತ್ತು ಕಿಕ್‌ಸ್ಟಾರ್ಟ್ ತಂಡದ ಪ್ರಶಾಂತ್ ಕಳಿಂಗ (75ನೇ) ಗೋಲು ಗಳಿಸಿದರು.

ಪಾಕ್: ಇಮ್ರಾನ್ ಖಾನ್‌ಗೆ ವಿಧಿಸಿದ್ದ ಶಿಕ್ಷೆ ಅಮಾನತು

ಇಸ್ಲಾಮಾಬಾದ್ (ಪಿಟಿಐ): ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ತೋಷಾಖಾನ ಭ್ರಷ್ಟಾಚಾರ ಪ್ರಕರಣದಲ್ಲಿ ಎದುರಿಸುತ್ತಿರುವ ಮೂರು ವರ್ಷಗಳ ಶಿಕ್ಷೆಯನ್ನು ಅಮಾನತುಗೊಳಿಸಿರುವ ಇಸ್ಲಾಮಾಬಾದ್ ಹೈಕೋರ್ಟ್, ಅವರ ಬಿಡುಗಡೆಗೆ ಆದೇಶಿಸಿ ಮಂಗಳವಾರ ತೀರ್ಪು ನೀಡಿದೆ.

ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಹೈಕೋರ್ಟ್‌ನಿಂದ ಈ ತೀರ್ಪು ಬಂದಿರುವುದು ಇಮ್ರಾನ್ ಖಾನ್ ಅವರನ್ನು ನಿಟ್ಟುಸಿರು ಬಿಡುವಂತೆ ಮಾಡಿದೆ. ಮುಖ್ಯ ನ್ಯಾಯಮೂರ್ತಿ ಅಮೀರ್ ಫಾರೂಕ್ ಮತ್ತು ನ್ಯಾಯಮೂರ್ತಿ ತಾರಿಕ್ ಮೆಹಮೂದ್ ಜಹಾಂಗಿರಿ ಅವರನ್ನೊಳಗೊಂಡ ವಿಭಾಗೀಯ ಪೀಠವು ಸೋಮವಾರ ಕಾಯ್ದಿರಿಸಿದ್ದ ತೀರ್ಪನ್ನು ಮಂಗಳವಾರ ಪ್ರಕಟಿಸಿದೆ.

'ಖಾನ್ ಅವರ ಕೋರಿಕೆಯನ್ನು ಅಂಗೀಕರಿಸಲಾಗಿದ್ದು, ತೀರ್ಪಿನ ಪ್ರತಿ ಶೀಘ್ರವೇ ದೊರೆಯಲಿದೆ' ಎಂದು ನ್ಯಾಯಮೂರ್ತಿ ಫಾರೂಕ್ ತಿಳಿಸಿದರು.

'ಜಿಲ್ಲಾ ನ್ಯಾಯಾಲಯ ನೀಡಿದ್ದ ಆದೇಶವನ್ನು ಹೈಕೋರ್ಟ್ ಅಮಾನತುಗೊಳಿಸಿದೆ' ಎಂದು ಖಾನ್ ಅವರ ಪಿಟಿಐ ಪಕ್ಷವು ವಾಟ್ಸ್‌ಆ್ಯಪ್ ಸಂದೇಶದ ಮೂಲಕ ತಿಳಿಸಿದೆ.

'ಮುಖ್ಯ ನ್ಯಾಯಮೂರ್ತಿ ಅವರು ನಮ್ಮ ಮನವಿಯನ್ನು ಸ್ವೀಕರಿಸಿದ್ದು, ಶಿಕ್ಷೆಯನ್ನು ಅಮಾನತುಗೊಳಿಸಿದ್ದಾರೆ' ಎಂದು ಖಾನ್ ಅವರ ಕಾನೂನು ಸಲಹೆಗಾರ ನಯೀಮ್ ಹೈದರ್ ಪಂಜೋಥಾ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಅಸಂಬದ್ಧ ಹಕ್ಕುಸ್ಥಾಪನೆಗೆ ಅರ್ಥ ಇಲ್ಲ'

ಒಂದನೇ ಪುಟದಿಂದ...

ಈ ಹಿಂದೆಯೂ, ಅರುಣಾಚಲ ಪ್ರದೇಶದ ಕೆಲ ಸ್ಥಳಗಳ ಹೆಸರುಗಳನ್ನು ಬದಲಿಸಲು ಚೀನಾ ಪ್ರಯತ್ನಿಸಿತ್ತು.

ಅರುಣಾಚಲ ಪ್ರದೇಶ ಹೆಸರನ್ನು 'ಝ್ಗಾಂಗ್‌ನಾನ್' ಎಂಬುದಾಗಿ ಹಾಗೂ ರಾಜ್ಯದ 11 ಸ್ಥಳಗಳ ಹೆಸರುಗಳನ್ನು ಬದಲಿಸಲು ಕಳೆದ ಏಪ್ರಿಲ್‌ನಲ್ಲಿ ಚೀನಾ ಮುಂದಾಗಿದ್ದನ್ನು ಭಾರತ ತಿರಸ್ಕರಿಸಿತ್ತು.

2018 ಹಾಗೂ 2021ರಲ್ಲಿಯೂ ಇಂಥದೇ ಪ್ರಯತ್ನಕ್ಕೆ ಕೈಹಾಕಿತ್ತು.

ಭಾರತ ಆಕ್ಷೇಪ: ಅರುಣಾಚಲ ಪ್ರದೇಶ, ಅಕ್ಸಾಯ್ ಚಿನ್ ಪ್ರದೇಶವನ್ನು ತನ್ನದೆಂದು ತೋರಿಸುವ ಭೂಪಟವನ್ನು ಬಿಡುಗಡೆ ಮಾಡಿರುವ ಚೀನಾ ನಡೆಗೆ ಭಾರತ ಪ್ರತಿಭಟನೆ ದಾಖಲಿಸಿದೆ.

'ಇಂತಹ ಕ್ರಮಗಳು ಗಡಿ ಬಿಕ್ಕಟ್ಟನ್ನು ಮತ್ತಷ್ಟು ಜಟಿಲಗೊಳಿಸುತ್ತವೆ. ಭೂಪಟ ವಿಚಾರವಾಗಿ ರಾಜತಾಂತ್ರಿಕ ಮಾರ್ಗದ ಮೂಲಕ ಪ್ರತಿಭಟನೆ ದಾಖಲಿಸಿದ್ದೇವೆ' ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಕಾಂಗ್ರೆಸ್ ಖಂಡನೆ: ಚೀನಾ ನಡೆಯನ್ನು ಖಂಡಿಸಿರುವ ಕಾಂಗ್ರೆಸ್, ಭಾರತದ ಗಡಿಯನ್ನು ಅತಿಕ್ರಮಿಸಿರುವ ಚೀನಾದ ಕ್ರಮವನ್ನು ಜಿ–20 ಶೃಂಗಸಭೆಯಲ್ಲಿ ಪ್ರಸ್ತಾಪಿಸುವಂತೆ ಆಗ್ರಹಿಸಿದೆ.

ಎಲ್‌ಪಿಜಿ ಬೆಲೆ ₹200 ಇಳಿಕೆ

ಒಂದನೇ ಪುಟದಿಂದ...

ಮುಂಬರುವ ವಿಧಾನಸಭಾ ಚುನಾವಣೆಗಳಿಗೂ, ಬೆಲೆ ಕಡಿತಕ್ಕೂ ಸಂಬಂಧ ಇಲ್ಲ ಎಂದು ಅವರು ಹೇಳಿದ್ದಾರೆ.

ಬೆಲೆ ಕಡಿತವನ್ನು ಕೇಂದ್ರವು ಯಾವ ರೀತಿಯಲ್ಲಿ ಭರಿಸಲಿದೆ ಎಂದು ಅವರು ಹೇಳಿಲ್ಲ. ಆದರೆ, ತೈಲೋತ್ಪನ್ನಗಳನ್ನು ಮಾರಾಟ ಮಾಡುವ ಸರ್ಕಾರಿ ಸ್ವಾಮ್ಯದ ಕಂಪನಿಗಳು ಎಲ್‌ಪಿಜಿ ಬೆಲೆಯನ್ನು ಬುಧವಾರದಿಂದ ತಗ್ಗಿಸಿ, ಮುಂದೊಂದು ದಿನ ಅವು ಸರ್ಕಾರದಿಂದ ಅದಕ್ಕೆ ಪರಿಹಾರ ಧನ ಪಡೆದುಕೊಳ್ಳಲಿವೆ ಎಂದು ಭಾವಿಸಲಾಗಿದೆ.

ಬೆಲೆ ಇಳಿಕೆಯಿಂದ ಬೊಕ್ಕಸಕ್ಕೆ ಆಗುವ ವೆಚ್ಚ ಎಷ್ಟು ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಉಜ್ವಲಾ ಯೋಜನೆಯ ಅಡಿ ನೀಡುವ ₹200 ಸಬ್ಸಿಡಿಯಿಂದಾಗಿ ಬೊಕ್ಕಸಕ್ಕೆ ಪ್ರಸಕ್ತ ಹಣಕಾಸು ವರ್ಷದಲ್ಲಿ ₹7,680 ಕೋಟಿ ವೆಚ್ಚವಾಗುತ್ತದೆ ಎಂದು ಠಾಕೂರ್ ಹೇಳಿದ್ದಾರೆ.

ಉಜ್ವಲಾ ಯೋಜನೆಯ ಅಡಿಯಲ್ಲಿ 9.6 ಕೋಟಿ ಫಲಾನುಭವಿಗಳು ಇದ್ದಾರೆ. ಎಲ್‌ಪಿಜಿ ಸಿಲಿಂಡರ್ ಬಳಕೆದಾರರ ಸಂಖ್ಯೆ 31 ಕೋಟಿ. ಕೇಂದ್ರವು 2020ರ ಜೂನ್‌ನಿಂದ ಎಲ್‌ಪಿಜಿ ಸಬ್ಸಿಡಿ ಸ್ಥಗಿತಗೊಳಿಸಿದೆ. ಉಜ್ವಲಾ ಯೋಜನೆಯ ಅಡಿಯಲ್ಲಿ ಸಂಪರ್ಕ ಪಡೆದವರಿಗೆ ಮಾತ್ರ ವರ್ಷಕ್ಕೆ 12 ಸಿಲಿಂಡರ್‌ಗಳಿಗೆ, ಪ್ರತಿ ಸಿಲಿಂಡರ್‌ಗೆ ₹200ರಷ್ಟು ಸಬ್ಸಿಡಿ ಇದೆ. ಉಜ್ವಲಾ ಫಲಾನುಭವಿಗಳಿಗೆ ₹200 ದರ ಕಡಿತದ ಪ್ರಯೋಜನವೂ ಸಿಗಲಿದೆ.

ಎಲ್‌ಪಿಜಿ ಬೆಲೆಯಲ್ಲಿನ ಇಳಿಕೆಗೆ ಪ್ರತಿಯಾಗಿ ಕೇಂದ್ರವು ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಪರಿಹಾರಧನ ನೀಡಲು ಆರಂಭಿಸಿದರೆ, ಸಬ್ಸಿಡಿ ವ್ಯವಸ್ಥೆಯು ಮತ್ತೆ ಜೀವ ಪಡೆದಂತೆ ಆಗುತ್ತದೆ.

ಇನ್ನಷ್ಟು ಕೊಡುಗೆ ನಿರೀಕ್ಷೆ: 'ಇಂಡಿಯಾ'

ಒಂದನೇ ಪುಟದಿಂದ...

ದರ ಕಡಿತ ಕುರಿತಂತೆ ಸಚಿವ ಸಂಪುಟದ ತೀರ್ಮಾನದ ಹಿಂದೆಯೇ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಮತಗಳು ಇಳಿಮುಖವಾಗಲು ಆರಂಭವಾಗಿರುವ ಹಿಂದೆಯೇ, ಕೇಂದ್ರ ಸರ್ಕಾರ 'ಚುನಾವಣೆ ಕೊಡುಗೆ' ವಿತರಿಸುವ ಪ್ರಕ್ರಿಯೆ ಆರಂಭಿಸಿದೆ' ಎಂದು ಟೀಕಿಸಿದ್ದಾರೆ.

'ನಿರ್ದಯಿಯಾಗಿರುವ ಮೋದಿ ಸರ್ಕಾರವು, ಜನರು ಕಷ್ಟಪಟ್ಟು ಸಂಪಾದಿಸಿದ್ದ ಹಣವನ್ನು ಲೂಟಿ ಮಾಡಿತ್ತು. ಈಗ, ದೇಶದಲ್ಲಿನ ತಾಯಂದಿರು ಹಾಗೂ ಸಹೋದರಿಯರತ್ತ ಹುಸಿ ಸದಾಶಯವನ್ನು ವ್ಯಕ್ತಪಡಿಸುತ್ತಿದೆ' ಎಂದು ಖರ್ಗೆ ವ್ಯಂಗ್ಯವಾಡಿದರು.

'ಬಾಧಿತರಾಗಿರುವ ಜನರ ಕೋಪವನ್ನು ಕೇವಲ ₹ 200 ಸಬ್ಸಿಡಿ ನೀಡುವ ಮೂಲಕ 2024ರಲ್ಲಿ ತಣಿಸಲು ಆಗದು ಎಂದು ಬಿಜೆಪಿ ಸರ್ಕಾರ ಅರಿಯಬೇಕು. 'ಇಂಡಿಯಾ' ಬಗ್ಗೆ ಭಯ ಒಳ್ಳೆಯದು. ಆದರೆ, ಜನರು ಈಗಾಗಲೇ ತೀರ್ಮಾನಿಸಿದ್ದಾರೆ. ಹಣದುಬ್ಬರ ಎದುರಿಸಲು ಬಿಜೆಪಿಗೆ ನಿರ್ಗಮನದ ಹಾದಿ ತೋರುವುದು ಖಚಿತ' ಎಂದು ಹೇಳಿದರು.

'ಬಿಜೆಪಿ ಸರ್ಕಾರವು ಒಂಬತ್ತೂವರೆ ವರ್ಷ 140 ಕೋಟಿ ಭಾರತೀಯರಿಗೆ ಕಿರುಕುಳ ನೀಡಿದೆ. ಈಗ 'ಚುನಾವಣಾ ಸಿಹಿ' ನೀಡಿದರೆ ಫಲ ಸಿಗುವುದಿಲ್ಲ. ಅದರಿಂದ ದಶಕಗಳ ಅವಧಿಯ ಪಾಪವು ತೊಳೆದುಹೋಗುವುದಿಲ್ಲ' ಎಂದು ಎಕ್ಸ್ ಜಾಲತಾಣದಲ್ಲಿ ಅವರು ಸಂದೇಶ ಪೋಸ್ಟ್ ಮಾಡಿದ್ದಾರೆ.

'ಇಂಡಿಯಾ' ಪರಿಣಾಮ ಕಾರಣ' : 'ಕೇಂದ್ರ ಸರ್ಕಾರ ಎಲ್‌ಪಿಜಿ ಸಿಲಿಂಡರ್‌ಗಳ ದರ ಕಡಿತಗೊಳಿಸಲು ವಿರೋಧಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಪರಿಣಾಮ ಕಾರಣ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಕಳೆದ ಎರಡು ತಿಂಗಳಲ್ಲಿ 'ಇಂಡಿಯಾ' ಮೈತ್ರಿಕೂಟದ ಎರಡು ಸಭೆಯಷ್ಟೇ ನಡೆದಿದೆ. ಪರಿಣಾಮ ಈಗ ಎಲ್‌ಪಿಜಿ ದರ ಇಳಿದಿದೆ. ಇದು, 'ಇಂಡಿಯಾ'ದ ತಾಕತ್ತು' ಎಂದು ಮಂಗಳವಾರ 'ಎಕ್ಸ್' ವೇದಿಕೆಯಲ್ಲಿ ಸಂದೇಶ ಪೋಸ್ಟ್ ಮಾಡಿದ್ದಾರೆ.

'ಪ್ರಿಗೋಷಿನ್ ಅಂತ್ಯಕ್ರಿಯೆಯಲ್ಲಿ ಪುಟಿನ್ ಭಾಗಿಯಾಗಲ್ಲ'

ಮಾಸ್ಕೊ (ಎಎಫ್‌ಪಿ): ಖಾಸಗಿ ಸೇನಾ ಗುಂಪು 'ವ್ಯಾಗ್ನರ್' ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರ ಅಂತ್ಯಕ್ರಿಯೆಯಲ್ಲಿ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಪಾಲ್ಗೊಳ್ಳುವುದಿಲ್ಲ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಮಂಗಳವಾರ ತಿಳಿಸಿದ್ದಾರೆ.

'ಅಂತ್ಯಕ್ರಿಯೆಯ ಬಗ್ಗೆ ನಮಗೆ ನಿರ್ದಿಷ್ಟವಾಗಿ ಯಾವುದೇ ಮಾಹಿತಿ ಇಲ್ಲ. ಈ ಕುರಿತ ನಿರ್ಧಾರವನ್ನು ಪ್ರಿಗೋಷಿನ್ ಅವರ ಕುಟುಂಬದವರು ಮತ್ತು ಸ್ನೇಹಿತರು ತೆಗೆದುಕೊಳ್ಳುತ್ತಾರೆ. ಪುಟಿನ್ ಅವರು ಪಾಲ್ಗೊಳ್ಳುವ ನಿರೀಕ್ಷೆ ಬೇಡ' ಎಂದು ಅವರು ಹೇಳಿದ್ದಾರೆ.

ಪ್ರಿಗೋಷಿನ್ ಕಳೆದ ವಾರ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದರು. ಪುಟಿನ್ ಆಪ್ತರಾಗಿದ್ದ ಅವರು ಕೆಲ ತಿಂಗಳ ಹಿಂದೆ ರಷ್ಯಾದ ಸೇನಾಧಿಕಾರಿಗಳ ವಿರುದ್ಧ ಬಂಡಾಯವೆದ್ದ ಬಳಿಕ ದೇಶದ್ರೋಹಿಯಾಗಿ ಬಿಂಬಿತರಾಗಿದ್ದರು. ಈ ಬಂಡಾಯದಿಂದಾಗಿ ಪುಟಿನ್ ಅಧಿಕಾರದ ಬಗ್ಗೆಯೂ ಪ್ರಶ್ನೆಗಳು ಎದ್ದಿದ್ದವು.

ನೇಪಾಳಿ ಕರೆನ್ಸಿ ಅಕ್ರಮ ಸಾಗಣೆ ಭಾರತೀಯ ಪ್ರಜೆ ಸೆರೆ

ಕಠ್ಮಂಡು (ಪಿಟಿಐ): ಸೂಕ್ತ ದಾಖಲೆಗಳಿಲ್ಲದೆ 2.6 ದಶಲಕ್ಷ ನೇಪಾಳಿ ರೂಪಾಯಿ (₹16.26 ಲಕ್ಷ) ಸಾಗಿಸುತ್ತಿದ್ದ 26 ವರ್ಷದ ಭಾರತೀಯ ಪ್ರಜೆಯನ್ನು ಮಂಗಳವಾರ ಬಂಧಿಸಲಾಗಿದೆ ಎಂದು ನೇಪಾಳದ ಪೊಲೀಸರು ತಿಳಿಸಿದ್ದಾರೆ.

ಗಡಿ ದಾಟಿ ನೇಪಾಳಕ್ಕೆ ಪ್ರವೇಶಿಸುತ್ತಿದ್ದಾಗ ಮಹೋತ್ತರಿ ಜಿಲ್ಲೆಯಲ್ಲಿ ಭಾರತದ ಪ್ರಜೆ ಸುಮಿತ್ ಸಹಾನನ್ನು ಬಂಧಿಸಲಾಗಿದೆ. ಆತ ತನ್ನ ದ್ವಿಚಕ್ರ ವಾಹನದ ಆಸನದ ಕೆಳಗೆ ಕರೆನ್ಸಿಯನ್ನು ಅಡಗಿಸಿಟ್ಟಿದ್ದ. ತನಿಖೆಗಾಗಿ ಸುಮಿತ್‌ನನ್ನು ಮಹೋತ್ತರಿ ಜಿಲ್ಲಾ ಕಂದಾಯ ಕಚೇರಿಗೆ ಹಸ್ತಾಂತರಿಸಲಾಗಿದೆ.

ಬ್ರಿಟನ್: ಕ್ಷೌರದಂಗಡಿಗಳಲ್ಲೂ ರಕ್ತದೊತ್ತಡ ಪರೀಕ್ಷೆ ಸೌಲಭ್ಯ

ಲಂಡನ್ (ಪಿಟಿಐ): ಪಾರ್ಶ್ವವಾಯು ಮತ್ತು ಹೃದಯಾಘಾತದಂಥ ಆರೋಗ್ಯ ಸಮಸ್ಯೆಗಳನ್ನು ತಡೆಯುವ ನಿಟ್ಟಿನಲ್ಲಿ ಮಹತ್ವದ ಅಭಿಯಾನ ಆರಂಭಿಸಿರುವ ಬ್ರಿಟನ್ ಸರ್ಕಾರವು, ಅಭಿಯಾನದ ಭಾಗವಾಗಿ ಕ್ಷೌರದಂಗಡಿ ಮತ್ತು ಪ್ರಾರ್ಥನಾ ಸ್ಥಳಗಳಲ್ಲೂ ರಕ್ತದೊತ್ತಡ ಪರೀಕ್ಷಿಸುವ ಸೌಲಭ್ಯವನ್ನು ವಿಸ್ತರಿಸುವುದಾಗಿ ಮಂಗಳವಾರ ಹೇಳಿದೆ.

ಸ್ಥಳೀಯ ಆರೋಗ್ಯ ಸೇವಾ ತಂಡಗಳನ್ನು ಜನರಲ್ಲಿಗೆ ಕಳಿಸಿ, ಸಾಂಭವ್ಯ ಆರೋಗ್ಯ ಸಮಸ್ಯೆಗಳು ಗಂಭೀರ ಸ್ವರೂಪಕ್ಕೆ ತಿರುಗುವ ಮೊದಲೇ ಅವನ್ನು ಪತ್ತೆ ಮಾಡುವ ಕೆಲಸ ಮಾಡಲಾಗುತ್ತಿದೆ. ಕೋವಿಡ್–19 ಲಸಿಕಾ ಕಾರ್ಯಕ್ರಮದ ಕಲಿಕೆಯನ್ನು ಹೃದಯದ ಆರೋಗ್ಯದ ವಿಚಾರದಲ್ಲೂ ಅಳವಡಿಸಿಕೊಳ್ಳಲಾಗಿದೆ ಎಂದು ಬ್ರಿಟನ್ ಸರ್ಕಾರ ನಡೆಸುವ ರಾಷ್ಟ್ರೀಯ ಆರೋಗ್ಯ ಸೇವೆ (ಎನ್‌ಎಚ್‌ಎಸ್) ತಿಳಿಸಿದೆ.

'ಹೃದಯ ಸಂಬಂಧಿ ಆರೋಗ್ಯ ಸಮಸ್ಯೆ ಕುರಿತು ಮೊದಲೇ ಸೂಚನೆ ನೀಡುವಂಥ ರಕ್ತದೊತ್ತಡ ಪರೀಕ್ಷೆಯ ಸೌಲಭ್ಯವು ಸುಲಭದಲ್ಲಿ ಸಿಗುವಂತೆ ಮಾಡಬೇಕು' ಎಂದು ಇಂಗ್ಲೆಂಡ್‌ನ ಮುಖ್ಯ ಔಷಧಾಧಿಕಾರಿ ಡೇವಿಡ್ ವೆಬ್ ಹೇಳಿದ್ದಾರೆ.

ಸೆ.3ರಂದು ಡಾಡ್ಜ್‌ಬಾಲ್ ಟೂರ್ನಿ

ಬೆಂಗಳೂರು: ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆ ವತಿಯಿಂದ ಎರಡನೇ ರಾಜ್ಯ ಮಟ್ಟದ ಪುರುಷರ ಮತ್ತು ಮಹಿಳೆಯರ ಸೀನಿಯರ್ ಡಾಡ್ಜ್‌ಬಾಲ್ ಚಾಂಪಿಯನ್‌ಷಿಪ್ ಅನ್ನು ಸೆ.3ರಂದು ಬೆಂಗಳೂರಿನ ಯಲಚೇನಹಳ್ಳಿ ಟ್ರಾನ್ಸ್‌ಸೆಂಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಆವರಣದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕದ ವಿವಿಧ ಜಿಲ್ಲಾ ತಂಡಗಳು ಚಾಂಪಿಯನ್‌ಷಿಪ್‌ನ-ಲ್ಲಿ ಭಾಗವಹಿಸಲಿವೆ. ಮಹಾರಾಷ್ಟ್ರದ ಎಲ್ಲೋರಾದಲ್ಲಿ ಅಕ್ಟೋಬರ್‌ನ-ಲ್ಲಿ ನಡೆಯುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡವನ್ನು ಇದೇ ಸಂದರ್ಭ ಆಯ್ಕೆ ಮಾಡಲಾಗುತ್ತದೆ ಎಂದು ಸಂಸ್ಥೆಯ ಕಾರ್ಯದರ್ಶಿ ಕೆ.ನರಸಿಂಹ ರೆಡ್ಡಿ ತಿಳಿಸಿದ್ದಾರೆ.

ಮಾಹಿತಿಗೆ ಮೊ:99021 11379, 96208 21242

ವಿಶ್ವ ಅಥ್ಲೆಟಿಕ್ಸ್ ಚಾಂಪಿನ್‌ಶಿಪ್ ನಲ್ಲಿ ನಮ್ಮ 4 X 400 ಮೀಟರ್‌ಗಳ ತಂಡ ಆಚರಿಸುತ್ತಿದೆ !

ಅಮೆರಿಕ ಓಪನ್ ಟೆನಿಸ್: ಕೊಕೊ ಗಾಫ್‌ಗೆ ಗೆಲುವು

ಜೊಕೊ, ರೂಡ್ ಶುಭಾರಂಭ

ನ್ಯೂಯಾರ್ಕ್ (ಎಎಫ್‌ಪಿ): ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲೆರ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ಸರ್ಬಿಯದ ನೊವಾಕ್ ಜೊಕೊವಿಚ್, ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಸೋಮವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯವನ್ನು ಅವರು 6-0, 6-2, 6-3 ರಿಂದ ಗೆದ್ದುಕೊಂಡರು. 24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಜೊಕೊವಿಚ್, 1 ಗಂಟೆ 35 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ಸರ್ಬಿಯದ 36 ವರ್ಷದ ಆಟಗಾರ ಕೇವಲ ಮೂರು ಗೇಮ್‌ಗಳನ್ನು ಎದುರಾಳಿಗೆ ಬಿಟ್ಟುಕೊಟ್ಟರು. ಅವರು ಎಂಟು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು.

2021ರ ಟೂರ್ನಿಯ ಫೈನಲ್ ಬಳಿಕ ಜೊಕೊವಿಚ್, ಇಲ್ಲಿ ಆಡಿದ ಮೊದಲ ಪಂದ್ಯ ಇದಾಗಿತ್ತು. ಕೋವಿಡ್ ಲಸಿಕೆ ತೆಗೆದುಕೊಳ್ಳದ ಕಾರಣ ಕಳೆದ ವರ್ಷ ಅವರಿಗೆ ಇಲ್ಲಿ ಆಡಲು ಅವಕಾಶ ನೀಡಿರಲಿಲ್ಲ.

ಇನ್ನೊಂದು ಪಂದ್ಯದಲ್ಲಿ ಐದನೇ ಶ್ರೇಯಾಂಕದ ಆಟಗಾರ ನಾರ್ವೆಯ ಕ್ಯಾಸ್ಪರ್ ರೂಡ್ 7-6, 3-6, 6-4, 7-6 ರಿಂದ ಅಮೆರಿಕದ ಎಮಿಲಿಯೊ ನವಾ ಅವರನ್ನು ಮಣಿಸಿದರೆ, ಏಳನೇ ಶ್ರೇಯಾಂಕದ ಆಟಗಾರ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ 6–2, 6–3, 6–4 ರಿಂದ ಕೆನಡಾದ ಮಿಲೊಸ್ ರೋನಿಕ್ ವಿರುದ್ಧ ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ 6–2, 6–1, 6–2 ರಿಂದ ತಮ್ಮದೇ ದೇಶದ ಸ್ಟೀವ್ ಜಾನ್ಸನ್ ವಿರುದ್ಧ; ಇನ್ನೊಂದು 'ಆಲ್ ಅಮೆರಿಕನ್' ಹೋರಾಟದಲ್ಲಿ 10ನೇ ಶ್ರೇಯಾಂಕದ ಫ್ರಾನ್ಸಿಸ್ ಟೈಫೊ 6–2, 7–5, 6–1 ರಿಂದ ಲರ್ನೆರ್ ಟಿಯೆನ್ ವಿರುದ್ಧ; ಅಮೆರಿಕದ ಟಾಮಿ ಪಾಲ್ 6-2, 6-3, 4-6, 6-1 ರಿಂದ ಇಟಲಿಯ ಸ್ಟೆಫಾನೊ ಟ್ರವಾಗ್ಲಿಯಾ ವಿರುದ್ಧ ಜಯಿಸಿದರು.

ಮೆಡ್ವೆಡೆವ್ ಮುನ್ನಡೆ: 2021ರ ಚಾಂಪಿಯನ್, ಮೂರನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೆವ್ (ರಷ್ಯಾ) ಅವರು ಮಂಗಳವಾರ ನಡೆದ ಪಂದ್ಯದಲ್ಲಿ 6–1, 6–1, 6–0ಯಿಂದ ಹಂಗೇರಿಯ ಅಟಿಲಾ ಬಾಲಾಜ್ಸ್ ಅವರನ್ನು ಸುಲಭವಾಗಿ ಮಣಿಸಿ, ಎರಡನೇ ಸುತ್ತು ಪ್ರವೇಶಿಸಿದರು.

ಸರ್ಬಿಯದ ನೊವಾಕ್ ಜೊಕೊವಿಚ್ –ಎಪಿ ಚಿತ್ರ

ಗಾಫ್, ರಿಬಾಕಿನಾ ಮುನ್ನಡೆ: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಆತಿಥೇಯ ದೇಶದ ಭರವಸೆ ಎನಿಸಿರುವ ಕೊಕೊ ಗಾಫ್ ಮತ್ತು ಕಜಕಸ್ತಾನದ ಎಲೆನಾ ರಿಬಾಕಿನಾ ಎರಡನೇ ಸುತ್ತಿಗೆ ಮುನ್ನಡೆದರು.

ಗಾಫ್ 3-6, 6-2, 6-4 ರಿಂದ ಜರ್ಮನಿಯ ಲಾರಾ ಸೀಗ್ಮಂಡ್ ವಿರುದ್ಧ ಪ್ರಯಾಸದ ಜಯ ಸಾಧಿಸಿದರು. ಇದಕ್ಕಾಗಿ 2 ಗಂಟೆ 50 ನಿಮಿಷಗಳನ್ನು ತೆಗೆದುಕೊಂಡರು. ಮೊದಲ ಸೆಟ್ ಸೋತಿದ್ದ ಗಾಫ್, ಆ ಬಳಿಕ ಪುಟಿದೆದ್ದು ನಿಂತರು. 19 ವರ್ಷದ ಗಾಫ್ ಈ ಬಾರಿ ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ್ತಿ ಎನಿಸಿಕೊಂಡಿದ್ದಾರೆ. ಇನ್ನೊಂದು ಪಂದ್ಯದಲ್ಲಿ ರಿಬಾಕಿನಾ 6–2, 6–1ರಿಂದ ಉಕ್ರೇನ್‌ನ ಮಾರ್ಟಾ ಕೊಸ್ತ್ಯುಕ್ ಎದುರು ಗೆದ್ದರು.

ಐದನೇ ಕ್ರಮಾಂಕದ ಒನ್ಸ್ ಜಬೇರ್ (ಟ್ಯುನೀಷಿಯಾ) ಅವರು 7–5, 7–6 (7/4)ರಿಂದ ಕೊಲಂಬಿಯಾದ ಕ್ಯಾಮಿಲಾ ಒಸೊರಿಯೊ ಅವರನ್ನು ಮಣಿಸಿ, ಅಭಿಯಾನ ಆರಂಭಿಸಿದರು.

ಕಿಂಗ್ಸ್ ಕಪ್ ಫುಟ್‌ಬಾಲ್: ಚೆಟ್ರಿಗೆ ವಿಶ್ರಾಂತಿ

ನವದೆಹಲಿ (ಪಿಟಿಐ): ಕಿಂಗ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪಾಲ್ಗೊಳ್ಳ-ಲಿರುವ 23 ಸದಸ್ಯರ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಅನುಭವಿ ಸ್ಟ್ರೈಕರ್ ಸುನಿಲ್ ಚೆಟ್ರಿ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ನಾಲ್ಕು ರಾಷ್ಟ್ರಗಳ ಟೂರ್ನಿ ಸೆ.7 ರಿಂದ 10ರ ವರೆಗೆ ಥಾಯ್ಲೆಂಡ್‌ನ ಚಿಯಾಂಗ್ ಮಾಯ್ ನಗರದಲ್ಲಿ ನಡೆಯಲಿದೆ. 49ನೇ ಆವೃತ್ತಿಯ ಟೂರ್ನಿಗೆ ಭಾರತ ತಂಡವನ್ನು ಕೋಚ್ ಇಗೋರ್ ಸ್ಟಿಮ್ಯಾಚ್ ಅವರು ಮಂಗಳವಾರ ಪ್ರಕಟಿಸಿದರು.

ಚೆಟ್ರಿ ಅನುಪಸ್ಥಿತಿಯಲ್ಲಿ ಮನ್ವೀರ್ ಸಿಂಗ್ ಅವರು ಫಾರ್ವಡ್ ವಿಭಾಗವನ್ನು ಮುನ್ನಡೆಸಲಿದ್ದಾರೆ. ಅವರಿಗೆ ರಹೀಂ ಅಲಿ ಮತ್ತು ಕೆ.ಪಿ.ರಾಹುಲ್ ಸಾಥ್ ನೀಡಲಿದ್ದಾರೆ. ಸುರೇಶ್ ಸಿಂಗ್ ವಾಂಗ್‌ಜಮ್ ಮತ್ತು ಬ್ರೆಂಡನ್ ಫೆರ್ನಾಂಡಿಸ್ ಅವರು ತಂಡಕ್ಕೆ ಮರಳಿದ್ದಾರೆ.

ಫಿಫಾ ರ‍್ಯಾಂಕಿಂಗ್‌ನಲ್ಲಿ 99ನೇ ಸ್ಥಾನದಲ್ಲಿರುವ ಭಾರತ, ಸೆ.7 ರಂದು ನಡೆಯಲಿರುವ ಸೆಮಿಫೈನಲ್‌ನಲ್ಲಿ ಇರಾಕ್ (70ನೇ ರ‍್ಯಾಂಕ್) ವಿರುದ್ಧ ಪೈಪೋಟಿ ನಡೆಸಲಿದೆ. ಇನ್ನೊಂದು ಸೆಮಿಯಲ್ಲಿ ಥಾಯ್ಲೆಂಡ್ (113) ಮತ್ತು ಲೆಬನಾನ್ (100) ಎದುರಾಗಲಿವೆ. ಫೈನಲ್ ಪಂದ್ಯ ಸೆ.10 ರಂದು ನಡೆಯಲಿದೆ. ಭಾರತ ತಂಡ 2019 ರಲ್ಲಿ ಈ ಟೂರ್ನಿಯಲ್ಲಿ ಕಂಚು ಜಯಿಸಿತ್ತು.

ಭಾರತ ತಂಡ: ಗೋಲ್‌ಕೀಪರ್ಸ್: ಗುರುಪ್ರೀತ್ ಸಿಂಗ್ ಸಂಧು, ಅಮರಿಂದರ್ ಸಿಂಗ್, ಗುರ್ಮೀತ್ ಸಿಂಗ್

ಡಿಫೆಂಡರ್ಸ್: ಆಶಿಶ್ ರೈ, ನಿಖಿಲ್ ಪೂಜಾರಿ, ಸಂದೇಶ್ ಜಿಂಗನ್, ಅನ್ವರ್ ಅಲಿ, ಮೆಹ್ತಾಬ್ ಸಿಂಗ್, ಲಾಲ್‌ಚುಂಗ್‌ನುಂಗಾ, ಆಕಾಶ್ ಮಿಶ್ರಾ, ಸುಭಾಶಿಷ್ ಬೋಸ್

ಮಿಡ್‌ಫೀಲ್ಡರ್ಸ್: ಜೀಕ್‌ಸನ್ ಸಿಂಗ್, ಸುರೇಶ್ ಸಿಂಗ್ ವಾಂಗ್‌ಜಮ್, ಬ್ರೆಂಡನ್ ಫೆರ್ನಾಂಡಿಸ್, ಸಹಲ್ ಅಬ್ದುಲ್ ಸಮದ್, ಅನಿರುದ್ಧ್ ಥಾಪಾ, ರೋಹಿತ್ ಕುಮಾರ್, ಆಶಿಕ್ ಕುರುಣಿಯನ್, ನೊರೆಮ್ ಮಹೇಶ್ ಸಿಂಗ್, ಲಾಲ್ಲಿಯಾನ್‌ಜುವಾಲ ಚಾಂಗ್ಟೆ,

ಫಾರ್ವರ್ಡ್ಸ್: ಮನ್ವೀರ್ ಸಿಂಗ್, ರಹೀಂ ಅಲಿ, ಕೆ.ಪಿ.ರಾಹುಲ್